ಶನಿವಾರ, ಜೂನ್ 4, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದೇಗುಲ ದರ್ಶನ

ಮುಂಬೈನ ಸಿದ್ಧಿವಿನಾಯಕ ದೇವಾಲಯಕ್ಕೆ ಶುಕ್ರವಾರ ಬಾಲಿವುಡ್ ನಟಿ ಮಾನುಷಿ ಚಿಲ್ಲರ್ ಭೇಟಿ ನೀಡಿದ್ದರು



Fruits & Vegetables | Eggs, Fish & Meats | Rice, Dal, Oil & Masala | Bread, Cakes & Dairy | Pasta, Soups, Sauces & Cheese | Snacks & Packaged Foods
Beverages & Health Drinks | Diapers & Baby Products | Beauty & Personal Care | Detergents & Cleaners | Cooking Utensils | Garden, Pet & Stationery

ಎಲ್ಲ ಆರ್ಡರ್‌ಗಳ ಮೇಲೆ ಪಡೆಯಿರಿ ಉಚಿತ ಡೆಲಿವರಿ*
ಯಾವುದೇ ಕನಿಷ್ಠ ಆರ್ಡರ್ ಮೌಲ್ಯವಿಲ್ಲ

ಪ್ರತಿದಿನ ಕಡಿಮೆ ಬೆಲೆ

ಈಗ ಕೆಲವು ಪ್ರದೇಶಗಳಲ್ಲಿ ಮಾತ್ರ

Paytm Cashback
Up to ₹100 cashback
Minimum order ₹249. Assured ₹20. Valid thrice on Paytm Wallet or Postpaid transaction. Valid till June 30, 2022

*Applicable for all customers enrolled with TATA NeuPass. The bb now service and offers are valid in select areas. bigbasket strives to offer products at discounted prices and reserves the right to change, modify or end offers and discounts without any prior notice.
For more offers, detailed terms & conditions visit the bigbasket app or log on to bigbasket.com

PENTAGON 9693

India's largest online supermarket

ಶನಿವಾರ, ಜೂನ್ 4, 2022 | ಬೆಂಗಳೂರು | ₹ 6.00 | ಸಂಪುಟ 75| ಸಂಚಿಕೆ 154 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಉದ್ಯೋಗದ ಸ್ಥಳದಲ್ಲಿ ಮುಟ್ಟಿನ ರಜೆ ನೀಡುವ ಸೌಲಭ್ಯ ಅಥವಾ ವಿಶ್ರಾಂತಿ ಕೊಠಡಿ ಇರಬೇಕು. ಈ ಸಮಯದಲ್ಲಿ ವಿಶ್ರಾಂತಿ ತೆಗೆದುಕೊಂಡಲ್ಲಿ ಅವರ ಕಾರ್ಯಕ್ಷಮತೆ ಮತ್ತಷ್ಟು ಹೆಚ್ಚುತ್ತದೆ



ಚರ್ಚೆ ವೇಶ್ಯಾವೃತ್ತಿಗೆ ಕಾನೂನು ಮಾನ್ಯತೆ ಕುರಿತು ಎರಡು ವ್ಯಾಖ್ಯಾನಗಳು

ಹೈದರಾಬಾದ್: ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ 6

ಪಿಎಫ್‌ಗೆ ಶೇ 8.1 ಬಡ್ಡಿದರ: ಅಧಿಸೂಚನೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,769 ▼	16,584 ▼	₹ 53,150 (ಬೆಂಗಳೂರು) ▲	₹64,400 (ಬೆಂಗಳೂರು) ▲	77.66 ▼

ಸರ್ಕಾರ ನಮ್ಮನ್ನು ಕೂಡಿಹಾಕಿದೆ: ಕಾಶ್ಮೀರಿ ಪಂಡಿತರ ಆರೋಪ

ರಕ್ಷಣೆಗಾಗಿ ಪಂಡಿತರ ಕೂಗು

ಪ್ರಜಾವಾಣಿ ವಾರ್ತೆ

ಶ್ರೀನಗರ: 'ಕಾಶ್ಮೀರ ಕಣಿವೆಯಲ್ಲಿ ಕಾಶ್ಮೀರಿ ಪಂಡಿತರಿಗೆ ಭದ್ರತೆ ಒದಗಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಕಾಶ್ಮೀರಿ ಪಂಡಿತರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಲು ಸರ್ಕಾರಕ್ಕೆ ನಿರ್ದೇಶನ ನೀಡಿ' ಎಂದು ಕಾಶ್ಮೀರಿ ಪಂಡಿತ ಸಂಘರ್ಷ ಸಮಿತಿಯು ಜಮ್ಮು–ಕಾಶ್ಮೀರ–ಲಡಾಖ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಸರ್ಕಾರವು ನಮ್ಮನ್ನು ಕೂಡಿ ಹಾಕಿದೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಸಮಿತಿಯ ಅಧ್ಯಕ್ಷ ಸಂಜಯ್ ಕೆ. ಟಿಕ್ಕೋ ಅವರು, ಹೈಕೋರ್ಟ್‌ಗೆ ಇ–ಮೇಲ್ ಮೂಲಕ ಶುಕ್ರವಾರ ಅರ್ಜಿ ಸಲ್ಲಿಸಿದ್ದಾರೆ. 'ಧಾರ್ಮಿಕ ಅಲ್ಪಸಂಖ್ಯಾತರನ್ನು ಗುರಿಮಾಡಿಕೊಂಡು ಉಗ್ರರು ಹತ್ಯೆ ನಡೆಸುತ್ತಿದ್ದಾರೆ. 2020ರ ಜೂನ್ 8ರಿಂದ ಆರಂಭವಾಗಿ ಇದೇ ಮೇ 31ರವರೆಗೆ ಸ್ಥಳೀಯ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯದ 12 ಜನರ ಮೇಲೆ ಇಂತಹ ದಾಳಿ ನಡೆದಿದೆ. ಇದರಲ್ಲಿ 11 ಜನರು ಮೃತಪಟ್ಟಿದ್ದಾರೆ. ಈ ವಾರದಲ್ಲಿ ಮೂವರು ಮುಸ್ಲಿಮೇತರರನ್ನು ಉಗ್ರರು ಕೊಂದಿದ್ದಾರೆ. ನಮ್ಮನ್ನು ರಕ್ಷಿಸಿ' ಎಂದು ಅರ್ಜಿಯಲ್ಲಿ ಕೋರಲಾಗಿದೆ.

'ಕಾಶ್ಮೀರ ಕಣಿವೆಯಲ್ಲಿ ಪಂಡಿತರಿಗೆ ಭದ್ರತೆ ಇಲ್ಲ. ಇಲ್ಲಿ ಸುರಕ್ಷಿತವಾಗಿ ಬದುಕುತ್ತೇವೆ ಎಂಬ ನಂಬಿಕೆಯೇ ಇಲ್ಲ. ಸುರಕ್ಷಿತ ಪ್ರದೇಶಗಳಿಗೆ ಹೋಗಲು ನಾವು ಸಿದ್ಧರಿದ್ದೇವೆ. ಸರ್ಕಾರ ಇದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ. ಕಾಶ್ಮೀರಿ ಪಂಡಿತರು ಇರುವ ಶಿಬಿರಗಳ ದ್ವಾರಗಳನ್ನು ಸರ್ಕಾರವು ಮುಚ್ಚಿದೆ. ನಾವು ಹೊರ ಹೋಗುವುದನ್ನು ತಡೆದಿದೆ. ಸರ್ಕಾರ ನಮ್ಮನ್ನು ಕೂಡಿಹಾಕಿದೆ' ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

'ಶಿಬಿರಗಳಿಂದ ಹೊರಗೆ ನೆಲೆ ಕಂಡುಕೊಂಡಿದ್ದವರು, ಈಗಾಗಲೇ ಕಾಶ್ಮೀರ ಕಣಿವೆ ತೊರೆದಿದ್ದಾರೆ. ಸುರಕ್ಷಿತ ಪ್ರದೇಶಗಳಿಗೆ ಹೋಗಿದ್ದಾರೆ. ಆದರೆ ಶಿಬಿರಗಳಲ್ಲಿ ಇದ್ದವರು ಇಲ್ಲೇ ಉಳಿಯುವಂತಾಗಿದೆ. ಶಿಬಿರದಲ್ಲಿ ಇದ್ದವರು ಹೊರಗೆ ಹೋಗುವುದನ್ನು ತಡೆಯುವ ಸಲುವಾಗಿ ಕೇಂದ್ರೀಯ ಮೀಸಲು ಪಡೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜನೆ ಮಾಡಲಾಗಿದೆ. ಶಿಬಿರದ ಬೇಲಿಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ' ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಕಾಶ್ಮೀರಿ ಪಂಡಿತರನ್ನು ಸರ್ಕಾರವು ಕೂಡಿ ಹಾಕಿದೆ ಎಂದು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಕೂಡ ವರದಿ ಮಾಡಿದೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗೆ ಬುಧವಾರ ಬರೆದಿದ್ದ ಪತ್ರದಲ್ಲೂ, 'ಸರ್ಕಾರ ನಮ್ಮನ್ನು ಕೂಡಿ ಹಾಕಿದೆ' ಎಂದು ಆರೋಪಿಸಲಾಗಿತ್ತು.

'ಸಂವಿಧಾನದ 21ನೇ ವಿಧಿಯಡಿ ಜೀವಿಸುವ ಹಕ್ಕನ್ನು ನೀಡಲಾಗಿದೆ. ಆದರೆ, ನಾವು ಸುರಕ್ಷಿತ ಪ್ರದೇಶಕ್ಕೆ ಹೋಗುವುದನ್ನು ತಡೆಯುವ ಮೂಲಕ ಜೀವಿಸುವ ಹಕ್ಕನ್ನು ನಿರಾಕರಿಸಲಾಗಿದೆ. ಈ ವಿಧಿಯ ಅಡಿ ನೀಡಲಾದ ಜೀವಿಸುವ ಹಕ್ಕು ನಮಗೆ ಲಭ್ಯವಾಗುವಂತೆ ಮಾಡಿ. ಕಾಶ್ಮೀರ ಕಣಿವೆ ಹೊರತುಪಡಿಸಿ, ದೇಶದ ಯಾವ ಮೂಲೆಯಲ್ಲಾದರೂ ಆಶ್ರಯ ಕಲ್ಪಿಸಲಿ. ಅಲ್ಲಿಗೆ ನಾವು ಹೋಗುತ್ತೇವೆ' ಎಂದು ಅರ್ಜಿಯಲ್ಲಿ ಮನವಿ ಮಾಡಿಕೊಳ್ಳಲಾಗಿದೆ.

ತನಿಖೆಗೆ ಆಗ್ರಹ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಪ್ತರಾಗಿದ್ದು, ಕಾಶ್ಮೀರದಲ್ಲಿ ನಿಯೋಜನೆಯಾಗಿದ್ದ ಹಲವು ಅಧಿಕಾರಿಗಳು ಮೇ 12ರ ನಂತರ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ದಾಳಿಯ ಮುನ್ಸೂಚನೆ ಇದ್ದುದರಿಂದಲೇ ಸಾಮೂಹಿಕ ವರ್ಗಾವಣೆ ನಡೆದಿದೆ. ಈ ಬಗ್ಗೆ ತನಿಖೆ ನಡೆಸಬೇಕು ಎಂದು ಹೈಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಕೋರಲಾಗಿದೆ.

ಅಧಿಕಾರಿಗಳ ಜತೆ ಅಮಿತ್ ಶಾ ಸಭೆ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಜಮ್ಮು–ಕಾಶ್ಮೀರದಲ್ಲಿನ ಸರಣಿ ಹತ್ಯೆಗಳ ಬಗ್ಗೆ ಶುಕ್ರವಾರ ಮಾಹಿತಿ ಪಡೆದುಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಸಂಬಂಧ ಶಾ ಅವರು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ, ಜಮ್ಮು–ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಇತರ ಹಿರಿಯ ಅಧಿಕಾರಿಗಳ ಜತೆಗೆ ದೆಹಲಿಯಲ್ಲಿ ಸಭೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

'ದಿ ಕಾಶ್ಮೀರ್ ಫೈಲ್ಸ್' ಸಿನಿಮಾ ನೋಡಲು ಬಿಜೆಪಿ ನಾಯಕರಿಗೆ ಬಹಳ ಸಮಯವಿತ್ತು. ಆದರೆ, ಈಗ ಅಲ್ಲಿ ಹಿಂದೂಗಳನ್ನು ಕೊಲ್ಲಲಾಗುತ್ತಿದೆ. ಬಿಜೆಪಿ ನಾಯಕರು ಮೌನವಾಗಿದ್ದಾರೆ

ಭೂಪೇಶ್ ಬಘೇಲ್
ಛತ್ತೀಸಗಡ ಮುಖ್ಯಮಂತ್ರಿ

ಇನ್ನಷ್ಟು ಸುದ್ದಿಗಳು 6

ಬಸ್‌ಗೆ ಬೆಂಕಿ: 7 ಜನ ಸಜೀವ ದಹನ

ಕಲಬುರಗಿ: ಕಮಲಾಪುರ ಹೊರವಲಯದ ಚಾರ್‌ಕಮಾನ್ ಬಳಿ ಶುಕ್ರವಾರ ಬೆಳಿಗ್ಗೆ ಸರಕುಸಾಗಣೆ ವಾಹನಕ್ಕೆ ಡಿಕ್ಕಿ ಹೊಡೆದ ಖಾಸಗಿ ಸ್ಲೀಪರ್ ಬಸ್, ನಂತರ ಸೇತುವೆ ಬದಿಯ ಹಳ್ಳಕ್ಕೆ ಬಿದ್ದು ಬೆಂಕಿ ಹೊತ್ತಿಕೊಂಡ ಪರಿಣಾಮ ಎರಡು ಕುಟುಂಬದ 7 ಮಂದಿ ಸ್ಥಳದಲ್ಲೇ ಸಜೀವ ದಹನವಾದರು.

4

ಸೇವಾ ಚಟುವಟಿಕೆ: 11 ವರ್ಷಗಳ ಗರಿಷ್ಠ 11

ಚಿನಕುರಳಿ
ಪ್ರಕಾಶ್ ಶೆಟ್ಟಿ

ಗೌಡರ ಯತ್ನ ನಿಷ್ಫಲ: ಖರ್ಗೆಗೆ ಸಿಗದ ಬೆಂಬಲ

• ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ

ಬೆಂಗಳೂರು: ರಾಜ್ಯಸಭೆ ಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಅವರನ್ನು ಗೆಲ್ಲಿಸಿಕೊಳ್ಳಲೇಬೇಕು ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೂಡಿದ್ದ ತಂತ್ರಗಾರಿಕೆ ಫಲ ಕೊಟ್ಟಿಲ್ಲ. ಕಾಂಗ್ರೆಸ್‌ತನ ಉಳಿಸಿಕೊಳ್ಳುವ ಜತೆಗೆ ತಮಗೆ ಸಂಕಟ ತಂದೊಡ್ಡಬಹುದಾದ 'ದಳ'ಪತಿಯ ಲೆಕ್ಕಾಚಾರವನ್ನು ತಲೆಕೆಳಗೆ ಮಾಡಲು ಪ್ರತಿತಂತ್ರ ಹೂಡಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೋಡಿ, ಮೊದಲ 'ಜಂಟಿ' ಯತ್ನದಲ್ಲಿ ಗೆದ್ದಿದೆ.

4ನೇ ಪುಟ ನೋಡಿ

ಬಸವಣ್ಣರ ಪಠ್ಯ ಮತ್ತೆ ಪರಿಷ್ಕರಣೆ ಸಿ.ಎಂ ಬೊಮ್ಮಾಯಿ ಸ್ಪಷ್ಟನೆ

ಬೆಂಗಳೂರು: ಪಠ್ಯಪುಸ್ತಕದಲ್ಲಿ ಬಸವಣ್ಣನವರ ಕುರಿತ ಅಂಶವನ್ನು ಸೂಕ್ತ ಪರಿಷ್ಕರಣೆ ಮಾಡುವುದರ ಜೊತೆಗೆ ನಾಡಗೀತೆ ವಿಕೃತಗೊಳಿಸಿದ ವ್ಯಕ್ತಿಗಳ ಬಗ್ಗೆ ಕಾನೂನಾತ್ಮಕ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪಠ್ಯ ಪುಸ್ತಕ ಪರಿಷ್ಕರಣೆ ಗೊಂದಲಕ್ಕೆ ಸಂಬಂಧಿಸಿದಂತೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಜತೆ ಸಭೆ ನಡೆಸಿದ ಬಳಿಕ ಅವರು ಶುಕ್ರವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಪ್ರಸ್ತುತ ಪರಿಷ್ಕರಿಸಿದ ಪಠ್ಯಪುಸ್ತಕದಲ್ಲಿ ಯಾವುದೇ ಆಕ್ಷೇಪಾರ್ಹ ವಿಷಯಗಳು ಇದ್ದಲ್ಲಿ ಅವುಗಳನ್ನು ಮತ್ತೊಮ್ಮೆ ಪರಿಷ್ಕರಿಸಲು ಸರ್ಕಾರ ಮುಕ್ತ ಮನಸ್ಸು ಹೊಂದಿದೆ ಎಂದೂ ಹೇಳಿದ್ದಾರೆ.

ಸಮಿತಿ ವಿಸರ್ಜನೆ: ಪಠ್ಯಪುಸ್ತಕ ಪರಿಷ್ಕರಣೆ ಕಾರ್ಯ ಮುಗಿದಿರುವುದರಿಂದ ಹಾಲಿ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯನ್ನು ವಿಸರ್ಜಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

5A ಪುಟ ನೋಡಿ



ಡಿಸ್ಕಸ್ ಥ್ರೋ, ಶಾಟ್‌ಪಟ್‌ನಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ

ಎಂ.ಉಮಾ ಶಂಕರ್

ನೆಲಮಂಗಲ: ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಮ್ಮಿಕೊಂಡಿದ್ದ ಕ್ರೀಡಾಕೂಟದಲ್ಲಿ ಇಲ್ಲಿನ ನರಸೀಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಎಂ.ಉಮಾಶಂಕರ್ ಅವರು ಡಿಸ್ಕಸ್ ಥ್ರೋ ಹಾಗೂ ಶಾಟ್‌ಪಟ್‌ನಲ್ಲಿ ರಾಜ್ಯ ಮಟ್ಟದಲ್ಲಿ ಗೆಲುವು ಸಾಧಿಸಿ ರಾಷ್ಟ್ರ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಆಸ್ತಿ ತೆರಿಗೆ: ಬಿಬಿಎಂಪಿ ಇತಿಹಾಸದಲ್ಲಿ ಹೊಸ ದಾಖಲೆ • 28 ದಿನಗಳಲ್ಲಿ ₹1 ಸಾವಿರ ಕೋಟಿ ಸಂಗ್ರಹ

2 ತಿಂಗಳಲ್ಲಿ ₹2 ಸಾವಿರ ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ಸಂಗ್ರಹದಲ್ಲಿ ಬಿಬಿಎಂಪಿ ದಾಖಲೆ ಬರೆದಿದ್ದು, 28 ದಿನಗಳಲ್ಲಿ ₹1 ಸಾವಿರ ಕೋಟಿ ಮತ್ತು ಕಳೆದ ಎರಡು ತಿಂಗಳಲ್ಲಿ ₹2 ಸಾವಿರ ಕೋಟಿ ತೆರಿಗೆ ಸಂಗ್ರಹಿಸಿದೆ.

ತೆರಿಗೆ ಸಂಗ್ರಹ ವಿಚಾರದಲ್ಲಿ ತೆಗೆದುಕೊಂಡ ಸಣ್ಣ-ಸಣ್ಣ ಸುಧಾರಣಾ ಕ್ರಮಗಳಿಂದ ಈ ದಾಖಲೆ ಸಾಧ್ಯವಾಗಿದೆ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಆರ್.ಎಲ್. ದೀಪಕ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ತೆರಿಗೆ ಪಾವತಿಸಲು ವಲಯ ಆಯ್ಕೆ ಮಾಡುವ ಪದ್ಧತಿಯನ್ನು ಸರಳಗೊಳಿಸಲಾಗಿದೆ. ಖಾಲಿ ನಿವೇಶನ ಎಂದು ಬಿಬಿಎಂಪಿಗೆ ಮಾಹಿತಿ ನೀಡಿ ತೆರಿಗೆ ವಂಚಿಸುವ ಸಾಧ್ಯತೆ ಇದೆ. ಆದ್ದರಿಂದ ವಿದ್ಯುತ್ ಸಂಪರ್ಕ ಪಡೆದಿರುವ ಬಗ್ಗೆ ಬೆಸ್ಕಾಂನಿಂದ ಮಾಹಿತಿ ಪಡೆದು ಎರಡೂ ದಾಖಲೆಗಳನ್ನು ತಾಳೆ ಮಾಡಿ ಪರಿಶೀಲಿಸಲಾಗುತ್ತಿದೆ. ಕಟ್ಟಡ ವಾಣಿಜ್ಯ ಬಳಕೆಯೋ, ಗೃಹ ಬಳಕೆಯೋ ಎಂಬುದು ಗೊತ್ತಾಗುತ್ತಿದೆ. ತೆರಿಗೆ ವಸೂಲಿ ಸುಲಭವಾಗುತ್ತಿದೆ' ಎಂದರು.

'ಡ್ರೋನ್ ಬಳಸಿಯೂ ಖಾಲಿ ನಿವೇಶನವಿದೆಯೋ, ಕಟ್ಟಡ ನಿರ್ಮಾಣ ಆಗಿದೆಯೋ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಯಲಹಂಕ ವಲಯದಲ್ಲಿ ಪ್ರಯೋಗಿಕವಾಗಿ ಡ್ರೋನ್ ಬಳಸಿ ಸರ್ವೆ ಮಾಡಲಾಗಿದೆ. ಅದರ ಬೆಳಕಿನಲ್ಲಿ ಅಧಿಕಾರಿಗಳು ಕಟ್ಟಡಗಳನ್ನು ಖುದ್ದು ಪರಿಶೀಲನೆ ಮಾಡುತ್ತಿದ್ದಾರೆ' ಎಂದರು.

ಬ್ಯಾಂಕ್ ಖಾತೆ ಜಪ್ತಿ

ತೆರಿಗೆ ಸಂಗ್ರಹಕ್ಕೆ ಹಳೆ ವಿಧಾನಗಳನ್ನೇ ಬಳಸಲಾಗುತ್ತಿದೆ. ಹೊಸ ವಿಧಾನಗಳ ಸಾಧ್ಯತೆ ಬಗ್ಗೆ ಸಿಬ್ಬಂದಿಗೆ ತರಬೇತಿ ನೀಡಲಾಗುವುದು ಎಂದು ದೀಪಕ್ ತಿಳಿಸಿದರು. ತೆರಿಗೆ ಸುಸ್ತಿದಾರರ ಬ್ಯಾಂಕ್ ಖಾತೆ ಮತ್ತು ಆಸ್ತಿ ಜಪ್ತಿ ಮಾಡಿಕೊಳ್ಳಲು ಬಿಬಿಎಂಪಿ ಹೊಸ ಕಾಯ್ದೆಯಲ್ಲಿ ಅವಕಾಶ ಇದೆ. ಈ ಪ್ರಕ್ರಿಯೆ ಆರಂಭಿಸಿದರೆ ತೆರಿಗೆ ಸಂಗ್ರಹ ಇನ್ನಷ್ಟು ಸುಲಭವಾಗಲಿದೆ ಎಂದರು.

'ಸುಸ್ತಿದಾರರ ಮನೆಗಳ ಮುಂದೆ ಡಂಗೂರ ಬಾರಿಸುವುದು, ಜಪ್ತಿಗೆ ಹೋದಾಗ ಕಚೇರಿಯಲ್ಲಿ ಕುರ್ಚಿ ಮತ್ತು ಟೇಬಲ್‌ಗಳನ್ನು ತಂದಿಟ್ಟುಕೊಳ್ಳುವುದು ಹಳೆಯ ಪದ್ಧತಿ. ನಗರದ ಮತ್ತು ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡುವುದರಿಂದ ತೆರಿಗೆ ವಸೂಲಿ ಸಾಧ್ಯ, ಮುಂದಿನ ದಿನಗಳಲ್ಲಿ ಈ ಕ್ರಮಗಳನ್ನು ಅನುಸರಿಸಲಾಗುವುದು' ಎಂದು ತಿಳಿಸಿದರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸ್ಥಾಪಿಸುತ್ತಿರುವ ಕೆಂಪೇಗೌಡ ಅವರ ಕಂಚಿನ ಪ್ರತಿಮೆಯನ್ನು ಡಾ.ನಿರ್ಮಲಾನಂದನಾಥ ಸ್ವಾಮೀಜಿ ವೀಕ್ಷಿಸಿದರು

ಕೆಂಪೇಗೌಡರ ಪ್ರತಿಮೆ ನಿರ್ಮಾಣ ಕಾಮಗಾರಿ ಪರಿಶೀಲನೆ

ದೇವನಹಳ್ಳಿ: ತಾಲ್ಲೂಕಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಿರ್ಮಾಣ ಹಂತದಲ್ಲಿರುವ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡ ಅವರ ಕಂಚಿನ ಪ್ರತಿಮೆಯ ಕಾಮಗಾರಿಯನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಪರಿಶೀಲಿಸಿದರು.

₹85 ಕೋಟಿ ವೆಚ್ಚದಲ್ಲಿ ಕೆಂಪೇಗೌಡರ ಭವ್ಯ ಪ್ರತಿಮೆ ನಿರ್ಮಾಣವಾಗುತ್ತಿದೆ. ನೋಯಿಡಾದ ಶಿಲ್ಪಿ ರಾಮ್ ವಾನಜಿ ಸುತರ್ ಅವರ ನೇತೃತ್ವದಲ್ಲಿ ಕಂಚಿನ ಪ್ರತಿಮೆ ನಿರ್ಮಿಸಲಾಗುತ್ತಿದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕಾರಿಗಳು, ಎಂಜಿನಿಯರ್‌ಗಳು ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು.

ಜಲಮಂಡಳಿ: ಇಂದು ನೇರ ಫೋನ್ ಇನ್

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ಎನ್.ಜಯರಾಮ್ ಅವರೊಂದಿಗೆ ಇದೇ 4ರ ಬೆಳಿಗ್ಗೆ 9ರಿಂದ 10.30ರ ತನಕ ನೇರ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕುಡಿಯುವ ನೀರು, ಒಳಚರಂಡಿ ಸಮಸ್ಯೆ ಸೇರಿದಂತೆ ಇತರೆ ಕುಂದುಕೊರತೆಗಳನ್ನು ಫೋನ್ ಮಾಡಿ ಬಗೆಹರಿಸಿಕೊಳ್ಳಬಹುದು. ದೂರವಾಣಿ: 080 22945119 ಸಂಪರ್ಕಿಸಬಹುದಾಗಿದೆ.

ಗುಡುಗು ಸಹಿತ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಶುಕ್ರವಾರ ರಾತ್ರಿ ಉತ್ತಮ ಮಳೆ ಸುರಿಯಿತು. ಗುಡುಗು– ಸಿಡಿಲಿನ ಅಬ್ಬರವೂ ಇತ್ತು. ಕೆಲವೆಡೆ, ರಸ್ತೆ ಮೇಲೆಯೇ ನೀರು ಹರಿಯಿತು.

ಬಹುತೇಕ ಕಡೆ ಬೆಳಿಗ್ಗೆಯಿಂದ ಬಿಸಿಲು ಇತ್ತು. ಮಧ್ಯಾಹ್ನದ ಬಳಿಕ ಕೆಲವೆಡೆ ಮೋಡ ಕವಿದ ವಾತಾವರಣ ಕಂಡುಬಂತು. ರಾತ್ರಿ 8ಗಂಟೆಯಿಂದ ಬಿಡುವು ನೀಡುತ್ತಲೇ ಜೋರು ಮಳೆ ಆಯಿತು.

ರಾಜರಾಜೇಶ್ವರಿನಗರ, ಕೆಂಗೇರಿ, ದೀಪಾಂಜಲಿನಗರ, ಚಾಮರಾಜಪೇಟೆ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಮಹಾಲಕ್ಷ್ಮಿ ಲೇಔಟ್, ಯಶವಂತಪುರ, ಪೀಣ್ಯ, ಲಗ್ಗೆರೆ, ನಂದಿನಿ ಲೇಔಟ್, ಮಲ್ಲೇಶ್ವರ, ಶೇಷಾದ್ರಿಪುರ, ಸಂಜಯನಗರ, ಹೆಬ್ಬಾಳ, ಆರ್.ಟಿ.ನಗರ, ನಾಗವಾರ, ಹೆಣ್ಣೂರು, ಬಾಣಸವಾಡಿ ಹಾಗೂ ಸುತ್ತಮುತ್ತ ಮಳೆ ಹೆಚ್ಚಿತ್ತು.

ಸಂಪಂಗಿರಾಮನಗರ, ಗಾಂಧಿ ನಗರ, ಮೆಜೆಸ್ಟಿಕ್, ಶಿವಾಜಿನಗರ, ಎಂ.ಜಿ.ರಸ್ತೆ, ಕೋರಮಂಗಲ, ಮಡಿವಾಳ, ಲಾಲ್‌ಬಾಗ್, ವಿಲ್ಸನ್ ಗಾರ್ಡನ್, ಶಾಂತಿನಗರ, ಅಶೋಕನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಸುರಿಯಿತು. ಶಿವಾನಂದ ವೃತ್ತ, ಮೆಜೆಸ್ಟಿಕ್ ರೈಲ್ವೆ ಕೆಳ ಸೇತುವೆ, ಓಕಳಿಪುರ, ಅರಮನೆ ರಸ್ತೆ ಹಾಗೂ ಇತರೆಡೆ ರಸ್ತೆ ಮೇಲೆಯೇ ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು. ಕೆಲ ದ್ವಿಚಕ್ರ ವಾಹನಗಳು ನೀರಿನಲ್ಲೇ ಕೆಟ್ಟು ನಿಂತಿದ್ದವು. ಸ್ಥಳೀಯರೇ ವಾಹನಗಳನ್ನು ತಳ್ಳಿ ಸುರಕ್ಷಿತ ಸ್ಥಳ ತಲುಪಿಸಿದರು.

ಚಿಕ್ಕಪೇಟೆ, ಬಿವಿಕೆ ಅಯ್ಯಂಗಾರ್ ರಸ್ತೆ, ಕೆಂಪೇಗೌಡ ರಸ್ತೆ ಸೇರಿ ಹಲವು ಪ್ರದೇಶಗಳಲ್ಲಿ ಕಾಮಗಾರಿ ನಡೆಯುತ್ತಿದೆ. ಅಲ್ಲಲ್ಲ ರಸ್ತೆ ಅಗೆದಿದ್ದರಿಂದ ಗುಂಡಿಗಳು ಬಿದ್ದಿವೆ. ಶುಕ್ರವಾರ ರಾತ್ರಿ ಸುರಿದ ನೀರು ಗುಂಡಿಯಲ್ಲಿ ನಿಂತುಕೊಂಡಿತ್ತು. ಅದೇ ನೀರು ರಸ್ತೆಗೆ ಹರಿದು ಪಾದಚಾರಿಗಳ ಓಡಾಟಕ್ಕೆ ತೊಂದರೆ ಆಯಿತು.

'ಮಳೆಗಾಲ ಆರಂಭವಾಗುತ್ತಿದೆ. ಬಿಡುವು ಕೊಡುತ್ತಲೇ ಕೆಲದಿನಗಳಿಂದ ಉತ್ತಮ ಮಳೆ ಆಗುತ್ತಿದೆ. ಕೆಲವೆಡೆ ರಸ್ತೆ ಮೇಲೆಯೇ ನೀರು ಹರಿಯುತ್ತಿತ್ತು. ದೂರುಗಳು ಬರುತ್ತಿದ್ದಂತೆ ಸಿಬ್ಬಂದಿ ಸ್ಥಳಕ್ಕೆ ಹೋಗಿ ಸಮಸ್ಯೆ ಬಗೆಹರಿಸಿದ್ದಾರೆ. ಉಳಿದಂತೆ ಹಾನಿ ಬಗ್ಗೆ ಯಾವುದೇ ದೂರು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ನಗರದಲ್ಲಿ ಶುಕ್ರವಾರ ರಾತ್ರಿ ಸುರಿದ ಮಳೆಯಿಂದಾಗಿ ರಸ್ತೆ ಮೇಲೆ ಹರಿದ ನೀರಿನಲ್ಲಿ ವಾಹನಗಳು ಸಂಚರಿಸಿದವು – ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ದೀಪಕ್ ದಳವಿ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ಬೆಳಗಾವಿ, ಬೀದರ್, ಕಾರವಾರ, ಭಾಲ್ಕಿ ಮತ್ತು ನಿಪ್ಪಾಣಿಗಳು ಮಹಾರಾಷ್ಟ್ರಕ್ಕೆ ಸೇರಬೇಕೆಂದು ಧರಣಿ ನಡೆಸಿರುವ ಎಂಇಎಸ್ (ಮಹಾರಾಷ್ಟ್ರ ಏಕೀಕರಣ ಸಮಿತಿ) ದೀಪಕ್ ದಳವಿ ವಿರುದ್ಧ ಕ್ರಮ ಜರುಗಿಸಬೇಕು ಎಂದು ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ಆಗ್ರಹಿಸಿದ್ದಾರೆ.

ಎಂಇಎಸ್ ನಾಯಕರು ಎಂದು ಹೇಳಿಕೊಳ್ಳುವವರು ಬೆಳಗಾವಿಯಲ್ಲಿ ಇತ್ತೀಚೆಗೆ ಧರಣಿ ನಡೆಸಿರುವುದು ದುರದೃಷ್ಟಕರ. ಬೆಳಗಾವಿ, ಬೀದರ್ ಸೇರಿದಂತೆ ಮೇಲ್ಕಂಡ ಎಲ್ಲ ಪ್ರದೇಶಗಳು ಕರ್ನಾಟಕದ ಅವಿಭಾಜ್ಯ ಪ್ರದೇಶಗಳಾಗಿವೆ. ಇವುಗಳು ಕರ್ನಾಟಕ ರಾಜ್ಯದಲ್ಲಿ ಉಳಿದಿರುವ ಬಗ್ಗೆ ಯಾವುದೇ ರೀತಿಯ ಗೊಂದಲ ಇರುವುದಿಲ್ಲ. ಆದಾಗ್ಯೂ, ದೀಪಕ್ ದಳವಿಯವರು ತಮ್ಮ ಸಹಚರರೊಂದಿಗೆ ಅನಗತ್ಯವಾಗಿ ಈ ಬಗ್ಗೆ ಧರಣಿ ನಡೆಸಿ ಜಿಲ್ಲಾಡಳಿತಕ್ಕೆ ಬೆದರಿಕೆ ಒಡ್ಡಿರುವುದು ಕ್ಷಮಾರ್ಹವಲ್ಲ ಎಂದವರು ತಿಳಿಸಿದ್ದಾರೆ.

ಒಂದು ವೇಳೆ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿದಲ್ಲಿ ಜಿಲ್ಲಾಡಳಿತವು ಸ್ವಹಿತಾಸಕ್ತವಂತೆ ಧರಣಿ ನಡೆಸುತ್ತಿದ್ದೇವೆ ಗೊಡ್ಡು ಬೆದರಿಕೆ ಹಾಕುತ್ತಿರುವ ಜಿಲ್ಲಾಡಳಿತಕ್ಕೆ ಕರ್ನಾಟಕ ಸರ್ಕಾರವಾಗಲಿ ಮಣಿಯುವ ಪ್ರಶ್ನೆಯೇ ಇಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

ಬೆಳಗಾವಿಯಲ್ಲಿ ಕನ್ನಡಿಗರು ಮತ್ತು ಮರಾಠಿಗರು ಪರಸ್ಪರ ಸ್ನೇಹದಿಂದ ಇರುವಾಗ ಅನಗತ್ಯ ಇಂತಹ ಅನಗತ್ಯ ತಗಾದೆಗಳನ್ನು ಹುಟ್ಟು ಹಾಕಿ ಇಲ್ಲಿನ ಜನರ ನಡುವಣ ಸಹಬಾಳ್ವೆಯನ್ನು ಕದಡಲು ಮುಂದಾಗಿರುವ ದಳವಿ ಅಂತಹವರ ವರ್ತನೆಯನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಸೋಮಶೇಖರ್ ಒತ್ತಾಯಿಸಿದ್ದಾರೆ.

ಇದೇ 5ರಂದು 'ಕೋಟಿ ವೃಕ್ಷ ಆಂದೋಲನ'

ಬೆಂಗಳೂರು: ಜಲಾನಯನ ಇಲಾಖೆ ವತಿಯಿಂದ ಇದೇ ಮೊದಲ ಬಾರಿಗೆ ಇದೇ 5 ರಂದು 'ಕೋಟಿ ವೃಕ್ಷ ಆಂದೋಲನ' ಹಮ್ಮಿಕೊಂಡಿದೆ.

ವಿಶ್ವಪರಿಸರ ದಿನಾಚರಣೆ ಪ್ರಯುಕ್ತ ತುಮಕೂರಿನಲ್ಲಿ ಕೋಟಿ ವೃಕ್ಷ ಆಂದೋಲನ ಹಮ್ಮಿಕೊಂಡಿದ್ದು, ಈ ಆಂದೋಲನಕ್ಕೆ ಕೃಷಿ ಸಚಿವ ಬಿ.ಸಿ. ಪಾಟೀಲ ಅವರು ಚಾಲನೆ ನೀಡಿದ್ದಾರೆ.

ಅಂದು ರಾಜ್ಯದ ಎಲ್ಲಾ ಕೃಷಿ ಇಲಾಖೆ ಆವರಣ, ರೈತರ ಬದು– ಹೊಲಗಳಲ್ಲಿ ಎಲ್ಲಾ ಸರ್ಕಾರಿ ಇಲಾಖೆ ಆವರಣಗಳಲ್ಲಿ ಸಸಿ ನೆಡುವ ಮೂಲಕ ಪರಿಸರ ಪ್ರೇಮ ವ್ಯಕ್ತಪಡಿಸಬೇಕು. ಸಸಿಗಳನ್ನು ಬರಿ ನೆಡುವುದಷ್ಟೇ ಅಲ್ಲದೇ ಅವುಗಳನ್ನು ಪೋಷಿಸಬೇಕು ಎಂದು ಬಿ.ಸಿ. ಪಾಟೀಲ ಮನವಿ ಮಾಡಿದ್ದಾರೆ.

'ಲೈಂಗಿಕ ಕಾರ್ಯಕರ್ತರ ಪರ ಸುಪ್ರೀಂ ತೀರ್ಪು ಸ್ವಾಗತಾರ್ಹ'

ಬೆಂಗಳೂರು: ಲೈಂಗಿಕ ಕಾರ್ಯಕರ್ತರ ಘನತೆಯ ಹಕ್ಕು, ಪೊಲೀಸ್ ಹಿಂಸಾಚಾರದ ವಿರುದ್ಧ ಅವರ ಹಕ್ಕು ಮತ್ತು ಇತರೆ ಪ್ರಮುಖ ಸಾಂವಿಧಾನಿಕ ಖಾತರಿಗಳನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿರುವುದು ಸ್ವಾಗತಾರ್ಹ ಎಂದು ಸಾಧನ ಮಹಿಳಾ ಸಂಘ ತಿಳಿಸಿದೆ.

'ವೇಶ್ಯಾವಾಟಿಕೆಯೂ ಒಂದು ವೃತ್ತಿ ಮತ್ತು ಲೈಂಗಿಕ ಕಾರ್ಯಕರ್ತೆಯರು ಕೂಡ ಕಾನೂನಿನ ಅಡಿಯಲ್ಲಿ ಘನತೆಯಿಂದ ಬದುಕಲು ಹಾಗೂ ಸಮಾನ ರಕ್ಷಣೆಯನ್ನು ಪಡೆಯಲು ಅರ್ಹರು' ಎಂದು ಸುಪ್ರೀಂ ಕೋರ್ಟ್‌ನ ತೀರ್ಪಿನಲ್ಲಿ ತಿಳಿಸಿರುವುದು. ಲೈಂಗಿಕ ಕಾರ್ಯಕರ್ತ ದಶಕಗಳ ಚಳವಳಿಗೆ ಪ್ರಮುಖ ವಿಜಯವಾಗಿದೆ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸದಸ್ಯೆ ಗೀತಾ ಹೇಳಿದರು.

'ಲೈಂಗಿಕ ಕಾರ್ಯಕರ್ತೆಯರ ಸಮುದಾಯವು ಪೊಲೀಸರಿಂದ ನಿರಂತರ ಹಿಂಸೆ ಎದುರಿಸುತ್ತಿತ್ತು. ಈ ಆದೇಶದಿಂದ ಸಮುದಾಯದ ಮೇಲೆ ನಡೆಯುತ್ತಿರುವ ಪೊಲೀಸ್ ದೌರ್ಜನ್ಯವನ್ನು ಕೋರ್ಟ್ ಮೊದಲ ಬಾರಿಗೆ ಗುರುತಿಸಿದೆ. ಲೈಂಗಿಕ ಕಾರ್ಯಕರ್ತೆಯರು ತಮ್ಮ ಆರೋಗ್ಯದ ಹಿತದೃಷ್ಟಿಯಿಂದ ಕೈಗೊಳ್ಳುವ ಮುಂಜಾಗ್ರತಾ ಕ್ರಮಗಳನ್ನು ಅವರ ವಿರುದ್ಧ ಸಾಕ್ಷಿಯಾಗಿ ಬಳಸುವಂತಿಲ್ಲ. ಪೊಲೀಸರ ಹಿಂಸಾಚಾರವನ್ನು ನಿಗ್ರಹಿಸುವ ನಿಟ್ಟಿನಲ್ಲಿ ಇದು ನಿರ್ಣಾಯಕ ಹೆಜ್ಜೆಯಾಗಿದೆ' ಎಂದರು.

'ಐಟಿಪಿಎ ಕಾಯ್ದೆ ಅಡಿಯಲ್ಲಿ ವಯಸ್ಕ ಮಹಿಳೆಯರ ಇಚ್ಛೆಯ ವಿರುದ್ಧವಾಗಿ ಬಂಧಿಸಿದರೆ ಕಾಲಮಿತಿಯೊಳಗೆ ಬಿಡುಗಡೆ ಮಾಡಲು ಪರಿಶೀಲಿಸಬಹುದು. ಲೈಂಗಿಕ ಕೆಲಸವನ್ನು ಜೀವನೋಪಾಯದ ಸಾಧನವಾಗಿ ಆಯ್ಕೆ ಮಾಡಿಕೊಳ್ಳುವ ವ್ಯಕ್ತಿಗಳ ಘನತೆಯ ಹಕ್ಕು ಹಾಗೂ ಸ್ವಾಯತ್ತತೆ ಹಕ್ಕುಗಳನ್ನು ಸಂರಕ್ಷಿಸುವ ಪ್ರಯತ್ನ ಇದಾಗಿದೆ ಎಂದು ನ್ಯಾಯಾಲಯದ ಆದೇಶದಲ್ಲಿ ತಿಳಿಸಿದೆ' ಎಂದು ಮಾಹಿತಿ ನೀಡಿದರು.

14ರಿಂದ ಆನ್‌ಲೈನ್ ತರಬೇತಿ ಕಾರ್ಯಕ್ರಮ

ಬೆಂಗಳೂರು: ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಸಿಬ್ಬಂದಿ ತರಬೇತಿ ಘಟಕ ಹಾಗೂ ಹೈದರಾಬಾದ್‌ನ ಮ್ಯಾನೇಜ್ ಸಂಸ್ಥೆಯ ಆಶ್ರಯದಲ್ಲಿ ಜೂನ್ 14ರಿಂದ 16ರ ತನಕ ಕೃಷಿ ಮಾರುಕಟ್ಟೆ ಮಾಹಿತಿ ಕುರಿತು ಆನ್‌ಲೈನ್ ತರಬೇತಿ ಹಮ್ಮಿಕೊಳ್ಳಲಾಗಿದೆ.

ಆಸಕ್ತ ಪ್ರಗತಿಪರ ರೈತರು, ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ವಿಸ್ತರಣಾ ಕಾರ್ಯಕರ್ತರು, ಇದೇ 11ರ ಒಳಗೆ 'ಮ್ಯಾನೇಜ್'ನ ವೆಬ್‌ಸೈಟ್‌ನಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಬಹುದು.

ತರಬೇತಿಯಲ್ಲಿ ಕೃಷಿ ಮಾರುಕಟ್ಟೆಯಲ್ಲಿ ಕೇಂದ್ರ, ರಾಜ್ಯ ಸರ್ಕಾರದ ನೀತಿಗಳು, ಪೂರೈಕೆ ಸರಪಳಿ, ಇ-ಟ್ರೇಡಿಂಗ್, ಇ-ನಾಮ್, ಕೃಷಿ ಪೋರ್ಟಲ್, ಕೃಷಿ ಉತ್ಪನ್ನಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆ ವಿಷಯ ಕುರಿತು ತಿಳಿಸಲಾಗುವುದು. ತರಬೇತಿಯಲ್ಲಿ ಭಾಗವಹಿಸಿದವರಿಗೆ ಡಿಜಿಟಲ್ ಪ್ರಮಾಣಪತ್ರ ನೀಡಲಾಗುವುದು. ಮಾಹಿತಿಗೆ ಸಿಬ್ಬಂದಿ ತರಬೇತಿ ಘಟಕದ ಸಂಯೋಜಕ ಡಾ.ಕೆ.ಶಿವರಾಮು ಅವರನ್ನು ಸಂಪರ್ಕಿಸಬಹುದು.

ನೇಕಾರರಿಗೆ ₹24.26 ಕೋಟಿ ಬಿಡುಗಡೆ

ಬೆಂಗಳೂರು: ಖಾದಿ ನೇಕಾರರಿಗೆ ಕಳೆದ 2 ವರ್ಷಗಳಿಂದ ನೀಡಬೇಕಿದ್ದ ₹24.26 ಕೋಟಿ ಬಾಕಿ ಪ್ರೋತ್ಸಾಹ ಧನವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ.

ರಾಜ್ಯದ ಉಣ್ಣೆ ಮತ್ತು ಅರಳೆ ಖಾದಿ ಕೈಮಗ್ಗ ನೇಕಾರರು ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ಕಾರಣಕ್ಕಾಗಿ ರಾಜ್ಯ ಸರ್ಕಾರ ಪ್ರತಿ ವರ್ಷ ಪ್ರೋತ್ಸಾಹ ಮಜೂರಿಯನ್ನು ನೀಡುತ್ತದೆ. ಆದರೆ, ಕೋವಿಡ್ ಕಾರಣಕ್ಕಾಗಿ ಕಳೆದ ಎರಡು ವರ್ಷಗಳಿಂದ ಆ ಹಣ ಹಂಚಿಕೆಯಾಗದೇ ಬಾಕಿ ಉಳಿದುಕೊಂಡಿತ್ತು.

ಈ ಹಿನ್ನೆಲೆಯಲ್ಲಿ ರಾಜ್ಯ ಉಣ್ಣೆ ಮತ್ತು ಅರಳೆ ಖಾದಿ ಕೈಮಗ್ಗ ನೇಕಾರರ ಸಹಕಾರ ಸಂಘ ಪ್ರೋತ್ಸಾಹ ಮಜೂರಿಯನ್ನು ಬಿಡುಗಡೆ ಮಾಡುವಂತೆ ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಎಂಟಿಬಿ ನಾಗರಾಜು ಅವರಿಗೆ ಮನವಿ ಸಲ್ಲಿಸಿತ್ತು.

ನಗರದಲ್ಲಿ ಇಂದು

ಕರ್ನಾಟಕ ವಚನ ಸಾಹಿತ್ಯ ಪರಿಷತ್ 2ನೇ ರಾಜ್ಯ ಸಮ್ಮೇಳನ: ಚಾಲನೆ: ಸಿ.ಮುನಿಕೃಷ್ಣ, ಉದ್ಘಾಟನೆ: ಡಿ.ವಿ. ಸದಾನಂದಗೌಡ, ಸಮ್ಮೇಳನಾಧ್ಯಕ್ಷರು: ಡಾ.ಸಿ.ಸೋಮಶೇಖರ್, ಉಪಸ್ಥಿತಿ: ಲೀಲಾದೇವಿ.ಆರ್.ಪ್ರಸಾದ್, ಆಯೋಜಕರು: ಕರ್ನಾಟಕ ವಚನ ಸಾಹಿತ್ಯ ಪರಿಷತ್, ಸ್ಥಳ: ಅಲ್ಯುಮ್ನಿ ಸಭಾಂಗಣ, ಪಶುವೈದ್ಯ ಕಾಲೇಜು ಆವರಣ, ಸಿಬಿಐ ಮುಖ್ಯ ಕಚೇರಿ ಎದುರು, ಗಂಗಾನಗರ, ಬೆಳಿಗ್ಗೆ: 10

ಸಮತಾ ಸಮಾವೇಶ: ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಡಾ.ಎಂ.ವೆಂಕಟಸ್ವಾಮಿ, ಉಪಸ್ಥಿತಿ: ಬಿಕ್ಕು ಸಂಘ, ಡಾ.ಜಿ. ಪರಮೇಶ್ವರ, ವಿ.ಸೋಮಣ್ಣ, ಗೋಪಾಲಯ್ಯ, ಬಿ.ಟಿ.ಲಲಿತಾ ನಾಯಕ್, ಆಯೋಜಕರು: ಸಮತಾ ಸೈನಿಕ ದಳ, ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಭವನ, ಮಿಲ್ಲರ್ ರಸ್ತೆ, ವಸಂತನಗರ, ಬೆಳಿಗ್ಗೆ: 11.30

ಫೋಸ್ ಕೊಟ್ಟಾಳೋ, ಫೋನ್ ನಂಬರ್ ಕೊಟ್ಟಾಳೋ ನಾಟಕ ಪ್ರದರ್ಶನ: ಉದ್ಘಾಟನೆ: ಎಚ್.ಸಿ.ನಾಗರತ್ನ, ಫೋಟೋ ಪೂಜೆ: ಡಾ.ಶಿವರಾಜ್ ಕುಮಾರ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಆಯೋಜಕರು: ಕುಮಾರೇಶ್ವರ ಕೃಪಾ ನಾಟಕ ಸಂಘ ಹುಣಸೆಕಟ್ಟೆ, ಸ್ಥಳ: ಗುಬ್ಬಿ ವೀರಣ್ಣ ರಂಗಮಂದಿರ, ಗಾಂಧಿನಗರ ಮೆಜೆಸ್ಟಿಕ್, ಮಧ್ಯಾಹ್ನ: 2.30

ಅಭಿವೃದ್ಧಿಯ ಸಾಮಾಜಿಕ ಆಯಾಮಗಳು ಮತ್ತು ಬಜೆಟ್ ಎಂದರೇನು? ಪುಸ್ತಕಗಳ ಲೋಕಾರ್ಪಣೆ: ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಎಸ್.ಆರ್. ಹಿರೇಮಠ, ಆಯೋಜಕರು: ಜನ ಪ್ರಕಾಶನ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ: 5

ಕರ್ನಾಟಕ ಉತ್ಸವ: ಗಾಯನ: ಕುಮಾರ್ ಮರದೂರ್, ತಬಲಾ: ಜಗದೀಶ ಕುರ್ತಕೋಟಿ, ಹಾರ್ಮೋನಿಯಂ: ಸತೀಶ ಕೊಳ್ಳಿ, ತಬಲಾ: ರಘುನಾಥ ನಾಕೋಡ್ ಮತ್ತು ರವಿಕಿರಣ ನಾಕೋಡ್, ಹಾರ್ಮೋನಿಯಂ: ಸತೀಶ ಕೊಳ್ಳಿ, ಆಯೋಜಕರು: ಪ್ರಾಚೀನ ಕಲಾಕೇಂದ್ರ ಚಂಡೀಗಡ, ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್ ಮತ್ತು ಭಾರತೀಯ ವಿದ್ಯಾಭವನ, ಬೆಂಗಳೂರು ಕೇಂದ್ರ, ಸ್ಥಳ: ಕಿಂಚಾ ಸಭಾಂಗಣ, ರೇಸ್ ಕೋರ್ಸ್ ರಸ್ತೆ, ಭಾರತೀಯ ವಿದ್ಯಾಭವನ ಸಂಜೆ: 5.30

ರೆಸಿಲಿಯೆನ್ಸ್ ಚಿತ್ರಕಲಾ ಪ್ರದರ್ಶನ: ಚಾಲನೆ: ಎಸ್.ಜಿ.ವಾಸುದೇವ್, ಉಪಸ್ಥಿತಿ: ಚಿತ್ರಕಲಾ ಪರಿಷತ್ ಅಧ್ಯಕ್ಷ ಡಾ.ಬಿ.ಎಲ್.ಶಂಕರ್, ಸಿ.ಎಸ್.ಕೃಷ್ಣ ಸೆಟ್ಟಿ, ಆಯೋಜಕರು: ರೆಸಿಲಿಯೆನ್ಸ್ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಸಂಜೆ: 5.30

ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಜಯಂತಿ: ಉದ್ಘಾಟನೆ: ಎಂ.ನರಸಿಂಹ, ಉಪನ್ಯಾಸ: ಎಸ್.ಚಂದ್ರಶೇಖರ್, ಉಪಸ್ಥಿತಿ: ಉಮಾ ಬಸವರಾಜು, ಅಧ್ಯಕ್ಷತೆ: ಎಂ.ಪ್ರಕಾಶಮೂರ್ತಿ, ಆಯೋಜಕರು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಉದಯಭಾನು ಸಾಂಸ್ಕೃತಿಕ ಭವನ ಗವಿಪುರ ಸಾಲು ಛತ್ರಗಳ ಎದುರು, ರಾಮಕೃಷ್ಣ ಬಡಾವಣೆ, ಕೆಂಪೇಗೌಡನಗರ, ಸಂಜೆ: 5.30

ಡಾ.ಎಚ್. ನರಸಿಂಹಯ್ಯ ನೆನಪಿನ ಸಾಂಸ್ಕೃತಿಕ ಉತ್ಸವ: ಗಾಯನ: ಎಂ.ಎಸ್. ಶೀಲ, ಪಿಟೀಲು: ಚಾರುಲತಾ ರಾಮಾನುಜನ್, ಮೃದಂಗ: ಯು.ಕೆ.ಜಯಚಂದ್ರ ರಾವ್, ಘಟ: ಎಸ್.ಎನ್.ನಾರಾಯಣಮೂರ್ತಿ, ಆಯೋಜಕರು: ಲಲಿತಕಲಾ ಪರಿಷತ್ ಮತ್ತು ರಾಮಸುಧಾ ಚಾರಿಟಬಲ್ ಟ್ರಸ್ಟ್, ಸ್ಥಳ: ಡಾ.ಎಚ್.ಎನ್. ಕಲಾಕ್ಷೇತ್ರ, 7ನೇ ಬ್ಲಾಕ್, ಜಯನಗರ, ಸಂಜೆ: 6.30

ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಇಂಗ್ಲಿಷ್ ಅನುವಾದಿತ ಪುಸ್ತಕ ಬಿಡುಗಡೆ ಸಮಾರಂಭ: ಬಿಡುಗಡೆ: ಡಾ.ಎಚ್.ಎಸ್.ಶಿವಪ್ರಕಾಶ್, ಉಪಸ್ಥಿತಿ: ಡಾ.ರಾಜೇಂದ್ರ ಚೆನ್ನಿ, ಟಿ.ಎಸ್.ನಾಗಾಭರಣ, ಡಾ.ಬಸವರಾಜ ಕಲ್ಗುಡಿ, ಅಧ್ಯಕ್ಷತೆ: ಹಂ.ಪ.ನಾಗರಾಜಯ್ಯ, ಆಯೋಜಕರು: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ, ಸ್ಥಳ: ಗಾಂಧಿ ಭವನ ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ: 11

ಕಟ್ಟೆ ಗುರುರಾಜ್ ಬರೆದಿರುವ 'ನನ್ನ ಹಾಡು ನನ್ನದು' ಕೃತಿ ಲೋಕಾರ್ಪಣೆ: ಬಿಡುಗಡೆ: ಹಂಸಲೇಖ, ಅಧ್ಯಕ್ಷತೆ: ಜೋಗಿ, ಉಪಸ್ಥಿತಿ: ಗೋಪಿ, ಲಹರಿ ವೇಲು, ಕಟ್ಟೆ ಗುರುರಾಜ್, ಆಯೋಜಕರು: ಸಾವಣ್ಣ ಪ್ರಕಾಶನ, ಸ್ಥಳ: ಬಿ.ಪಿ.ವಾಡಿಯಾ ಸಭಾಂಗಣ, ಬಸವನಗುಡಿ, ಸಂಜೆ:6

ಉಡುಪ ಮ್ಯೂಸಿಕ್ ಫೆಸ್ಟಿವಲ್: ಗಾಯನ: ಕಾರ್ತಿಕ್, ಕೀಬೋರ್ಡ್: ಲೂಯಿಸ್ ಬ್ಯಾಂಕ್ಸ್, ವರ್ಲ್ಡ್ ಪರ್ಕರ್ಷನ್: ಡ್ರಮ್ಸ್ ಶಿವಮಣಿ, ಕೀಬೋರ್ಡ್: ಸ್ಟೀಫನ್ ದೇವಸಿ, ಕೊಳಲು: ವಿದ್ವಾನ್ ರವಿಚಂದ್ರ ಕೂಳೂರ, ಬಾಸ್ ಗಿಟಾರ್: ಶೆಲ್ಡನ್ ಡಿಸಿಲ್ವ, ಆಯೋಜಕರು: ಉಡುಪ ಮ್ಯೂಸಿಕ್ ಫೆಸ್ಟಿವಲ್, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ಸಂಜೆ: 7

ಕಸಂದ್ರಾ ನಾಟಕ ಪ್ರದರ್ಶನ: ನಿರ್ದೇಶನ: ಎಚ್.ಎಸ್.ಶಿವಪ್ರಕಾಶ್, ಸಹ ನಿರ್ದೇಶನ: ಸಾಲಿಯಾನ್ ಉಮೇಶ ನಾರಾಯಣ, ಸಂಗೀತ: ಶ್ರೀನಿಧಿ ಕಟ್ಟಿ–ಅಶೋಕ ಕುಮಾರ್, ವಸ್ತ್ರ ವಿನ್ಯಾಸ: ಮಂಗಳ.ಎನ್–ಶಿಲ್ಪಾ.ಕೆ.ಪಿ, ಆಯೋಜಕರು: ಸಮಾಜಮುಖಿ ರಂಗ ಬಳಗ, ಸ್ಥಳ: ನ್ಯಾಶನಲ್ ಹಿರಿಯ ಪ್ರಾಥಮಿಕ ಶಾಲೆ, ಬಸವನಗುಡಿ ನ್ಯಾಶನಲ್ ಕಾಲೇಜು ಪಕ್ಕ, ಸಂಜೆ: 7

रेशम संचालनालय म०प्र०

लोअर बेसमेन्ट, सतपुडा भवन भोपाल

seribpl@mp.nic.in, comm.serimp@gmail.com, Ph: 0755-2552118

:: ई–निविदा सूचना ::

इस विज्ञप्ति के माध्यम से सर्व साधारण को सूचित किया जाता है कि मध्यप्रदेश रेशम संचालनालय के अधीनस्थ कार्यालय के 13 जिला रेशम कार्यालयों नर्मदापुरम, बालाघाट, मण्डला, नरसिंहपुर, शहडोल, उज्जैन, इन्दौर, गुना, सीहोर, छिंदवाडा, राजगढ, खण्डवा तथा बैतूल जिलों में वित्तीय वर्ष 2022-23 में पाले जाने वाले क्रॉसब्रीड मलबरी स्वस्थ समूह क्रय की ई–निविदा म.प्र. शासन के एम.पी. टेण्डर्स पोर्टल वेबसाईट http://mptenders.gov.in/nicgep/app पर उपलब्ध है तथा निविदा में भाग लेने की अंतिम तिथि 13/06/2022 को सायं 5.00 बजे तक है।

आयुक्त के आदेशानुसार

(सुनील श्रीवास्तव) फील्ड ऑफीसर

G-13663/22

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿ.,

ನಂ.14, ರಜತಾ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.

ದೂ. 23300497 41159606, ಫ್ಯಾಕ್ಸ್ : 23359600 ಇ–ಮೇಲ್ : vjn@jscbl.com

ಟೆಂಡರ್ ಮತ್ತು ಹರಾಜು ಮಾರಾಟ ಸೂಚನೆ

2002ರ ಹಣಕಾಸು ಆಸ್ತಿಗಳ ಭದ್ರತಾ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಅಡಿಯಲ್ಲಿ ಹರಾಜು ಮಾರಾಟ ಮುಂದುವರಿದಂತೆ

ಸಾಲಗಾರರಾದ 1) ಮೆ॥ ಭಾವನಾ ಕನ್‌ಸ್ಟ್ರಕ್ಷನ್ಸ್ ಪ್ರತಿನಿಧಿಸುವ ಮಾಲೀಕರು : ಶ್ರೀಮತಿ ಭಾವನ ಪ್ರವೀಣ್, ನಂ.7, ನೆಲ ಮಹಡಿ, ಮುತ್ತಯ್ಯ, ಕಂಪೌಂಡ್ ನಾಗರಭಾವಿ ಸರ್ಕಲ್, ನಾಗರಭಾವಿ, ಬೆಂಗಳೂರು–560072, **ಹಾಗೂ ವಿಳಾಸ :** ನಂ.326, 10ನೇ ಕ್ರಾಸ್, 5ನೇ ಮುಖ್ಯ ರಸ್ತೆ, 4ನೇ ಹಂತ, ವಿಜಯನಾಯಕ ಲೇಔಟ್, ನಾಗರಭಾವಿ, ಬೆಂಗಳೂರು–560072. **ಜಾಮೀನುದಾರರು : ರಾಜಕುಮಾರ್ ಡಿ ಎ** ಬಿನ್ ಲೇಟ್ ದಾಸೇಗೌಡ, ನಂ.309, 1ನೇ ಬಿ ಮುಖ್ಯ ರಸ್ತೆ, 6ನೇ ಕ್ರಾಸ್, 4ನೇ ಹಂತ, 9ನೇ ಬ್ಲಾಕ್, ವಿನಾಯಕ ಲೇಔಟ್, ನಾಗರಭಾವಿ, ಬೆಂಗಳೂರು–560072. ಇವರುಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು** ರವರಿಂದ ಪಡೆದ ಸಾಲ ಮರುಪಾವತಿ ಮಾಡುವಲ್ಲಿ ವಿಫಲರಾಗಿರುತ್ತಾರೆ. ಷರತ್ತು ಮತ್ತು ನಿಯಮಗಳ ಒಪ್ಪಂದದ ಅನುಸಾರ ಒಟ್ಟು ಮೊತ್ತ **ರೂ.6,87,71,385/–(ರೂಪಾಯಿ ಆರು ಕೋಟಿ ಎಂಭತ್ತೇಳು ಲಕ್ಷದ ಎಪ್ಪತ್ತೊಂದು ಸಾವಿರದ ಮುನ್ನೂರ ಎಂಭತ್ತೈದು ಮಾತ್ರ)** ದಿನಾಂಕ **31.05.2022**ರಂದು ಇದ್ದಂತೆ ಜೊತೆಗೆ ನಂತರ ಅನ್ವಯವಾಗುವ ದರದಲ್ಲಿ ಬಡ್ಡಿ ಮತ್ತು ಖರ್ಚು ವೆಚ್ಚಗಳು.

ಸರ್ಫೇಸಿ ಕಾಯ್ದೆ 2002 ರ ಸೆಕ್ಷನ್ 13 (2) ರ ಅಡಿಯಲ್ಲಿ ಮತ್ತು ಕಾಯಿದೆಯ ಸೆಕ್ಷನ್ 13 (4) ರ ಅಡಿಯಲ್ಲಿ ನೀಡಲಾಗಿರುವ ಅಧಿಕಾರಗಳನ್ನು ಅನುಸರಿಸಲು ಮತ್ತು ಚಲಾಯಿಸಲು ಬ್ಯಾಂಕ್ ನೋಟಿಸ್ ನೀಡಿರುತ್ತಾರೆ, ಅಧಿಕೃತ ಅಧಿಕಾರಿ ಅಡಮಾನದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಮತ್ತು ಅದರ ವಿವರಗಳನ್ನು ಕೆಳಗೆ ಸಂಪೂರ್ಣವಾಗಿ ವಿವರಿಸಲಾಗಿದೆ, ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಸಂಬಂಧಿತ ನಿಯಮಗಳೊಂದಿಗೆ ಓದಿದ ಸರ್ಫೇಸಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಈ ಕೆಳಗಿನ ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕ್ ನಿರ್ಧರಿಸಿದೆ.

ಸ್ವತ್ತಿನ ವಿವರ	ಟೆಂಡರ್ ತೆರೆಯುವ ದಿನಾಂಕ, ಸಮಯ ಮತ್ತು ಹರಾಜಿನ ಸ್ಥಳ	ಮೀಸಲು ಬೆಲೆ
ಸ್ಥಿರಾಸ್ತಿಯ ಮನೆ ನಂ.310, ಮಧ್ಯಂತರ 78ಎ–01ಜಿ, ರಲ್ಲಿ ಸರ್ವೆ ನಂ.17,18/1 ರಿಂದ 6, 20, 23, 30, 31, 32, 36/1, 37, 64, 71, 95, 96, 97, 98, 112(19), 135 ರಿಂದ 137(17), ನಾಗರಭಾವಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆ, ಖಾಸಗಿ ಲೇಔಟ್, ಶ್ರೀ ವಿನಾಯಕ ಹೆಚ್‌ಬಿಸಿಎಸ್ ಲಿಮಿಟೆಡ್, ಬೆಂಗಳೂರು ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 60 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 40 ಅಡಿ, ಒಟ್ಟು ವಿಸ್ತೀರ್ಣ 2400 ಚದರ ಅಡಿ. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನದ ನಂ.303, ಉತ್ತರಕ್ಕೆ: ನಿವೇಶನದ ನಂ.309, ದಕ್ಷಿಣಕ್ಕೆ: ನಿವೇಶನದ ನಂ.311.	28.06.2022 ಮಧ್ಯಾಹ್ನ 12.30 ಗಂಟೆಗೆ ನಂ.310, 1ನೇ ಬಿ ಮುಖ್ಯರಸ್ತೆ, 6ನೇ ಕ್ರಾಸ್, 4ನೇ ಹಂತ, 9ನೇ ಬ್ಲಾಕ್, ವಿನಾಯಕ ಲೇಔಟ್, ನಾಗರಭಾವಿ, ಬೆಂಗಳೂರು–560072	ರೂ.3,00,00,000/– (ರೂಪಾಯಿ ಮೂರು ಕೋಟಿ ಮಾತ್ರ) ಇಎಂಡಿ : 10% ರಂತೆ ಮೀಸಲು ಬೆಲೆ ರೂ.30,00,000/– (ರೂಪಾಯಿ ಮೂವತ್ತು ಲಕ್ಷ ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು: –

(1) ಟೆಂಡರ್ ಫಾರಂಗಳನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ನಂ.14, "ರಜತಾ ಭವನ" 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು.** (ದೂ. 080–23300497, 41159606) ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. (2) ಇಚ್ಛಿಸುವ ಬಿಡ್‌ದಾರರು ಅವರ ಬಿಡ್‌ಗಳನ್ನು ನಿಗದಿತ ಟೆಂಡರ್ ಫಾರಂಗಳಲ್ಲಿ ಮೊಹರಾದ ಲಕೋಟೆಯಲ್ಲಿ ಮೀಸಲು ಬೆಲೆಯ ಶೇ.10% ಮೊತ್ತವನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ಬೆಂಗಳೂರು** ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್/ಬ್ಯಾಂಕರ್ಸ್ ಚೆಕ್/ಪೇ ಆರ್ಡರ್‌ಗಳನ್ನು ಈ ಟೆಂಡರ್–ಹರಾಜು ಮಾರಾಟ ಸೂಚನೆ ಪ್ರಕಟವಾದ ದಿನಾಂಕದ ನಂತರ ಪಡೆದಿರಬೇಕು. (3) ಅನಿಗದಿತ ರೂಪದಲ್ಲಿರುವ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಇಎಂಡಿಯೊಂದಿಗೆ ಟೆಂಡರ್‌ಗಳನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು,** ಇವರಿಗೆ ದಿನಾಂಕ **27.06.2022** ಮತ್ತು ಸಮಯ **ಸಂಜೆ 5.30** ರ ಒಳಗೆ ಸಲ್ಲಿಸಬೇಕು. ಇಎಂಡಿ ರಹಿತವಾದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. (4) ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ. (5) ಒಂದು ವೇಳೆ ಬಿಡ್ಡರ್‌ಗಳು ಯಶಸ್ವಿಯಾಗದಿದ್ದಲ್ಲಿ ಇಎಂಡಿ ಮೊತ್ತವನ್ನು ಬಡ್ಡಿರಹಿತವಾಗಿ ಹಿಂತಿರುಗಿಸಲಾಗುವುದು. (6) ಯಶಸ್ವಿ ಬಿಡ್‌ದಾರರು ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಲು ವಿಫಲರಾದಲ್ಲಿ ಇಎಂಡಿ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (7) ಮೊಹರಾದ ಟೆಂಡರ್‌ಗಳನ್ನು ಅಧಿಕೃತ ಅಧಿಕಾರಿಯವರು ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ **ದಿನಾಂಕ 28.06.2022 ರಂದು ಮಧ್ಯಾಹ್ನ 12.30ಕ್ಕೆ** ತೆರೆಯುವರು. (8) ಟೆಂಡರ್‌ಗಳನ್ನು ತೆರೆದ ನಂತರ, ಉದ್ದೇಶಿತ ಬಿಡ್ಡುದರರಿಗೆ ಅಧಿಕೃತ ಅಧಿಕಾರಿಯ ವಿವೇಚನೆಯಿಂದ ಅವಕಾಶ ನೀಡಬಹುದು, ಆಫರ್ ಬೆಲೆಯನ್ನು ಹೆಚ್ಚಿಸಲು ತಮ್ಮ ನಡುವೆ ತೀವ್ರವಾದ ಬಿಡ್ಡಿಂಗ್ ಮಾಡಬಹುದು. (9) ಯಶಸ್ವಿ ಬಿಡ್‌ದಾರರು ಮಾರಾಟದ ಬೆಲೆಯ ಶೇ. 25% (ಇಎಂಡಿ ಹಣವನ್ನು ಸೇರಿ) ಹಣವನ್ನು ತಕ್ಷಣ ಹರಾಜಿನ ದಿನದಂದು ನಗದು ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಪಾವತಿಸಬೇಕು ಮತ್ತು ಬಾಕಿ ಉಳಿದ ಮಾರಾಟದ ಮೊತ್ತವನ್ನು ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗೆ ಪಾವತಿಸಬೇಕು. ಒಂದು ವೇಳೆ ಯಶಸ್ವಿ ಬಿಡ್‌ದಾರರು ಹಣ ಪಾವತಿಸದಿದ್ದಲ್ಲಿ ಈವರೆಗೆ ಪಾವತಿಸಿರುವ ಎಲ್ಲಾ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರುಮಾರಾಟ ಮಾಡಲಾಗುವುದು. (10) ಯಶಸ್ವಿ ಬಿಡ್ಡರ್ ಅನ್ವಯವಾಗುವಂತೆ ಕಾನೂನು ಬದ್ಧ ವೆಚ್ಚಗಳಾದ ತೆರಿಗೆಗಳು/ಶುಲ್ಕ/ಆಸ್ತಿ ತೆರಿಗೆ/ಬೆಸ್ಕಾಂ ಶುಲ್ಕ/ನೀರಿನ ಶುಲ್ಕ ವರ್ಗಾವಣೆ ವೆಚ್ಚಗಳಾದ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಅನ್ವಯವಾಗುವ ಕಾನೂನಿನಂತೆ ಪಾವತಿಸಿದಲ್ಲಿ ಆಸ್ತಿಯನ್ನು ಅವರ ಪರವಾಗಿ ವರ್ಗಾಯಿಸಿ ಕೊಡಲಾಗುವುದು. (11) ಅಧಿಕೃತ ಅಧಿಕಾರಿಯವರು ಯಾವುದೇ ಟೆಂಡರ್‌ನ್ನು ಸ್ವೀಕರಿಸುವ/ತಿರಸ್ಕರಿಸುವ ಅಥವಾ ಹರಾಜು ಮಾರಾಟವನ್ನು ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಯಾವುದೇ ಸೂಚನೆಯನ್ನು ನೀಡದೆ, ಜಾಹಿರಾತಿನಲ್ಲಿ ನೀಡಿರುವ ನಿಯಮ ಮತ್ತು ನಿಬಂಧನೆಗಳನ್ನು ಬದಲಾಯಿಸುವ ಅಧಿಕಾರವು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಒಳಪಟ್ಟಿದೆ. (12) ಮಾರಾಟವು ಬ್ಯಾಂಕ್ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. (13) ಈ ಮಾರಾಟವು ಇಚ್ಛಿಸುವ ಬಿಡ್‌ದಾರರು ಆಸ್ತಿಯನ್ನು **ಬೆಳಗ್ಗೆ 10.00 ಘಂಟೆಯಿಂದ ಸಂಜೆ 5.00 ರವರೆಗೆ,** ಷೆಡ್ಯೂಲಿನಲ್ಲಿ ತಿಳಿಸಿರುವ ವಿಳಾಸದಲ್ಲಿ ಅವರ ಸ್ವಂತ ಖರ್ಚಿನಲ್ಲಿ ಪರಿಶೀಲಿಸ ಬಹುದಾಗಿದೆ. (14) ಆಸ್ತಿಯನ್ನು **'ಎಲ್ಲಿ ಹೇಗಿದೆಯೋ ಹಾಗೆ'** ಮತ್ತು **'ಎಲ್ಲಿ ಏನಿದೆಯೋ ಹಾಗೆ'** ಆಧಾರದ ಮೇಲೆ ಮಾರಾಟಮಾಡಲಾಗುವುದು. ಇಚ್ಛಿಸುವ ಬಿಡ್‌ದಾರರು ಆಸ್ತಿಯ ಮೇಲಿನ ಋಣಭಾರಗಳು (ಎನ್‌ಕಂಬರೆನ್ಸ್) ಟೈಟಲ್ ಮಾಲೀಕತ್ವ ಶಾಸನಬದ್ಧ ಮಂಜೂರಾತಿಗಳು ಮುಂತಾದವುಗಳನ್ನು ಪರಿಶೀಲಿಸಬೇಕು.

ಹೆಚ್ಚಿನ ವಿವರಗಳಿಗಾಗಿ ಉದ್ದೇಶಿತ ಬಿಡ್ಡುದಾರರು ಅಧಿಕೃತ ಅಧಿಕಾರಿ, ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ನಂ.14, "ರಜತಾ ಭವನ" 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು. (ದೂ. 080–23300497, 41159606) ಇ–ಮೇಲ್: vjn@jscbl.com.

ದಿನಾಂಕ : 03.06.2022
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ನಗರದಲ್ಲಿ ಸೋಂಕಿತರ ಸಂಖ್ಯೆ ಏರಿಕೆ ● ಮುನ್ನೆಚ್ಚರಿಕೆ ಕ್ರಮವಾಗಿ 2 ಸಾವಿರಕ್ಕೂ ಅಧಿಕ ಹಾಸಿಗೆಗಳು ಮೀಸಲು

ಪ್ರಕರಣ ಹೆಚ್ಚಳವಾದರೂ ದಾಖಲಾತಿಯಿಲ್ಲ

● ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ವಾರದಿಂದ ಏರಿಕೆ ಕಂಡರೂ ಸೋಂಕಿನ ತೀವ್ರತೆ ಕಡಿಮೆ ಇರುವುದರಿಂದಾಗಿ ಆಸ್ಪತ್ರೆಗಳಲ್ಲಿ ಶೇ 99.79 ರಷ್ಟು ಹಾಸಿಗೆಗಳು ಖಾಲಿಯಿವೆ. ಇಷ್ಟಾಗಿಯೂ ಮುನ್ನೆಚ್ಚರಿಕೆ ಕ್ರಮವಾಗಿ ಸರ್ಕಾರಿ ಕೋಟಾದಡಿ ಎರಡು ಸಾವಿರಕ್ಕೂ ಅಧಿಕ ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಮೀಸಲಿರಿಸಿಕೊಳ್ಳಲಾಗಿದೆ.

10 ದಿನಗಳಲ್ಲಿ 1,785 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈ ಅವಧಿಯಲ್ಲಿ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 1,346 ಮಂದಿ ಚೇತರಿಸಿಕೊಂಡಿದ್ದಾರೆ. ಹೊಸ ಪ್ರಕರಣಗಳ ಸಂಖ್ಯೆ 200ರ ಗಡಿಯ ಆಸುಪಾಸಿಗೆ ಏರಿಕೆಯಾಗಿದ್ದರೂ ಸೋಂಕಿತರಲ್ಲಿ ನಿತ್ಯ ಎರಡರಿಂದ ಐದು ಮಂದಿ ಮಾತ್ರ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗುತ್ತಿದ್ದಾರೆ. ದಾಖಲಾಗುತ್ತಿರುವವರಿಗೆ ಸಾಮಾನ್ಯ ಹಾಸಿಗೆಗಳಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ. ಬಹುತೇಕ ಸೋಂಕಿತರು ಮನೆ ಆರೈಕೆಯಲ್ಲಿಯೇ ಚೇತರಿಸಿಕೊಳ್ಳುತ್ತಿದ್ದಾರೆ.

ನಗರದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 2 ಸಾವಿರದ ಗಡಿ ದಾಟಿದೆ. ಸೋಂಕಿತರ ಚಿಕಿತ್ಸೆಗೆ ಮೀಸಲಿಟ್ಟಿರುವ 2,395 ಹಾಸಿಗೆಗಳಲ್ಲಿ 2,390 ಹಾಸಿಗೆಗಳು ಖಾಲಿ ಉಳಿದಿವೆ. ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಚಿಕಿತ್ಸಾ ನಿರ್ಧಾರ ಕೇಂದ್ರಗಳಲ್ಲಿ (ಟ್ರಯಾಜ್ ಸೆಂಟರ್) ಸೋಂಕಿತರನ್ನು ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ. ನಗರದಲ್ಲಿ 48 ಟ್ರಯಾಜ್ ಸೆಂಟರ್‌ಗಳಿವೆ.

ಕೋವಿಡ್ ಎರಡನೇ ಅಲೆಯಲ್ಲಿ ತೀವ್ರ ನಿಗಾ ಘಟಕ (ಐಸಿಯು) ಸೇರಿದಂತೆ ವಿವಿಧ ಮಾದರಿಯ ಹಾಸಿಗೆಗಳು ಸಿಗದೆ, ಸಮಸ್ಯೆ ಗಂಭೀರ ಸ್ವರೂಪ ಪಡೆದು, ಕೋವಿಡ್ ಪೀಡಿತರಿಗೆ ಆಸ್ಪತ್ರೆ ದಾಖಲಾತಿಯೇ ಸಮಸ್ಯೆಯಾಗಿತ್ತು. ಸರ್ಕಾರವು ಕೋವಿಡ್ ಮೂರನೇ ಅಲೆಯಲ್ಲಿ ಖಾಸಗಿ ಆಸ್ಪತ್ರೆಗಳ ಸಹಯೋಗದಲ್ಲಿ ಸೋಂಕಿತರಿಗೆ ಚಿಕಿತ್ಸೆ ಒದಗಿಸುವ ವ್ಯವಸ್ಥೆ ರೂಪಿಸಿತ್ತು. ಸರ್ಕಾರಿ ಕೋಟಾದಡಿ ಶಿಫಾರಸು ಆಧಾರದಲ್ಲಿ ಚಿಕಿತ್ಸೆ ನೀಡಲು ಶೇ 75ರಷ್ಟು ಹಾಸಿಗೆಗಳನ್ನು ಮೀಸಲಿಡುವಂತೆ ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿ, ಆದೇಶ ಹೊರಡಿಸಿತ್ತು. ಇದರಿಂದಾಗಿ ಕೋವಿಡ್ ಚಿಕಿತ್ಸೆಗೆ ನಗರದಲ್ಲಿ 6 ಸಾವಿರಕ್ಕೂ ಅಧಿಕ ಹಾಸಿಗೆಗಳು ದೊರೆತಿದ್ದವು.

ಹಾಸಿಗೆ ಮೀಸಲು: ಮೂರನೇ ಅಲೆಯ ಸಂದರ್ಭದಲ್ಲಿ ದಿನವೊಂದಕ್ಕೆ ವರದಿಯಾಗುತ್ತಿದ್ದ ಹೊಸ ಪ್ರಕರಣಗಳ ಸಂಖ್ಯೆಯು ನಗರದಲ್ಲಿ 30 ಸಾವಿರದವರೆಗೆ ಹೆಚ್ಚಳ ಕಂಡಿದ್ದರೂ ಸೋಂಕಿತರಲ್ಲಿ ಶೇ 98ರಷ್ಟು ಮಂದಿ ಮನೆ ಆರೈಕೆಗೆ ಒಳಗಾಗಿದ್ದರು. ಆದರೂ ಮೀಸಲು ಹಾಸಿಗೆಗಳನ್ನು ಚಿಕಿತ್ಸೆಗೆ ಉಳಿಸಿಕೊಳ್ಳಲಾಗಿದೆ.

‘ಮೂರು ನಾಲ್ಕು ದಿನಗಳಿಗೊಮ್ಮೆ ಅಧಿಕ ಸಂಖ್ಯೆಯಲ್ಲಿ ಪ್ರಕರಣಗಳು ಪತ್ತೆಯಾಗುತ್ತಿವೆ. ಪ್ರಯೋಗಾಲಯದ ವರದಿಗಳು ವಿಳಂಬವಾಗುತ್ತಿವೆಯೇ ಎನ್ನುವುದನ್ನು ಪರಿಶೀಲಿಸಲಾಗುತ್ತಿದೆ. ಸದ್ಯಕ್ಕೆ ಆತಂಕ ಪಡುವ ಪರಿಸ್ಥಿತಿಯಿಲ್ಲ. ಆದರೂ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಲಾಗುತ್ತಿದೆ’ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ತಿಳಿಸಿದರು.

‘ಕೋವಿಡ್ ಎರಡನೇ ಅಲೆಯಲ್ಲಿ ಸೋಂಕು ಹೆಚ್ಚಿನ ಪ್ರಮಾಣದಲ್ಲಿ ಶ್ವಾಸಕೋಶಕ್ಕೆ ಹಾನಿ ಮಾಡಿತ್ತು. ಇದರಿಂದ ಹೆಚ್ಚಿನವರು ಗಂಭೀರವಾಗಿ ಅಸ್ವಸ್ಥಗೊಂಡು ಆಸ್ಪತ್ರೆಗಳಿಗೆ ದಾಖಲಾಗಿದ್ದರು. ಮೂರನೇ ಅಲೆಯಲ್ಲಿ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾದರೂ ಸೋಂಕಿನ ತೀವ್ರತೆ ಕಡಿಮೆಯಿತ್ತು. ಈಗ ಪ್ರಕರಣ ಕೊಂಚ ಏರಿಕೆಯಾದರೂ ಆಸ್ಪತ್ರೆ ದಾಖಲಾತಿ ಕಡಿಮೆಯಿದೆ’ എಂದು ಬೌರಿಂಗ್ ಆಸ್ಪತ್ರೆಯ ವೈದ್ಯರೊಬ್ಬರು ಹೇಳಿದರು.

ಕೋವಿಡ್‌ಗೆ ಮೀಸಲಿಟ್ಟ ಹಾಸಿಗೆಗಳ ವಿವರ (ಸರ್ಕಾರಿ ಕೋಟಾ)

ವಿಧ	ಸಾಮಾನ್ಯ	ಎಚ್‌ಡಿಯು	ಐಸಿಯು	ವೆಂಟಿಲೇಟರ್ ಸಹಿತ ಐಸಿಯು	ಒಟ್ಟು
ಸರ್ಕಾರಿ ವೈದ್ಯಕೀಯ ಕಾಲೇಜು	120	255	33	27	435
ಖಾಸಗಿ ಆಸ್ಪತ್ರೆ	181	61	49	42	333
ಸರ್ಕಾರಿ ಆಸ್ಪತ್ರೆ	637	292	74	95	1,098
ಖಾಸಗಿ ವೈದ್ಯಕೀಯ ಕಾಲೇಜು	178	200	66	35	479

ಕೊರೊನಾ ಸೋಂಕಿನ ತೀವ್ರತೆ ಕಡಿಮೆಯಿದೆ. ಆದ್ದರಿಂದ ಸೋಂಕಿತರು ಮನೆ ಆರೈಕೆಗೆ ಒಳಗಾಗುತ್ತಿದ್ದಾರೆ. ಎಲ್ಲರೂ ಲಸಿಕೆ ಪಡೆದುಕೊಳ್ಳಬೇಕು

ಡಾ. ಬಾಲಸುಂದರ್
ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ

‘ಮೂರು ವಾರ ನಿರ್ಣಾಯಕ’

ಡಾ. ಸಿ.ಎನ್ ಮಂಜುನಾಥ್

‘ಕೋವಿಡ್‌ನ ಬಹುತೇಕ ಪ್ರಕರಣಗಳಲ್ಲಿ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತಿಲ್ಲ. ಶೇ 10ರಷ್ಟು ಮಂದಿಯಲ್ಲಿ ಮಾತ್ರ ಶೀತ, ಜ್ವರದಂತಹ ಲಕ್ಷಣಗಳು ಗೋಚರಿಸುತ್ತಿವೆ. ಸೋಂಕಿನ ತೀವ್ರತೆ ಕಡಿಮೆ ಇದ್ದರೂ ಹೃದಯ, ಶ್ವಾಸಕೋಶ ಸೇರಿದಂತೆ ವಿವಿಧ ಸಮಸ್ಯೆಗಳು ಇರುವವರಿಗೆ ಕೋವಿಡ್ ಅಪಾಯ ತರುವ ಸಾಧ್ಯತೆ ಇರುತ್ತದೆ. ಮುಂದಿನ ಎರಡು ಮೂರು ವಾರಗಳು ನಿರ್ಣಾಯಕ’ ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

‘ಸೋಂಕಿನ ಲಕ್ಷಣಗಳು ಕಾಣಿಸಿಕೊಂಡರೆ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು. ಇನ್ನಷ್ಟು ದಿನ ಮುಖಗವಸು (ಮಾಸ್ಕ್) ಹಾಕಿಕೊಳ್ಳಬೇಕು’ ಎಂದು ಹೇಳಿದರು.

ಸುದ್ದಿ 2 ನಿಮಿಷ

ಬಾಲ್ಯವಿವಾಹ ಆರೋಪ: ನಿರೀಕ್ಷಣಾ ಜಾಮೀನು ಮಂಜೂರು

ಬೆಂಗಳೂರು: ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕಳೆದ ವರ್ಷ ನಡೆದ ಬಾಲ್ಯವಿವಾಹ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪ ಎದುರಿಸುತ್ತಿದ್ದ ವರನ ತಂದೆ ಮತ್ತು ತಾಯಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ನೀಡಿದೆ.

ಈ ಸಂಬಂಧ ಪಾತಪಾಳ್ಯ ಹೋಬಳಿಯ ನಂದಪ್ಪಗಾರಪಲ್ಲಿಯ ಗುಳ್ಳಪ್ಪ ಮತ್ತು ಲಕ್ಷ್ಮೀದೇವಮ್ಮ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

‘ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಯಾವುದೇ ಆರೋಪಗಳು ಇಲ್ಲದಿರುವ ಕಾರಣ, ದಂಪತಿಗೆ ನಿರೀಕ್ಷಣಾ ಜಾಮೀನು ನೀಡಬಹುದಾಗಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಪಾತಪಾಳ್ಯ ಹೋಬಳಿಯ ನಂದಪ್ಪಗಾರಪಲ್ಲಿಯಲ್ಲಿ ಒಂದು ವರ್ಷದ ಹಿಂದೆ ಬಾಲ್ಯವಿವಾಹ ಪ್ರಕರಣ ವರದಿಯಾಗಿತ್ತು. ಈ ಸಂಬಂಧ ಶಾಲೆಯ ಮುಖ್ಯ ಶಿಕ್ಷಕ ಆದಿನಾರಾಯಣಪ್ಪ, 11 ವರ್ಷದ ಬಾಲಕಿಯನ್ನು ಗ್ರಾಮದ ಗುಳ್ಳಪ್ಪ ಮತ್ತು ಲಕ್ಷ್ಮೀದೇವಮ್ಮ ದಂಪತಿ ತಮ್ಮ ಪುತ್ರನಿಗೆ ವಿವಾಹ ಮಾಡಿಸಿದ್ದಾರೆಂದು ದೂರು ನೀಡಲಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಗುಡಿಬಂಡೆ ಪೊಲೀಸರು ತನಿಖೆ ಕೈಗೊಂಡು ಗುಳ್ಳಪ್ಪ ಮತ್ತು ಲಕ್ಷ್ಮೀದೇವಮ್ಮ ಅವರನ್ನು ಆರೋಪಿಗಳನ್ನಾಗಿ ಹೆಸರಿಸಿದ್ದರು.

ಕೆ.ಆರ್.ಪುರ: ಪದವಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ

ಕೆ.ಆರ್.ಪುರ: ಬಿಬಿಎಂಪಿ ವತಿಯಿಂದ ಹಮ್ಮಿಕೊಂಡಿದ್ದ ಕ್ಷೇತ್ರದ ಪದವಿ ವಿದ್ಯಾರ್ಥಿಗಳಿಗೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಉಚಿತ ಲ್ಯಾಪ್‌ಟಾಪ್ ವಿತರಿಸಿದರು.

ಬಳಿಕ ಮಾತನಾಡಿದ ಸಚಿವರು, ‘ಕ್ಷೇತ್ರದ 197 ಪದವಿ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಿಸಲಾಗಿದೆ. ಕೊರೊನಾ ಕಾರಣಕ್ಕೆ ಎರಡು ವರ್ಷಗಳಿಂದ ಸರ್ಕಾರದಿಂದ ಮಂಜೂರಾಗಿದ್ದ ಲ್ಯಾಪ್‌ಟಾಪ್ ವಿತರಣೆಗೆ ತೊಡಕಾಗಿತ್ತು’ ಎಂದರು.

‘ಉತ್ತಮ ಗುಣಮಟ್ಟದ ಶಿಕ್ಷಣ ದೊರಕುವಂತಾಗಬೇಕು ಎಂಬ ಆಶಯದೊಂದಿಗೆ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ನಮ್ಮ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಸರ್ಕಾರ ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸುತ್ತಿದೆ’ ಎಂದು ಹೇಳಿದರು.

ಕೊಲೆ ಯತ್ನ: ಇಬ್ಬರು ಎಂಜಿನಿಯರ್ ಅಮಾನತು

ತುಮಕೂರು: ಬಿಜೆಪಿ ಮುಖಂಡರೊಬ್ಬರ ಕೊಲೆಗೆ ಯತ್ನಿಸಿದ ಆರೋಪದ ಮೇಲೆ ಲೋಕೋಪಯೋಗಿ ಇಲಾಖೆ ಇಬ್ಬರು ಸಹಾಯಕ ಎಂಜಿನಿಯರುಗಳನ್ನು ಅಮಾನತು ಮಾಡಲಾಗಿದೆ.

ತುಮಕೂರು ಲೋಕೋಪಯೋಗಿ ವೃತ್ತದ ಸಹಾಯಕ ಎಂಜಿನಿಯರ್ ಆರ್.ಶಂಭುಕುಮಾರ್ ಹಾಗೂ ಬೆಂಗಳೂರು ಕೆ.ಆರ್. ವೃತ್ತದ ಲೋಕೋಪಯೋಗಿ ಇಲಾಖೆಪಿಆರ್‌ಎಎಂಸಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಂಜಿನಿಯರ್ ಎಂ.ಅಶ್ವಿನಿ ಅವರನ್ನು ಅಮಾನತು ಮಾಡಿ ಆದೇಶಿಸಲಾಗಿದೆ.

ಶಂಭುಕುಮಾರ್, ಅಶ್ವಿನಿ ಹಾಗೂ ಮತ್ತೊಬ್ಬ ಮಹಿಳೆ ಸೇರಿಕೊಂಡು ಬಿಜೆಪಿ ಎಸ್‌ಸಿ ಮೋರ್ಚಾ ತುಮ ಕೂರು ಜಿಲ್ಲಾ ಘಟಕದ ಅಧ್ಯಕ್ಷ ಓಂಕಾರೇಶ್ವರ ಅವರ ಕೊಲೆಗೆ ಬೆಂಗಳೂರಿನಲ್ಲಿ ಯತ್ನಿಸಿದ್ದರು. ಕಾರು ಹರಿಸಿ ಕೊಲೆ ಪ್ರಯತ್ನ ನಡೆಸಲಾಗಿತ್ತು. ಈ ಸಂಬಂಧ ಏಪ್ರಿಲ್ 12ರಂದು ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಅಶ್ವಿನಿ ಪ್ರಸ್ತುತ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ. ದೂರು ದಾಖಲಾಗುತ್ತಿದ್ದಂತೆ ಶಂಭುಕುಮಾರ್ ತಲೆ ಮರೆಸಿಕೊಂಡಿದ್ದಾರೆ.

ಯುವತಿಯರಿಂದ ಕರೆ ಮಾಡಿಸಿ ನೋಂದಣಿ

ಉದ್ಯೋಗ ಆಮಿಷ: ನಕಲಿ ಕಂಪನಿ ಸೃಷ್ಟಿಸಿ ವಂಚನೆ

ಪ್ರಜಾವಾಣಿ ವಾರ್ತೆ

ಸಾಯಿಕಿರಣ್

ಸಿ. ರಘು

ಬೆಂಗಳೂರು: ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಕೊಡಿಸುವ ಆಮಿಷವೊಡ್ಡಿ ನೋಂದಣಿ ಶುಲ್ಕ ಹಾಗೂ ಸಂದರ್ಶನದ ಹೆಸರಿನಲ್ಲಿ ಹಣ ಪಡೆದು ವಂಚಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಜರಾಜೇಶ್ವರಿನಗರದ ಸಿ. ರಘು ಅಲಿಯಾಸ್ ನವನೀತ್ (27) ಹಾಗೂ ಗಾಯತ್ರಿನಗರದ ಸಾಯಿಕಿರಣ್ (25) ಬಂಧಿತರು. ‘ಅಲ್ಕಾನ್ ಲ್ಯಾಬೊರೇಟರಿ ಇಂಡಿಯಾ’ ಹೆಸರಿನಲ್ಲಿ ನಕಲಿ ಕಂಪನಿ ತೆರೆದು ಜನರನ್ನು ವಂಚಿಸುತ್ತಿದ್ದರು. ಇವರಿಂದ ₹ 43 ಸಾವಿರ ನಗದು, 2 ಕಂಪ್ಯೂಟರ್, 1 ಲ್ಯಾಪ್‌ಟಾಪ್ ಹಾಗೂ 11 ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಉದ್ಯೋಗ ಹುಡುಕುತ್ತಿದ್ದ ನಗರದ ನಿವಾಸಿಯೊಬ್ಬರಿಗೆ ಆರೋಪಿಗಳು ವಂಚಿಸಿದ್ದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಜನರನ್ನು ವಂಚಿಸಿ ಹಣ ಸಂಪಾದಿಸುವುದನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿಗಳು, ಮೂರು ವರ್ಷಗಳಿಂದ ಕೃತ್ಯ ಎಸಗುತ್ತಿದ್ದರು’ ಎಂದೂ ತಿಳಿಸಿದರು.

ಯುವತಿಯರಿಂದ ಕರೆ: ‘ವಿವಿಧ ಹೆಸರಿನಲ್ಲಿ ನಕಲಿ ಕಂಪನಿ ಸೃಷ್ಟಿಸುತ್ತಿದ್ದ ಆರೋಪಿಗಳು, ಅವುಗಳ ಹೆಸರಿನಲ್ಲಿ ಜಾಹೀರಾತು ನೀಡುತ್ತಿದ್ದರು. ಕೆಲಸ ಸಿಗುವ ಆಸೆಯಿಂದ ಬರುತ್ತಿದ್ದ ಯುವತಿಯರನ್ನು ತಮ್ಮದೇ ಕಂಪನಿ ಪ್ರತಿನಿಧಿಗಳಾಗಿ ನೇಮಿಸಿಕೊಳ್ಳುತ್ತಿದ್ದ ಆರೋಪಿಗಳು, ಅವರ ಮೂಲಕ ಮತ್ತಷ್ಟು ಅಭ್ಯರ್ಥಿಗಳಿಗೆ ಕರೆ ಮಾಡಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಖಾಲಿ ಇದೆ’ ಎನ್ನುತ್ತಿದ್ದ ಯುವತಿಯರು, ನೋಂದಣಿ ಹಾಗೂ ಸಂದರ್ಶನ ಶುಲ್ಕದ ಹೆಸರಿನಲ್ಲಿ ಸುಮಾರು ₹ 10 ಸಾವಿರ (ಪ್ರತಿ ಅಭ್ಯರ್ಥಿಗೆ) ಸಂಗ್ರಹಿಸುತ್ತಿದ್ದರು. ಇದಾದ ನಂತರ, ಅಭ್ಯರ್ಥಿಗಳಿಗೆ ಯಾವುದೇ ಕೆಲಸ ಕೊಡಿಸುತ್ತಿರಲಿಲ್ಲ.’

‘ಕಂಪನಿ ಪ್ರತಿನಿಧಿ ಆಗಿ ಕೆಲಸ ಮಾಡುತ್ತಿದ್ದ ಯುವತಿಯರನ್ನು ಆರೋಪಿಗಳು ಅರ್ಧಕ್ಕೆ ಕೆಲಸ ಬಿಡಿಸುತ್ತಿದ್ದರು. ಅವರಿಗೆ ಸಂಬಳ ಸಹ ಕೊಡುತ್ತಿರಲಿಲ್ಲ. ಸಂಬಳ ಕೇಳಿದರೆ, ಜೀವ ಬೆದರಿಕೆ ಹಾಕುತ್ತಿದ್ದರು’.

‘ಬ್ಯಾಡರಹಳ್ಳಿ, ಬಸವೇಶ್ವರನಗರ, ಅನ್ನಪೂರ್ಣೇಶ್ವರಿನಗರ ಹಾಗೂ ಸುಬ್ರಹ್ಮಣ್ಯನಗರ ಠಾಣೆಗಳಲ್ಲೂ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದ್ದವು. ಆದರೆ, ಆರೋಪಿಗಳ ಸುಳಿವು ಸಿಕ್ಕಿರಲಿಲ್ಲ. ಇತ್ತೀಚೆಗೆ ಲಭ್ಯವಾದ ಪುರಾವೆ ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು’ ಎಂದೂ ಹೇಳಿದರು.

ನಂದಿನಿ ಜಯರಾಂ ಅವರಿಗೂ ತಾಗಿದ ಮಸಿ: ದೂರು

ರಾಕೇಶ್ ಟಿಕಾಯತ್ ಅವರಿಗೆ ಎರಚಿದ ಮಸಿ ನಂದಿನಿ ಜಯರಾಂ ಅವರಿಗೂ ತಾಗಿರುವುದು

ಕಿಕ್ಕೇರಿ (ಮಂಡ್ಯ ಜಿಲ್ಲೆ): 'ಬೆಂಗಳೂರಿನ ಗಾಂಧಿಭವನದಲ್ಲಿ ಈಚೆಗೆ ನಡೆದ ರೈತ ಸಂಘದ ಸಮಾರಂಭದಲ್ಲಿ ರೈತ ಮುಖಂಡ ರಾಕೇಶ್ ಟಿಕಾಯತ್ ಅವರ ಮೇಲೆ ದುಷ್ಕರ್ಮಿಗಳು ಎರಚಿದ ರಾಸಾಯನಿಕವು ತನಗೂ ತಾಗಿದ್ದು ಚರ್ಮ ಸಮಸ್ಯೆ ಕಾಣಿಸಿಕೊಂಡಿದೆ. ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ರೈತ ಸಂಘ ಮಹಿಳಾ ಘಟಕದ ಅಧ್ಯಕ್ಷೆ ನಂದಿನಿ ಜಯರಾಂ ಪಟ್ಟಣ ಠಾಣೆಗೆ ದೂರು ದಾಖಲಿಸಿದ್ದಾರೆ.

‘ದುಷ್ಕರ್ಮಿಗಳು ಟಿಕಾಯತ್ ಅವರ ಮೇಲೆ ದಾಳಿ ನಡೆಸಿದ್ದು ಮಸಿಯಿಂದ ಅಲ್ಲ, ಮಸಿಯಂತೆ ಕಾಣುವ ಅಪಾಯಕಾರಿ ರಾಸಾಯನಿಕ ಎರಚಿದ್ದಾರೆ. ದಾಳಿ ಸಂದರ್ಭದಲ್ಲಿ ಟಿಕಾಯತ್ ಸಮೀಪದಲ್ಲಿಯೇ ನಾನೂ ಇದ್ದೆ, ಈ ವೇಳೆ ರಾಸಾಯನಿಕ ನನ್ನ ಮೈಮೇಲೂ ಹಾರಿದ್ದು ಚರ್ಮ ಸುಟ್ಟಂತೆ ಆಗಿದೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಘಟನೆಯ ನಂತರ ಕಣ್ಣು ಉರಿ ಕಾಣಿಸಿಕೊಂಡಿತು, ಬೆಂಗಳೂರಿನಲ್ಲೇ ಚಿಕಿತ್ಸೆ ಪಡೆದು ಊರಿಗೆ ಮರಳಿದೆ. ನಂತರ ಚರ್ಮ ತುರಿಕೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಕಿಕ್ಕೇರಿ ಕಿಕ್ಕೇರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದೆ’ ಎಂದು ತಿಳಿಸಿದ್ದಾರೆ.

‘ಈಚೆಗೆ ಇಂತಹ ಘಟನೆಗಳು ನಡೆಯುತ್ತಿರುವುದು ದುರದೃಷ್ಟಕರ. ಇಂತಹ ಹೀನ ಕೃತ್ಯಗಳಿಗೆ ಕಡಿವಾಣ ಹಾಕಲು ಸರ್ಕಾರ ತ್ವರಿತವಾಗಿ ಕ್ರಮವಹಿಸಬೇಕಿದೆ. ಪೊಲೀಸರು ಇರುವ ಜಾಗದಲ್ಲೇ ಈ ರೀತಿ ನಡೆದರೆ ಏನೆಂದು ಹೇಳಬೇಕು? ದೆಹಲಿ ರೈತ ಹೋರಾಟದಲ್ಲಿ ಪಾಲ್ಗೊಂಡ ನೂರಾರು ರೈತರು, ಮುಖಂಡರು ಜೀವ ಕಳೆದುಕೊಂಡಿದ್ದಾರೆ. ಅವರ ಬಗ್ಗೆ ಯೋಚಿಸದ ಸರ್ಕಾರಗಳು ಅವರಿಗೆ ರಕ್ಷಣೆ ನೀಡುವಲ್ಲೂ ವಿಫಲವಾಗಿವೆ’ ಎಂದರು.

ಚಿತ್ರಾವಳಿ


ಕಲಬುರಗಿಯಲ್ಲಿ ನಡೆದಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 35ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಸವಿನೆನಪಿಗಾಗಿ ಹೊರ ತಂದಿರುವ ಕರ್ನಾಟಕ ಪತ್ರಕರ್ತ ನೆನಪಿನ ಸಂಚಿಕೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಬಿಡುಗಡೆ ಮಾಡಿದರು. ಸಂಘದ ರಾಜ್ಯ ಘಟಕ ಅಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಪುಂಡಲೀಕ ಭೀ ಬಾಳೋಜಿ, ಪ್ರಧಾನ ಕಾರ್ಯದರ್ಶಿ ಜೆ.ಸಿ.ಲೋಕೇಶ್, ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ.ಮಲ್ಲಿಕಾರ್ಜುನಯ್ಯ, ಕೆಯುಡಬ್ಲ್ಯುಜೆ ಮಾಜಿ ಅಧ್ಯಕ್ಷ ಜಿ.ಕೆ.ಸತ್ಯ, ರಾಜ್ಯ ಸಮಿತಿಯ ಸದಸ್ಯರಾದ ವಾಸುದೇವ ಹೊಳ್ಳ, ದೇವರಾಜು ಇತರರು ಹಾಜರಿದ್ದರು

ರಸ್ತೆ ಗುಂಡಿ ಮುಚ್ಚುವ ಕಾರ್ಯವನ್ನು ಬಿಬಿಎಂಪಿ ಹಗಲು–ರಾತ್ರಿ ನಡೆಸುತ್ತಿದ್ದು, ಗುರುವಾರ ರಾತ್ರಿ ಕಾಮಗಾರಿ ನಡೆಯುತ್ತಿರುವ ಸ್ಥಳಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಭೇಟಿ ನೀಡಿ ಪರಿಶೀಲಿಸಿದರು

ಕದ್ದ ಬೈಕ್ ಕೊಟ್ಟು ಮೊಬೈಲ್ ಕಳವು: ಆರೋಪಿ ಬಂಧನ

ಬೆಂಗಳೂರು: ಬೈಕ್ ಹಾಗೂ ಮೊಬೈಲ್ ಕಳ್ಳತನ ಆರೋಪದಡಿ ಪ್ರದೀಪ್ ಎಂಬುವವರನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ಪ್ರದೀಪ್, ಐಷಾರಾಮಿ ಜೀವನಕ್ಕಾಗಿ ಹಣ ಹೊಂದಿಸಲು ಕೃತ್ಯ ಎಸಗುತ್ತಿದ್ದ. ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ಬೈಕ್ ಕದ್ದೊಯ್ದಿದ್ದ. ಈ ಬಗ್ಗೆ ದಾಖಲಾದ ಪ್ರಕರಣದಡಿ ಆತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ದೂರು ದಾಖಲಾಗದಂತೆ ಕೃತ್ಯ: ‘ಒಎಲ್‌ಎಕ್ಸ್, ಫೇಸ್‌ಬುಕ್ ಹಾಗೂ ಇತರೆ ಜಾಲತಾಣಗಳಲ್ಲಿ ಬರುವ ಬೈಕ್ ಮಾರಾಟದ ಜಾಹೀರಾತುಗಳನ್ನು ಆರೋಪಿ ಗಮನಿಸುತ್ತಿದ್ದ. ಬೈಕ್ ಮಾಲೀಕರನ್ನು ಸಂಪರ್ಕಿಸಿ, ಖರೀದಿ ಬಗ್ಗೆ ಮಾತುಕತೆ ನಡೆಸುತ್ತಿದ್ದ. ಟೆಸ್ಟ್ ಡ್ರೈವ್ ಸೋಗಿನಲ್ಲಿ ಆರೋಪಿ ಬೈಕ್ ಕದ್ದೊಯ್ಯುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

‘ಬೆಲೆ ಬಾಳುವ ಮೊಬೈಲ್ ಮಾರಾಟದ ಬಗ್ಗೆ ಆನ್‌ಲೈನ್‌ನಲ್ಲಿ ಬರುತ್ತಿದ್ದ ಜಾಹೀರಾತು ಗಮನಿಸಿ, ಮಾಲೀಕರನ್ನು ಸಂಪರ್ಕಿಸುತ್ತಿದ್ದ. ಕದ್ದ ಬೈಕ್‌ನಲ್ಲಿ ಮಾಲೀಕರ ಬಳಿ ಹೋಗುತ್ತಿದ್ದ ಆರೋಪಿ, ‘ಮೊಬೈಲ್ ಚೆನ್ನಾಗಿದೆ. ನಾನು ಖರೀದಿ ಮಾಡುತ್ತೇನೆ. ಸದ್ಯ ನನ್ನ ಬಳಿ ಕಡಿಮೆ ಹಣವಿದೆ. ಕೆಲ ನಿಮಿಷಗಳಲ್ಲಿ ಮನೆಗೆ ಹೋಗಿ ಮತ್ತಷ್ಟು ಹಣ ತರುತ್ತೇನೆ. ಅಲ್ಲಿಯವರೆಗೂ ಬೈಕ್ ನಿಮ್ಮ ಬಳಿ ಇಟ್ಟುಕೊಳ್ಳಿ’ ಎನ್ನುತ್ತಿದ್ದ. ಮೊಬೈಲ್ ಸಮೇತ ಸ್ಥಳದಿಂದ ಪರಾರಿಯಾಗುತ್ತಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸಮಯ ಕಳೆದರೂ ಆರೋಪಿ ವಾಪಸು ಬರುತ್ತಿರಲಿಲ್ಲ. ಮೊಬೈಲ್ ಹೋದರೂ ಬೈಕ್ ಇದೆಯಲ್ಲ ಎಂದು ಮಾಲೀಕರು ಸುಮ್ಮನಾಗುತ್ತಿದ್ದರು. ಇದರ ನಡುವೆಯೇ ಆರೋಪಿ, ಬೈಕ್ ಮಾಲೀಕರಿಗೆ ಪುನಃ ಕರೆ ಮಾಡುತ್ತಿದ್ದ. ಬೈಕ್ ಇಟ್ಟುಕೊಂಡಿರುವ ವ್ಯಕ್ತಿಯ ವಿಳಾಸ ನೀಡುತ್ತಿದ್ದ. ಅಲ್ಲಿಗೆ ಹೋಗುತ್ತಿದ್ದ ಮಾಲೀಕರು, ಮೊಬೈಲ್ ಕಳೆದುಕೊಂಡಿದ್ದ ಮಾಲೀಕರಿಗೆ ಹಣ ಕೊಟ್ಟು ಬೈಕ್ ಬಿಡಿಸಿಕೊಂಡು ಹೋಗುತ್ತಿದ್ದರು’ ಎಂದೂ ಪೊಲೀಸರು ಹೇಳಿದರು.

‘ಇದೇ ರೀತಿಯಲ್ಲೇ ಆರೋಪಿ ಕೃತ್ಯ ಎಸಗುತ್ತಿದ್ದರಿಂದ, ಯಾರೊಬ್ಬರೂ ಠಾಣೆಗೆ ದೂರು ನೀಡುತ್ತಿರಲಿಲ್ಲ’ ಎಂದೂ ತಿಳಿಸಿದರು.

ಅಪರಾಧ ಸುದ್ದಿ

ಸೊಪ್ಪು ಮಾರಿ ಜೀವನ ಸಾಗಿಸುತ್ತಿದ್ದ ಕುಟುಂಬ

ಮೊಬೈಲ್ ಕೊಡಿಸದಿದ್ದಕ್ಕೆ ತಾಯಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಗೂರು ಠಾಣೆ ವ್ಯಾಪ್ತಿಯಲ್ಲಿ ಫಾತಿಮಾ ಮೇರಿ (45) ಎಂಬುವವರನ್ನು ಗುರುವಾರ ಮಧ್ಯಾಹ್ನ ಕತ್ತು ಹಿಸುಕಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಮಗ ದೀಪಕ್ ಎಡ್ವಿನ್‌ನನ್ನು (26) ಪೊಲೀಸರು ಬಂಧಿಸಿದ್ದಾರೆ.

‘ಮೈಲಸಂದ್ರ ನಿವಾಸಿ ಫಾತಿಮಾ, ಪತಿ ಸ್ವಾಮಿ ಹಾಗೂ ಮಗ ದೀಪಕ್ ಎಡ್ವಿನ್ ಜೊತೆ ನೆಲೆಸಿದ್ದರು. ಟಚ್ ಸ್ಕ್ರೀನ್ ಮೊಬೈಲ್ ಕೊಡಿಸಲಿಲ್ಲವೆಂಬ ಕಾರಣಕ್ಕೆ ಕೋಪಗೊಂಡ ಆರೋಪಿ ದೀಪಕ್, ತಾಯಿ ಫಾತಿಮಾ ಅವರನ್ನು ಕೊಲೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಬೇಗೂರು ಪೊಲೀಸರು ಹೇಳಿದರು.

‘ಕೃತ್ಯದ ಬಳಿಕ ತಾಯಿ ಬಳಿಯಿದ್ದ ₹ 800 ಸಮೇತ ಆರೋಪಿ ಪರಾರಿಯಾಗಿದ್ದ. ಸ್ಥಳೀಯರು ನೀಡಿದ್ದ ಮಾಹಿತಿ ಹಾಗೂ ಕೆಲ ಪುರಾವೆಗಳನ್ನು ಆಧರಿಸಿ ಗುರುವಾರ ರಾತ್ರಿಯೇ ಆರೋಪಿಯನ್ನು ಬಂಧಿಸಲಾಗಿದೆ. ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದೂ ತಿಳಿಸಿದರು.

ಸೊಪ್ಪು ವ್ಯಾಪಾರ: ‘ಫಾತಿಮಾ ಹಾಗೂ ಸ್ವಾಮಿ, ಮಡಿವಾಳ ಮಾರುಕಟ್ಟೆಯಲ್ಲಿ ಸೊಪ್ಪು ವ್ಯಾಪಾರ ಮಾಡುತ್ತಿದ್ದರು. ಎಂಟನೇ ತರಗತಿಗೆ ಶಾಲೆ ಬಿಟ್ಟಿದ್ದ ದೀಪಕ್ ಸಹ ವ್ಯಾಪಾರಕ್ಕೆ ಸಹಾಯ ಮಾಡುತ್ತಿದ್ದ. ಸೊಪ್ಪು ವ್ಯಾಪಾರವೇ ಕುಟುಂಬಕ್ಕೆ ಆಧಾರವಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಮಗನಿಗೆ ಕೆಲ ವರ್ಷಗಳ ಹಿಂದೆಯಷ್ಟೇ ಬೈಕ್ ಕೊಡಿಸಿದ್ದ ತಂದೆ–ತಾಯಿ, ಅದರಲ್ಲೇ ಮಾರುಕಟ್ಟೆಗೆ ಹೋಗಿ ಬರುತ್ತಿದ್ದರು. ಮಗನ ಬಳಿ ಸಾಧಾರಣ ಮೊಬೈಲ್ ಇತ್ತು. ಟಚ್ ಸ್ಕ್ರೀನ್ ಮೊಬೈಲ್ ಕೊಡಿಸುವಂತೆ ಆತ ತಾಯಿಯನ್ನು ಪೀಡಿಸುತ್ತಿದ್ದ.’

‘ಗುರುವಾರ ಮಧ್ಯಾಹ್ನ ತಾಯಿ–ಮಗ ಮಾತ್ರ ಮನೆಯಲ್ಲಿದ್ದರು. ತಾಯಿ ಜೊತೆ ಜಗಳ ಮಾಡಿದ್ದ ಮಗ, ಮೊಬೈಲ್ ಖರೀದಿಸಲು ಹಣ ನೀಡುವಂತೆ ಪಟ್ಟು ಹಿಡಿದಿದ್ದ. ಹಣವಿಲ್ಲವೆಂದು ತಾಯಿ ಹೇಳಿದ್ದರು. ಅಷ್ಟಕ್ಕೆ ಸಿಟ್ಟಾದ ಮಗ, ಸೀರೆಯಿಂದ ಕತ್ತು ಬಿಗಿದು ತಾಯಿಯನ್ನು ಕೊಂದಿದ್ದ. ಸ್ಥಳದಲ್ಲೇ ತಾಯಿ ಮೃತಪಟ್ಟಿದ್ದರು. ಕೃತ್ಯದ ಬಗ್ಗೆ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ’ ಎಂದೂ ಪೊಲೀಸರು ತಿಳಿಸಿದರು.

‘ದೀಪಂ’ ಮಳಿಗೆ ಮಾಲೀಕ ಕೊಲೆ: ಆರೋಪಿ 13 ದಿನ ಕಸ್ಟಡಿಗೆ

ಬೆಂಗಳೂರು: ಚಿಕ್ಕಪೇಟೆಯಲ್ಲಿರುವ ‘ದೀಪಂ ಎಲೆಕ್ಟ್ರಿಕಲ್ಸ್’ ಮಳಿಗೆ ಮಾಲೀಕ ಜುಗರಾಜ್ ಜೈನ್ (74) ಕೊಲೆ ಪ್ರಕರಣದ ಆರೋಪಿ ಬಿಜರಾಮ್ ಅವರನ್ನು ಚಾಮರಾಜಪೇಟೆ ಪೊಲೀಸರು 13 ದಿನ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಅಪಾರ್ಟ್‌ಮೆಂಟ್ ಒಂದರ ಫ್ಲ್ಯಾಟ್‌ನಲ್ಲಿ ವಾಸವಿದ್ದ ಜುಗರಾಜ್ ಅವರನ್ನು ಮೇ 24ರಂದು ಕೊಲೆ ಮಾಡಲಾಗಿತ್ತು. ಪರಾರಿಯಾಗಿದ್ದ ಆತ ಇತ್ತೀಚೆಗಷ್ಟೇ ಗುಜರಾತ್‌ನಲ್ಲಿ ಸೆರೆ ಸಿಕ್ಕಿದ್ದ. ಚಾಮರಾಜಪೇಟೆ ಪೊಲೀಸರ ತಂಡ, ಗುಜರಾತ್‌ಗೆ ಹೋಗಿ ಬಾಡಿ ವಾರೆಂಟ್ ಮೇಲೆ ಆರೋಪಿಯನ್ನು ವಶಕ್ಕೆ ಪಡೆದು ನಗರಕ್ಕೆ ಕರೆತಂದಿದೆ.

‘ರಾಜಸ್ಥಾನದ ಬಿಜರಾಮ್, ತನ್ನೂರಿನಿಂದ ಗುಜರಾತ್‌ಗೆ ಹೋಗುವಾಗ ಗಡಿಯಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಆತನನ್ನು ನಗರಕ್ಕೆ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ವ್ಯವಸ್ಥಿತ ಸಂಚು: ‘ಆರೋಪಿ ಬಿಜರಾಮ್, ಕೆಲ ವರ್ಷಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ. ‘ದೀಪಂ ಎಲೆಕ್ಟ್ರಿಕಲ್ಸ್’ ಮಳಿಗೆ ಮಾಲೀಕ ಜುಗರಾಜ್ ಜೈನ್ ಬಳಿ ಕೆಲಸಕ್ಕೆ ಸೇರಿದ್ದ. ಹಣ ಹಾಗೂ ಆಭರಣ ನೋಡಿದ್ದ ಆರೋಪಿ, ವ್ಯವಸ್ಥಿತ ಸಂಚು ರೂಪಿಸಿ ಮಾಲೀಕ ಜುಗರಾಜ್ ಅವರನ್ನು ಕೊಂದಿದ್ದ’ ಎಂದು ಪೊಲೀಸರು ತಿಳಿಸಿದರು.

‘ಲಕ್ಷಾಂತರ ರೂಪಾಯಿ ನಗದು ಹಾಗೂ ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಸಮೇತ ಆರೋಪಿ ಪರಾರಿಯಾಗಿದ್ದ. ಆದರೆ, ಆರೋಪಿಯಿಂದ ₹ 8 ಲಕ್ಷ ನಗದು ಹಾಗೂ ₹ 15 ಲಕ್ಷ ಮೌಲ್ಯದ ಚಿನ್ನಾಭರಣ ಮಾತ್ರ ಜಪ್ತಿ ಮಾಡಿರುವುದಾಗಿ ಗುಜರಾತ್ ಪೊಲೀಸರು ಹೇಳುತ್ತಿದ್ದಾರೆ. ಈ ಬಗ್ಗೆ ಗೊಂದಲವಿದ್ದು, ತನಿಖೆಯಿಂದಲೇ ನಿಜಾಂಶ ತಿಳಿಯಬೇಕಿದೆ’ ಎಂದೂ ಹೇಳಿದರು.

₹ 45 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ನಗರದಲ್ಲಿ ವ್ಯವಸ್ಥಿತ ಜಾಲ ರೂಪಿಸಿಕೊಂಡು ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆ ಕ್ಲಿಂಟನ್ ಕೋಸಿ ಇಫೆಜಿಕಾ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಈತನಿಂದ ₹ 45 ಲಕ್ಷ ಮೌಲ್ಯದ 221 ಗ್ರಾಂ ಎಂಡಿಎಂಎ ಮಾತ್ರೆಗಳು, ಕಾರು ಹಾಗೂ ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವ್ಯಾಪಾರ ವೀಸಾದಡಿ ನಗರಕ್ಕೆ ಬಂದಿದ್ದ ಆರೋಪಿ ಕ್ಲಿಂಟನ್, ಬಾಡಿಗೆ ಮನೆಯಲ್ಲಿ ನೆಲೆಸಿದ್ದ. ದೆಹಲಿಯಲ್ಲಿರುವ ಪೆಡ್ಲರ್ ಜೊತೆ ಒಡನಾಟ ಹೊಂದಿ, ಆತನಿಂದ ಡ್ರಗ್ಸ್ ತರಿಸಿಕೊಳ್ಳುತ್ತಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಮಾರುತ್ತಿದ್ದ’ ಎಂದೂ ತಿಳಿಸಿದರು.

ಗೂಂಡಾ ಕಾಯ್ದೆ: ರೌಡಿ ಚಿಕ್ಕ ಚೇತು ಬಂಧನ

ಬೆಂಗಳೂರು: ಪದೇ ಪದೇ ಅಪರಾಧ ಕೃತ್ಯದಲ್ಲಿ ಭಾಗಿಯಾಗುತ್ತಿದ್ದ ರೌಡಿ ಚೇತನ್‌ಕುಮಾರ್ ಅಲಿಯಾಸ್ ಚಿಕ್ಕ ಚೇತುನನ್ನು ಬಾಗಲಗುಂಟೆ ಠಾಣೆ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಿದ್ದಾರೆ.

‘ನಾಗರಬಾವಿ ಐಟಿಐ ಬಡಾವಣೆ ನಿವಾಸಿ ಚೇತು, 2012ರಿಂದ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ. ಬಾಗಲಗುಂಟೆ, ಚಂದ್ರಾ ಲೇಔಟ್ ಹಾಗೂ ಅನ್ನಪೂರ್ಣೇಶ್ವರಿನಗರ ಠಾಣೆ ರೌಡಿ ಪಟ್ಟಿಯಲ್ಲಿ ಈತನ ಹೆಸರಿದೆ’ ಎಂದು ಪೊಲೀಸರು ಹೇಳಿದರು.

‘ಕೊಲೆ, ಸುಲಿಗೆ, ದರೋಡೆ, ಕೊಲೆ ಯತ್ನ, ಜೀವ ಬೆದರಿಕೆ, ಹಲ್ಲೆ ಸೇರಿ 10 ಪ್ರಕರಣಗಳಲ್ಲಿ ಚೇತು ಆರೋಪಿಯಾಗಿದ್ದ. ಕೆಲ ಪ್ರಕರಣಗಳಲ್ಲಿ ಜೈಲಿಗೂ ಹೋಗಿ ಜಾಮೀನಿನ ಮೇಲೆ ಹೊರ ಬಂದಿದ್ದ ಆರೋಪಿ, ವಿಚಾರಣೆಗೆ ಪದೇ ಪದೇ ಗೈರಾಗುತ್ತಿದ್ದ. ಸಾರ್ವಜನಿಕರನ್ನು ಹೆದರಿಸಿ ಭಯವನ್ನುಂಟು ಮಾಡುತ್ತಿದ್ದ. ಹೀಗಾಗಿ, ಗೂಂಡಾ ಕಾಯ್ದೆಯಡಿ ಬಂಧಿಸಲಾಗಿದೆ’ ಎಂದೂ ತಿಳಿಸಿದರು.

₹25.93 ಲಕ್ಷ ಮೌಲ್ಯದ ರಸಗೊಬ್ಬರ ವಶ, ಐವರ ಬಂಧನ

ಬೆಳಗಾವಿ: ಅಂದಾಜು ₹25.93 ಲಕ್ಷ ಮೌಲ್ಯದ ರಸಗೊಬ್ಬರ ಕಳವು ಮಾಡಿದ ಐವರು ಆರೋಪಿಗಳನ್ನು ಗ್ರಾಮೀಣ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಆರೋಪಿಗಳಿಂದ ಕಳವಾದ ಮಾಲು ವಶಕ್ಕೆ ಪಡೆಯಲಾಗಿದೆ.

ಹಲಗಿಮರಡಿಯ ನಾಗರಾಜ ಈರಣ್ಣ ಪಠಾತ, ಲಕ್ಕೆಬೈಲ್‌ದ ಪಂಡಿತ ಕಲ್ಲಪ್ಪ ಸನದಿ, ಮಂಜುನಾಥ ಸೋಮಪ್ಪ ಹಮ್ಮಣ್ಣವರ, ಹೊಸ ವಂಟಮೂರಿಯ ವಸೀಮ್ ಇಸ್ಮಾಯಿಲ್ ಮಕಾಂದಾರ, ಹುದಲಿಯ ಗಜಬರಅಲಿ ಗೌಸಮೊದ್ದಿನ್ ಜಿಡ್ಡಿಮನಿ ಬಂಧಿತರು.

ಬಂಧಿತರಿಂದ ಡಿ.ಎ.ಪಿ ರಸಗೊಬ್ಬರದ 810 ಚೀಲಗಳು, ಕಳ್ಳತನ ಮಾಡಲು ಉಪಯೋಗಿಸಿದ ಎರಡು ಟ್ರಕ್ ವಶಕ್ಕೆ ಪಡೆಯಲಾಗಿದೆ.

ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ದೇಸೂರ ರೈಲ್ವೆ ಸ್ಟೇಷನ್ ಹತ್ತಿರದ ಗೋದಾಮಿನಲ್ಲಿ ಸಂಗ್ರಹಿಸಿ ಇಟ್ಟಿದ ಈ ಗೊಬ್ಬರದ ಮೂಟೆಗಳನ್ನು ಮೇ 23ರಂದು ಕಳವು ಮಾಡಲಾಗಿತ್ತು. ಶಿವಾಜಿ ಬಾಳಾರಾಮ ಆನಂದಾಚೆ ಎನ್ನುವವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಆರೋಪಿಗಳನ್ನು ಬಂಧಿಸಿದ್ದಾರೆ.

ಬೆಳಗಾವಿ ಗ್ರಾಮೀಣ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಶ್ರೀನಿವಾಸ ಹಾಂಡ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಗಿದೆ.

ನಟಿ ಚೈತ್ರಾ ಹಳ್ಳಿಕೇರಿ ದಾಂಪತ್ಯ ಕಲಹ ● ಬ್ಯಾಂಕ್ ಖಾತೆ ದುರ್ಬಳಕೆ ಆರೋಪ

ಪತಿಯ ವಿರುದ್ಧದ ವಿಚಾರಣೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಖಾತೆ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿದಂತೆ ನಟಿ ಚೈತ್ರಾ ಹಳ್ಳಿಕೇರಿ ಅವರು ತಮ್ಮ ಪತಿ ಉದ್ಯಮಿ ಬಾಲಾಜಿ ಪೋತರಾಜು ಮತ್ತು ಮಾವ ಎಂ.ಕೆ.ಪೋತರಾಜು ವಿರುದ್ಧ ದಾಖಲಿಸಿರುವ ದೂರಿಗೆ ಸಂಬಂಧಿಸಿದ ವಿಚಾರಣಾ ನ್ಯಾಯಾಲಯದ ಮುಂದಿನ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ಬಾಲಾಜಿ ಪೋತರಾಜು ಮತ್ತು ಅವರ ತಂದೆ ಎಂ.ಕೆ.ಪೋತರಾಜು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ನಟಿ ಚೈತ್ರಾ ಅವರ ದೂರು ಆಧರಿಸಿ ನಗರದ ವೈಟ್ ಫೀಲ್ಡ್ ಠಾಣೆ ಪೊಲೀಸರು, ಬಾಲಾಜಿ ಪೋತರಾಜು ಹಾಗೂ ಎಂ.ಕೆ. ಪೋತರಾಜು ವಿರುದ್ಧ ದಾಖಲಿಸಿರುವ ಎಫ್‌ಐಆರ್ ಹಾಗೂ ದೂರಿಗೆ ಸಂಬಂಧಿಸಿದ ಅಧೀನ ನ್ಯಾಯಾಲಯದ ವಿಚಾರಣೆಗೆ ತಡೆ ನೀಡಿ ಆದೇಶಿಸಿತು.

ಪ್ರಕರಣವೇನು?: ನಟಿ ಚೈತ್ರಾ ಮತ್ತು ಬಾಲಾಜಿ 2006ರಲ್ಲಿ ಮದುವೆಯಾಗಿದ್ದು, ಕೌಟುಂಬಿಕ ಕಲಹದ ಆರೋಪದಡಿ ಚೈತ್ರಾ ಅವರು ಬಾಲಾಜಿ ವಿರುದ್ಧ 2018ರಲ್ಲಿ ದೂರು ದಾಖಲಿಸಿದ್ದರು. ಬಳಿಕ ದಂಪತಿ ಸಹಬಾಳ್ವೆ ಮುಂದುವರಿಸಿದ್ದರು. ಆದರೆ, ‘ಪತ್ನಿಯ ಕಿರುಕುಳ ಸಹಿಸಲಾಗುತ್ತಿಲ್ಲ’ ಎಂದು ಆರೋಪಿಸಿದ್ದ ಬಾಲಾಜಿ 2021ರ ಮಾರ್ಚ್‌ನಲ್ಲಿ ವಿಚ್ಛೇದನ ಕೋರಿ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಇದಕ್ಕೆ ಪ್ರತಿಯಾಗಿ ಚೈತ್ರಾ 2021ರ ಸೆಪ್ಟೆಂಬರ್‌ನಲ್ಲಿ ಬಾಲಾಜಿ ವಿರುದ್ಧ ಕೌಟುಂಬಿಕ ದೌರ್ಜನ್ಯದ ದೂರು ನೀಡಿದ್ದರು ಮತ್ತು ತಮ್ಮ ವೈಯಕ್ತಿಕ ಬ್ಯಾಂಕ್ ಖಾತೆ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಆರೋಪಿಸಿದ್ದರು. ಏತನ್ಮಧ್ಯೆ ಇತ್ತೀಚೆಗೆ ಚೈತ್ರಾ, ‘ನನ್ನ ಬ್ಯಾಂಕ್ ಖಾತೆಯಲ್ಲಿದ್ದ ₹ 14 ಲಕ್ಷ ಮೊತ್ತವನ್ನು ಬಾಲಾಜಿ ಮತ್ತವರ ತಂದೆ ದುರ್ಬಳಕೆ ಮಾಡಿಕೊಂಡಿದ್ದಾರೆ’ ಎಂದು ಆರೋಪಿಸಿ ವೈಟ್‌ಫೀಲ್ಡ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪೊಲೀಸರು ಈ ದೂರಿನ ಆಧಾರದಲ್ಲಿ ಎಫ್‌ಐಆರ್ ದಾಖಲಿಸಿದ್ದರು.

ಅರ್ಜಿದಾರರ ಪರ ಪಿ.ಎಲ್. ವಂದನಾ ವಕಾಲತ್ತು ವಹಿಸಿದ್ದರು. ಹಿರಿಯ ವಕೀಲ ಎಸ್.ಶ್ಯಾಮ್ ಸುಂದರ್ ವಾದ ಮಂಡಿಸಿದರು.

ಪರಮೇಶ್ವರ ನೇತೃತ್ವದ ಸಮಿತಿ ಶಿಫಾರಸಿಗೆ ಒಪ್ಪಿಗೆ • ಎರಡು ದಿನಗಳ ಚಿಂತನ ಶಿಬಿರಕ್ಕೆ ತೆರೆ

ಸಾಮೂಹಿಕ ನಾಯಕತ್ವ: ಕಾಂಗ್ರೆಸ್ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರಲ್ಲಿ ನಡೆಯುವ ವಿಧಾನಸಭಾ ಚುನಾವಣೆಯನ್ನು ಸಾಮೂಹಿಕ ನಾಯಕತ್ವದಲ್ಲಿ ಎದುರಿಸಲು ರಾಜ್ಯ ಕಾಂಗ್ರೆಸ್ ನಿರ್ಧರಿಸಿದೆ. ಈ ಸಂಬಂಧ ಶಾಸಕ ಡಾ.ಜಿ. ಪರಮೇಶ್ವರ ನೇತೃತ್ವದ ರಾಜಕೀಯ ವ್ಯವಹಾರಗಳ ಸಮಿತಿ ನೀಡಿರುವ ಶಿಫಾರಸನ್ನು ಶುಕ್ರವಾರ ಮುಕ್ತಾಯವಾದ ರಾಜ್ಯ ಕಾಂಗ್ರೆಸ್ ನವ ಸಂಕಲ್ಪ ಶಿಬಿರದಲ್ಲಿ ಅಂಗೀಕರಿಸಲಾಗಿದೆ.

ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಸಾಮೂಹಿಕ ನಾಯಕತ್ವದಲ್ಲೇ ಚುನಾವಣೆ ಎದುರಿಸಬೇಕು ಎಂದು ರಾಜಕೀಯ ವ್ಯವಹಾರಗಳ ಸಮಿತಿ ತೀರ್ಮಾನಿಸಿದೆ. ಅದರಂತೆಯೇ ಮುನ್ನಡೆದು ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುತ್ತೇವೆ' ಎಂದರು.

'ಹಲ್ಲೆಕೋರರನ್ನು ಬಂಧಿಸದಿದ್ದರೆ ಚಡ್ಡಿ ಸುಡುವ ಪ್ರತಿಭಟನೆ'

ಬೆಂಗಳೂರು: 'ತಿಪಟೂರಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮನೆ ಎದುರು ಪ್ರತಿಭಟನೆ ನಡೆಸಿದ ಎನ್‌ಎಸ್‌ಯುಐ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿರುವ ಗೂಂಡಾಗಳನ್ನು ಬಂಧಿಸದಿದ್ದರೆ ರಾಜ್ಯದಾದ್ಯಂತ ಚಡ್ಡಿ ಸುಡುವ ಪ್ರತಿಭಟನೆ ನಡೆಸುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರ್‌ಎಸ್‌ಎಸ್‌ನವರು ಹಿಂದೆ ಚಡ್ಡಿ ಹಾಕುತ್ತಿದ್ದರು. ಈಗ ಪ್ಯಾಂಟ್ ಹಾಕುತ್ತಿದ್ದಾರೆ. ಪಠ್ಯಪುಸ್ತಕ ಪರಿಷ್ಕರಣೆ ವಿರುದ್ಧ ಪ್ರತಿಭಟನೆ ನಡೆಸಿದ ಎನ್‌ಎಸ್‌ಯುಐ ಸದಸ್ಯರು ಸಾಂಕೇತಿಕವಾಗಿ ಒಂದು ಚಡ್ಡಿ ಸುಟ್ಟಿದ್ದರು. ಅವರ ಮೇಲೆ ಮನೆಗೆ ಬೆಂಕಿ ಹಚ್ಚಲು ಬಂದ ಆರೋಪ ಹೊರಿಸಿ ಬಂಧಿಸಲಾಗಿದೆ. ಇದಕ್ಕೆ ಗೃಹ ಸಚಿವ ಆರಗ ಜ್ಞಾನೇಂದ್ರ ಒತ್ತಡವೇ ಕಾರಣ' ಎಂದರು.

'ರೋಹಿತ್, ಮಂಜು ಎಂಬ ರೌಡಿಗಳು ಪ್ರತಿಭಟನಾಕಾರರ ಮೇಲೆ ಹಲ್ಲೆ ನಡೆಸಿದ್ದಾರೆ. ಅವರ ವಿರುದ್ಧ ಮೊಕದ್ದಮೆ ದಾಖಲಿಸಿ, ತಕ್ಷಣ ಬಂಧಿಸಬೇಕು. ಹಲ್ಲೆಕೋರರ ವಿರುದ್ಧ ಕ್ರಮ ಜರುಗಿಸದೇ ಇದ್ದರೆ ರಾಜ್ಯದಾದ್ಯಂತ ಬೀದಿಗಿಳಿದು ಹೋರಾಟ ನಡೆಸುತ್ತೇವೆ' ಎಂದು ಹೇಳಿದರು.

ಪ್ರತಿಭಟನಕಾರರು ಸಚಿವರ ಮನೆಯ ಒಳಗೆ ಪ್ರವೇಶ ಮಾಡಿರಲಿಲ್ಲ. ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದ್ದಾರೆ. ಅದನ್ನೇ ತಿರುಚಿ ಸುಳ್ಳು ಆರೋಪ ಹೊರಿಸಲಾಗಿದೆ ಎಂದು ದೂರಿದರು.

ಅಲ್ಪಸಂಖ್ಯಾತರ ಮೇಲಿನ ದಾಳಿಯ ವಿರುದ್ಧ ಕಾಂಗ್ರೆಸ್ ಹೋರಾಟ ನಡೆಸಲಿದೆ. ಮುಸ್ಲಿಮರು ಮತ್ತು ಕ್ರೈಸ್ತರ ಧರ್ಮೀಯರ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿ, ಕಿರುಕುಳ ನೀಡುವುದರ ವಿರುದ್ಧ ಹೋರಾಟ ನಡೆಸಲು ತೀರ್ಮಾನಿಸಲಾಗಿದೆ. ಕೇಂದ್ರ ಸರ್ಕಾರ ಹಿಂಪಡೆದಿರುವ ಮೂರು ಕೃಷಿ ಸಂಬಂಧಿ ಕಾಯ್ದೆಗಳನ್ನು ರಾಜ್ಯದಲ್ಲೂ ಹಿಂಪಡೆಯುವಂತೆ ಹೋರಾಟ ರೂಪಿಸಲಾಗುವುದು. ಕೋಮು ಹಿಂಸೆಯಲ್ಲಿ ಯುವಜನರು ಪಾಲ್ಗೊಳ್ಳುವುದನ್ನು ತಪ್ಪಿಸಲು 'ನಶೆ ಬೇಡ– ನೌಕರಿ ಬೇಕು' ಎಂಬ ಆಂದೋಲನ ನಡೆಸಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ನೀರಾವರಿಗೆ ₹ 2 ಲಕ್ಷ ಕೋಟಿ: 'ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದ ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಐದು ವರ್ಷಗಳ ಅವಧಿಯಲ್ಲಿ ₹ 2 ಲಕ್ಷ ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ' ಎಂದು ಶಿವಕುಮಾರ್ ವಿವರಿಸಿದರು.

ಎಸ್‌ಸಿಪಿ ಕಾಯ್ದೆ ತಿದ್ದುಪಡಿ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, 'ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅನುದಾನವನ್ನು ಅನ್ಯ ಉದ್ದೇಶಕ್ಕೆ ವರ್ಗಾವಣೆ ಮಾಡುವುದು ಹೆಚ್ಚುತ್ತಿರುವ ಕುರಿತು ಶಿಬಿರದಲ್ಲಿ ಚರ್ಚೆ ನಡೆದಿದೆ. ಅನುದಾನದ ವರ್ಗಾವಣೆಗೆ ಅವಕಾಶ ನೀಡುವ ಎಸ್‌ಸಿಪಿ ಮತ್ತು ಟಿಎಸ್‌ಪಿ ಕಾಯ್ದೆಯ ಸೆಕ್ಷನ್ '7–ಡಿ' ರದ್ದುಪಡಿಸಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಆ ಸೆಕ್ಷನ್ ಅನ್ನು ರದ್ದುಪಡಿಸುತ್ತೇವೆ' ಎಂದು ಹೇಳಿದರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಆರ್. ಧ್ರುವನಾರಾಯಣ, ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಶಾಸಕ ಡಾ.ಜಿ. ಪರಮೇಶ್ವರ, ಮುಖಂಡ ಕೆ. ರೆಹಮಾನ್ ಖಾನ್, ಯುವ ಕಾಂಗ್ರೆಸ್ ಸಮಿತಿ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಪತ್ರಿಕಾಗೋಷ್ಠಿಯಲ್ಲಿದ್ದರು.

'ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ'

'ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಜಾರಿಗೊಳಿಸಬೇಕೆಂಬ ನಿಲುವಿಗೆ ಕಾಂಗ್ರೆಸ್ ಬದ್ಧವಾಗಿದೆ. ನಮ್ಮ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಈ ತೀರ್ಮಾನವನ್ನು ಅನುಷ್ಠಾನಕ್ಕೆ ತರುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಎಲ್ಲ ಬ್ಯಾಕ್‌ಲಾಗ್ ಹುದ್ದೆಗಳನ್ನೂ ತ್ವರಿತವಾಗಿ ಭರ್ತಿ ಮಾಡುವ ತೀರ್ಮಾನಕ್ಕೆ ಕಾಂಗ್ರೆಸ್ ಕಟಿಬದ್ಧ. ಹೊರಗುತ್ತಿಗೆ ಹುದ್ದೆಗಳಲ್ಲೂ ಮೀಸಲಾತಿ ಕಲ್ಪಿಸಿ, ಅವುಗಳನ್ನು ಭರ್ತಿ ಮಾಡಲಾಗುವುದು' ಎಂದರು.

ಪ್ರಮುಖ ನಿರ್ಣಯಗಳು

- ಪಶ್ಚಿಮ ಘಟ್ಟಗಳಿಗೆ ಸಂಬಂಧಿಸಿದ ಡಾ.ಕೆ. ಕಸ್ತೂರಿರಂಗನ್ ವರದಿಗೆ ವಿರೋಧ.
- ಕರಾವಳಿ, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಬೆಂಗಳೂರಿಗೆ ಪ್ರತ್ಯೇಕ ಪ್ರಣಾಳಿಕೆ.
- ವಸತಿ ಯೋಜನೆಗಳಲ್ಲಿ ಫಲಾನುಭವಿಗಳಿಗೆ ಎರಡು ಕೊಠಡಿಗಳ ಮನೆ ಒದಗಿಸುವುದು.
- ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮಾದರಿಯಲ್ಲಿ ನಗರದ ಜನರಿಗೂ ವಿಶೇಷ ಯೋಜನೆ.
- ಕರಾವಳಿ ಮತ್ತು ಮಲೆನಾಡಿನಲ್ಲಿ ವಲಸೆ ತಪ್ಪಿಸಲು ಪ್ರವಾಸೋದ್ಯಮ ಅಭಿವೃದ್ಧಿ.

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹಾಸನ ವಿಭಾಗ, ಅರಣ್ಯ ಭವನ, ಡೈರಿ ಸರ್ಕಲ್ ಹತ್ತಿರ, ಬಿ.ಎಂ. ರೋಡ್, ಹಾಸನ
Phone & Fax :08172-268296 Email: dcfhassan@yahoo.in.
ಸಂಖ್ಯೆ: ಬಿ3/ಬಿಯುಡಿ/ವಿವ–01/2022–23 ದಿನಾಂಕ: 25.05.2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
2022–23ನೇ ಸಾಲಿನಲ್ಲಿ ಹಾಸನ ಪ್ರಾದೇಶಿಕ ವಿಭಾಗದ ವಲಯಗಳಲ್ಲಿ ವಿವಿಧ ಶೀರ್ಷಿಕೆಯಡಿ ಅರಣ್ಯ ಅಭಿವೃದ್ಧಿ ಕಾಮಗಾರಿಗಳಾದ ನೆಡುತೋಪು ಬೆಳೆಸುವುದು, ಸಸಿಗಳನ್ನು ಬೆಳೆಸುವುದು ಹಾಗೂ ಇತ್ಯಾದಿ ಕಾಮಗಾರಿಗಳನ್ನು ನಿರ್ವಹಿಸಲು ಅಂದಾಜು 579.020 ಲಕ್ಷ ಮೊತ್ತದ 54 ಕಾಮಗಾರಿಗೆ ಇ–ಪ್ರೊಕೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ದಿನಾಂಕಃ 16.06.2022 ರಂದು 16.00 ಗಂಟೆಯವರೆವಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಪಡೆಯಬಹುದಾಗಿದೆ.
ಸಹಿ/–(ಡಾ.ಬಸವರಾಜ ಕೆ.ಎನ್), ಭಾಅಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವಿಭಾಗ, ಹಾಸನ
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/157/2022–23

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ರಿ)
ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್. ಸರ್ಕಲ್, ಶೇಷಾದ್ರಿ ರಸ್ತೆ, ಬೆಂಗಳೂರು–560 001. ದೂರವಾಣಿ ಸಂಖ್ಯೆ: +91–80–29619801
ಮಿಂಚ್ ಅಂಚೆ: md.ksmscl@gmail.com
No:HFW/KSMSCL/TND/CONSUMABLES/EDL/08/2022-23 Date: 03/06/2022
ಟೆಂಡರ್ ಪ್ರಕಟಣೆ
ಉಲ್ಲೇಖ : 1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/CONSUMABLES/EDL/08/2022-23 Date: 02/06/2022. (IND-954).
2. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/CONSUMABLES/EDL/ 09/2022-23 Date:02/06/2022. (IND-955).
ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಈ ಕೆಳಕಂಡ ಟೆಂಡರ್‌ನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.
1. ರಾಜ್ಯದ ಆರೋಗ್ಯ ಸಂಸ್ಥೆಗಳಿಗೆ ಅವಶ್ಯವಿರುವ ಕನ್ಸ್ಯೂಮಬಲ್ಸ್ ಖರೀದಿಸುವ ಬಗ್ಗೆ.
2. ರಾಜ್ಯದ ಆರೋಗ್ಯ ಸಂಸ್ಥೆಗಳಿಗೆ ಅವಶ್ಯವಿರುವ ಕನ್ಸ್ಯೂಮಬಲ್ಸ್‌ಖರೀದಿಸುವ ಬಗ್ಗೆ.
ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಟೆಂಡರ್ ದಾಸ್ತಾವೇಜಿನಲ್ಲಿ ಅಳವಡಿಸಲಾಗಿದ್ದು, ಟೆಂಡರ್‌ಗಳ ದಾಸ್ತಾವೇಜನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://eproc.karnataka.gov.in ನಲ್ಲಿ ದಿನಾಂಕ: 02/06/2022ರಿಂದ ದಿನಾಂಕ: 02/07/2022 ರವರೆಗೆ ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಮ್.ಎಸ್.ಸಿ.ಎಲ್., ಬೆಂಗಳೂರು.
DIPR/CP/AAPL/RO751/22-23
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಗ್ರಾ.ಕು.ನೀ ಮತ್ತು ನೈ ವಿಭಾಗ–ಮಡಿಕೇರಿ
ಸಂ:ಕಾ.ಇಂ/ಗ್ರಾಕುನೀ&ನೈ.ವಿ/ಎಇ/ಟೆಂಡರ್ ಸಂಖ್ಯೆ:/ಜೆ.ಜೆ.ಎಂ/01/260/2022–23, ದಿನಾಂಕ: 02.06.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ (E-Proc) ಮುಖಾಂತರ ಮಾತ್ರ
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಬಂಧನೆಗೊಳಪಟ್ಟಂತೆ ಜೆ.ಜೆ.ಎಂ. ಯೋಜನೆಯಡಿಯಲ್ಲಿ ಮಡಿಕೇರಿ ತಾಲ್ಲೂಕಿನ ಈ ಕೆಳಗಿನ ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ವೇದಿಕೆ ಪದ್ಧತಿಯಲ್ಲಿ ಅಪ್‌ಲೋಡ್ ಮಾಡಲು ಕೋರಿದೆ.

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1.	ಮಡಿಕೇರಿ ತಾಲ್ಲೂಕು ಕೆ.ನಿಡುಗಣೆ ಜನವಸತಿಯಲ್ಲಿನ ಮನೆಗಳಿಗೆ ಎಫ್.ಹೆಚ್.ಟಿ.ಸಿ. ಒದಗಿಸುವುದು (Re-call)	66.94
2.	ಮಡಿಕೇರಿ ತಾಲ್ಲೂಕು ಕರಿಕೆ ಜನವಸತಿಯಲ್ಲಿನ ಮನೆಗಳಿಗೆ ಎಫ್.ಹೆಚ್.ಟಿ.ಸಿ. ಒದಗಿಸುವುದು (Re-call)	70.01
3.	ಸೋಮವಾರಪೇಟೆ ತಾಲ್ಲೂಕು ನೆಲ್ಲಿಹುದಿಕೇರಿ ಜನವಸತಿಯಲ್ಲಿನ ಮನೆಗಳಿಗೆ ಎಫ್.ಹೆಚ್.ಟಿ.ಸಿ. ಒದಗಿಸುವುದು	493.83

1) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 13.06.2022 ಸಂಜೆ 5.00 ಗಂಟೆಗೆ. 2) ಟೆಂಡರ್ ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ: 14.06.2022 ಸಂಜೆ 5.05 ಗಂಟೆ ನಂತರ.
ಸೂಚನೆ: ಇತರೇ ಷರತ್ತು, ಹಾಗೂ ಕಾಮಗಾರಿಗಳ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈ ವಿಭಾಗ – ಮಡಿಕೇರಿ

INNOVATE KARNATAKA K-tech
ಪ್ರಸ್ತಾವನೆ ಮನವಿ ಅಹ್ವಾನ
REP ಪ್ರಕಟಣೆ ಸಂಖ್ಯೆ : KITS/IT/ESDP/2/2021-IT-KITS
ಕಿಟ್ಸ್‌ನಿಂದ ಇ.ಎಸ್.ಡಿ.ಎಂ ವಲಯಕ್ಕಾಗಿ ವಿಶೇಷ ಪ್ರೋತ್ಸಾಹಗಳ ಯೋಜನೆ 2020–25 ಅಡಿಯಲ್ಲಿ ಸ್ವೀಕರಿಸಲಾದ ಅರ್ಜಿಗಳ ಪರಿಶೀಲನೆಗಾಗಿ ಸಹಕರಿಸಲು ಸಂಸ್ಥೆಗಳಿಂದ ಪ್ರಸ್ತಾವನೆ ಮನವಿ (RFP) ಆಹ್ವಾನಿಸಿದೆ.
ಆಸಕ್ತಿವುಳ್ಳ ಕಂಪನಿಗಳು ತಮ್ಮ RFP ಯ ಎಲೆಕ್ಟ್ರಾನಿಕ್ ಪ್ರತಿಯನ್ನು ಇ–ಟೆಂಡರ್ ಪೋರ್ಟಲ್ https://eproc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು RFP ಅನ್ನು ಬಿಡ್‌ದಾರರ ಡಿಜಿಟಲ್ ಹಸ್ತಾಕ್ಷರ ಪ್ರಮಾಣ ಪತ್ರದ (ಡಿಎಸ್‌ಸಿ) ಮೂಲಕ ಅಪ್‌ಲೋಡ್ ಮಾಡುವುದು. RFP ಸಲ್ಲಿಕೆಗೆ ಅಗತ್ಯವಿರುವ ದಾಖಲೆಗಳ ವಿವರಗಳನ್ನು RFP ಯಲ್ಲಿ ನಮೂದಿಸಲಾಗಿರುತ್ತದೆ. ಈ RFP ದಾಖಲೆಗಳಿಗೆ ಸಂಬಂಧಿಸಿದಂತೆ ಮುಂದಿನ ಯಾವುದೇ ಸೂಚನೆ/ಮಾಹಿತಿಗಳನ್ನು https://eproc.karnataka.gov.in ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.
ಪ್ರಸ್ತಾವನೆ ಮನವಿಯನ್ನು ದಿನಾಂಕ 12.07.2022 ರಂದು ಸಂಜೆ 5.00 ಗಂಟೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸತಕ್ಕದ್ದು. ಪೂರ್ವಾರ್ಹತೆ ಅಗತ್ಯತೆಗಳಿಗೆ ಹಾಗೂ ಇತರ ನಿಬಂಧನೆಗಳಿಗೆ RFP ದಾಖಲೆಯನ್ನು ನೋಡುವುದು.
ಸಹಿ/– ವ್ಯವಸ್ಥಾಪಕ ನಿರ್ದೇಶಕರು ಕಿಟ್ಸ್
ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಬಿಎಂಟಿಸಿ ಕೇಂದ್ರ ಕಛೇರಿಗಳ ಕಟ್ಟಡ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಶಾಂತಿನಗರ, ಕೆ. ಹೆಚ್. ರಸ್ತೆ, ಬೆಂಗಳೂರು–560027.
ದೂರವಾಣಿ: 080–22231006/8. ಇ–ಮೇಲ್: kitsgok@karnataka.gov.in
ವಾ.ಸಾ.ಸಂ.ಇ/ವಾಪ್ರ/741/ಆಕಾರ್/22–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸುದ್ದಿ 2 ನಿಮಿಷ

ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ರಕ್ಷಾ ರಾಮಯ್ಯ

ಬೆಂಗಳೂರು: ರಾಜ್ಯ ಯುವ ಕಾಂಗ್ರೆಸ್ ಸಮಿತಿಯ ನಿಕಟಪೂರ್ವ ಅಧ್ಯಕ್ಷ ರಕ್ಷಾ ರಾಮಯ್ಯ ಅವರನ್ನು ಯುವ ಕಾಂಗ್ರೆಸ್ ಸಮಿತಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ರಕ್ಷಾ ರಾಮಯ್ಯ ಅವರಿಗೆ ಈ ಬಗ್ಗೆ ಪತ್ರ ಬರೆದಿರುವ ಭಾರತೀಯ ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, 'ಪಕ್ಷಕ್ಕೆ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಈ ಹುದ್ದೆ ನೀಡಿದ್ದು, ಪಕ್ಷದ ಸಂಘಟನೆಯನ್ನು ಬಲಪಡಿಸಬೇಕು' ಎಂದು ತಿಳಿಸಿದ್ದಾರೆ.



ಈ ಕುರಿತು ಪ್ರತಿಕ್ರಿಯಿಸಿರುವ ರಕ್ಷಾ, 'ಈ ಜವಾಬ್ದಾರಿಯನ್ನು ವಿನಮ್ರವಾಗಿ ಸ್ವೀಕರಿಸಿ, ಕೆಲಸ ಮಾಡುತ್ತೇನೆ. ಕಾಂಗ್ರೆಸ್ ಚಿಂತನ ಶಿಬಿರದ ನಿರ್ಣಯಗಳ ಜಾರಿಗೆ ಶ್ರಮಿಸುತ್ತೇನೆ. ರಾಷ್ಟ್ರ ಮಟ್ಟದಲ್ಲಿ ಯುವ ಕಾಂಗ್ರೆಸ್, ಯುವಜನರ ಧ್ವನಿಯಾಗಿ ಕೆಲಸ ಮಾಡುತ್ತೇನೆ' ಎಂದು ಹೇಳಿದ್ದಾರೆ.

ರಾಜ್ಯ ಯುವ ಕಾಂಗ್ರೆಸ್ ಸಮಿತಿಗೆ 2021ರಲ್ಲಿ ನಡೆದ ಚುನಾವಣೆಯಲ್ಲಿ ರಕ್ಷಾ ರಾಮಯ್ಯ ಎರಡನೇ ಸ್ಥಾನ ಗಳಿಸಿದ್ದರು. ರಾಜ್ಯ ಯುವ ಕಾಂಗ್ರೆಸ್ ಸಮಿತಿಯ ಹಾಲಿ ಅಧ್ಯಕ್ಷ ಮೊಹಮ್ಮದ್ ಹ್ಯಾರಿಸ್ ನಲಪಾಡ್ ಮೊದಲ ಸ್ಥಾನ ಗಳಿಸಿದ್ದರು. ಆದರೆ, ಚುನಾವಣಾ ಅಕ್ರಮದ ಆರೋಪದಡಿ ಫಲಿತಾಂಶವನ್ನು ತಡೆಹಿಡಿದು ರಕ್ಷಾ ಅವರನ್ನು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಪಕ್ಷದ ಹೈಕಮಾಂಡ್ ಇಬ್ಬರ ನಡುವೆ ಸಂಧಾನ ನಡೆಸಿ, ಮೊಹಮ್ಮದ್ ಹ್ಯಾರಿಸ್ ನಲಪಾಡ್ ಅವರಿಗೆ 2022ರ ಫೆಬ್ರುವರಿಯಲ್ಲಿ ಅಧ್ಯಕ್ಷ ಸ್ಥಾನ ನೀಡಲಾಗಿತ್ತು.

'ಧ್ವನಿವರ್ಧಕ ಬಳಕೆ; ಶೀಘ್ರ ಕ್ರಮ'

ಹುಬ್ಬಳ್ಳಿ: 'ಧ್ವನಿವರ್ಧಕ ಬಳಕೆ ನಿಯಂತ್ರಣಕ್ಕೆ ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿನ ಒಂದೆರಡು ಅಂಶಗಳಲ್ಲಿ ತಾಂತ್ರಿಕ ಸಮಸ್ಯೆಗಳಿವೆ. ಅವುಗಳನ್ನು ಸರಿಪಡಿಸಿ ಕೂಡಲೇ ಕ್ರಮ ಕೈಗೊಳ್ಳಲಾಗುವುದು' ಎಂದು ಅಪರಾಧ ಮತ್ತು ಕಾನೂನು ಸುವ್ಯವಸ್ಥೆಯ ಎಡಿಜಿಪಿ ಅಲೋಕ್ ಕುಮಾರ ತಿಳಿಸಿದರು.

ಹುಬ್ಬಳ್ಳಿ –ಧಾರವಾಡ ಕಮಿಷನರೇಟ್'ನ ವಿವಿಧ ಪೊಲೀಸ್ ಠಾಣೆಗಳಿಗೆ ಶುಕ್ರವಾರ ಭೇಟಿ ನೀಡಿ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಧ್ವನಿವರ್ಧಕ ಬಳಕೆ ನಿಯಂತ್ರಣಕ್ಕೆ ಪೊಲೀಸ್ ಇಲಾಖೆ ಕಾರ್ಯನಿರತವಾಗಿದೆ. ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಿದ ನಂತರ ಒಂದೆರಡು ದಿನಗಳಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು' ಎಂದರು.

ಗೌಡರ ಯತ್ನ ನಿಷ್ಫಲ: ಖರ್ಗೆಗೆ ಸಿಗದ ಬೆಂಬಲ

ಒಂದನೇ ಪುಟದಿಂದ

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರೂ ಆಗಿರುವ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಜತೆ ಭವಿಷ್ಯದ 'ರಾಜೀಸೂತ್ರ' ಮುಂದಿಟ್ಟಿದ್ದ ದೇವೇಗೌಡರು, ಕಾಂಗ್ರೆಸ್‌ನ ಹೆಚ್ಚುವರಿ ಮತಗಳನ್ನು ತಮ್ಮ ಅಭ್ಯರ್ಥಿಗೆ ಕೊಡಿಸಿ ಎಂಬ ಬೇಡಿಕೆ ಮಂಡಿಸಿದ್ದರು. 'ಕಾಂಗ್ರೆಸ್‌ನ ಎರಡನೇ ಅಧಿಕೃತ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಅವರನ್ನು ಕಣದಿಂದ ಹಿಂದೆ ಸರಿಸಿ, ಕುಪೇಂದ್ರ ರೆಡ್ಡಿಗೆ 'ಕೈ' ಮತ ಹಾಕಿಸುವುದು ಗೌಡರ ಲೆಕ್ಕಾಚಾರ. ಗೌಡರು ಬಿತ್ತಿದ 'ಮುಂದಾಲೋಚನೆ'ಯ ಕನಸು ಬೆನ್ನೇರಿ ದೆಹಲಿಯ ವಿಮಾನ ಹತ್ತಿದ ಖರ್ಗೆ ಅವರು ಒಂದು ಸುತ್ತಿನ ಕಾರ್ಯಾಚರಣೆಗೆ ಮುಂದಡಿ ಇಟ್ಟರು. 'ವಿಧಾನಸಭೆ ಚುನಾವಣೆಗೆ 11 ತಿಂಗಳು ಬಾಕಿ ಇರುವ ಹೊತ್ತಿನಲ್ಲಿ ಜೆಡಿಎಸ್ ಜತೆಗಿನ ಮೈತ್ರಿ ಪಕ್ಷಕ್ಕೆ ಮುಳುವಾಗುತ್ತದೆ; ರಾಜ್ಯಸಭೆಯಲ್ಲಿ ದಳದ ಬಲ ಹೆಚ್ಚಾಗುವುದರಿಂದ ನಮಗೇನೂ ಲಾಭವಿಲ್ಲ' ಎಂಬ ವಾದ ಮುಂದಿಟ್ಟ ಸಿದ್ದರಾಮಯ್ಯ ಹಾಗೂ ಶಿವಕುಮಾರ್, ಬೆಂಗಳೂರಿನಲ್ಲಿ ಮತ್ತೊಂದು ಕಾರ್ಯಾಚರಣೆ ಶುರುವಿಟ್ಟರು.

ಬೆಂಗಳೂರಿನಲ್ಲಿ ನಡೆಯುತ್ತಿದ್ದ ಚಿಂತನಾ ಶಿಬಿರದಲ್ಲಿ ತಮ್ಮೆಲ್ಲ ಭಿನ್ನಾಭಿಪ್ರಾಯ ಮರೆತ ಇಬ್ಬರು ನಾಯಕರು, ರಹಸ್ಯ ಸಭೆ ನಡೆಸಿ ಕಾರ್ಯತಂತ್ರ ಹೆಣೆದರು. ಇಲ್ಲಿಯೇ ವಾಸ್ತವ್ಯ ಹೂಡಿರುವ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಜತೆ ಮಾತುಕತೆ ನಡೆಸಿ, ದೆಹಲಿಗೆ ತಮ್ಮ ಸ್ಪಷ್ಟ ಸಂದೇಶ ರವಾನಿಸಿದರು. ಖರ್ಗೆ ಅವರು ದೆಹಲಿಗೆ ಹೋಗಿ ಇಳಿಯುವಷ್ಟರಲ್ಲೇ ಆ ಪಕ್ಷದ ವರಿಷ್ಠರಿಗೆ 'ಗೌಡರ ತಂತ್ರ' ಗೊತ್ತಾಗಿಬಿಟ್ಟಿತು. ಹಾಗಾಗಿ, ಖರ್ಗೆಯವರು, ಯತ್ನಕ್ಕೆ ಫಲ ಸಿಗದೇ 'ದಂಡ'ಯಾತ್ರೆಯಿಂದ ವಾಪಸ್ ಬೆಂಗಳೂರಿಗೆ ಮರಳಿಬಿಟ್ಟರು.

ಶಾಸಕರ ಬಲಾಬಲ*	
ಒಟ್ಟು ಸ್ಥಾನ	224
ಬಿಜೆಪಿ	120
ಕಾಂಗ್ರೆಸ್	69
ಜೆಡಿಎಸ್	32
ಇತರೆ	3
ಗೆಲುವಿಗೆ ಬೇಕಾದ ಮತ	45

*ಬಿಎಸ್‌ಪಿಯಿಂದ ಗೆದ್ದಿದ್ದ ಎನ್. ಮಹೇಶ್, ಪಕ್ಷೇತರ ಸದಸ್ಯ ಎಚ್. ನಾಗೇಶ್ ಬಿಜೆಪಿ ಜತೆಗಿದ್ದರೆ, ಶರತ್ ಬಚ್ಚೇಗೌಡ ಕಾಂಗ್ರೆಸ್ ಜತೆಗಿದ್ದಾರೆ. ಹೀಗಾಗಿ ಬಿಜೆಪಿ ಬಲ 122, ಕಾಂಗ್ರೆಸ್ ಬಲ 70 ಇದೆ.

ಲೆಕ್ಕಾಚಾರವೇನು?: ಚುನಾವಣೆ ಎದುರುಗೊಳ್ಳುವ ಹೊತ್ತಿನೊಳಗೆ ಜೆಡಿಎಸ್ ಅಭ್ಯರ್ಥಿಯನ್ನು ಬೆಂಬಲಿಸಿದರೆ ಬಿಜೆಪಿಯವರ ಟೀಕೆಗೆ ಗುರಿಯಾಗಬೇಕಾಗುತ್ತದೆ. ಜತೆಗೆ, ಜೆಡಿಎಸ್‌ಗೆ ಪ್ರತಿದಾಳವಾಗಿ ಕಣಕ್ಕೆ ಇಳಿಸಿರುವ ಮನ್ಸೂರ್ ಅಲಿ ಖಾನ್ ಅವರಿಂದ ನಾಮಪತ್ರ ವಾಪಸ್ ತೆಗೆಸಿದರೆ ತಮ್ಮ ಮತಬ್ಯಾಂಕ್ ಆಗಿರುವ ಮುಸ್ಲಿಂ ಸಮುದಾಯದವರಲ್ಲಿ ತಪ್ಪು ಸಂದೇಶ ರವಾನೆಯಾಗುತ್ತದೆ. ಇದನ್ನು ತಪ್ಪಿಸಬೇಕಾದರೆ ಮನ್ಸೂರ್ ಸೋತರೂ ಪರವಾಗಿಲ್ಲ. 'ನಮ್ಮೆಲ್ಲ ಸದಸ್ಯ ಬಲವನ್ನು ಒಗ್ಗೂಡಿಸಿ ಗೆಲ್ಲಿಸಲು ಯತ್ನಿಸುವುದು; ಜತೆಗೆ, ಜೆಡಿಎಸ್ ನಾಯಕತ್ವದ ಬಗ್ಗೆ ಅಸಮಾಧಾನಗೊಂಡು ಒಂದು ಕಾಲು ಹೊರಗಿಟ್ಟಿರುವ ಐದಾರು ಶಾಸಕರ ಮತಗಳನ್ನು ಸೆಳೆದು, ಮನ್ಸೂರ್ ಗೆಲ್ಲಿಸಿಕೊಳ್ಳುವತ್ತ ಶ್ರಮ ಹಾಕೋಣ. ಸಾಧ್ಯವಾಗದೇ ಇದ್ದರೆ ಜೆಡಿಎಸ್ ಸಹಕಾರ ಕೊಟ್ಟಿದ್ದರೆ ಗೆಲ್ಲಿಸಲೂ ಸಾಧ್ಯವಿತ್ತು ಎಂಬುದನ್ನು ಮುಂದಿನ ದಿನಗಳಲ್ಲಿ ಬಿಂಬಿಸೋಣ' ಎನ್ನುವುದು ಕೈ ನಾಯಕರ ಒಳಾಶಯ.

'ಖರ್ಗೆಯವರ ಅಭಿಲಾಷೆಯಂತೆ ಜೆಡಿಎಸ್‌ಗೆ ಬೆಂಬಲ ಕೊಟ್ಟರೂ ಅದರಿಂದೇನೂ ಪ್ರಯೋಜನವಾಗದು. ಮುಂದಿನ ಚುನಾವಣೆಯಲ್ಲಿ ಹಳೆ ಮೈಸೂರು ಭಾಗದಲ್ಲಿ ದಳವೇ ನಮಗೆ ನೇರ ಎದುರಾಳಿ. ಈಗಲೇ ಬೆಂಬಲ ನೀಡಿದರೆ ಪಕ್ಷದ ಮೇಲಿನ ವಿಶ್ವಾಸಕ್ಕೆ ಕುಂದುಂಟಾಗಬಹುದು. ಅದರ ಜತೆಗೆ, ಒಂದು ವೇಳೆ ಬಹುಮತ ಸಿಗದೇ ಇದ್ದರೆ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ನಮ್ಮ ಜತೆ ನಿಲ್ಲದೇ ಬಿಜೆಪಿ ಜತೆಗೆ ಹೋಗುವ ಸಾಧ್ಯತೆಯೇ ಹೆಚ್ಚಿದೆ. ಈ ಚುನಾವಣೆಗೆ ಸೀಮಿತವಾಗಿ ಗೌಡರು ಹೆಣೆದಿರುವ ಸೂತ್ರವನ್ನು ಒಪ್ಪುವುದು ಬೇಡ' ಎಂಬುದು ಕೈ ನಾಯಕರ ಪ್ರತಿಪಾದನೆಯಾಗಿತ್ತು. ಹೀಗಾಗಿ, ಖರ್ಗೆಯವರ ಯತ್ನ ಫಲ ಕೊಡಲಿಲ್ಲ.

ಬಿಜೆಪಿ ಲೆಕ್ಕ: ಇಬ್ಬರು ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಹೆಚ್ಚಿಗೆ ಉಳಿಯುವ ಮತಗಳನ್ನು ಮೂರನೇ ಅಭ್ಯರ್ಥಿ ಲಹರ್ ಸಿಂಗ್ ಅವರಿಗೆ ಹಾಕಿಸುವುದು. ಕಾಂಗ್ರೆಸ್ ಹಾಗೂ ಜೆಡಿಎಸ್‌ನಲ್ಲಿದ್ದು ಬಿಜೆಪಿಗೆ ಬರುವತ್ತ ಒಲವು ಹೊಂದಿರುವ ಶಾಸಕರನ್ನು ಸೆಳೆದು ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವುದು ಬಿಜೆಪಿ ಲೆಕ್ಕಾಚಾರವಾಗಿದೆ.

ಅಡ್ಡ ಮತದಾನ: ಯಶಸ್ಸು ಯಾರಿಗೆ?

ಕರ್ನಾಟಕದ ವಿಧಾನಸಭೆ ಸದಸ್ಯರಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 10ರಂದು ನಡೆಯಲಿರುವ ಚುನಾವಣೆಯಲ್ಲಿ ಆರು ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ. ಬಿಜೆಪಿಯಿಂದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ನಟ ಜಗ್ಗೇಶ್, ಲಹರ್ ಸಿಂಗ್ ಸಿರೋಯ, ಕಾಂಗ್ರೆಸ್‌ನಿಂದ ಜೈರಾಂ ರಮೇಶ್, ಮನ್ಸೂರ್ ಅಲಿ ಖಾನ್ ಹಾಗೂ ಜೆಡಿಎಸ್‌ನಿಂದ ಕುಪೇಂದ್ರ ರೆಡ್ಡಿ ಸ್ಪರ್ಧೆಯಲ್ಲಿದ್ದಾರೆ. ಬಿಜೆಪಿಗೆ ಎರಡು, ಕಾಂಗ್ರೆಸ್‌ಗೆ ಒಂದು ಅಭ್ಯರ್ಥಿ ಗೆಲ್ಲಿಸಿಕೊಳ್ಳುವಷ್ಟು ಪೂರ್ಣ ಮತಗಳಿವೆ. ಹೆಚ್ಚುವರಿಯಾಗಿ ನಿಲ್ಲಿಸಿರುವ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಬೇಕಾದರೆ ಅನ್ಯಪಕ್ಷದ ಸದಸ್ಯರ 'ಅಡ್ಡಮತದಾನ'ದ ಮೊರೆಹೋಗಬೇಕಾಗುತ್ತದೆ. ಜೆಡಿಎಸ್‌ಗೆ ಸ್ವಂತ ಬಲದ ಮೇಲೆ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಸದಸ್ಯ ಬಲವಿಲ್ಲ. ಹೀಗಾಗಿ, ಅಡ್ಡಮತದಾನ ಮಾಡಿಸುವಲ್ಲಿ ಯಾರು ಯಶಸ್ಸು ಪಡೆಯಲಿದ್ದಾರೆ ಎಂಬುದೀಗ ಕುತೂಹಲ.

ಹಿಜಾಬ್: ಪರಿಹಾರಕ್ಕೆ ಎರಡು ದಿನ ಗಡುವು

ಮಂಗಳೂರು: 'ಹೈಕೋರ್ಟ್ ತೀರ್ಪಿಗೆ ಅಲ್ಲ, ಎಬಿವಿಪಿ ಮುಖಂಡರ ಒತ್ತಡಕ್ಕೆ ಮಣಿದು ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ಪ್ರಾಂಶುಪಾಲರು ಹಿಜಾಬ್ ನಿಷೇಧಿಸಿದ್ದಾರೆ ಎಂದು ಮಂಗಳೂರು ವಿವಿ ವಿದ್ಯಾರ್ಥಿ ಸಮನ್ವಯ ಸಮಿತಿ ಆರೋಪಿಸಿದೆ. ಎರಡು ದಿನದಲ್ಲಿ ಸಮಸ್ಯೆ ಪರಿಹರಿಸದೇ ಇದ್ದರೆ ದೊಡ್ಡ ಮಟ್ಟದ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದೆ.

'ಹೈಕೋರ್ಟ್ ತೀರ್ಪು ಬಂದು ಎರಡು ತಿಂಗಳ ನಂತರ ಹಿಜಾಬ್ ಬಳಕೆ ನಿಷೇಧಿಸಲಾಗಿದೆ. ವಿದ್ಯಾರ್ಥಿ ಸಂಘಟನೆ ಚುನಾವಣೆಯಲ್ಲಿ ಆಯ್ಕೆಯಾದ ಎಬಿವಿಪಿ ಮುಖಂಡರ ಒತ್ತಡದಿಂದ ಈ ಎಲ್ಲವೂ ನಡೆದಿದೆ' ಎಂದು ವಿದ್ಯಾರ್ಥಿನಿ ಗೌಸಿಯಾ ಶಸ್ಮಾ ಆರೋಪಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಜಾಬ್ ನಿಷೇಧ ಹೇರಿ ಮೇ 16ರಂದು ರಾತ್ರಿ ಪ್ರಾಂಶುಪಾಲರು ದಿಢೀರ್ ಆದೇಶ ಹೊರಡಿಸಿದರು. ಪ್ರಶ್ನಿಸಿದ್ದಕ್ಕೆ ಕುಲಪತಿ ಮತ್ತು ಜಿಲ್ಲಾಧಿಕಾರಿ ಕಚೇರಿಗೆ ಸುತ್ತಾಡಿಸಿದ್ದಾರೆ' ಎಂದು ಆರೋಪಿಸಿದರು.

'ಹಿಜಾಬ್ ಧರಿಸಿ ಹಾಜರಾಗಲು ಕೆಲ ಪ್ರಾಧ್ಯಾಪಕರು ಅನುವು ಮಾಡಿದರೂ ಅವರನ್ನು ಬೆದರಿಸಿದ್ದಾರೆ' ಎಂದು ಗೌಸಿಯಾ ದೂರಿದರು. ಸಮಿತಿಯ ಸಂಚಾಲಕ ಅಶಾನ್, ವಿದ್ಯಾರ್ಥಿನಿಯರಾದ ಫಾತಿಮಾ, ಮಾಶಿತಾ ಇದ್ದರು.

ವಿದ್ಯಾರ್ಥಿನಿ ಅಮಾನತು

ಉಪ್ಪಿನಂಗಡಿ: ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಹಿಜಾಬ್ ವಿವಾದಕ್ಕೆ ಸಂಬಂಧಿಸಿ ಮತ್ತೊಬ್ಬ ವಿದ್ಯಾರ್ಥಿನಿಯನ್ನು ಅಮಾನತು ಮಾಡಲು ಶಾಸಕ ಸಂಜೀವ್ ಮಠಂದೂರು ನೇತೃತ್ವದಲ್ಲಿ ನಡೆದ ಕಾಲೇಜು ಅಭಿವೃದ್ಧಿ ಸಮಿತಿ ಸಭೆ ನಿರ್ಧರಿಸಿದೆ. ಇದರೊಂದಿಗೆ ಅಮಾನತಿಗೆ ಒಳಗಾದವರ ಸಂಖ್ಯೆ ಏಳಕ್ಕೇರಿದೆ.

'ಏಳು ವಿದ್ಯಾರ್ಥಿಯನಿಯರು ನಿಯಮಗಳಿಗೆ ಬದ್ಧರಾಗಿರುವುದಾಗಿ ಮುಚ್ಚಳಿಕೆ ಬರೆದು ಕೊಡಬೇಕು, ಶಿಸ್ತು ಉಲ್ಲಂಘಿಸಿದರೆ ವಜಾ ಮಾಡಲಾಗುವುದು ಎಂದು ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಶಾಸಕರು 'ಪ್ರಜಾವಾಣಿ'ಗೆ ತಿಳಿಸಿದರು.

ಕಾಂಗ್ರೆಸ್ ಶಾಸಕರಿಗೆ ವಿಪ್ ಜಾರಿ

ಬೆಂಗಳೂರು: ರಾಜ್ಯಸಭೆಯ ನಾಲ್ಕು ಸ್ಥಾನಗಳ ಭರ್ತಿಗೆ ಜೂನ್ 10ರಂದು ನಡೆಯುವ ಚುನಾವಣೆಯಲ್ಲಿ ಪಕ್ಷದ ಅಧಿಕೃತ ಅಭ್ಯರ್ಥಿಗಳಿಗೆ ಮತ ಚಲಾಯಿಸುವಂತೆ ಕಾಂಗ್ರೆಸ್ ಪಕ್ಷ ತನ್ನ ಶಾಸಕರಿಗೆ ವಿಪ್ ಜಾರಿಗೊಳಿಸಿದೆ.

ಗುರುವಾರವೇ ವಿಪ್ ಜಾರಿ ಮಾಡಿರುವ ಮುಖ್ಯ ಸಚೇತಕ ಡಾ.ಅಜಯ್ ಸಿಂಗ್, 'ಜೂನ್ 10ರಂದು ರಾಜ್ಯಸಭೆ ಚುನಾವಣೆಯಲ್ಲಿ ಕಡ್ಡಾಯವಾಗಿ ಹಾಜರಾಗಿ, ಪಕ್ಷದ ಅಧಿಕೃತಅಭ್ಯರ್ಥಿಗಳಿಗೆ ಮತಚಲಾಯಿಸಬೇಕು' ಎಂದು ನಿರ್ದೇಶನ ನೀಡಿದ್ದಾರೆ.

9ಕ್ಕೆ ಸಿಎಲ್‌ಪಿ ಸಭೆ: ಚುನಾವಣೆ ಕುರಿತು ಚರ್ಚಿಸಲು ಜೂನ್ 9ರಂದು ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ' ಎಂದು ಸಿಎಲ್‌ಪಿ ಕಾರ್ಯದರ್ಶಿ ಈ. ತುಕಾರಾಂ ತಿಳಿಸಿದ್ದಾರೆ.

'ನಾವೂ ವಿಪ್ ಜಾರಿ ಮಾಡಲಿದ್ದೇವೆ. ಅದಕ್ಕೆ ಮುನ್ನ ವರಿಷ್ಠರ ಸಭೆ ನಡೆಯಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನಕಾರ್ಯದರ್ಶಿ ಎನ್. ರವಿಕುಮಾರ್ ತಿಳಿಸಿದರು.

ಕಾಂಗ್ರೆಸ್‌ಗೆ ಒಂದೇ ಸ್ಥಾನ: ದೇವೇಗೌಡ

ತುಮಕೂರು: 'ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಇಬ್ಬರು ಅಭ್ಯರ್ಥಿಗಳನ್ನು ನಿಲ್ಲಿಸಿದ್ದರೂ, ಒಂದೇ ಸ್ಥಾನ ಗೆಲ್ಲಲು ಸಾಧ್ಯ. ಈ ಬಗ್ಗೆ ಈಗಲೇ ಹೆಚ್ಚು ವಿಶ್ಲೇಷಣೆ ಮಾಡುವುದಿಲ್ಲ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ತಿಳಿಸಿದರು.

ಶುಕ್ರವಾರ ತಾಲ್ಲೂಕಿನ ಬಳಗೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಎರಡನೇ ಅಭ್ಯರ್ಥಿ ಕಣಕ್ಕಿಳಿಸುವುದರಿಂದ ಬಿಜೆಪಿಗೆ ಅವಕಾಶ ಆಗಲಿದೆ ಎಂಬ ವಿಚಾರ ಗೊತ್ತಿದ್ದರಿಂದ ಮಲ್ಲಿಕಾರ್ಜುನ ಖರ್ಗೆ ಅವರೇ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದರು. ಇದರ ಪರಿಣಾಮ ಏನಾಗಲಿದೆ ಎಂಬುದು ಅವರಿಗೆ ಗೊತ್ತಿದೆ. ಈ ವಿಚಾರದಲ್ಲಿ ಯಾರನ್ನೂ ಟೀಕಿಸುವುದಿಲ್ಲ' ಎಂದು ಹೇಳಿದರು.

ಬಸ್‌ಗೆ ಬೆಂಕಿ: 7 ಜನ ಸಜೀವ ದಹನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಚಾರ್‌ಕಮಾನ್ ಬಳಿ ಶುಕ್ರವಾರ ಬೆಳಿಗ್ಗೆ ಸರಕುಸಾಗಣೆ ವಾಹನ –ಖಾಸಗಿ ಸ್ಲೀಪರ್ ಬಸ್ ನಡುವಣ ಅಪಘಾತ ಸಂಭವಿಸಿ ಬಸ್‌ಗೆ ಬೆಂಕಿ ಹೊತ್ತಿಕೊಂಡಿದ್ದು, ಎರಡು ಕುಟುಂಬದ 7 ಮಂದಿ ಸ್ಥಳದಲ್ಲೇ ಸಜೀವ ದಹನವಾದರು.

ತೆಲಂಗಾಣ ರಾಜ್ಯದ ಸಿಕಂದರಾಬಾದ್‌ನ ಬೋಲಾರಾಮ ಪ್ರದೇಶದ ನಿವಾಸಿಗಳಾದ ಜಿ.ಅರ್ಜುನ ಕುಮಾರ್ (37), ಅವರ ಪತ್ನಿ ಸರಳಾದೇವಿ ಅರ್ಜುನ (32) ಪುತ್ರ ವಿವಾನ ಅರ್ಜುನ (4), ಶಿವಕುಮಾರ ಕೃಷ್ಣಕುಮಾರ್(35), ಅವರ ಪತ್ನಿ ರವಾಲಿ ಶಿವಕುಮಾರ (30) ಪುತ್ರ ದೀಕ್ಷಿತ್ ಶಿವಕುಮಾರ (9) ಮತ್ತು ಅನಿತಾ ರಾಜು(40) ಮೃತರು.

'ಅಪಘಾತದಲ್ಲಿ ಗಾಯಗೊಂಡ 12 ಜನರನ್ನು ತಕ್ಷಣವೇ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬಸ್‌ನಲ್ಲಿ 28 ಪ್ರಯಾಣಿಕರು, ಇಬ್ಬರು ಚಾಲಕರು ಮತ್ತು ಕ್ಲೀನರ್ ಸೇರಿ 31 ಮಂದಿ ಇದ್ದರು. ಮೃತರ ಸಂಬಂಧಿಕರು ಆಸ್ಪತ್ರೆಗೆ ಬಂದಿದ್ದು, ಮೃತದೇಹಗಳನ್ನು ಅವರಿಗೆ ಹಸ್ತಾಂತರಿಸಲಾಗುವುದು' ಎಂದರು.

ಅಪಘಾತದ ನಂತರ ಸೇತುವೆ ಬದಿ ಹಳ್ಳಕ್ಕೆ ಬಿದ್ದು ಹೊತ್ತಿ ಉರಿದ ಸ್ಲೀಪರ್ ಬಸ್ ಅನ್ನು ಕ್ರೇನ್ ಬಳಸಿ ಪೊಲೀಸ್ ಮತ್ತು ಅಗ್ನಿಶಾಮಕ ಸಿಬ್ಬಂದಿ ತೆರವುಗೊಳಿಸುತ್ತಿರುವುದು – ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಅಜಾಗರೂಕತೆಯ ಚಾಲನೆ: 'ಮೇ 28ರಂದು ಗೋವಾ ಪ್ರವಾಸಕ್ಕೆ ಹೋಗಿದ್ದು ಜೂನ್ 2ರಂದು ಅಲ್ಲಿಂದ ಮರಳುತ್ತಿದ್ದೆವು. ಚಾಲಕ ಅಮೃತ ಪಾಟೀಲ ಜೇವರ್ಗಿವರೆಗೆ ಬಸ್ ಚಾಲನೆ ಮಾಡಿದರೆ, ಅಲ್ಲಿಂದ ಇನ್ನೊಬ್ಬ ಚಾಲಕ ರವೀಂದ್ರ ಬಾಬುರಾವ ದೀಪಕನೂರ ಚಾಲನೆ ಮಾಡಿದ. ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡುತ್ತಿದ್ದು, ನಿಧಾನವಾಗಿ ಹೋಗುವಂತೆ ಕೇಳಿದರೂ ಕಿವಿಗೊಡಲಿಲ್ಲ' ಎಂದು ಪ್ರಯಾಣಿಕ ಸುಧೀರಕುಮಾರ ತೋಟಾ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಬೆಂಕಿಗೆ ಕಾರಣ: 'ಸೇತುವೆಗೆ ಡಿಕ್ಕಿ ಹೊಡೆದು ಹಳ್ಳಕ್ಕೆ ಬಿದ್ದ ರಭಸಕ್ಕೆ ಬಸ್‌ನ ಡೀಸೆಲ್ ಟ್ಯಾಂಕ್‌ಗೆ ಹಾನಿಯಾಗಿದೆ. ನಂತರ ಒಮ್ಮೆಲೇ ಬೆಂಕಿ ಹೊತ್ತಿಕೊಂಡು ಇಡೀ ಬಸ್‌ಗೆ ಆವರಿಸಿದೆ. ತುರ್ತು ನಿರ್ಗಮನ ಬಾಗಿಲು ನೆಲಕ್ಕೆ ತಾಗಿ ಬಿದ್ದ ಕಾರಣ ಪ್ರಯಾಣಿಕರಿಗೆ ತಕ್ಷಣವೇ ಹೊರಬರಲು ಸಾಧ್ಯವಾಗಲಿಲ್ಲ.

ಕೆಲವರು ಕಿಟಕಿ, ಗಾಜು ಒಡೆದು ಹೊರ ಬಂದರು. ನೋಡು ನೋಡುತ್ತಿದ್ದಂತೆ ಬೆಂಕಿಯು ಬಸ್‌ಗೆ ಆವರಿಸಿದ್ದರಿಂದ ಒಳಗೆ ಸಿಲುಕಿಕೊಂಡಿದ್ದ ಪ್ರಯಾಣಿಕರನ್ನು ಹೊರಕರೆತರಲು ಸಾಧ್ಯವಾಗಲಿಲ್ಲ' ಎಂದು ಪ್ರತ್ಯಕ್ಷದರ್ಶಿ ತಿಳಿಸಿದ್ದಾರೆ.

ನಿಧನವಾರ್ತೆ

ನಟ ಸತ್ಯ ಉಮ್ಮತ್ತಾಲ್

ಸತ್ಯ ಉಮ್ಮತ್ತಾಲ್

ಬೆಂಗಳೂರು: ಪೋಷಕ ನಟ, ನಿರ್ದೇಶಕ ಯೋಗರಾಜ್ ಭಟ್ ಅವರ ಮಾವ (ಪತ್ನಿ ತಂದೆ) ಸತ್ಯ ಉಮ್ಮತ್ತಾಲ್ (69) ಶುಕ್ರವಾರನಗರದಲ್ಲಿ ಹೃದಯಾಘಾತದಿಂದ ನಿಧನರಾದರು.

ಅವರು ಯೋಗರಾಜ್ ಭಟ್ ಕುಟುಂಬದೊಂದಿಗೆ ವಾಸವಿದ್ದರು. ಸತ್ಯ ಅವರು ಪತ್ನಿ ರಾಜೇಶ್ವರಿ, ಪುತ್ರಿ, ಇಬ್ಬರು ಮೊಮ್ಮಕ್ಕಳಿದ್ದಾರೆ.

ಸತ್ಯಣ್ಣ ಎಂದೇ ಗುರುತಿಸಿಕೊಂಡಿದ್ದ ಅವರು ಪೋಷಕ ಪಾತ್ರಗಳ ಮೂಲಕ ಗಮನಸೆಳೆದಿದ್ದರು. 'ಟಗರು', 'ಕಡ್ಡಿಪುಡಿ', 'ಪಂಚತಂತ್ರ', ಗಣೇಶ್ ನಟನೆಯ 'ಮುಗುಳುನಗೆ', ಮಂಸೋರೆ ನಿರ್ದೇಶನದ 'ಆ್ಯಕ್ಟ್–1978', 'ಸಲಗ' ಸೇರಿದಂತೆ 60ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಅಮರಪ್ರೇಮಿ ಅರುಣ್', 'ಗಾಳಿಪಟ–2' ಸೇರಿ ಹತ್ತಕ್ಕೂ ಹೆಚ್ಚು ಚಿತ್ರಗಳು ಇನ್ನೂ ತೆರೆಗೆ ಬರಬೇಕಿದೆ.

ಧರ್ಮವನ್ನು ಇನ್ನಷ್ಟು ಸಶಕ್ತಗೊಳಿಸಬೇಕಿದೆ–ಮಿಲಿಂದ್ ಪರಾಂಡೆ

'ಹಿಂದೂ ಧರ್ಮದ ಅಂತರ್‌ಶುದ್ಧಿ ಅವಶ್ಯಕ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಹಿಂದೂ ಧರ್ಮಕ್ಕೆ ಕಂಟಕವಾಗಿರುವ ಹೆಣ್ಣು ಭ್ರೂಣ ಹತ್ಯೆ, ಅಸ್ಪೃಶ್ಯತೆ ಆಚರಣೆಯಂತಹ ಅನಿಷ್ಟ ಪದ್ಧತಿಗಳನ್ನು ತೊಡೆದುಹಾಕಿ, ಅಂತರ್ ಶುದ್ಧಿ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ. ಸ್ವಯಂ ಶುದ್ಧೀಕರಣದ ಬಗ್ಗೆ ಸಮಾಜ ಚಿಂತಿಸಬೇಕಾಗಿದೆ' ಎಂದು ವಿಶ್ವ ಹಿಂದೂ ಪರಿಷತ್ ಕೇಂದ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ ಹೇಳಿದರು.

ವಿಶ್ವ ಹಿಂದೂ ಪರಿಷತ್ ಉತ್ತರ ಕರ್ನಾಟಕ ಟ್ರಸ್ಟ್, ಪ್ರೇರಣಾ ಸೇವಾ ಸಂಸ್ಥೆಯು ಇಲ್ಲಿನ ಪುರುಷೋತ್ತಮ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಧರ್ಮಸಿರಿ ನೂತನ ಕಟ್ಟಡದ ಪ್ರವೇಶ ಹಾಗೂ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಮಾರಂಭದಲ್ಲಿ ವಿಎಚ್‌ಪಿ ಕೇಂದ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ ಮಾತನಾಡಿದರು.ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ವಿಜಯಪುರ ಜಿಲ್ಲೆಯ ಬಂಜಾರ ಶಂಕರಲಿಂಗ ಗುರುಪೀಠದ ಸೋಮಲಿಂಗ ಸ್ವಾಮೀಜಿ, ಮೂರು ಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ, ಪೇಜಾವರ ಮಠದ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ, ಕೊಲ್ಹಾಪುರದ ಕನ್ನೇರಿ ಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಭಾಗವಹಿಸಿದ್ದರು

'ಅನಿಷ್ಟ ಪದ್ಧತಿಗಳನ್ನು ತೊಡೆದು ಹಿಂದೂ ಧರ್ಮವನ್ನು ಸಶಕ್ತಗೊಳಿಸಬೇಕಾಗಿದೆ. ಧರ್ಮದ ಆಧಾರದಲ್ಲಿ ದೇಶ ವಿಭಜನೆಯಾಗಿರುವುದು ಇತಿಹಾಸ. ಪುನಃ ವಿಭಜನೆಯಾಗುವ ಅಪಾಯ ಇದ್ದೇ ಇದೆ. ಈ ನಿಟ್ಟಿನಲ್ಲಿ ಧರ್ಮದ ಅನುಯಾಯಿಗಳ ರಕ್ಷಣೆಯ ಅವಶ್ಯಕತೆ ಇದೆ' ಎಂದರು.

'ಅದಕ್ಕಾಗಿ 58 ವರ್ಷಗಳಿಂದ ವಿಶ್ವ ಹಿಂದೂ ಪರಿಷತ್ ಧರ್ಮ ಹಾಗೂ ಅನುಯಾಯಿಗಳನ್ನು ರಕ್ಷಣೆ ಮಾಡುವಲ್ಲಿ ತೊಡಗಿದೆ' ಎಂದು ಹೇಳಿದರು.

'ಹಿಂದೂ ಧರ್ಮದ ಅಡಿಪಾಯವಾಗಿರುವ ವೈವಾಹಿಕ ಪದ್ಧತಿಯೂ ಇಂದು ಅಪಾಯದ ಸ್ಥಿತಿಯಲ್ಲಿದೆ. ಕೌಟುಂಬಿಕ ನ್ಯಾಯಾಲಯಗಳಲ್ಲಿ ದಾಖಲಾಗುತ್ತಿರುವ ಪ್ರಕರಣಗಳಲ್ಲಿ ಶೇ 80ರಷ್ಟು ಪ್ರಕರಣಗಳು ಹಿಂದೂ ಕುಟುಂಬಗಳದ್ದು. ಹೆಚ್ಚಿನವು ವೈವಾಹಿಕ ಜೀವನಕ್ಕೆ ಸಂಬಂಧಿಸಿದವು. ವೈವಾಹಿಕ ವ್ಯವಸ್ಥೆ ಬಲಪಡಿಸಬೇಕಾಗಿದೆ. ಧಾರ್ಮಿಕ ನಾಯಕರು, ಮುಖಂಡರು, ಸಂತರು ಮಾರ್ಗದರ್ಶನ ನೀಡಬೇಕು' ಎಂದು ಹೇಳಿದರು.

ಹೊಸ ತಲೆಮಾರಿನ ಹೆಚ್ಚು ಕ್ಷಮತೆಯ ಬ್ಯಾಟರಿ ಅಭಿವೃದ್ಧಿ • ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳ ಸಾಧನೆ

ಇವಿ ಬ್ಯಾಟರಿಗಳ ಸ್ಫೋಟಕ್ಕೆ ಕಾರಣ ಪತ್ತೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಚಾಲಿತ ವಾಹನಗಳಲ್ಲಿನ ಬ್ಯಾಟರಿಗಳು ಸ್ಫೋಟಗೊಂಡು ಬೆಂಕಿ ಹೊತ್ತಿಕೊಳ್ಳುವುದರ ಕಾರಣವನ್ನು ಪತ್ತೆ ಮಾಡಿರುವ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿಜ್ಞಾನಿಗಳು ಅದಕ್ಕೆ ಪರಿಹಾರವನ್ನೂ ಮುಂದಿಟ್ಟಿದ್ದಾರೆ.

ವಿದ್ಯುತ್ ಚಾಲಿತ ವಾಹನಗಳಲ್ಲಿ ಬಳಸುವ ಲಿಥಿಯಂ ಬ್ಯಾಟರಿಗಳ ಬದಲಿಗೆ ಹೊಸ ತಲೆಮಾರಿನ ಘನಸ್ಥಿತಿ (ಸಾಲಿಡ್– ಸ್ಟೇಟ್) ಬ್ಯಾಟರಿ ತಂತ್ರಜ್ಞಾನವನ್ನು ಆವಿಷ್ಕರಿಸಿದೆ. ಹೊಸ ಬ್ಯಾಟರಿ ಬೇಗನೆ ವೈಫಲ್ಯಕ್ಕೆ ತುತ್ತಾಗುವುದಿಲ್ಲ. ಸುದೀರ್ಘ ಬಾಳಿಕೆ ಮತ್ತು ತ್ವರಿತ ಗತಿಯಲ್ಲಿ ಚಾರ್ಜಿಂಗ್ ಮಾಡಬಹುದಾದ ಕ್ಷಮತೆ ಹೊಂದಿದೆ.

ವಾಹನಗಳಲ್ಲಿ ಲಿಥಿಯಂ ಅಯಾನ್ ಬ್ಯಾಟರಿಗಳನ್ನು ಪದೇ ಪದೇ ಬಳಸುವುದು ಮತ್ತು ಅತಿಯಾಗಿ ಬಳಸುವುದರಿಂದ ತೆಳುವಾದ ಎಳೆಗಳು ಬೆಸೆದುಕೊಳ್ಳುತ್ತವೆ. ಇದನ್ನು 'ಡೆನ್‌ಡ್ರೈಟ್' ಎನ್ನಲಾಗುತ್ತದೆ. ಹರಳುಗಟ್ಟಿದ್ದ ರೆಂಬೆಗಳಂತೆ ಹಬ್ಬಿಕೊಂಡಿರುವ ಇದು ಬ್ಯಾಟರಿಗಳಲ್ಲಿ ಶಾರ್ಟ್ ಸರ್ಕೀಟ್‌ಗೆ ಕಾರಣವಾಗುತ್ತದೆ ಮತ್ತು ಬ್ಯಾಟರಿಗಳು ನಿರರ್ಥಕವಾಗುತ್ತವೆ.

ಮುಖ್ಯಾಂಶಗಳು

- ಬ್ಯಾಟರಿಯ ಬಾಳಿಕೆ ಹೆಚ್ಚಳ, ಶೀಘ್ರ ಚಾರ್ಜಿಂಗ್ ಸಾಧ್ಯ
- ಘನ– ಸ್ಥಿತಿಯ ಬ್ಯಾಟರಿಗಳು ಲಿಥಿಯಂಗೆ ಪರ್ಯಾಯ
- ಅಧ್ಯಯನ ವರದಿ 'ನೇಚರ್ ಮೆಟಿರಿಯಲ್ಸ್' ನಿಯತ ಕಾಲಿಕದಲ್ಲಿ ಪ್ರಕಟ

ಭಾರತೀಯ ವಿಜ್ಞಾನ ಸಂಸ್ಥೆಯ 'ಸಾಲಿಡ್ ಸ್ಟೇಟ್ ಅಂಡ್ ಸ್ಟ್ರಕ್ಚರಲ್ ಕೆಮಿಸ್ಟ್ರಿ ಯುನಿಟ್' ವಿಭಾಗದ ಸಹಾಯಕ ಪ್ರೊಫೆಸರ್ ನಾಗ ಫಣಿ ಅಟುಕುರಿ ಮತ್ತು ತಂಡ ಸಿದ್ಧಪಡಿಸಿರುವ ಅಧ್ಯಯನ ವರದಿ 'ನೇಚರ್ ಮೆಟಿರಿಯಲ್ಸ್'ನಲ್ಲಿ ಪ್ರಕಟಗೊಂಡಿದೆ.


ಭಾರತೀಯ ವಿಜ್ಞಾನ ಸಂಸ್ಥೆಯ ಬ್ಯಾಟರಿ ಪರೀಕ್ಷೆ ಸೌಲಭ್ಯ

ಬ್ಯಾಟರಿಗಳಲ್ಲಿ 'ಡೆನ್‌ಡ್ರೈಟ್' ರಚನೆಯಾಗಲು ಯಾವುದೇ ಒಂದು ಎಲೆಕ್ಟ್ರೋಡ್‌ನಲ್ಲಿ ಆರಂಭಿಕ ಹಂತದಲ್ಲಿ ಸೂಕ್ಷ್ಮರೂಪದ ನಿರ್ವಾತ ಉಂಟಾಗುವುದೇ ಮೂಲ ಕಾರಣ ಎನ್ನುವುದನ್ನು ಸಂಶೋಧಕರು ಪತ್ತೆ ಮಾಡಿದ್ದಾರೆ. 'ಡೆನ್‌ಡ್ರೈಟ್' ರಚನೆ ಆಗುವುದನ್ನು ಮುಂದೂಡಲು ನಿರ್ದಿಷ್ಟ ಬಗೆಯ ಲೋಹದ ತೆಳುವಾದ ಪದರಗಳನ್ನು ಎಲೆಕ್ಟ್ರೋಲೈಟ್ ಮೇಲ್ಭಾಗದಲ್ಲಿ ಹೊದಿಸಿದರೆ ಬ್ಯಾಟರಿಯ ಬಾಳಿಕೆ ಹೆಚ್ಚುತ್ತದೆ ಮತ್ತು ಬ್ಯಾಟರಿ ಚಾರ್ಜಿಂಗ್ ಕೂಡ ಬೇಗ ಮಾಡಲು ಸಾಧ್ಯ ಎಂಬುದನ್ನು ನಿರೂಪಿಸಿದ್ದಾರೆ.

ಸ್ಮಾರ್ಟ್‌ಫೋನ್ ಮತ್ತು ಲ್ಯಾಪ್ ಟಾಪ್‌ಗಳಲ್ಲಿ ಸಾಮಾನ್ಯವಾಗಿ ಬಳಸುವ ಲಿಥಿಯಂ ಅಯಾನ್ ಬ್ಯಾಟರಿಗಳಲ್ಲಿ ದ್ರವರೂಪದ ಎಲೆಕ್ಟ್ರೋಲೈಟ್ ಅನ್ನು ಕಬ್ಬಿಣ ಮತ್ತು ಕೋಲಾಬ್ಟ್‌ನಿಂದ ಮಾಡಿದ ಕ್ಯಾಥೋಡ್ ಮತ್ತು ಗ್ರ್ಯಾಫೈಟ್‌ನಿಂದ ಮಾಡಿದ ಅನೋಡ್ ಮಧ್ಯೆ 'ಸ್ಯಾಂಡ್‌ವಿಚ್'ನಂತೆ ಅಳವಡಿಸಿರಲಾಗುತ್ತದೆ. ಈ ಬ್ಯಾಟರಿಗಳು ಚಾರ್ಜಿಂಗ್ ಮಾಡುವಾಗ ಸಾಧನಗಳು ಅಥವಾ ವಾಹನಗಳಿಗೆ ವಿದ್ಯುತ್ ಬಳಕೆಯಾಗುವಾಗ ಲಿಥಿಯಂ ಅಯಾನುಗಳು ಅನೋಡ್ ಮತ್ತು ಕ್ಯಾಥೋಡ್ ಮಧ್ಯೆ ವಿರುದ್ಧ ದಿಕ್ಕಿನಲ್ಲಿ ಲಾಳಿ ಹೊಡೆಯುತ್ತವೆ. ಇದು ಅಷ್ಟು ಸುರಕ್ಷಿತವಲ್ಲ. ಉಷ್ಣಾಂಶ ಅಧಿಕವಾಗುತ್ತಿದ್ದಂತೆ ದ್ರವರೂಪದ ಎಲೆಕ್ಟ್ರೋಲೈಟ್‌ಗೆ ಬೇಗನೇ ಬೆಂಕಿ ಹಿಡಿಯುತ್ತದೆ.

ಘನ– ಸ್ಥಿತಿಯ ಬ್ಯಾಟರಿಗಳು ಲಿಥಿಯಂಗೆ ಪರ್ಯಾಯ ಮತ್ತು ಉತ್ತಮ ಪರಿಹಾರ ನೀಡುವ ಬ್ಯಾಟರಿಗಳಾಗಿವೆ. ಇಲ್ಲಿ ದ್ರವರೂಪದ ಬದಲಿಗೆ ಘನ ಸೆರಾಮಿಕ್ ಎಲೆಕ್ಟ್ರೋಲೈಟ್ ಅಳವಡಿಸಲಾಗುತ್ತದೆ. ಗ್ರ್ಯಾಫೈಟ್ ಬದಲಿಗೆ ಲೋಹದಿಂದ ಮಾಡಿದ ಲಿಥಿಯಂ ಅನ್ನೂ ಬಳಸಲಾಗುತ್ತದೆ. ಸೆರಾಮಿಕ್ ಎಲೆಕ್ಟ್ರೋಲೈಟ್ ಅತ್ಯಧಿಕ ಉಷ್ಣಾಂಶದಲ್ಲೂ ಕ್ಷಮತೆಯಿಂದ ಕಾರ್ಯನಿರ್ವಹಿಸಬಲ್ಲದು. ಭಾರತ ದಂತಹ ಉಷ್ಣ ವಲಯದ ದೇಶಗಳಿಗೆ ಹೇಳಿ ಮಾಡಿಸಿದೆ. ಲಿಥಿಯಂ ಕೂಡ ಹಗುರವಾಗಿರುತ್ತದೆ ಮತ್ತು ಗ್ರ್ಯಾಫೈಟ್‌ಗಿಂತ ಹೆಚ್ಚು ಚಾರ್ಜ್ ಅನ್ನು ಸಂಗ್ರಹಿಸಿ ಕೊಂಡಿರುತ್ತದೆ. ಬ್ಯಾಟರಿ ವೆಚ್ಚದಲ್ಲೂ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗುತ್ತದೆ.

ಬೆಂಗಳೂರಿನ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಪೂರ್ವಭಾವಿ ಸಭೆ

ಕುವೆಂಪುಗೆ ಅವಮಾನ: ಪ್ರತಿಭಟನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಕವಿ ಕುವೆಂಪು ಅವರಿಗೆ ಆಗಿರುವ ಅವಮಾನ ಖಂಡಿಸಿ, 'ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ'ಯ ನೇತೃತ್ವದಲ್ಲಿ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲು ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.

ವಿವಿಧ ಮಠಾಧೀಶರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದು, ಅರಮನೆ ಮೈದಾನದಿಂದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾ ರ‍್ಯಾಲಿ ನಡೆಸಲು ಪ್ರಮುಖರು ತೀರ್ಮಾನಿಸಿದರು. ಸದ್ಯದಲ್ಲಿಯೇ ದಿನಾಂಕ ಘೋಷಣೆ ಮಾಡುವುದಾಗಿ ಮುಖಂಡರು ತಿಳಿಸಿದರು.

ಸಾಹಿತಿ ಎಲ್.ಎನ್. ಮುಕುಂದ ರಾಜ್ ಮಾತನಾಡಿ, 'ಒಕ್ಕಲಿಗರ ಸಮುದಾಯವು ನೆಮ್ಮದಿಯಿಂದ ಇರುವುದಕ್ಕೆ ಕೆಲವು ದುಷ್ಟರು ಬಿಡುತ್ತಿಲ್ಲ. ವಿಕೃತ ಮನಸ್ಸುಗಳ ನಡೆ ಬೇಸರ ತರಿಸಿದೆ' ಎಂದರು. 'ಕುವೆಂಪು, ಬಸವಣ್ಣ ಕನ್ನಡ ಪ್ರವರ್ತಕರು ಮಾತ್ರವಲ್ಲದೆ ಜಗತ್ತಿನ ಪ್ರವಾದಿಗಳು. ಕುವೆಂಪು ವಿಶ್ವಮಾನವ ಧರ್ಮ ಕಟ್ಟಿದವರು. ಶಿಕ್ಷಣ ಖಾತೆಯನ್ನು ಬರೀ ಬ್ರಾಹ್ಮಣ ಸಮುದಾಯದವರಿಗೇ ನೀಡಲಾಗುತ್ತಿದೆ. ಇದರ ಹುನ್ನಾರ ಏನು? ಮಕ್ಕಳ ಮನಸ್ಸಿನಲ್ಲಿ ವಿಷಬೀಜ ಬಿತ್ತುವ ಕೆಲಸ ಮಾಡಲಾಗುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ಶುಕ್ರವಾರ ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ಆಯೋಜಿಸಿದ್ದ ಪೂರ್ವಭಾವಿ ಸಭೆಯನ್ನು ವಕೀಲ ಸಿ.ಎಚ್‌.ಹನುಮಂತರಾಯ ಉದ್ಘಾಟಿಸಿದರು. ಜಾಣಗೆರೆ ವೆಂಕಟರಾಮಯ್ಯ, ಸಾ.ರಾ ಗೋವಿಂದು, ಸಿ.ವಿ. ದೇವರಾಜ್, ಪ್ರಕಾಶ್, ನಾಗರಾಜ್, ಶ್ರೀನಿವಾಸ ಜಿ. ಕಪ್ಪಣ್ಣ, ಮಹೇಶ್, ಎಲ್‌.ಎನ್‌.ಮುಕುಂದರಾಜ್, ಬಿ.ಟಿ.ಲಲಿತಾ ನಾಯಕ್, ಡಾ.ಅಂಜನಪ್ಪ ಇದ್ದರು – ಪ್ರಜಾವಾಣಿ ಚಿತ್ರ

ವಕೀಲ ಸಿ.ಎಚ್.ಹನುಮಂತರಾಯ ಮಾತನಾಡಿ, 'ಮಾನವೀಯ ಧರ್ಮದ ಅನ್ವೇಷಕ, ಸ್ಥಾಪಕ ಕುವೆಂಪು. ಅಂತಹ ಮೇರು ವ್ಯಕ್ತಿಗೆ ಅವಹೇಳನ ಮಾಡಿರುವುದಕ್ಕೆ ನನ್ನ ರಕ್ತ ಕುದಿಯುವಂತೆ ಮಾಡಿದೆ. ಅವಮಾನ ಮಾಡಿದವರ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗುವುದು' ಎಂದು ಎಚ್ಚರಿಸಿದರು.

ವಕೀಲ ಮಹೇಶ್ ಮಾತನಾಡಿ, 'ಕೆಟ್ಟ ವ್ಯವಸ್ಥೆ, ಮನಸ್ಸುಗಳ ವಿರುದ್ಧ ಈ ಹೋರಾಟ. ಮನುಷ್ಯತ್ವ ಪ್ರತಿಪಾದಿಸುವ ಬ್ರಾಹ್ಮಣರು ಬೇಕಿದ್ದರೆ ಈ ರ‍್ಯಾಲಿಗೆ ಬರಲಿ. ರಾಜ್ಯದ 60 ಮಂದಿ ಸ್ವಾಮೀಜಿಗಳಿಗೆ ಆಹ್ವಾನ ನೀಡಲಾಗುವುದು. ಹಳೇ ಪಠ್ಯಕ್ರಮವೇ ಉಳಿಯಬೇಕು. ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯಿಂದ ರೋಹಿತ್ ಚಕ್ರತೀರ್ಥ ಅವರನ್ನು ವಜಾಗೊಳಿಸಬೇಕು. ಸಚಿವ ಬಿ.ಸಿ.ನಾಗೇಶ್ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

'ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ ಅವರೇ ಪ್ರತಿಭಟನೆಯ ನೇತೃತ್ವ ವಹಿಸಬೇಕು. ಸಚಿವರು ಸಮರ್ಥನೆಯ ಹೇಳಿಕೆ ನೀಡಿರುವುದು ನೋವು ತರಿಸಿದೆ. ರ‍್ಯಾಲಿಯು ಶಕ್ತಿ ಪ್ರದರ್ಶನವಾಗಿ ರೂಪುಗೊಳ್ಳಲಿ' ಎಂದು ನಿರ್ಮಾಪಕ ಸಾ.ರಾ.ಗೋವಿಂದ್ ಹೇಳಿದರು.

ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿಯ ಆಡಿಟರ್ ನಾಗರಾಜ್, ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಅಂಜನಪ್ಪ, ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಸೇರಿ ಕುವೆಂಪು ಅಭಿಮಾನಿಗಳು ಹಾಗೂ ಸಾಹಿತಿಗಳು ಸಭೆಯಲ್ಲಿ ಹಾಜರಿದ್ದರು.

ಕುವೆಂಪುಗೆ ಅಪಮಾನ: ದೇವೇಗೌಡ ಬೇಸರ

ತುಮಕೂರು: 'ರಾಷ್ಟ್ರಕವಿ ಕುವೆಂಪು ಅವರಿಗೆ ಅಪಮಾನ ಮಾಡುತ್ತಿದ್ದಾರೆ ಎಂಬ ವಿಚಾರ ಕೇಳಿ ಮನಸ್ಸಿಗೆ ನೋವಾಗಿದೆ. ಒಂದು ಸಮುದಾಯ ಎಷ್ಟರಮಟ್ಟಿಗೆ ನಡೆದುಕೊಳ್ಳುತ್ತಿದೆ ಎಂಬುದು ಇದರಿಂದ ಗೊತ್ತಾಗುತ್ತದೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ತಾಲ್ಲೂಕಿನ ಬಳಗೆರೆಯಲ್ಲಿ ಮಾತನಾಡಿದ ಅವರು, 'ಸಾಹಿತ್ಯ ಕ್ಷೇತ್ರದಲ್ಲಿ ಕುವೆಂಪು ಅವರಷ್ಟು ಎತ್ತರಕ್ಕೆ ಬೆಳೆದ ಮತ್ತೊಬ್ಬ ವ್ಯಕ್ತಿ ಸಿಗುವುದಿಲ್ಲ. ಅವರಿಗೆ ಅವಮಾನಿಸುತ್ತಿದ್ದರೂ ಪ್ರತಿಕ್ರಿಯೆ ನೀಡಿರಲಿಲ್ಲ. ಈಗ ಬೀದಿಯಲ್ಲಿ ನಿಂತು ಹೋರಾಡುವ ಶಕ್ತಿ ಇಲ್ಲ' ಎಂದರು.

'ಕುವೆಂಪು ರಾಷ್ಟ್ರಮಟ್ಟದ ವ್ಯಕ್ತಿ. ಹಿಂದೆ ಏನು ನಡೆದಿತ್ತು ಎಂದು ಹೇಳಲು ಹೋಗುವುದಿಲ್ಲ. ಕುವೆಂಪು ಮನಸ್ಸಿನಲ್ಲಿ ಏನಿತ್ತು ಎಂಬ ಚರ್ಚೆ ಅನಗತ್ಯ. ಮೇರುವ್ಯಕ್ತಿಗೆ ಗೌರವ ಕೊಡುವುದನ್ನು ಮೊದಲು ಕಲಿಯಬೇಕು' ಎಂದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ದೇವದಾಸ್ ಕಾಪಿಕಾಡ್
ತುಳು ರಂಗಭೂಮಿ, ಚಲನಚಿತ್ರ ನಟ, ನಿರ್ದೇಶಕ, ಗಾಯಕ
ತೆಲಿಕೆದ ಬೊಳ್ಳಿ
ಸೆಲೆಬ್ರಿಟಿ LIVE

ಬೆಳಿಗ್ಗೆ 11 ರಿಂದ 12
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಸೌತಡ್ಕ: ಹಿಂದೂಯೇತರರ ಆಟೊ, ಟ್ಯಾಕ್ಸಿಗಳಿಗೆ ನಿರ್ಬಂಧ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡ ಗ್ರಾಮದ ಸೌತಡ್ಕ ಗ್ರಾಮದಲ್ಲಿ ಹಿಂದೂಗಳ ಶ್ರದ್ಧಾಕೇಂದ್ರವಾದ ಮಹಾಗಣಪತಿ ಬಯಲು ದೇವಾಲಯದ ಬಳಿ ಹಾಗೂ ಆ ದೇವಾಲಯವನ್ನು ಸಂಪರ್ಕಿಸುವ ರಸ್ತೆಯ ಬಳಿ ಹಿಂದೂಯೇತರರ ಆಟೊ, ಟ್ಯಾಕ್ಸಿ ಹಾಗೂ ಇತರ ವಾಹನಗಳಿಗೆ ಪ್ರವೇಶ ನಿರ್ಬಂಧಿಸುವ ಫಲಕಗಳು ಶುಕ್ರವಾರ ಬೆಳಿಗ್ಗೆ ದಿಢೀರ್ ಪ್ರತ್ಯಕ್ಷವಾಗಿವೆ.

'ಫಲಕ ಅಳವಡಿಸಲು ಯಾರೂ ಅನುಮತಿ ಪಡೆದಿರಲಿಲ್ಲ. ಪೊಲೀಸರ ಸೂಚನೆಯಂತೆ ಒಂದು ಫಲಕ ತೆರವುಗೊಳಿಸಿದ್ದೇವೆ. ಇನ್ನೊಂದು ಫಲಕ ದೇವಸ್ಥಾನದ ಆವರಣದ ಒಳಗೆ ಇದೆ' ಎಂದು ಕೊಕ್ಕಡ ಗ್ರಾಮ ಪಂಚಾಯಿತಿ ಪಿಡಿಒ ದೀಪಕ್ ರಾಜ್ ಎಂ. ತಿಳಿಸಿದರು.

ವಿಶ್ವಹಿಂದೂ ಪರಿಷತ್ ಮುಖಂಡ ಭಾಸ್ಕರ್ ಧರ್ಮಸ್ಥಳ, 'ಸೌತಡ್ಕದಲ್ಲಿರುವ ಆಟೊರಿಕ್ಷಾ ಚಾಲಕರಲ್ಲಿ ಹೆಚ್ಚಿನವರು ಮುಸ್ಲಿಮರು. ಇಲ್ಲಿ ಲವ್ ಜಿಹಾದ್ ಪ್ರಕರಣವೂ ನಡೆದಿದೆ. ಭಕ್ತಾದಿಗಳಲ್ಲಿ ಜಾಗೃತಿ ಮೂಡಿಸಲು ನಾವು ಫಲಕ ಅಳವಡಿಸಿದ್ದೇವೆ' ಎಂದು ಸಮರ್ಥಿಸಿಕೊಂಡರು.

'ಈ ವಿಚಾರ ಗಮನಕ್ಕೆ ಬಂದಿಲ್ಲ. ಮುಜರಾಯಿ ಇಲಾಖೆಯ ದೇವಾಲಯದಲ್ಲಿ ನಿಯಮಬಾಹಿರವಾಗಿ ಫಲಕ ಅಳವಡಿಸಿದ್ದರೆ ತೆರವುಗೊಳಿಸಬೇಕು' ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ.ಪ್ರತಿಕ್ರಿಯಿಸಿದರು.

ದೇವಾಲಯ ಆವರಣದ ಫಲಕ ತೆರವು ಕುರಿತು ಚರ್ಚಿಸಲು ಸ್ಥಳೀಯ ಪ್ರಮುಖರು ಶನಿವಾರ ಸಭೆ ನಡೆಸಲಿದ್ದಾರೆ ಎಂದು ಗೊತ್ತಾಗಿದೆ.

ಪಿಎಸ್‌ಐ ಅಕ್ರಮ: ಜಾಮೀನು ಅರ್ಜಿ ತಿರಸ್ಕೃತ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಡಿ ಜಾಮೀನು ಕೋರಿ ಐವರು ಆರೋಪಿಗಳು ಸಲ್ಲಿಸಿದ್ದ ಅರ್ಜಿಯನ್ನು 52ನೇ ಸಿಸಿಎಚ್ ನ್ಯಾಯಾಲಯ ಶುಕ್ರವಾರ ತಿರಸ್ಕರಿಸಿದೆ.

ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಅಭ್ಯರ್ಥಿಗಳಾದ ರಘುವೀರ್, ಸಿ.ಕೆ. ದಿಲೀಪ್‌ಕುಮಾರ್, ಪ್ರವೀಣ್‌ಕುಮಾರ್, ಸಿ.ಎನ್. ಶಶಿಧರ್ ಹಾಗೂ ಶರತ್ ಕುಮಾರ್ ಅವರನ್ನು ಸಿಐಡಿ ಬಂಧಿಸಿತ್ತು. ಅವರೆಲ್ಲ ನ್ಯಾಯಾಂಗ ಬಂಧನದಲ್ಲಿದ್ದಾರೆ.

'ಪ್ರಕರಣದಲ್ಲಿ ನಮ್ಮದೇನು ಪಾತ್ರವಿಲ್ಲ. ತನಿಖೆಗೆ ಸಹಕರಿಸಲು ಸಿದ್ಧರಿದ್ದು, ಜಾಮೀನು ನೀಡಬೇಕು' ಎಂದು ಆರೋಪಿಗಳು ಕೋರಿದ್ದರು.

'ಮಧ್ಯವರ್ತಿಗಳ ಮೂಲಕ ಪೊಲೀಸ್ ಇಲಾಖೆ ಅಧಿಕಾರಿಗಳ ಜೊತೆ ಸಂಪರ್ಕ ಸಾಧಿಸಿ ಆರೋಪಿಗಳು ವ್ಯವಸ್ಥಿತವಾಗಿ ಕೃತ್ಯ ಎಸಗಿದ್ದಾರೆ. ಸಾಕ್ಷ್ಯ ನಾಶಪಡಿಸುವ ಸಾಧ್ಯತೆ ಇದೆ. ಹೀಗಾಗಿ, ಜಾಮೀನು ನೀಡಬಾರದು' ಎಂದು ಸಿಐಡಿ ಪರ ಪಬ್ಲಿಕ್ ಪ್ರಾಸಿಕ್ಯೂಟರ್ ತ್ಯಾಗರಾಜ್ ಆಕ್ಷೇಪಣೆ ಸಲ್ಲಿಸಿದ್ದರು.

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
K RIDE
(ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: 1ನೇ ಮಹಡಿ, ಸಂಪರ್ಕ ಸೌಧ, ಓರಿಯನ್ ಮಾಲ್ ಎದುರು, ರಾಜಾಜಿನಗರ, ಬೆಂಗಳೂರು – 10
CIN: U60100KA2000PLC028171
ಇ–ಟೆಂಡರ್ ಸೂಚನೆ
Tender Notice No.: KRIDE/Gen.03/2022 Date: 02.06.2022
ಕೆಳಗಿನ ಕಾಮಗಾರಿಗಾಗಿ ಅನುಭವಿ ಏಜೆನ್ಸಿಗಳಿಂದ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಕಾಮಗಾರಿಯ ಹೆಸರು	ಮೊತ್ತ
'ಕಛೇರಿ / ಕ್ಷೇತ್ರ ಕಾರ್ಯಗಳಿಗಾಗಿ ಕ ರೈಡ್‌ಗೆ ನುರಿತ ಮಾನವಶಕ್ತಿಯನ್ನು ಒದಗಿಸುವುದು'	ರೂ 3.17 ಕೋಟಿ

ಬಿಡ್ ಸಲ್ಲಿಸಲು ಕೊನೆಯ ದಿನಾಂಕ 04.07.2022
ವಿವರಗಳಿಗಾಗಿ http://eproc.karnataka.gov.in ಮತ್ತು www.kride.in ಗೆ ಭೇಟಿ ನೀಡಿ
ಸಹಿ/– ಜನರಲ್ ಮ್ಯಾನೇಜರ್ (ಎಲ್&ಪಿಸಿ) ಕ–ರೈಡ್
DIPR/CP/739/SPAN/2022-23

'ಪರಿಷ್ಕರಣೆಯಲ್ಲಿ ದಲಿತ ಬರಹಗಾರರಿಗೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೋಹಿತ್ ಚಕ್ರತೀರ್ಥ ಅವರ ಅಧ್ಯಕ್ಷತೆಯ ಪಠ್ಯಪುಸ್ತಕ ಸಮಿತಿ ದಲಿತ ಬರಹಗಾರರನ್ನು ಕೈಬಿಟ್ಟು, ಬ್ರಾಹ್ಮಣ ಲೇಖಕರ ಪಠ್ಯ ಸೇರ್ಪಡೆ ಮಾಡಿದೆ' ಎಂಬ ಆರೋಪ ಎದುರಾಗಿದೆ.

ಕೈಬಿಟ್ಟಿರುವ ಪಠ್ಯ ಹಾಗೂ ಸೇರ್ಪಡೆ ಮಾಡಿರುವ ಪಠ್ಯದ ಬಗ್ಗೆ, ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಸದಸ್ಯರಾಗಿದ್ದ ನಿವೃತ್ತ ಪ್ರಾಧ್ಯಾಪಕ ರವೀಶ್ ಕುಮಾರ್ ಅವರು ವರದಿ ತಯಾರಿಸಿ ಬಿಡುಗಡೆ ಮಾಡಿದ್ದಾರೆ. 'ಪರಿಷ್ಕರಿಸಿದ ಪಠ್ಯಪುಸ್ತಕಗಳಲ್ಲಿ ಭಾರಿ ಅನ್ಯಾಯವಾಗಿದ್ದು, ದಲಿತ ಬರಹಗಾರರನ್ನು ಕೈಬಿಡಲಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಮತ್ತು ಶಿಕ್ಷಣ ಸಚಿವರು ಪರಿಶೀಲನೆ ನಡೆಸಿ, ನ್ಯಾಯ ಒದಗಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಚೆನ್ನಣ್ಣ ವಾಲಿಕಾರ, ಮೂಡ್ನಾಕೂಡು ಚಿನ್ನಸ್ವಾಮಿ, ಅರವಿಂದ ಮಾಲಗತ್ತಿ, ಟಿ. ಯಲ್ಲಪ್ಪ, ಸರಜೂ ಕಾಟ್ಕರ್, ದು. ಸರಸ್ವತಿ ಸೇರಿದಂತೆ ಈ ಹಿಂದೆ ಅವಕಾಶ ಪಡೆದಿದ್ದ ಬರಹಗಾರರ ಪಠ್ಯವನ್ನು ಮರು ಪರಿಷ್ಕರಣೆಯಲ್ಲಿ ಕೈಬಿಡಲಾಗಿದೆ. ಬ್ರಾಹ್ಮಣ ಲೇಖಕರ ಪಠ್ಯ ಸೇರ್ಪಡೆ ಮಾಡಲಾಗಿದೆ. ಕವಿ, ನಾಟಕಕಾರ ಎಚ್. ಎಸ್. ಶಿವಪ್ರಕಾಶ್ ಅವರ ಪದ್ಯ ತೆಗೆದು, ಎನ್. ಶ್ರೀನಿವಾಸ್ ಉಡುಪ ಅವರಿಗೆ ಅವಕಾಶ ಮಾಡಿಕೊಡಲಾಗಿದೆ. 6ನೇ ತರಗತಿ ಸಮಾಜ ವಿಜ್ಞಾನ ಪಠ್ಯದಿಂದ ಜೈನ ಧರ್ಮದ ವಿವರ ಕೈ ಬಿಟ್ಟಿದ್ದಾರೆ. 10ನೇ ತರಗತಿ ಪಠ್ಯದಿಂದ ಶಿವಕೋಟ್ಯಾಚಾರ್ಯರ ಪಾಠ ತೆಗೆದಿದ್ದಾರೆ. ಬೌದ್ಧ ಧರ್ಮದ ಪಾಠವನ್ನೂ ತೆಗೆಯಲಾಗಿದೆ' ಎಂದು ತಿಳಿಸಿದ್ದಾರೆ.

'ಈ ಹಿಂದಿನ ಪಠ್ಯಪುಸ್ತಕಗಳಲ್ಲಿ ಸಾಮಾಜಿಕ ನ್ಯಾಯ, ಲಿಂಗ ಸಮಾನತೆ ಮತ್ತು ಪ್ರಾದೇಶಿಕ ಪ್ರಾತಿನಿಧ್ಯಗಳಿಗೆ ಅನುಗುಣವಾಗಿ ಸುಮಾರು 28 ಮಂದಿಗೆ ನೀಡಿದ್ದ ಒಂದೇ ಒಂದು ಅವಕಾಶವನ್ನು ಕಸಿದುಕೊಂಡು, ತಮಗೆ ಬೇಕಾದವರಿಗೆ ಸಮಿತಿ ಅವಕಾಶ ನೀಡಿದೆ. ಕರ್ನಾಟಕ ಪಠ್ಯಪುಸ್ತಕ ಸಂಘ ಮೇ 31ರಂದು ಬಿಡುಗಡೆ ಮಾಡಿದ ಟಿಪ್ಪಣಿಯಲ್ಲಿ ಈ ವಿಷಯ ಸ್ಪಷ್ಟವಾಗಿದೆ' ಎಂದೂ ಅವರು ತಿಳಿಸಿದ್ದಾರೆ.

'1ರಿಂದ 10ನೇ ತರಗತಿಯ ಪ್ರಥಮ, ದ್ವಿತೀಯ, ತೃತೀಯ ಭಾಷೆಯ ಪಠ್ಯಪುಸ್ತಕದಲ್ಲಿ ಕೇವಲ ಒಂದೇ ಅವಕಾಶವಿದ್ದ ಕವಿ, ಲೇಖಕರನ್ನು ಕೈಬಿಡಲಾಗಿದೆ. 10ನೇ ತರಗತಿಯಲ್ಲಿ 4 ಬಿಡಿ ಲೇಖನಗಳನ್ನು ಮತ್ತು 7 ಪೂರಕ ಅಧ್ಯಾಯಗಳನ್ನು ಸೇರಿಸುವ ಮೂಲಕ ವಿದ್ಯಾರ್ಥಿಗಳಿಗೆ ಪಾಠದ ಹೊರೆ ಹೆಚ್ಚಿಸಲಾಗಿದೆ' ಎಂದೂ ಅವರು ದೂರಿದ್ದಾರೆ.

'ಅರ್ಹತೆ ಬಗ್ಗೆ ಉತ್ತರಿಸುವ ಅಗತ್ಯವಿಲ್ಲ'

'ಈ ಹಿಂದಿನ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ ಅವರು ದಾಖಲಾತಿಯೊಂದಿಗೆ ಚರ್ಚೆಗೆ ಬಂದರೆ ಉತ್ತರಿಸುತ್ತೇನೆ. ಉಳಿದವರ ಆರೋಪಕ್ಕೆ ಪ್ರತಿಕ್ರಿಯೆ ನೀಡಲಾರೆ. ನನ್ನ ಶೈಕ್ಷಣಿಕ ಅರ್ಹತೆ ಬಗ್ಗೆಯೂ ಉತ್ತರಿಸುವ ಅಗತ್ಯವಿಲ್ಲ. ಸಮಿತಿಯನ್ನು ಸರ್ಕಾರ ರಚನೆ ಮಾಡಿದೆ. ಎಲ್ಲ ಆಯಾಮಗಳಿಂದಲೂ ನೋಡಿ, ನೇಮಕ ಮಾಡಲಾಗಿದೆ. ನಾನು ಐಐಟಿ–ಸಿಇಟಿ ಪ್ರಾಧ್ಯಾಪಕ ಎಂದು ಎಲ್ಲಿಯೂ ಹೇಳಿಕೊಂಡಿಲ್ಲ' ಎಂದು ರೋಹಿತ್ ಚಕ್ರತೀರ್ಥ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ರೋಹಿತ್ ಅರ್ಹತೆ ಪ್ರಶ್ನಿಸಿದ ಕಕ್ಕಿಲ್ಲಾಯ

'ಬಿಎಸ್ಸಿ ಪದವಿಯನ್ನಷ್ಟೇ ಪಡೆದಿರುವ ವ್ಯಕ್ತಿ ಶಾಲಾ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷರಾಗಬಹುದೆ? ಸ್ನಾತಕೋತ್ತರ ಪದವಿಯನ್ನೂ ಪಡೆಯದ, ಶಿಕ್ಷಕನಾಗಿ ಬೋಧಿಸದ ವ್ಯಕ್ತಿ ಇಂತಹ ಸಮಿತಿಯ ನೇತೃತ್ವ ವಹಿಸಲು ಅರ್ಹರೆ' ಎಂದು ವೈದ್ಯ ಡಾ. ಶ್ರೀನಿವಾಸ ಕಕ್ಕಿಲ್ಲಾಯ ಪ್ರಶ್ನಿಸಿದ್ದಾರೆ. 'ಚಕ್ರತೀರ್ಥ ಅವರು ಉಡುಪಿಯ ಎಂಜಿಎಂ ಕಾಲೇಜಿನಲ್ಲಿ ಬಿಎಸ್ಸಿ ಪದವಿ ಪಡೆದಿರುವ ಮಾಹಿತಿ ಇದೆ. ಪದವಿಯಲ್ಲಿ ಗಣಿತ, ಭೌತವಿಜ್ಞಾನ, ಕಂಪ್ಯೂಟರ್ ವಿಜ್ಞಾನ ವಿಭಾಗದಲ್ಲಿ ಓದಿದ, ಸಂಸ್ಕೃತವನ್ನು ಎರಡನೇ ಭಾಷೆಯಾಗಿ ಕಲಿತಿರುವ ಮಾಹಿತಿ ಸಿಕ್ಕಿದೆ. ಪದವಿಯಲ್ಲಿ ಕನ್ನಡವನ್ನು ಒಂದು ವಿಷಯವಾಗಿ ಕಲಿಯದ ವ್ಯಕ್ತಿ ಕನ್ನಡ ಪಠ್ಯಪುಸ್ತಕಗಳನ್ನು ಹೇಗೆ ಪರಿಷ್ಕರಿಸುತ್ತಾರೆ' ಎಂದು ಕೇಳಿದರು.

ಪ್ರಮುಖ ಬದಲಾವಣೆಗಳು

- ಅರವಿಂದ ಮಾಲಗತ್ತಿ ಅವರ ಒಂದು ಪದ್ಯ ಕೈಬಿಟ್ಟು, ಎಸ್.ವಿ. ಪರಮೇಶ್ವರ ಭಟ್ಟರಿಗೆ ಎರಡು ಅವಕಾಶ
- ಸಾರಾ ಅಬೂಬಕ್ಕರ್ ಅವರ ಗದ್ಯ ತೆಗೆದು, ಶತಾವಧಾನಿ ಆರ್. ಗಣೇಶ್ ಅವರಿಗೆ ಅವಕಾಶ
- ಮೂಡ್ನಾಕೂಡು ಚಿನ್ನಸ್ವಾಮಿ ಅವರ ಪದ್ಯ ಕೈಬಿಟ್ಟು, ದಿನಕರ ದೇಸಾಯಿ ಅವರಿಗೆ ಎರಡು ಅವಕಾಶ
- ಚೆನ್ನಣ್ಣ ವಾಲಿಕಾರ ಅವರ ಪದ್ಯ ತೆಗೆದು, ನಿರ್ಮಲಾ ಸುರತ್ಕಲ್ ಅವರಿಗೆ ಅವಕಾಶ
- ಎಚ್.ಎಸ್. ಶಿವಪ್ರಕಾಶ್ ಅವರ ಪದ್ಯ ತೆಗೆದು, ಎನ್. ಶ್ರೀನಿವಾಸ ಉಡುಪರಿಗೆ ಅವಕಾಶ
- ಕೆ. ನೀಲಾ ಅವರ ಪೂರಕ ಪದ್ಯ ತೆಗೆದು, ಸುಶ್ರುತ ದೊಡ್ಡೇರಿ ಅವರಿಗೆ ಅವಕಾಶ
- ಎಚ್.ಎಸ್. ಅನುಪಮಾ ಅವರ ಪೂರಕ ಪದ್ಯ ತೆಗೆದು, ರಮಾನಂದ ಆಚಾರ್ಯ ಅವರಿಗೆ ಅವಕಾಶ
- ಮಾಲತಿ ಪಟ್ಟಣಶೆಟ್ಟಿ ಅವರ ಗದ್ಯ ಕೈಬಿಟ್ಟು, ಬಿ.ಎಸ್. ಪಾಂಡುರಂಗರಾವ್ ಅವರಿಗೆ ಅವಕಾಶ
- ಕೋ. ಚೆನ್ನಬಸಪ್ಪ ಅವರ ಗದ್ಯ ತೆಗೆದು, ಬಾಬು ಕೃಷ್ಣಮೂರ್ತಿ ಅವರಿಗೆ ಅವಕಾಶ
- ವೈದ್ಯ ಲೇಖಕ 'ರಾಶಿ' ಅವರ ಗದ್ಯ ತೆಗೆದು, ಡಿ.ಎಸ್. ಶ್ರೀನಿಧಿ ಅವರಿಗೆ ಅವಕಾಶ
- ಟಿ. ಯಲ್ಲಪ್ಪ ಅವರ ಪದ್ಯ ತೆಗೆದು, ನಾ. ಮೊಗಸಾಲೆ ಅವರಿಗೆ ಅವಕಾಶ
- ಸರಜೂ ಕಾಟ್ಕರ್ ಅವರ ಒಂದು ಗದ್ಯ ಪಠ್ಯ ಕೈಬಿಡಲಾಗಿದೆ.

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.
ಸಂ:ಕಾನಿಇಂ/ಲೋಇ./ಸೇವಿ/ತಾಶಾ–2/2022–23/615 ದಿನಾಂಕ: 02–06–2022 .
:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::
1) ಕಾಮಗಾರಿಯ ವಿವರ : 1. ಸೇಡಂ ತಾಲೂಕಿನ 01 ಕಾಮಗಾರಿಯ ಇಂಡೆಂಟ್ ಸಂ. ಕೆ.ಕೆ.ಆರ್.ಡಿ.ಬಿ ಯೋಜನೆಯಡಿಯಲ್ಲಿನ ಕಾಮಗಾರಿ: 151460. 2. ಚಿತ್ತಾಪೂರ ತಾಲೂಕಿನ 01 ಕಾಮಗಾರಿಯ ಇಂಡೆಂಟ್ ಸಂ. ಕೆ.ಕೆ.ಆರ್.ಡಿ.ಬಿ ಯೋಜನೆಯಡಿಯಲ್ಲಿನ ಕಾಮಗಾರಿಗಳು: 151517. 3. ಚಿಂಚೋಳಿ ತಾಲೂಕಿನ 05 ಕಾಮಗಾರಿಯ ಇಂಡೆಂಟ್ ಸಂ. ಕೆ.ಕೆ.ಆರ್.ಡಿ.ಬಿ ಯೋಜನೆಯಡಿಯಲ್ಲಿನ ಕಾಮಗಾರಿಗಳು : 147976/3ನೇ ಕರೆ, 149694, 149693, 151539 ಮತ್ತು 136869/2ನೇ ಕರೆ. 2) ಲೆಕ್ಕ ಶೀರ್ಷಿಕೆ : 2019–20 ನೇ ಹಾಗೂ 2021–22ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆಯಡಿಯಲ್ಲಿನ ಕಾಮಗಾರಿಗಳು, 3) ಟೆಂಡರಿಗಿಟ್ಟ ಮೊತ್ತ : ಕನಿಷ್ಠ: **ರೂ. 17.00 ಲಕ್ಷಗಳು** ಗರಿಷ್ಠ **ರೂ. 106.53 ಲಕ್ಷಗಳು,** 4 ಗುತ್ತಿಗೆದಾರರ ಅರ್ಹತೆ : 2ನೇ ದರ್ಜೆ & ಮೇಲ್ಪಟ್ಟು, 5) ಟೆಂಡರ್ ಸ್ಪಷ್ಟೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ : **30–06–2022 ಸಾಯಂಕಾಲ 5:30 ಗಂಟೆಯವರೆಗೆ,** 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ. 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : **02–07–2022 ರ ಸಾಯಂಕಾಲ 4:00 ಗಂಟೆಯವರೆಗೆ,** 8) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **04–07–2022 ರ ಸಾಯಂಕಾಲ 4:30 ಗಂಟೆಯವರೆಗೆ,** 9) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : **06–07–2022 ರ ಸಾಯಂಕಾಲ 4:30 ಗಂಟೆಯವರೆಗೆ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ ಜಿ॥ ಕಲಬುರಗಿ, 11) ಅಂತರಜಾಲ ತಾಣದ ವಿಳಾಸ : www.eproc.karnataka.gov.in, 12) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ. : ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.eproc.karnataka.gov.in ಮಾಡಲಾಗುವುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ವಾ.ಸಾ.ಸಂ.ಇ/ಕಲಬುರಗಿ/232/ಎಂ.ಸಿ.&ಎ/2022–23 ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ

'ಲಿಂಗಾಯತ ಸಿ.ಎಂ ಅವಧಿಯಲ್ಲೇ ಅಗೌರವ'

ಪ್ರಜಾವಾಣಿ ವಾರ್ತೆ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ಲಿಂಗಾಯತ ಸಿ.ಎಂ ಅವಧಿಯಲ್ಲಿಯೇ ಲಿಂಗಾಯತ ಧರ್ಮ ಸ್ಥಾಪಕ ಬಸವಣ್ಣನಿಗೆ ಅಗೌರವ ತೋರುತ್ತಿರುವುದು ಆಘಾತ ಮೂಡಿಸಿದೆ' ಎಂದು ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಶುಕ್ರವಾರ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಬಸವಣ್ಣನ ಕುರಿತು ಆಗಿರುವ ತಪ್ಪುಗಳನ್ನು ಸರಿಪಡಿಸಲು ಮುಖ್ಯಮಂತ್ರಿ ಅವರು ಲಿಂಗಾಯತ ಮಠಾಧೀಶರ ಸಭೆ ಕರೆಯಬೇಕು' ಎಂದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಸವಣ್ಣನ ಅನುಯಾಯಿ. ಅವರಿಗೆ ಕಳಂಕ ತರುವ ಹುನ್ನಾರ ನಡೆದಿದೆ ಎಂಬ ಸಂಶಯ ಲಿಂಗಾಯತರಲ್ಲಿ ಮೂಡಿದೆ. ಬಸವಣ್ಣನ ಇತಿಹಾಸವನ್ನು ಮಕ್ಕಳಿಗೆ ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು' ಎಂದು ಹೇಳಿದರು.

'ಪಂಚಮಸಾಲಿ ಸಮಾಜದ ಶಾಸಕರು, ಶಾಸಕ ಬಸವನಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿಯವರೊಂದಿಗೆ ಅಂತಿಮ ಮಾತುಕತೆ ನಡೆಸಿ ಮೀಸಲಾತಿ ಕೊಡಲು ಆಗುತ್ತದೋ, ಇಲ್ಲವೋ ಎಂದು ಸ್ಪಷ್ಟವಾಗಿ ಕೇಳಬೇಕು' ಎಂದೂ ಬಸವ ಜಯಮೃತ್ಯುಂಜಯ ಶ್ರೀಗಳು ಆಗ್ರಹಿಸಿದರು.

ಸಚಿವರ ಸಮರ್ಥನೆ: ಸಾಣೇಹಳ್ಳಿಶ್ರೀ ಬೇಸರ



ಹೊಸದುರ್ಗ: 'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಅವರಿಗೆ ಪರಿಪೂರ್ಣ ಮಾಹಿತಿ ನೀಡದೇ ಇತಿಹಾಸ ತಿರುಚಲಾಗುತ್ತಿದೆ. ಇದು ಹಳಸಿದ ಅನ್ನವಿದ್ದಂತೆ. ಸವಿದರೆ ಆರೋಗ್ಯ ಕೆಡುವುದು ಶತಃಸಿದ್ಧ' ಎಂದು ಸಾಣೇಹಳ್ಳಿಯ ತರಳಬಾಳು ಶಾಖಾ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಭಗೀರಥ ಪೀಠದಲ್ಲಿ ಶುಕ್ರವಾರ ಅಖಿಲ ಭಾರತ ಭಗೀರಥ ಜಯಂತ್ಯುತ್ಸವ ಹಾಗೂ ಉಪ್ಪಾರರ ಸಮಾವೇಶದ ಸಾನ್ನಿಧ್ಯ ವಹಿಸಿದ್ದ ಅವರು, 'ಪಠ್ಯ ಪುಸ್ತಕಗಳ ಮೂಲಕ ಮಕ್ಕಳ ಭವಿಷ್ಯ ರೂಪಿಸಿ, ಉತ್ತಮ ಸಂದೇಶ ನೀಡಬೇಕು' ಎಂದು ಹೇಳಿದರು.

'9ನೇ ತರಗತಿಯ ಸಮಾಜ ವಿಜ್ಞಾನ ಪುಸ್ತಕದಲ್ಲಿ ಬಸವಣ್ಣನವರ ವ್ಯಕ್ತಿತ್ವಕ್ಕೆ ಮಸಿ ಬಳಿದಂತಿದೆ. ಈ ಕುರಿತು ಶಿಕ್ಷಣ ಸಚಿವರಿಗೆ ಪತ್ರ ಬರೆಯಲಾಗಿತ್ತು. ಸಚಿವರು ಕರೆ ಮಾಡಿ, 'ಪುಸ್ತಕದಲ್ಲಿ ಎಲ್ಲಾ ಸರಿಯಿದೆ' ಎಂದು ಸಮರ್ಥಿಸಿಕೊಂಡರು. ಅದಕ್ಕೆ 'ಶರಣರ ತತ್ವ ಬಲ್ಲವರೊಂದಿಗೆ ಚರ್ಚಿಸಿ, ಇಲ್ಲ ನಾವೇ ಈ ಬಗ್ಗೆ ತಿಳಿಸುವುದಾಗಿ ಹೇಳಿದೆವು. ಆಗ ಸಚಿವರು ಮಠಕ್ಕೆ ಬಂದು ಚರ್ಚಿಸುವುದಾಗಿ ಹೇಳಿದರು' ಎಂದು ತಿಳಿಸಿದರು.

ವಿಚಾರ ತಿರುಚುವುದು ಆಗಬಾರದು: ಸಿದ್ಧಲಿಂಗ ಸ್ವಾಮೀಜಿ

ದಾವಣಗೆರೆ: 'ಈಗ ಪಠ್ಯಪುಸ್ತಕ ಪರಿಷ್ಕರಣೆಯ ವಿವಾದ ಕೊನೆಗೊಂಡು ಶಾಂತಿ ನೆಲೆಸಬೇಕು. ಪಠ್ಯದಲ್ಲಿ ಮೂಲ ವಿಚಾರವನ್ನು ತಿದ್ದುವ, ತಿರುಚುವ ಕೆಲಸ ಆಗಬಾರದು' ಎಂದು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿ, 'ಬಸವಣ್ಣ ಜನಿವಾರ ನಿರಾಕರಣೆ ಮಾಡಿದ್ದು ಸತ್ಯ. ಇಂತಹ ವಾಸ್ತವವನ್ನು ಪಠ್ಯದಲ್ಲಿ ಪ್ರಕಟಿಸುವುದು ಒಳ್ಳೆಯದು. ಬಸವಣ್ಣ ಮಾನವನ ಬದುಕಿಗೆ ಬಹಳ ದೊಡ್ಡ ಕೊಡುಗೆ ನೀಡಿದವರು. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮಾರ್ಗದರ್ಶನ ಮಾಡಿದವರು. ಅವರ ಬಗ್ಗೆ ಅಪಚಾರ ಮಾಡಲು ಹೋಗಬಾರದು' ಎಂದು ಹೇಳಿದರು.

'ನೈತಿಕ ಶಿಕ್ಷಣ ನೀಡುವುದು ಇಂದಿನ ಅಗತ್ಯ. ಇದಕ್ಕೆ ಪೂರಕವಾದ ಪಠ್ಯ ರಚಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಹೇಳಿದರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಚಿತ್ರದುರ್ಗ.
ಸಂ: ಕಾ.ಸಾ.ಚಿ/ಪಿ.ಬಿ–1/ಅಲ್ಪಾವಧಿ ಟೆಂಡರ್ ಪ್ರಕಟಣೆ–ಐಎಫ್‌ಟಿ–11/2022–23/ ದಿನಾಂಕ: 01.06.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ **ಕೆ.ಡಬ್ಲ್ಯೂ–4** ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.
ಕಾಮಗಾರಿ ಹೆಸರು: 1) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಬೆಲಗೂರು–ಶ್ರೀರಾಂಪುರ ರಸ್ತೆಯ ಸೂಜಿಕಲ್ಲು ಅಮ್ಮನಹಳ್ಳಕ್ಕೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ. **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 400.00 ಲಕ್ಷ. **ಮುಂಗಡ ಠೇವಣಿ ಮೊತ್ತ:** ರೂ. 6,00,000/–. **ಕಾಲಾವಧಿ (ಮಳೆಗಾಲ ಸೇರಿ):** 06 ತಿಂಗಳು. 2) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಕನ್ನಾಗೊಂದಿ ಬೋವಿಹಟ್ಟಿ ಹತ್ತಿರ ವೇದಾವತಿ ನದಿಗೆ ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ. **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 490.00 ಲಕ್ಷ. **ಮುಂಗಡ ಠೇವಣಿ ಮೊತ್ತ:** ರೂ. 7,35,000/–. **ಕಾಲಾವಧಿ (ಮಳೆಗಾಲ ಸೇರಿ):** 06 ತಿಂಗಳು. 3) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಕೊರಟಿಕೆರೆ ಹತ್ತಿರ ಹಳ್ಳಕ್ಕೆ (ಭೂತಪ್ಪನ ದೇವಸ್ಥಾನದ) ಹತ್ತಿರ ಚೆಕ್ ಡ್ಯಾಂ ಬ್ರಿಡ್ಜ್ ನಿರ್ಮಾಣ. **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 400.00 ಲಕ್ಷ. **ಮುಂಗಡ ಠೇವಣಿ ಮೊತ್ತ:** ರೂ. 6,00,000/–. **ಕಾಲಾವಧಿ (ಮಳೆಗಾಲ ಸೇರಿ):** 06 ತಿಂಗಳು. 4) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಕಂಗುವಳ್ಳಿ ಹತ್ತಿರ ಹಳ್ಳಕ್ಕೆ ಹತ್ತಿರ ಚೆಕ್ ಡ್ಯಾಂ ಬ್ರಿಡ್ಜ್ ನಿರ್ಮಾಣ. **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 300.00 ಲಕ್ಷ. **ಮುಂಗಡ ಠೇವಣಿ ಮೊತ್ತ:** ರೂ. 4,50,000/–. **ಕಾಲಾವಧಿ (ಮಳೆಗಾಲ ಸೇರಿ):** 06 ತಿಂಗಳು. 5) ಪ್ಯಾಕೇಜ್–01: ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಮಳಲಿ ಹತ್ತಿರ ಲಿಂಗದಾಳೇಶ್ವರ ದೇವಸ್ಥಾನದ ಹತ್ತಿರ ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ ಮತ್ತು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಕಡದಿನಕೆರೆ ದೇವಿನಹಳ್ಳಿ ಮಧ್ಯ ಹಳ್ಳಕ್ಕೆ ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ. **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 400.00 ಲಕ್ಷ. **ಮುಂಗಡ ಠೇವಣಿ ಮೊತ್ತ:** ರೂ. 6,00,000/–. **ಕಾಲಾವಧಿ (ಮಳೆಗಾಲ ಸೇರಿ):** 06 ತಿಂಗಳು. 6) ಪ್ಯಾಕೇಜ್–2: ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಮಸಣಿಹಳ್ಳ ಹತ್ತಿರ ಖಾನೆ ಹಳ್ಳಕ್ಕೆ (ಸರ್ಕಾರಿ ಹಳ್ಳ) ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ ಮತ್ತು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಕೆಂಕೆರೆ ಹತ್ತಿರದ ಕಡುವಾಳ ಹಳ್ಳಕ್ಕೆ ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ. **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 460.00 ಲಕ್ಷ. **ಮುಂಗಡ ಠೇವಣಿ ಮೊತ್ತ:** ರೂ. 6,90,000/–. **ಕಾಲಾವಧಿ (ಮಳೆಗಾಲ ಸೇರಿ):** 06 ತಿಂಗಳು. 7) ಪ್ಯಾಕೇಜ್–1: ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ದುಗ್ಗಾವರ–ಪಾಪೇನಹಳ್ಳಿ ಮಧ್ಯೆ ಹರಿಯುವ ಹಳ್ಳಕ್ಕೆ ಬ್ರಿಡ್ಜ್ ಕಂ ಬ್ಯಾರೇಜ್ ಮತ್ತು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಗೂಳಿಹಟ್ಟಿ ಮಲ್ಲಾಪುರ ಮಧ್ಯೆ ಹರಿಯುವ ಹಿರೇಹಳ್ಳಕ್ಕೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ. **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 400.00 ಲಕ್ಷ. **ಮುಂಗಡ ಠೇವಣಿ ಮೊತ್ತ:** ರೂ. 6,00,000/–. **ಕಾಲಾವಧಿ (ಮಳೆಗಾಲ ಸೇರಿ):** 06 ತಿಂಗಳು.
ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 06.06.2022ರಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 16.06.2022 ಸಾಯಂಕಾಲ 05:30ರ ವರೆಗೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 17.06.2022ರ ಸಾಯಂಕಾಲ 04:00 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ: 18.06.2022 ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ). ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 20.06.2022 ಬೆಳಗ್ಗೆ 10:30 ಗಂಟೆಯ ನಂತರ (ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–25501216/080–25501227ರಿಂದ ಪಡೆಯಬಹುದು.
RO No. 198: DIPR/CTA/MCA/2022-23 ಸಹಿ/– ಕಾರ್ಯಪಾಲಕ ಇಂಜಿನಿಯರ್

ಆಸ್ತಿ ಘೋಷಿಸಲು ನಿರ್ಧರಿಸಿದ ರೈತ ಮುಖಂಡ

ಚಾಮರಾಜನಗರ: ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಅವರ ವಿರುದ್ಧ ಭ್ರಷ್ಟಾಚಾರದ ಆರೋಪ ಕೇಳಿ ಬಂದ ಬೆನ್ನಲ್ಲೇ, ಅವರ ಬಣದಲ್ಲಿ ಗುರುತಿಸಿ-ಕೊಂಡಿದ್ದ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಹೊನ್ನೂರು ಪ್ರಕಾಶ್ ಅವರು ತಮ್ಮ ಆಸ್ತಿ ವಿವರಗಳನ್ನು ಬಹಿರಂಗವಾಗಿ ಘೋಷಿಸಲು ನಿರ್ಧರಿಸಿದ್ದಾರೆ.

ಹೊನ್ನೂರು ಪ್ರಕಾಶ್

ರೈತರ ಪರವಾಗಿ ಹೋರಾಟ ನಡೆಸುವವರ ವ್ಯವಹಾರಗಳು ಪಾರದರ್ಶಕವಾಗಿರಬೇಕು ಎಂಬ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿರುವುದಾಗಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಜೆಎನ್‌ಯು: ಕೊಳೆತ ಶವ ಪತ್ತೆ

ನವದೆಹಲಿ (ಪಿಟಿಐ): ಜವಹಾರ್ ಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಅರಣ್ಯ ಪ್ರದೇಶದಲ್ಲಿ ಸುಮಾರು 40 ರಿಂದ 45 ವರ್ಷದ ವ್ಯಕ್ತಿಯೊಬ್ಬರ ಶವ ನೇಣು ಬಿಗಿದ ಸ್ಥಿತಿಯಲ್ಲಿ ಶುಕ್ರವಾರ ಪತ್ತೆಯಾಗಿದೆ. ಶವ ಕೊಳೆತ ಸ್ಥಿತಿಯಲ್ಲಿದ್ದು, ಗುರುತು ಪತ್ತೆಯಾಗಿಲ್ಲ.

ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಲ್ಲೇ ವಾರ್ಡ್‌ಗಳ ಸಂಖ್ಯೆ ಏರಿಕೆ ಆರೋಪ

'ವಾರ್ಡ್ ಮರು ವಿಂಗಡಣೆ: ಕೇಶವಕೃಪಾದಲ್ಲಿ ಸಿದ್ಧವಾದ ವರದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಾರ್ಡ್ ಮರು ವಿಂಗಡಣೆ ಕರಡು ಸಿದ್ಧವಾಗಿದ್ದು, ಇದು ಬಿಬಿಎಂಪಿ ಕಚೇರಿಗೆ ಬದಲು ಕೇಶವಕೃಪಾದಲ್ಲಿ ತಯಾರಾದ ವರದಿ ಎಂಬ ಆರೋಪ ವ್ಯಕ್ತವಾಗಿದೆ.

298 ವಾರ್ಡ್‌ಗಳನ್ನು 243ಕ್ಕೆ ಏರಿಕೆ ಮಾಡಿ, ವಾರ್ಡ್‌ಗಳನ್ನು ಮರು ವಿಂಗಡಣೆ ಮಾಡಲಾಗಿದೆ. ಮೂಲಗಳಿಂದ ಲಭ್ಯವಿರುವ ಪಟ್ಟಿ ಗಮನಿಸಿದರೆ, ಬಿಜೆಪಿ ಶಾಸಕರು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರಗಳಲ್ಲೇ ವಾರ್ಡ್‌ಗಳ ಸಂಖ್ಯೆ ಹೆಚ್ಚಾಗಿದೆ.

ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ (8 ರಿಂದ 13ಕ್ಕೆ ಏರಿಕೆ), ಬೊಮ್ಮನಹಳ್ಳಿ(7-14), ಕೆ.ಆರ್. ಪುರ(9-13), ಮಹದೇವಪುರ(8-12), ರಾಜರಾಜೇಶ್ವರಿನಗರ(9-13), ಯಶವಂತಪುರ(5-8) ಕ್ಷೇತ್ರಗಳಲ್ಲೇ ವಾರ್ಡ್‌ಗಳ ಸಂಖ್ಯೆ ಏರಿಕೆಯಾಗಿವೆ. ಜೆಡಿಎಸ್ ಪ್ರತಿನಿಧಿಸುವ ದಾಸರಹಳ್ಳಿ(8-13), ಕಾಂಗ್ರೆಸ್ ಪ್ರತಿನಿಧಿಸುವ ಬ್ಯಾಟರಾಯನಪುರ(7-11) ಕ್ಷೇತ್ರಗಳಲ್ಲೂ ವಾರ್ಡ್‌ಗಳ ಸಂಖ್ಯೆ ಏರಿಕೆಯಾಗಿದೆ.

ಹತ್ತು ಕ್ಷೇತ್ರಗಳಲ್ಲಿ ವಾರ್ಡ್‌ಗಳ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ

ಆಗಿಲ್ಲ. ಶಿವಾಜಿನಗರದಲ್ಲಿ ಈ ಹಿಂದೆ 7 ವಾರ್ಡ್‌ಗಳಿದ್ದವು. ಈಗ 6 ವಾರ್ಡ್‌ಗಳಿಗೆ ಇಳಿಸಲಾಗಿದೆ. ಇದೊಂದೇ ಕ್ಷೇತ್ರದಲ್ಲಿ ವಾರ್ಡ್‌ಗಳ ಸಂಖ್ಯೆ ಇಳಿಕೆಯಾಗಿದೆ.

'ಬಿಬಿಎಂಪಿ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ವಾರ್ಡ್ ಮರು ವಿಂಗಡಣಾ ಸಮಿತಿ ಇದೆ. ಆದರೆ, ಬಿಜೆಪಿಯ ಶಾಸಕರು, ಸಂಸದರು ಮತ್ತು ಆರ್‌ಎಸ್‌ಎಸ್ ಕಚೇರಿ ಕೇಶವ-ಕೃಪಾದಲ್ಲಿ ಈ ಕರಡು ತಯಾರಾಗಿದೆ. ಅದನ್ನು ಬಿಬಿಎಂಪಿ ಅಧಿಕಾರಿಗಳು ಈಗ ಸರ್ಕಾರಕ್ಕೆ ಸಲ್ಲಿಸುತ್ತಿದ್ದಾರೆ' ಎಂದು ಕಾಂಗ್ರೆಸ್ ಶಾಸಕ ರಾಮಲಿಂಗಾರೆಡ್ಡಿ ಆರೋಪಿಸಿದರು.

'ಅವೈಜ್ಞಾನಿಕವಾಗಿ ವಾರ್ಡ್ ಮರುವಿಂಗಡಣೆ ಮಾಡಲಾಗಿದೆ. ಈ ಬಗ್ಗೆ ಮೊದಲಿಂದಲೂ ನಾನು ಆಕ್ಷೇಪ ವ್ಯಕ್ತಪಡಿಸುತ್ತಿದ್ದೇನೆ. ಆದರೂ ಬಿಜೆಪಿಯವರು ತಮಗೆ ಬೇಕಾದಂತೆ ವಿಂಗಡಣೆ ಮಾಡಿಕೊಂಡಿದ್ದಾರೆ. ಕರಡು ಪ್ರಕಟವಾದ ಬಳಿಕ ಆಕ್ಷೇಪಣೆ ಸಲ್ಲಿಸುತ್ತೇನೆ' ಎಂದು ತಿಳಿಸಿದರು.

2011ರ ಜನಗಣತಿಯಲ್ಲಿನ ಜನಸಂಖ್ಯೆ ಆಧರಿಸಿ ವಾರ್ಡ್‌ಗಳನ್ನು ವಿಂಗಡಿಸಲಾಗಿದೆ. ಹೊರ ವಲಯದಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿರುವುದರಿಂದ ವಾರ್ಡ್‌ಗಳ ಸಂಖ್ಯೆ ಸ್ವಾಭಾವಿಕವಾಗಿ ಏರಿಕೆಯಾಗಿದೆ ಎಂಬುದು ಬಿಬಿಎಂಪಿ ಅಧಿಕಾರಿಗಳ ಸ್ಪಷ್ಟನೆ.

'ಹೊರ ವಲಯದಲ್ಲಿ ಜನಸಂಖ್ಯೆ ಹೆಚ್ಚಾಗಿದೆ'

'ಜನಸಂಖ್ಯೆ ಆಧರಿಸಿ ವಾರ್ಡ್‌ಗಳ ಮರು ವಿಂಗಡಣೆಯನ್ನು ಅಧಿಕಾರಿಗಳು ಮಾಡಿದ್ದಾರೆ. ಹೊರ ವಲಯದಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಆ ಕ್ಷೇತ್ರಗಳಲ್ಲಿ ವಾರ್ಡ್‌ಗಳ ಸಂಖ್ಯೆ ಏರಿಕೆಯಾಗಿದೆ' ಎಂದು ಬಿಜೆಪಿ ಶಾಸಕ ಎಸ್. ಸುರೇಶ್‌ಕುಮಾರ್ ಸ್ಪಷ್ಟಪಡಿಸಿದರು.



ಎಸ್. ಸುರೇಶ್ ಕುಮಾರ್

'ಹೊರ ವಲಯದಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಸಂಸ್ಕೃತಿ ಹೆಚ್ಚುತ್ತಿದೆ. ಜನಸಂಖ್ಯೆಯೂ ಏರಿಕೆಯಾಗುತ್ತಿದೆ. ನಾನು ಪ್ರತಿನಿಧಿಸುವ ರಾಜಾಜಿನಗರ ಕ್ಷೇತ್ರದಲ್ಲಿ ವಾರ್ಡ್‌ಗಳ ಸಂಖ್ಯೆ ಏರಿಕೆಯಾಗಿಲ್ಲ, ಇಳಿಕೆಯೂ ಆಗಿಲ್ಲ. ಶಿವಾಜಿನಗರದಲ್ಲಿ ಜನಸಂಖ್ಯೆ ಕಡಿಮೆ ಆಗಿರುವುದರಿಂದ ಒಂದು ವಾರ್ಡ್ ಕಡಿಮೆಯಾಗಿದೆ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ವಾರ್ಡ್‌ಗೆ ಹೆಸರು ನಾಮಕರಣ ಇಲ್ಲ'

'ವಾರ್ಡ್‌ಗಳಿಗೆ ಯಾವುದೇ ಹೆಸರು ನಾಮಕರಣ ಮಾಡಲು ಬಿಬಿಎಂಪಿ ಶಿಫಾರಸು ಮಾಡಿಲ್ಲ' ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಕಂದಾಯ) ಆರ್.ಎಲ್.ದೀಪಕ್ ಸ್ಪಷ್ಟಪಡಿಸಿದರು.

ರಾಮಲಿಂಗಾ ರೆಡ್ಡಿ

'ವಾರ್ಡ್ ಅಥವಾ ರಸ್ತೆಗಳಿಗೆ ಹೆಸರಿಡಲು ಬಿಬಿಎಂಪಿ ಮೂಲಕವೇ ಸರ್ಕಾರಕ್ಕೆ ಪ್ರಸ್ತಾವನೆ ಹೋಗಬೇಕು. ಈ ರೀತಿಯ ಯಾವುದೇ ಪ್ರಕ್ರಿಯೆ ಆರಂಭಿಸಿಲ್ಲ' ಎಂದರು.

'ಹೊಸ ವಾರ್ಡ್‌ಗಳಿಗೆ ಆರ್‌ಎಸ್‌ಆರ್ ಮತ್ತು ಬಿಜೆಪಿ ನಾಯಕರ ಹೆಸರುಗಳನ್ನು ನಾಮಕರಣ ಮಾಡಲಾಗುತ್ತಿದೆ ಎಂಬುದು ಸುಳ್ಳು. ಹೆಸರು ಸೂಚಿಸಿ ಯಾರಿಂದಲೂ ಸಲಹೆಗಳು ಬಂದಿಲ್ಲ' ಎಂದರು.

ಸುದ್ದಿ 2 ನಿಮಿಷ

'ದೇಶವನ್ನು ಪಾತಾಳಕ್ಕೆ ತಳ್ಳಿರುವುದೇ ಮೋದಿ ಸಾಧನೆ'

ಬೆಂಗಳೂರು: ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದ ದೇಶವನ್ನು ಅತ್ಯಂತ ಕೆಟ್ಟ ನಿರ್ಧಾರಗಳ ಮೂಲಕ ಪಾತಾಳಕ್ಕೆ ತಳ್ಳಿರುವುದೇ ಪ್ರಧಾನಿ ನರೇಂದ್ರ ಮೋದಿ ಎಂಟು ವರ್ಷಗಳ ಅವಧಿಯಲ್ಲಿ ಮಾಡಿರುವ ಸಾಧನೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಮೋದಿ ನೇತೃತ್ವದ ಸರ್ಕಾರ ಹಣದುಬ್ಬರ ನಿಯಂತ್ರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ರೂಪಾಯಿ ಮೌಲ್ಯದ ಪಾತಾಳಕ್ಕೆ ಕುಸಿದಿದೆ. ಬೆಲೆ ಏರಿಕೆ ಹಿಂದೆಂದೂ ಕಾಣದಷ್ಟು ಗರಿಷ್ಠ ಮಟ್ಟ ತಲುಪಿದೆ. ದೇಶದ ಜನರು ಕಷ್ಟಪಟ್ಟು ನಿರ್ಮಿಸಿದ್ದ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ ಬಿಡಿಗಾಸಿಗೆ ಮಾರಾಟ ಮಾಡುವ ಕೆಲಸವನ್ನು ಕೇಂದ್ರದ ಬಿಜೆಪಿ ಸರ್ಕಾರ ಮಾಡುತ್ತಿದೆ' ಎಂದು ಟೀಕಿಸಿದ್ದಾರೆ.

ಮೋದಿ ಪ್ರಧಾನಿಯಾಗುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಸಾಲದ ಮೊತ್ತವು ₹ 53.11 ಲಕ್ಷ ಕೋಟಿಯಷ್ಟಿತ್ತು. ಈಗ ಸಾಲದ ಮೊತ್ತ 139.57 ಲಕ್ಷ ಕೋಟಿಗೆ ತಲುಪಿದೆ. ದೇಶವನ್ನು ಸಾಲದ ಸುಳಿಗೆ ಸಿಲುಕಿಸಿರುವುದೇ ಎಂಟು ವರ್ಷಗಳ ಅವಧಿಯ ದೊಡ್ಡ ಸಾಧನೆ. ಕೇಂದ್ರ ಸರ್ಕಾರದ ತಪ್ಪು ನೀತಿಗಳ ಪರಿಣಾಮವಾಗಿ ರಾಜ್ಯ ಸರ್ಕಾರಗಳ ಸಾಲವೂ ದುಪ್ಪಟ್ಟಾಗಿದೆ. ದೇಶದ ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಪ್ರಮಾಣದ ಲೆಕ್ಕವನ್ನೂ ಕೇಂದ್ರ ಸರ್ಕಾರ ನಿಖರವಾಗಿ ತಿಳಿಸುತ್ತಿಲ್ಲ. ಎಂದು ವಾಗ್ದಾಳಿ ನಡೆಸಿದ್ದಾರೆ.

ಉನ್ನತ ಶಿಕ್ಷಣ ಇಲಾಖೆಗೆ ನೋಟಿಸ್

ಬೆಂಗಳೂರು: ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) ಕುಲಪತಿ ಹುದ್ದೆಯಿಂದ ಎಸ್.ವಿದ್ಯಾಶಂಕರ್ ಅವರನ್ನು ವಜಾಗೊಳಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಉನ್ನತ ಶಿಕ್ಷಣ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಮೈಸೂರು ವಿಶ್ವವಿದ್ಯಾಲಯದ ಪಿಎಂಇ (ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ) ಮಂಡಳಿ ಸದಸ್ಯ ಕೆ. ಮಹದೇವ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ, ಕುಲಪತಿ ವಿದ್ಯಾಶಂಕರ್ ಸೇರಿದಂತೆ ನಾಲ್ವರು ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಕೆಎಸ್‌ಒಯು ಕುಲಪತಿ ಹುದ್ದೆಗೆ ಎಸ್.ವಿದ್ಯಾಶಂಕರ್ ಅವರನ್ನು 2019ರ ಮೇ 30ರಂದು ನೇಮಕ ಮಾಡಲಾಗಿತ್ತು. 2022ರ ಮೇ 30ಕ್ಕೆ ಅವರ ಅಧಿಕಾರಾವಧಿ ಮುಕ್ತಾಯವಾಗಬೇಕಿತ್ತು. ಆದರೆ, ಪುನಃ ಒಂದು ವರ್ಷದ ಅವಧಿಗೆ ವಿಸ್ತರಿಸಿ ರಾಜ್ಯಪಾಲರು 2022ರ ಏಪ್ರಿಲ್ 6ರಂದು ಆದೇಶಿಸಿದ್ದರು. ಈ ಆದೇಶವನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ.

'ಪರೀಕ್ಷೆಯಲ್ಲಿ ಸಾಮೂಹಿಕ ನಕಲು ಮಾಡಲು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂಬ ಆರೋಪ ಅವರ ಮೇಲಿದೆ. ಆದರೂ ವಿದ್ಯಾಶಂಕರ್ ಅವರನ್ನು ಕೆಎಸ್‌ಒಯು ಕುಲಪತಿ ಹುದ್ದೆಗೆ ಮೂರು ವರ್ಷದ ಅವಧಿಗೆ ನೇಮಿಸಿ 2019ರ ಮೇ 30ರಂದು ರಾಜ್ಯಪಾಲರು ಆದೇಶಿಸಿದ್ದಾರೆ' ಎಂಬುದು ಅರ್ಜಿದಾರರು ಆಕ್ಷೇಪ.

ಮಹನೀಯರ ಚಿಂತನೆ ದೂರ ಮಾಡುವ ಹುನ್ನಾರ: ಪ್ರೊ.ಜಾಫೆಟ್ ಆತಂಕ

ಬೆಂಗಳೂರು: 'ಕನ್ನಡ ಭಾಷೆ ವಿವೇಕವನ್ನು ಕ್ಷಣಮಾತ್ರದಲ್ಲಿ ವಿರೂಪಗೊಳಿಸುವ ಕೆಲಸವನ್ನು ಪಠ್ಯಪುಸ್ತಕ ಪರಿಷ್ಕರಣೆಯ ಹೆಸರಿನಲ್ಲಿ ಮಾಡಲಾಗಿದೆ' ಎಂದು ಬೆಂಗಳೂರು ನಗರ ವಿ.ವಿಯ ವಿಶ್ರಾಂತ ಕುಲಪತಿ ಪ್ರೊ.ಜಾಫೆಟ್ ಆತಂಕ ವ್ಯಕ್ತಪಡಿಸಿದ್ದಾರೆ ಎಂದು ಅವರು ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಶಾಲಾ ಪಠ್ಯ ಪುಸ್ತಕಗಳಲ್ಲಿ ಎಡಪಂಥೀಯ ಧೋರಣೆಗಳು ಅಡಕಗೊಂಡಿವೆ' ಎಂದು ಆರೋಪಿಸಿ, ಕನ್ನಡ ವಿವೇಕಕ್ಕೆ ಅನ್ವರ್ಥವಾಗಿದ್ದ ಪಿ.ಲಂಕೇಶ್, ಎಲ್. ಬಸವರಾಜು ಅವರಂತಹ ವಿದ್ವಾಂಸರ ಬರಹಗಳನ್ನು ಪಠ್ಯಗಳಿಂದ ಕಿತ್ತುಹಾಕಲಾಗಿದೆ. ಹುಸಿ ರಾಷ್ಟ್ರಭಕ್ತಿಯ ಮನೋರೋಗವನ್ನು ಮಕ್ಕಳಿಗೆ ಪರಿಚಯಿಸುವ ಮೂಲಕ ಈ ನೆಲದಲ್ಲಿ ಬುದ್ಧ, ಬಸವ, ಮಹಾತ್ಮ ಗಾಂಧಿ, ನಾರಾಯಣ ಗುರು, ಅಂಬೇಡ್ಕರ್, ಸಾವಿತ್ರಿಬಾಯಿ ಫುಲೆ ಅವರ ಚಿಂತನೆಗಳನ್ನು ಮಕ್ಕಳಿಂದ ನಿಧಾನವಾಗಿ ದೂರ ಮಾಡುವ ಯೋಜನೆ ಕಾಣಿಸುತ್ತಿದೆ. ಪಠ್ಯಕ್ರಮ ಮತ್ತು ಪಠ್ಯಗಳನ್ನು ವಿದ್ಯಾರ್ಥಿಗಳ ವಯೋಮಾನವನ್ನು ಆಧರಿಸಿ ರೂಪುಗೊಳಿಸಬೇಕು. ಪ್ರಾಥಮಿಕ ಹಂತದಲ್ಲಿ ಜೀವನ ಮೌಲ್ಯಗಳು ಹಾಗೂ ಪ್ರೌಢ ಶಿಕ್ಷಣದಲ್ಲಿ ವಿಷಯವಾರು ಮಾಹಿತಿಗಳು ಮಕ್ಕಳಿಗೆ ಲಭ್ಯವಾಗುವಂತಿರಬೇಕು ಎಂಬುದು ಶಿಕ್ಷಣ ತಜ್ಞರ ಅಭಿಪ್ರಾಯ. ಆದರೆ, ಚಕ್ರತೀರ್ಥ ಅವರ ಮೂಲಕ ಪರಿಷ್ಕರಣಾ ಸಮಿತಿಯು ಕಲ್ಪಿತ ಹಿಂದೂ ರಾಷ್ಟ್ರದ ನಿರ್ಮಾಣಕ್ಕೆ ಬೇಕಿರುವ ಭಾವನಾತ್ಮಕ ಮೌಢ್ಯವನ್ನು ಮಕ್ಕಳಿಗೆ ಹಾಲಿನ ಜೊತೆ ವಿಷ ಬೆರೆಸಿಕೊಡುವಂತೆ ವಿನ್ಯಾಸಗೊಳಿಸಿದೆ' ಎಂದು ದೂರಿದ್ದಾರೆ.

'ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಪರಿಷ್ಕರಣ ಸಮಿತಿಯ ಅವೈಜ್ಞಾನಿಕ ನಿಲುವಿಗೆ ಬೆಂಬಲವಾಗಿ ನಿಂತಿರುವುದು ಮಾತ್ರ ವಿಷಾದನೀಯ' ಎಂದಿದ್ದಾರೆ.

ಡಿ.ಎಸ್. ಚೌಗಲೆ ಬೇಸರ • ಹಳೆಯ ಪಠ್ಯಪುಸ್ತಕ ಮುಂದುವರಿಸಲು ಆಗ್ರಹ

'ಪಠ್ಯ ತಿರುಚುವಿಕೆ ಮಕ್ಕಳಿಗೆ ಮಾಡುವ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲಾ ಪಠ್ಯಪುಸ್ತಕದಲ್ಲಿ ಬಸವಣ್ಣನವರ ವಿಚಾರಗಳನ್ನು ತಿರುಚಿ, ರಾಜಕೀಯ ದೃಷ್ಟಿಯಿಂದ ವಿಚಾರಗಳನ್ನು ಬೋಧಿಸಲು ಪ್ರಯತ್ನಿಸುವುದು ಮಕ್ಕಳಿಗೆ ಮಾಡುವ ದೊಡ್ಡ ಅನ್ಯಾಯ' ಎಂದು ನಾಟಕಕಾರ ಡಿ.ಎಸ್. ಚೌಗಲೆ ಬೇಸರಿಸಿದರು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ನಗರದಲ್ಲಿ ಶುಕ್ರವಾರ ಆಯೋಜಿಸಿದ 2022-23ನೇ ಸಾಲಿನ ಶರಣ ಸಾಹಿತ್ಯ ಪರಿಷತ್ತಿನ ದತ್ತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. 'ವಚನ ಸಾಹಿತ್ಯ ಇವತ್ತಿನ ಎಲ್ಲ ಸಮಸ್ಯೆಗಳಿಗೆ ಧೈರ್ಯವಾಗಿ ಉತ್ತರಿಸಬಲ್ಲ ಏಕೈಕ ಸಾಧನ. ಬಸವಣ್ಣನವರು ಸಂವಿಧಾನಲ್ಲಿ ಅಳವಡಿಕೆಯಾಗಿರುವ ವಿಚಾರಗಳನ್ನು 800 ವರ್ಷಗಳ ಹಿಂದೆಯೇ ಅನುಭವ ಮಂಟಪದಲ್ಲಿ ಪ್ರತಿಪಾದಿಸಿದ್ದರು.

ಕಾರ್ಯಕ್ರಮದಲ್ಲಿ ಆರ್.ಜಿ.ಹಳ್ಳಿ ನಾಗರಾಜ್ ಹಾಗೂ ಕೆ.ವಿ. ನಾಗರಾಜಮೂರ್ತಿ ಸಮಾಲೋಚನೆ ನಡೆಸಿದರು. ಡಿ.ಎಸ್. ಚೌಗಲೆ, ಪರಿಷತ್ತಿನ ಕಾರ್ಯದರ್ಶಿ ದಿಬ್ಬೂರು ಗಿರೀಶ್ ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ದಯಾನಂದ್ ಪಾಟೀಲ ಇದ್ದಾರೆ.

ಇದರಿಂದಲೇ ಅವರ ವಚನ ಸಾಹಿತ್ಯ ಮತ್ತು ಸಮಸಮಾಜದ ಕಲ್ಪನೆಯ ಅರಿವು ನಮಗಾಗುತ್ತದೆ' ಎಂದರು.

ಪತ್ರಕರ್ತ ಆರ್.ಜಿ.ಹಳ್ಳಿ ನಾಗರಾಜ್, 'ಸಮಸಮಾಜದ ಕಲ್ಪನೆಯಲ್ಲಿ ಬಸವಣ್ಣನವರಷ್ಟೇ ಇತರ ಕೆಳವರ್ಗದ ವಚನಕಾರರು ದೊಡ್ಡ ಕೊಡುಗೆ ನೀಡಿದ್ದಾರೆ. ಸತ್ಯಕ್ಕ, ಅಕ್ಕಮ್ಮ, ಸೂಳೆ ಸಂಕವ್ವ ಅಂತಹವರು ತಮ್ಮ ವಿಚಾರಗಳ ಮೂಲಕ ಇಡೀ ಸಮಾಜವನ್ನು ಚಿಂತನಶೀಲವನ್ನಾಗಿಸಿದ್ದಾರೆ' ಎಂದು ತಿಳಿಸಿದರು.

ಪರಿಷತ್ತಿನ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, 'ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕ ಸಮಿತಿ ಮಾಡುತ್ತಿರುವ ಘೋರ ಅನ್ಯಾಯ ಯಾರೂ ಸಹಿಸಲು ಸಾಧ್ಯವಿಲ್ಲ. ಬಸವಣ್ಣನವರ ವಿಚಾರ ಗಳನ್ನು ತಿರುಚುವ, ಬಸವಣ್ಣನವರ ಬಗ್ಗೆ ತಪ್ಪು ಕಲ್ಪನೆಗಳನ್ನು ವಿದ್ಯಾರ್ಥಿಗಳಲ್ಲಿ ಬಿತ್ತುವ ವೈದಿಕ ತಂತ್ರ ಇಂದು ಅತ್ಯಂತ ಪ್ರಬಲವಾಗಿ ಕೆಲಸ ಮಾಡುತ್ತಿದೆ. ಈ ಬಗ್ಗೆ ಹೋರಾಟ ಮಾಡಬೇಕು' ಎಂದು ಹೇಳಿದರು.

ಇದೇ ವೇಳೆ ಶಿಕ್ಷಣ ತಜ್ಞ ಪರಮೇಶ್ವರಪ್ಪ, 'ಹಳೆಯ ಪಠ್ಯಪುಸ್ತಕವನ್ನೇ ಮುಂದುವರೆಸಬೇಕು. ಹಾಲಿ ಪಠ್ಯಪುಸ್ತಕ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾ ಮಾಡಬೇಕು' ಎಂದು ಆಗ್ರಹಿಸಿದರು. ಇದಕ್ಕೆ ಸಭಿಕರು ಒಕ್ಕೊರಲ ಸಮ್ಮತಿ ಸೂಚಿಸಿದರು.

ಲೋಕ–ಆತ್ಮ ಕಲ್ಯಾಣಕ್ಕೆ ಮುಂದಾಗಲು ಸಲಹೆ

ಹೊಸದುರ್ಗ: ಮಕ್ಕಳೆಂದರೆ ಕೇವಲ ಅಂಕಗಳಿಕೆಯಲ್ಲ. ವಿದ್ಯಾರ್ಥಿಗಳು ತಮ್ಮ ಆಸೆಗಳನ್ನು ಬದಿಗೊತ್ತಿ ಸಾಧನೆ ಮೆರೆಯಬೇಕು ಎಂದು ಸಾಣೇಹಳ್ಳಿಯ ತರಳಬಾಳು ಶಾಖಾಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಭಗೀರಥ ಪೀಠದಲ್ಲಿ ಶುಕ್ರವಾರ ಆಯೋಜಿಸಿದ್ದ 'ಅಖಿಲ ಭಾರತ ಭಗೀರಥ ಜಯಂತ್ಯುತ್ಸವ ಹಾಗೂ ಉಪ್ಪಾರರ ಬೃಹತ್ ಸಮಾವೇಶದಲ್ಲಿ' ಸಾನ್ನಿಧ್ಯ ವಹಿಸಿ, 'ಮನುಷ್ಯ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು. ಒಡೆದು ಆಳುವ ನೀತಿಯನ್ನು ತೊರೆದು ಲೋಕ ಮತ್ತು ಆತ್ಮ ಕಲ್ಯಾಣಕ್ಕೆ ಸರ್ವರೂ ಮುಂದಾಗಬೇಕು. ಸಮಾಜ ಮತ್ತು ಲೋಕ ಕಲ್ಯಾಣಕ್ಕೆ ಪ್ರತಿಭಾವಂತರ ಅಗತ್ಯವಿದೆ' ಎಂದರು.

ಮಕ್ಕಳೊಂದಿಗೆ ಸಿಹಿ ಕ್ಷಣ

ವಿನಾಯಕ ಮಿತ್ರ ಮಂಡಳಿ ಟ್ರಸ್ಟ್ ಮತ್ತು ಪ್ರಭಾ ಕಣ್ಣಿನ ಆಸ್ಪತ್ರೆ ಆಯೋಜಿಸಿದ್ದ ಸಸಿ ನೆಡುವ ಕಾರ್ಯಕ್ರಮ ಮತ್ತು ಉಚಿತ ನೇತ್ರದಾನ ಶಿಬಿರ ಉದ್ಘಾಟಿಸಿದ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಮಕ್ಕಳಿಗೆ ನೋಟ್ ಬುಕ್‌ಗಳನ್ನು ವಿತರಿಸಿ ಕೆಲ ಕ್ಷಣಗಳನ್ನು ಕಳೆದರು. ಬಿಬಿಎಂಪಿ ಮಾಜಿ ಸದಸ್ಯ ಬಿ.ಸೋಮಶೇಖರ್, ಸಮಾಜ ಸೇವಕ ಮಹೇಂದ್ರ ಮುನ್ನೋತ್, ಪ್ರಭಾ ಕಣ್ಣಿನ ಆಸ್ಪತ್ರೆಯ ಡಾ.ಪ್ರವೀಣ್ ಆರ್.ಮೂರ್ತಿ ಇದ್ದರು –ಪ್ರಜಾವಾಣಿ ಚಿತ್ರ

'ಭಯೋತ್ಪಾದನೆ ಬೇಡ'

ನಾಗಪುರ(ಪಿಟಿಐ): 'ಯಾವುದೇ ಸಮುದಾಯವು ಭಯೋತ್ಪಾದನೆಯನ್ನು ಬೆಂಬಲಿಸಬಾರದು' ಎಂದು ಮೋಹನ್ ಭಾಗವತ್ ಹೇಳಿದ್ದಾರೆ.

ಗುರುವಾರ ಇಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂರನೇ ವರ್ಷದ ಅಧಿಕಾರಿ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, 'ಹಿಂದೂ ಸಮುದಾಯವು ಯಾವುದೇ ರೀತಿಯ ಉಗ್ರವಾದ ಸ್ವೀಕರಿಸುವುದಿಲ್ಲ. ಹಾಗಾಗಿಯೇ ಯಹೂದಿಗಳು ಅಥವಾ ಪಾರ್ಸಿಗಳು ಸೇರಿ ಎಲ್ಲ ರೀತಿಯ ಜನರು ಹಿಂದೂ ಸಮುದಾಯದ ಆಶ್ರಯ ಪಡೆದರು. ಹಿಂದೂಗಳು ತಮ್ಮ ಹಿಂದೂ ಗುಣ ಸುಧಾರಿಸಿಕೊಳ್ಳಬೇಕು. ಹೆಚ್ಚು ಶಕ್ತಿಶಾಲಿಯಾಗಬೇಕು. ಒಗ್ಗಟ್ಟಿನ ಹಿಂದೂ ಸಮುದಾಯವು ಜಾಗತಿಕ ಸಂಘರ್ಷಗಳನ್ನು ಪರಿಹರಿಸುವ ಮೂಲಕ ಹೊಸ ಜಗತ್ತನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ' ಎಂದು ಹೇಳಿದರು.

'ಎಲ್ಲರೂ ಪರಸ್ಪರರ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಗೌರವಿಸಬೇಕು. ಹೃದಯದಲ್ಲಿ, ಮಾತಿನಲ್ಲಿ ಅಥವಾ ಕೆಲಸದಲ್ಲಿ ಯಾವುದೇ ಉಗ್ರವಾದ ಇರಬಾರದು. ಎರಡೂ ಕಡೆಯಿಂದ ಬೆದರಿಕೆಯ ಮಾತುಗಳು ಇರಬಾರದು. ಹಿಂದೂಗಳ ಕಡೆಯಿಂದ ಬೆದರಿಕೆ ಕಡಿಮೆಯಾಗಿದೆ. ಹಿಂದೂಗಳು ಸಂಯಮ ಕಾಪಾಡಿಕೊಂಡಿದ್ದಾರೆ. ದೇಶ ವಿಭಜನೆಯ ವೇಳೆ ಹಿಂದೂಗಳು ಅಪಾರ ಬೆಲೆ ತೆತ್ತಿದ್ದಾರೆ' ಎಂದರು.

'ಮುಸ್ಲಿಮರ ಆರಾಧನಾ ವಿಧಾನ ಹೊರಗಿನಿಂದ ಬಂದಿದ್ದರೂ ಮುಸ್ಲಿಮರು ಹೊರಗಿನವರಲ್ಲ. ಅವರ ಮತ್ತು ನಮ್ಮ ಸಂಪ್ರದಾಯವು ಒಂದೇ ಆಗಿದೆ. ಕೆಲವು ರಾಷ್ಟ್ರೀಯವಾದಿ ಮುಸ್ಲಿಮರು ಅನೇಕ ಸ್ವಾತಂತ್ರ್ಯ ಹೋರಾಟಗಳಲ್ಲಿ ಹಿಂದೂಗಳೊಂದಿಗೆ ಕೈಜೋಡಿಸಿದ್ದಾರೆ. ಅವರು ನಮ್ಮ' ಭಾಗವತ್ ಹೇಳಿದರು.

'ಮುಸ್ಲಿಮರು ತಮ್ಮ ಸ್ವಂತ ಪೂರ್ವಜರ ವಂಶಸ್ಥರು ಮತ್ತು ರಕ್ತ ಸಂಬಂಧದಿಂದ ಸಹೋದರರು ಎಂಬುದನ್ನು ಹಿಂದೂಗಳು ಅರ್ಥ ಮಾಡಿಕೊಳ್ಳಬೇಕು. ಅವರು ಮಾತೃ ಧರ್ಮಕ್ಕೆ ವಾಪಸಾಗಲು ಬಯಸಿದರೆ ಅವರನ್ನು ನಾವು ಮುಕ್ತವಾಗಿ ಸ್ವಾಗತಿಸುತ್ತೇವೆ. ಅವರು ಹಿಂತಿರುಗದಿದ್ದರೂ ಪರವಾಗಿಲ್ಲ, ಎಲ್ಲರೂ ಅವರವರ ಧರ್ಮ ಅನುಸರಿಸಲಿ. ನಮ್ಮಲ್ಲಿ ಈಗಾಗಲೇ 33 ಕೋಟಿ ದೇವರುಗಳಿವೆ. ಇನ್ನಷ್ಟು ಸೇರಿಸಿಕೊಳ್ಳುತ್ತೇವೆ' ಎಂದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬಸವಣ್ಣರ ಪಠ್ಯ ಮತ್ತೆ ಪರಿಷ್ಕರಣೆ: ಸಿ.ಎಂ ಬೊಮ್ಮಾಯಿ ಸ್ಪಷ್ಟನೆ

ಒಂದನೇ ಪುಟದಿಂದ

ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಸಮಿತಿ ರಚಿಸಿದ ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ರಾಷ್ಟ್ರಕವಿ ಕುವೆಂಪು ಕುರಿತಾದ 7 ಗದ್ಯ ಮತ್ತು ಪದ್ಯಗಳು ಸೀಮಿತವಾಗಿದ್ದರೆ, ಪ್ರಸ್ತುತ ಪರಿಷ್ಕರಣಾ ಸಮಿತಿ 10ಕ್ಕೆ ಏರಿಸಿದೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ನಾಡಪ್ರಭು ಕೆಂಪೇಗೌಡರ ಕುರಿತಾದ ಪಾಠವನ್ನು ಹೊಸದಾಗಿ ಸೇರಿಸಲಾಗಿದೆ. ಈ ಹಿಂದಿನ ಪಠ್ಯ ಪುಸ್ತಕದಲ್ಲಿ ಪರಿಚಯಿಸಲಾಗಿದ್ದ ಇಸ್ಲಾಂ ಮತ್ತು ಕ್ರೈಸ್ತ ಧರ್ಮದ ಜೊತೆಗೆ ಹಿಂದೂ ಧರ್ಮದ ವಿಷಯವನ್ನೂ ಸೇರ್ಪಡೆ ಮಾಡಿ ಪರಿಚಯಿಸಲಾಗಿದೆ ಎಂದೂ ತಿಳಿಸಿದ್ದಾರೆ.

ಶಾಲಾ ಪಠ್ಯಕ್ರಮ ಕಾಲ ಕಾಲಕ್ಕೆ ತಕ್ಕಂತೆ ಪರಿಷ್ಕರಿಸಲಾಗುತ್ತದೆ. ಈ ಹಿಂದೆ ಜಾರಿಯಾದ ಕೆಲವು ಪಠ್ಯಪುಸ್ತಕದಲ್ಲಿ ಕೆಲವು ಆಕ್ಷೇಪಾರ್ಹ ಅಂಶಗಳಿದ್ದವು. ಆದ ಕಾರಣ ಸಮಾಜ ವಿಜ್ಞಾನ ಮತ್ತು ಕನ್ನಡ ಭಾಷಾ ವಿಷಯಕ್ಕೆ ಸಂಬಂಧಿಸಿದಂತೆ ಪಠ್ಯದಲ್ಲಿ ಅಲ್ಪ ಪರಿಷ್ಕರಣೆ ಮಾಡಲಾಗಿದೆ ಎಂದರು.

ಪಂಡಿತಾರಾಧ್ಯ ಸ್ವಾಮೀಜಿ ಮತ್ತು ಇತರ ಸ್ವಾಮೀಜಿಗಳು ಪಠ್ಯಪುಸ್ತಕದಲ್ಲಿ ಬಸವಣ್ಣನವರ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಆಕ್ಷೇಪಗಳನ್ನು ಎತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಬರಗೂರು ಸಮಿತಿಯಿಂದ ರಚಿತವಾದ ಪಠ್ಯಪುಸ್ತಕ ಮತ್ತು ಈಗಿನ ಪರಿಷ್ಕೃತ ಪಠ್ಯಪುಸ್ತಕದಲ್ಲಿ ಸಮಾನ ಅಂಶಗಳನ್ನು ಬಿಟ್ಟು, ಈಗಿನ ಪುಸ್ತಕದಲ್ಲಿ ಬಸವಣ್ಣ ಅವರ ವಿಷಯದ ಅಂಶವನ್ನು ಯಾರ ಭಾವನೆಗೂ ಧಕ್ಕೆ ಆಗದಂತೆ ಪರಿಷ್ಕರಿಸಲಾಗುವುದು ಎಂದೂ ಹೇಳಿದ್ದಾರೆ.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರ ಆಶಯದಂತೆ ಕುವೆಂಪು ಬರೆದ ನಾಡಗೀತೆಯನ್ನು ವಿಕೃತಗೊಳಿಸಿದವರ ವಿರುದ್ಧ ಸೈಬರ್ ಕ್ರೈಮ್ ಘಟಕದ ಮೂಲಕ ತನಿಖೆ ನಡೆಸಲಾಗುವುದು ಎಂದೂ ಅವರು ಹೇಳಿದ್ದಾರೆ.

ಪಿಯು ಪಠ್ಯ ಪರಿಷ್ಕರಣೆ ಕತೆಯೇನು?: ಪಿಯು ಪಠ್ಯಪುಸ್ತಕ ಪರಿಷ್ಕರಣೆಯನ್ನು ರೋಹಿತ್ ಚಕ್ರತೀರ್ಥ ಸಮಿತಿಗೆ ವಹಿಸಿ ಕಳೆದ ಫೆಬ್ರುವರಿಯಲ್ಲಿ ಆದೇಶ ಹೊರಡಿಸಲಾಗಿತ್ತು. ಆದರೆ, ಅದನ್ನು ರದ್ದುಪಡಿಸುವ ಬಗ್ಗೆ ಯಾವುದೇ ಮಾಹಿತಿಯನ್ನು ಮುಖ್ಯಮಂತ್ರಿ ನೀಡಿಲ್ಲ.

ಪಠ್ಯ ಪುಸ್ತಕ ಪರಿಷ್ಕರಣೆಯಲ್ಲಿ ಆದ ಎಡವಟ್ಟುಗಳನ್ನು 'ಪ್ರಜಾವಾಣಿ' ಪ್ರಕಟಿಸಿತ್ತು. ಈ ಬಗ್ಗೆ ನಾಡಿನಾದ್ಯಂತ ವ್ಯಾಪಕ ಆಕ್ರೋಶವೂ ವ್ಯಕ್ತವಾಗಿತ್ತು.

ಪಿಯು ಪಠ್ಯ ಪರಿಷ್ಕರಣೆ ಕತೆಯೇನು?

ಪಿಯು ಪಠ್ಯಪುಸ್ತಕ ಪರಿಷ್ಕರಣೆಯನ್ನು ರೋಹಿತ್ ಚಕ್ರತೀರ್ಥ ಸಮಿತಿಗೆ ವಹಿಸಿ ಕಳೆದ ಫೆಬ್ರುವರಿಯಲ್ಲಿ ಆದೇಶ ಹೊರಡಿಸಲಾಗಿತ್ತು. ಆದರೆ, ಅದನ್ನು ರದ್ದುಪಡಿಸುವ ಬಗ್ಗೆ ಯಾವುದೇ ಮಾಹಿತಿಯನ್ನು ಮುಖ್ಯಮಂತ್ರಿ ನೀಡಿಲ್ಲ.

ಪಠ್ಯ ಪುಸ್ತಕ ಪರಿಷ್ಕರಣೆಯಲ್ಲಿ ಆದ ಎಡವಟ್ಟುಗಳನ್ನು 'ಪ್ರಜಾವಾಣಿ' ಪ್ರಕಟಿಸಿತ್ತು. ಈ ಬಗ್ಗೆ ನಾಡಿನಾದ್ಯಂತ ವ್ಯಾಪಕ ಆಕ್ರೋಶವೂ ವ್ಯಕ್ತವಾಗಿತ್ತು.

ವಿದ್ಯಾರ್ಥಿಗಳಿಂದ ಪತ್ರಕರ್ತರ ವಿರುದ್ಧ ದೂರು

ಮಂಗಳೂರು: ಉಪ್ಪಿನಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಿಜಾಬ್ ವಿವಾದದ ಕುರಿತು ಮಾಹಿತಿ ಪಡೆಯಲು ಗುರುವಾರ ಕಾಲೇಜಿಗೆ ಹೋಗಿದ್ದ ಕೆಲವು ಪತ್ರಕರ್ತರಿಗೆ ವಿದ್ಯಾರ್ಥಿಗಳು ದಿಗ್ಬಂಧನ ಹಾಕಿರುವ ಸಂಬಂಧ ಪತ್ರಕರ್ತ ಅಜಿತ್‌ಕುಮಾರ್ ದೂರು ನೀಡಿದ್ದರು. ಪ್ರತಿಯಾಗಿ ವಿದ್ಯಾರ್ಥಿಗಳು ಮೂವರು ಪತ್ರಕರ್ತರ ವಿರುದ್ಧ ಶುಕ್ರವಾರ ಪ್ರತಿದೂರು ನೀಡಿದ್ದಾರೆ. 'ಉಪ್ಪಿನಂಗಡಿ ಕಾಲೇಜಿಗೆ ಶುಕ್ರವಾರ ಮಧ್ಯಾಹ್ನ ಸುಮಾರು 11.30ಕ್ಕೆ ವಿದ್ಯಾರ್ಥಿಗಳಲ್ಲದ ಮೂವರು ಅಪರಿಚಿತರು ಅಕ್ರಮವಾಗಿ ಪ್ರವೇಶ ಮಾಡಿದ್ದರು. ಶಾಲನ್ನು ಎಳೆಯಲು ಯತ್ನಿಸಿದ್ದರು' ಎಂದು ದೂರುದಾರರು ಉಪ್ಪಿನಂಗಡಿ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

ಬೆಂಗಳೂರು ರೇಸ್

ಲಾ ರೀನ ಗೆಲ್ಲುವ ನಿರೀಕ್ಷೆ

ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆ ಸಿವಿಲ್ ಸರ್ವೀಸ್ ಟ್ರೋಫಿಯ ಮೊದಲನೇ ಡಿವಿಷನ್ ರೇಸ್‌ನಲ್ಲಿ ಲಾ ರೀನ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಲೇಡಿ ಸುಪ್ರೆಮೋಸ್ 2, ಗೋಲ್ಡ್ ಗ್ರೇ 1, ಜೈ ವಿಕ್ರಮ್ 8
2ನೇ ರೇಸ್: ಪಾಲಿಶ್ಡ್ ಗರ್ಲ್ 7, ರೋಮನ್ ಪವರ್ (5), ಕ್ವೀನ್ಸ್‌ಟೌನ್ (8)
3ನೇ ರೇಸ್: ಫಾರೆವರ್ ಟುಗೆದರ್ 4, ಗ್ಯಾರಮಾಂಡ್ 5, ಕೇಪಬಲ್ 8
4ನೇ ರೇಸ್: ಲಾ ರೀನ 7, ಸ್ಟಾರ್ ಅಡ್ಮಿರಲ್ 4, ಗೋಲ್ಡನ್ ರಿಂಗ್ 2
5ನೇ ರೇಸ್: ಅಸ್ಕೊವಾಲ್ 8, ಲಾರ್ಡ್ ವೇಡರ್ 2, ಜನರಲ್ ಪ್ಯಾಟನ್ 3
6ನೇ ರೇಸ್: ಸ್ಟನ್ನಿಂಗ್ ಬ್ಯೂಟಿ 2, ಅಲ್ಟಿಮೇಟ್ ಸ್ಪೀಡ್ 5, ಫ್ರೆಡೆರಿಕೊ 3

ಉತ್ತಮ ಬೆಟ್: ಫಾರೆವರ್ ಟುಗೆದರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ರಾಷ್ಟ್ರೀಯ ಪಕ್ಷಗಳ ನಾಯಕರ ಗುಲಾಮಗಿರಿಗೆ ಸಾಕ್ಷಿ:ಅಬ್ರಾಹಾಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳನ್ನು ಪ್ರತಿನಿಧಿಸುವ ರಾಜ್ಯದ ನಾಯಕರಿಗೆ ರಾಜ್ಯಸಭೆಗೆ ಆಯ್ಕೆಯಾಗುವ ಯೋಗ್ಯತೆಯಿಲ್ಲವೇ' ಎಂದು ಸಾಮಾಜಿಕ ಹೋರಾಟಗಾರ ಅಬ್ರಹಾಂ ಟಿ.ಜಿ ಪ್ರಶ್ನಿಸಿದರು.

ರಾಜ್ಯದ ರಾಷ್ಟ್ರೀಯ ಪಕ್ಷಗಳ ಮುಖಂಡರಿಗೆ ರಾಜ್ಯಸಭೆಯ ಚುನಾವಣೆಗೆ ಕರ್ನಾಟಕದ ಅಭ್ಯರ್ಥಿಗಳನ್ನು ಆಯ್ಕೆ ಮಾಡದಿರುವುದು ನಾಚಿಕೆಗೇಡಿನ ಸಂಗತಿ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ನರಸತ್ತ ಬಿಜೆಪಿ ಸರ್ಕಾರದ ನಾಯಕರಿಗೆ ಧಮ್ ಇದ್ದರೆ, ರಾಜ್ಯದಿಂದ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೆ ಮತ ಹಾಕಿ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ, ಪಿ.ರಾಜೀವ್ ಮತ್ತು ಮಾಧುಸ್ವಾಮಿಯವರಿಗೆ ಸವಾಲು ಹಾಕಿದರು.

'ರಾಜ್ಯ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾದ ಶಾಸಕರಿಗೆ ರಾಜ್ಯದ ಬಗ್ಗೆ ಸ್ವಾಭಿಮಾನ, ಆತ್ಮಗೌರವವಿದ್ದರೆ, ಹೊರ ರಾಜ್ಯದ ಅಭ್ಯರ್ಥಿಗಳನ್ನು ತಿರಸ್ಕರಿಸಿ, ರಾಜ್ಯ ಕಾಂಗ್ರೆಸ್ ಪಕ್ಷದ 2ನೇ ನಾಮ ನಿರ್ದೇಶಿತ ಅಭ್ಯರ್ಥಿ ಹಾಗೂ ಬಿಜೆಪಿ 3ನೇ ನಾಮ ನಿರ್ದೇಶಿತ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು' ಎಂದು ಆಗ್ರಹಿಸಿದರು.

'ರಾಜ್ಯಕ್ಕೆ 2020-21, 2021-22 ಮೇ 31ರವೆಗೆ ಒಟ್ಟು 14,881 ಕೋಟಿ ಜಿಎಸ್‌ಟಿ ಪಾಲು ಬರಬೇಕಾಗಿತ್ತು. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರಾಜ್ಯಸಭೆಗೆ ನಾಮಪತ್ರ ಸಲ್ಲಿಸುವುದಕ್ಕೂ ಮುನ್ನ 8,633 ಕೋಟಿ ಹಣವನ್ನು ಬಿಡುಗಡೆಗೊಳಿಸಿದ್ದಾರೆ. ಇನ್ನೂ 6,248 ಕೋಟಿ ಜಿಎಸ್‌ಟಿ ಪರಿಹಾರದ ಹಣ ಬಾಕಿ ಇದೆ.

'15ನೇ ಹಣಕಾಸು ಆಯೋಗವು 2020-21ನೇ ಸಾಲಿನಲ್ಲಿ ರಾಜ್ಯದ ₹5,495 ಕೋಟಿ ವಿಶೇಷ ಅನುದಾನದ ಪ್ರಸ್ತಾವನೆಯನ್ನು ಇದೇ ನಿರ್ಮಲಾ ಸೀತಾರಾಮನ್ ತಿರಸ್ಕರಿಸಿದ್ದರು. ಇಂತಹ ರಾಜ್ಯದ್ರೋಹಿಯನ್ನು ಮತ್ತೆ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆ ಮಾಡುತ್ತಿರುವುದು ರಾಜ್ಯ ಬಿಜೆಪಿ ನಾಯಕರ ಗುಲಾಮಗಿರಿಗೆ ಸಾಕ್ಷಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರೀಕ್ಷೆ ಎದುರಿಸದೇ ಪದವಿ ವಿದ್ಯಾರ್ಥಿಗಳು ಉತ್ತೀರ್ಣ

ಕುವೆಂಪು ವಿ.ವಿ ನಿರ್ಧಾರ ಎತ್ತಿಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ಕೇಂದ್ರದ 2019-20ನೇ ಸಾಲಿನ ಪದವಿ ವಿದ್ಯಾರ್ಥಿಗಳಿಗೆ ಕೋವಿಡ್-19ರ ಕಾರಣಕ್ಕೆ ಪರೀಕ್ಷೆ ಎದುರಿಸದೇಉತ್ತೀರ್ಣಗೊಳಿಸಿ ಮುಂದಿನ ತರಗತಿಗಳಿಗೆ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಿದ್ದ ವಿಶ್ವವಿದ್ಯಾಲಯದ ಕುಲಪತಿ ನಿರ್ಧಾರವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಈ ಕುರಿತಂತೆ ಹಾಸನದ ಸುಜಲಾ ಕಾಲೇಜ್ ಆಫ್ ಕಾಮರ್ಸ್ ಸೇರಿದಂತೆ ಏಳು ಜನರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಲೇವಾರಿ ಮಾಡಿದೆ.

ಕೋವಿಡ್ ಕಾರಣಕ್ಕಾಗಿ ದೂರ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳನ್ನು ಅವರ ಹಿಂದಿನ ಸೆಮಿಸ್ಟರ್ ಅಥವಾ ಪರೀಕ್ಷೆಗಳಲ್ಲಿ ಪಡೆದ ಅಂಕಗಳು ಹಾಗೂ ಆಂತರಿಕ ಅಂಕಗಳ ಆಧಾರದಲ್ಲಿ ಉತ್ತೀರ್ಣಗೊಳಿಸಬೇಕು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನೀಡಿದ್ದ ಮಾರ್ಗಸೂಚಿಯನ್ನು ರಾಜ್ಯದಲ್ಲೂ ಅಳವಡಿಸಿಕೊಳ್ಳಲಾಗಿತ್ತು. ಇದರನ್ವಯ ಕುವೆಂಪು ವಿಶ್ವವಿದ್ಯಾಲಯ 2019-20ನೇ ಸಾಲಿನ ಪದವಿ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸದೆಯೇ ಮುಂದಿನ ತರಗತಿಗೆ ಉತ್ತೀರ್ಣಗೊಳಿಸಿತ್ತು.

ಏತನ್ಮಧ್ಯೆ, ಕುವೆಂಪು ವಿವಿ ಸಿಂಡಿಕೇಟ್ 2022ರ ಫೆಬ್ರುವರಿ 8ರಂದು ಸಭೆ ಸೇರಿ ಕುಲಪತಿಗಳ ಆದೇಶಕ್ಕೆ ತಕರಾರು ತೆಗೆದಿತ್ತು. ಈ ಆದೇಶವನ್ನು ರದ್ದುಪಡಿಸಲು ನಿರ್ಧರಿಸಿತು ಮತ್ತು ಯಾರೆಲ್ಲಾ ದೂರ ಶಿಕ್ಷಣ ಕೇಂದ್ರದಲ್ಲಿ ಮುಂದಿನ ತರಗತಿಗಳಿಗೆ ಪರೀಕ್ಷೆ ಬರೆಯದೆಯೇ ಉತ್ತೀರ್ಣರಾಗಿದ್ದಾರೊ ಅವರೆಲ್ಲಾ ಪರೀಕ್ಷೆ ಬರೆಯಬೇಕು ಎಂಬ ನಿರ್ಣಯವನ್ನು ಅಂಗೀಕರಿಸಿತು. ಈ ಕುರಿತಂತೆ ವಿಶ್ವವಿದ್ಯಾಲಯದ ಸಂಯೋಜಿತ ಅಧ್ಯಯನ ಕೇಂದ್ರಗಳಿಗೆ ಮಾಹಿತಿ ನೀಡಲಾಗಿತ್ತು.

ಮುಖ್ಯಾಂಶಗಳು

- ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾರ್ಗಸೂಚಿ ಅನುಸರಿಸಿದ್ದ ಕುಲಪತಿ
- ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿಂದ ರಿಟ್ ಅರ್ಜಿಯ ವಿಚಾರ
- ಕೋವಿಡ್ ಕಾರಣದಿಂದ ವಿದ್ಯಾರ್ಥಿಗಳನ್ನು ಉತ್ತೀರ್ಣ ಗೊಳಿಸಿದ್ದ ವಿವ

ಇದನ್ನು ಪ್ರಶ್ನಿಸಿ ವಿದ್ಯಾರ್ಥಿಗಳೂ ಸೇರಿದಂತೆ ಕೆಲವು ಅಧ್ಯಯನ ಕೇಂದ್ರಗಳು ಹೈಕೋರ್ಟ್ ಮೆಟ್ಟಿಲೇರಿದ್ದವು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, 'ಕೋವಿಡ್ ಕಾರಣಕ್ಕಾಗಿ ಪರೀಕ್ಷೆ ನಡೆಸದೆಯೇ ಉತ್ತೀರ್ಣಗೊಳಿಸಲು ನಿರ್ಧಾರ ಕೈಗೊಳ್ಳುವ ಮುನ್ನ ಆಲೋಚಿಸಬೇಕಿತ್ತು. ವಿದ್ಯಾರ್ಥಿಗಳು ಈಗಾಗಲೇ ಮುಂದಿನ ತರಗತಿಗಳಿಗೆ ಶುಲ್ಕ ಪಾವತಿ ಮಾಡಿ ಪ್ರವೇಶ ಪಡೆದಿದ್ದಾರೆ. ಆದ್ದರಿಂದ, ಈ ಹಂತದಲ್ಲಿ ಸಿಂಡಿಕೇಟ್ ನಿರ್ಣಯವನ್ನು ಮಾನ್ಯ ಮಾಡಲು ಆಗದು' ಎಂದು ಅಭಿಪ್ರಾಯಪಟ್ಟಿದೆ.

ಅರ್ಜಿದಾರರ ಪರ ವರದರಾಜ್ ಆರ್.ಹವಾಲ್ದಾರ್ ವಕಾಲತ್ತು ವಹಿಸಿದ್ದರು. ಹಿರಿಯ ವಕೀಲ ಕೆ.ಎನ್. ಫಣೀಂದ್ರ ವಾದ ಮಂಡಿಸಿದರು. ಪ್ರಕರಣದಲ್ಲಿ ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವ ಹಾಗೂ ಮೌಲ್ಯಮಾಪನ ಕುಲಸಚಿವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು.

ಕೇಂದ್ರ ಸರ್ಕಾರಕ್ಕೆ ಕಾಶ್ಮೀರಿ ಪಂಡಿತರ ಎಚ್ಚರಿಕೆ ● ಕಣಿವೆ ತೊರೆಯಲು ಅವಕಾಶಕ್ಕೆ ಆಗ್ರಹ

‘ಪೊಲೀಸರತ್ತ ನಾವೂ ಕಲ್ಲು ತೂರಬೇಕಾಗುತ್ತದೆ’

ಶ್ರೀನಗರ/ಜಮ್ಮು (ಪಿಟಿಐ/ ನ್ಯೂಯಾರ್ಕ್ ಟೈಮ್ಸ್): ‘ಕಾಶ್ಮೀರ ಕಣಿವೆಯಿಂದ ಹೊರ ಹೋಗಲು ನಮಗೆ ಅವಕಾಶ ಮಾಡಿ. ಇಲ್ಲದಿದ್ದರೆ, ಪೊಲೀಸರತ್ತ ಕಾಶ್ಮೀರಿ ಪಂಡಿತರೂ ಕಲ್ಲು ತೂರಬೇಕಾಗುತ್ತದೆ’ ಎಂದು ಇಲ್ಲಿನ ಮತ್ತಾನ್ ಶಿಬಿರದಲ್ಲಿ ಇರುವ ಕಾಶ್ಮೀರಿ ಪಂಡಿತರು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಕಾಶ್ಮೀರದಲ್ಲಿ ವಾಸ್ತವ್ಯ ಹೂಡಿರುವ ಕಾಶ್ಮೀರಿ ಪಂಡಿತರು, ಸರ್ಕಾರಿ ನೌಕರಿಯಲ್ಲಿರುವ ಹಿಂದೂಗಳು ಕಾಶ್ಮೀರವನ್ನು ತೊರೆಯಲು ಅವಕಾಶ ಮಾಡಿಕೊಡಬೇಕು ಎಂಬ ಆಗ್ರಹ ಶುಕ್ರವಾರ ತೀವ್ರ ಪಡೆದಿದೆ. ಕಾಶ್ಮೀರದಿಂದ ತೆರವು ಮಾಡಲು ಸರ್ಕಾರಕ್ಕೆ ನಿರ್ದೇಶನ ನೀಡಿ ಎಂದು ಕಾಶ್ಮೀರ ಪಂಡಿತ ಸಂಘರ್ಷ ಸಮಿತಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರೆ, ಆ ಸಮುದಾಯದ ಜನರು ಮತ್ತೊಂದೆಡೆ ಪ್ರತಿಭಟನೆಯನ್ನೂ ನಡೆಸುತ್ತಿದ್ದಾರೆ.

ಕಾಶ್ಮೀರ ಕಣಿವೆಯನ್ನು ತೊರೆದ ಕಾಶ್ಮೀರಿ ಪಂಡಿತ ಕುಟುಂಬವೊಂದು ಶುಕ್ರವಾರ ಜಮ್ಮುವಿನ ಜಾಗ್ತಿ ಶಿಬಿರಕ್ಕೆ ಬಂದಿತು –ಪಿಟಿಐ ಚಿತ್ರ

‘ಕಾಶ್ಮೀರದಲ್ಲಿ ಸೇವೆಯಲ್ಲಿರುವ ನಮ್ಮನ್ನು ಜಮ್ಮುವಿಗೆ ವರ್ಗಾವಣೆ ಮಾಡಿ. ನಾವು ಸೇವೆಗೆ ಹಿಂತಿರುಗುವುದಿಲ್ಲ’ ಎಂದು ಕಾಶ್ಮೀರ ಶಿಕ್ಷಕರ ಸಂಘಟನೆಯ ಸದಸ್ಯರು ಜಮ್ಮುವಿನಲ್ಲಿ ನಡೆಸುತ್ತಿರುವ ಪ್ರತಿಭಟನೆ ಎರಡನೇ ದಿನಕ್ಕೆ ಕಾಲಿರಿಸಿದೆ.

ಕಾಶ್ಮೀರಿ ಪಂಡಿತರು ಸೇರಿ ಧಾರ್ಮಿಕ ಅಲ್ಪಸಂಖ್ಯಾತರು ಕಾಶ್ಮೀರ ತೊರೆಯುವುದನ್ನು ಸರ್ಕಾರ ತಡೆಯುವುದಕ್ಕೂ ಮುನ್ನ ನೂರಾರು ಶಿಕ್ಷಕರು ಜಮ್ಮುವಿಗೆ ಪರಾರಿಯಾಗಿದ್ದರು. ಅವರೆಲ್ಲಾ ಈಗ ಪ್ರತಿಭಟನೆ ಮೊರೆ ಹೋಗಿದ್ದಾರೆ. ಪ್ರಧಾನಿ ಉದ್ಯೋಗ ಖಾತರಿ ಯೋಜನೆ ಅಡಿ 4,000 ಜನರನ್ನು ಕಾಶ್ಮೀರದಲ್ಲಿ ಸೇವೆಗೆ 2008ರಲ್ಲಿ ನಿಯೋಜಿಸಲಾಗಿತ್ತು. ಅವರಲ್ಲಿ ಬಹಳಷ್ಟು ಮಂದಿ ಈಗ ಕಾಶ್ಮೀರ ತೊರೆದಿದ್ದಾರೆ. ಶಿಕ್ಷಕರ ಹೋರಾಟದಲ್ಲಿ ಈ ನೌಕರರೂ ದನಿಗೂಡಿಸಿದ್ದಾರೆ.

ಮತ್ತೊಂದೆಡೆ ಕಾಶ್ಮೀರದಲ್ಲಿನ ವಿಶೇಷ ಶಿಬಿರಗಳಲ್ಲಿ ಇರುವ ಕಾಶ್ಮೀರಿ ಪಂಡಿತರು, ಸರ್ಕಾರದ ಕ್ರಮವನ್ನು ಖಂಡಿಸುತ್ತಿದ್ದಾರೆ. ‘ಇಲ್ಲಿ ನಮ್ಮನ್ನು ಕೊಲ್ಲಲಾಗುತ್ತಿದೆ. ನಾವು ಹೇಗಾದರೂ ಸರಿ ಬದುಕಬೇಕು ಎಂದು ನಿರ್ಧರಿಸಿದ್ದೇವೆ. ಇಲ್ಲಿಂದ ಹೊರಗೆ ಹೋದರೆ ಮಾತ್ರ ಜೀವಂತವಾಗಿ ಇರಲು ಸಾಧ್ಯ’ ಎಂದು ಅನಂತನಾಗ್ ಜಿಲ್ಲೆಯ ಮತ್ತಾನ್ ಶಿಬಿರದಲ್ಲಿ ಇರುವ ಕಾಶ್ಮೀರ ಪಂಡಿತರು ಹೇಳಿದ್ದಾರೆ.

‘ಪರಿಸ್ಥಿತಿ ಸಾಮಾನ್ಯ ಸ್ಥಿತಿಗೆ ಮರಳಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ವಾಸ್ತವ ಹಾಗಿಲ್ಲ. ಸರ್ಕಾರ ಭದ್ರತೆಯ ಭರವಸೆ ನೀಡಿದ ಕಾರಣ 10 ವರ್ಷಗಳ ಹಿಂದೆ ಕಾಶ್ಮೀರಕ್ಕೆ ವಾಪಸ್ ಆಗಿದ್ದೆವು. ಈಚಿನವರೆಗೂ ಎಲ್ಲಾ ಚೆನ್ನಾಗಿಯೇ ಇತ್ತು. ಆದರೆ ಎರಡೂವರೆ ವರ್ಷದ ಹಿಂದಿನಿಂದ ಕಾಶ್ಮೀರ ಪಂಡಿತರ ಹತ್ಯೆ ಮತ್ತೆ ಆರಂಭವಾಗಿದೆ. ಸರ್ಕಾರ ಇದನ್ನು ನಿಯಂತ್ರಿಸುವಲ್ಲಿ ವಿಫಲವಾಗಿದೆ’ ಎಂದು ಮತ್ತಾನ್ ಶಿಬಿರದ ನಿವಾಸಿಗಳು ಆರೋಪಿಸಿದ್ದಾರೆ.

‘ಕಾಶ್ಮೀರ ಕಣಿವೆಯಿಂದ ನಮ್ಮನ್ನು ಸ್ಥಳಾಂತರ ಮಾಡುವ ಸಂಬಂಧ, ಲೆಫ್ಟಿನೆಂಟ್ ಗವರ್ನರ್ ಮತ್ತು ಭದ್ರತಾ ಅಧಿಕಾರಿಗಳನ್ನು ನಿಯೋಗವೊಂದು ಭೇಟಿ ಮಾಡಿತ್ತು. ಕಾಶ್ಮೀರ ಕಣಿವೆಯಲ್ಲಿನ ಎಲ್ಲಾ ಉಗ್ರರನ್ನು ಮಣಿಸಲು ಇನ್ನೂ ಮೂರು ವರ್ಷ ಬೇಕಾಗುತ್ತದೆ’ ಎಂದು ಹೇಳಿದ್ದಾರೆ.

‘ಅಲ್ಲಿಯವರೆಗೂ ನಾವು ಇಲ್ಲೇ ಇರಲು ಸಾಧ್ಯವೇ? ಈ ವಿಚಾರ ಗೊತ್ತಾದ ನಂತರ ಶಿಬಿರದ ನಿವಾಸಿಗಳಲ್ಲಿ ಆತಂಕ ಹೆಚ್ಚಾಗಿದೆ’ ಎಂದು ಮತ್ತಾನ್ ಶಿಬಿರದ ನಿವಾಸಿ ರಂಜನಾ ಜೋತ್ಷಿ ಮಾಹಿತಿ ನೀಡಿದ್ದಾರೆ.

‘ಎಲ್ಲವೂ ಚೆನ್ನಾಗೇ ಇತ್ತು...’

‘ಕಾಶ್ಮೀರದಲ್ಲಿ ನಮಗೆ ಯಾವುದೇ ತೊಂದರೆ ಇರಲಿಲ್ಲ. 10 ವರ್ಷಗಳಿಂದ ಇಲ್ಲೇ ನೆಲೆಸಿದ್ದೇವೆ. ಸ್ಥಳೀಯರು ನಮಗೆ ಎಲ್ಲಾ ರೀತಿಯ ಸಹಕಾರ, ಸಹಾಯ ನೀಡುತ್ತಿದ್ದರು. ಈ ಹಿಂದೆ ಇರದಿದ್ದ ಸಮಸ್ಯೆ ಎರಡೂವರೆ ವರ್ಷಗಳಿಂದ ಆರಂಭವಾಗಿದೆ’ ಎಂದು ಕಾಶ್ಮೀರಿ ಪಂಡಿತ ಸಮುದಾಯಕ್ಕೆ ಸೇರಿದ ಅಂಕಿತ್ ಟಿಕ್ಕೂ ಆರೋಪಿಸಿದ್ದಾರೆ.

‘1990ರಲ್ಲಿ ನಮ್ಮ ಪೋಷಕರ ಜತೆ ಏನು ನಡೆಯಿತೋ ಅದು, ಈಗ ನಮ್ಮೊಂದಿಗೆ ನಡೆಯುತ್ತಿದೆ’ ಎಂದು ಅಂಕಿತ್ ಕಳವಳ ವ್ಯಕ್ತಪಡಿಸಿದ್ದಾರೆ.

ಕಾಶ್ಮೀರದಲ್ಲಿ ಹಿಂದೂಗಳಿಗೆ ಮತ್ತು ವಲಸೆ ಕಾರ್ಮಿಕರಿಗೆ ನೀಡುತ್ತಿರುವ ಭದ್ರತೆಯನ್ನು ಕೇಂದ್ರ ಸರ್ಕಾರವು ತಕ್ಷಣವೇ ಹೆಚ್ಚಿಸಬೇಕು
ಪ್ರಿಯಾಂಕಾ ಚತುರ್ವೇದಿ, ಶಿವಸೇನಾ ಸಂಸದೆ

1990ರಲ್ಲಿ ಇದ್ದ ಸ್ಥಿತಿಗಿಂತ ಕೆಟ್ಟ ಸ್ಥಿತಿಗೆ ಕಾಶ್ಮೀರ ದೂಡಲ್ಪಟ್ಟಿದೆ. ಕಾಶ್ಮೀರವನ್ನು ನಿಭಾಯಿಸುವಲ್ಲಿ ಬಿಜೆಪಿ ಸರ್ಕಾರ ವಿಫಲವಾಗಿದೆ
ಸಂಜಯ್ ಸಿಂಗ್, ಎಎಪಿ ನಾಯಕ

ಸುದ್ದಿ 2 ನಿಮಿಷ

ವೀಸಾ ಹಗರಣ: ಕಾರ್ತಿ ಚಿದಂಬರಂಗೆ ನಿರೀಕ್ಷಣಾ ಜಾಮೀನು ನಿರಾಕರಣೆ

ನವದೆಹಲಿ (ಪಿಟಿಐ): ವೀಸಾ ಪ್ರಕರಣ ಸಂಬಂಧ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ದೆಹಲಿ ನ್ಯಾಯಾಲಯ ಶುಕ್ರವಾರ ವಜಾಗೊಳಿಸಿದೆ.

ಕಾರ್ತಿ ಚಿದಂಬರಂ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ಎಂ.ಕೆ.ನಾಗ್ಪಾಲ್, ಈ ಅರ್ಜಿಯನ್ನು ಸ್ವೀಕರಿಸಲು ಸರಿಯಾದ ಆಧಾರಗಳಿಲ್ಲ ಎನ್ನುವ ಮೂಲಕ ತಳ್ಳಿ ಹಾಕಿದರು.

ಕಾರ್ತಿ ಅವರ ತಂದೆ ಪಿ.ಚಿದಂಬರಂ ಗೃಹ ಸಚಿವರಾಗಿದ್ದ ಅವಧಿಯಲ್ಲಿ (2011) ಚೀನಾದ 263 ಪ್ರಜೆಗಳಿಗೆ ವೀಸಾ ಕೊಡಿಸಿದ್ದರು ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕಾರ್ತಿ ಮತ್ತು ಇತರರ ವಿರುದ್ಧ ಜಾರಿ ನಿರ್ದೇಶನಾಲಯ ಇತ್ತೀಚೆಗೆ ಹಣ ಅಕ್ರಮ ಹಣ ವರ್ಗಾವಣೆ (ಪಿಎಂಎಲ್ಎ) ಪ್ರಕರಣ ದಾಖಲಿಸಿದೆ.

ರಾಜ್ಯಸಭೆ: ತಮಿಳುನಾಡಿನಿಂದ ಚಿದಂಬರಂ ಅವಿರೋಧ ಆಯ್ಕೆ

ಚೆನ್ನೈ: ತಮಿಳುನಾಡಿನಿಂದ ರಾಜ್ಯಸಭೆಗೆ ಸ್ಪರ್ಧಿಸಿದ್ದ ಮಾಜಿ ಕೇಂದ್ರ ಸಚಿವ ಪಿ. ಚಿದಂಬರಂ ಸೇರಿ ಎಲ್ಲಾ ಆರು ಅಭ್ಯರ್ಥಿಗಳೂ ಅವಿರೋಧವಾಗಿ ಶುಕ್ರವಾರ ಆಯ್ಕೆ ಆದರು.

ಪಿ. ಚಿದಂಬರಂ (ಕಾಂಗ್ರೆಸ್), ಥಾಂಜೈ ಎಸ್. ಕಲ್ಯಾಣಸುಂದರಂ, ಆರ್. ಗಿರಿರಾಜನ್ ಮತ್ತು ಕೆ.ಆರ್.ಎನ್. ರಾಜೇಶ್ ಕುಮಾರ್ (ಡಿಎಂಕೆ), ಸಿ. ವೆ. ಷಣ್ಮುಗಂ ಮತ್ತು ಆರ್. ಧರ್ಮಾರ್ (ಎಐಎಡಿಎಂಕೆ) ಅವರು ತಮಿಳುನಾಡಿನಿಂದ ಆಯ್ಕೆ ಆಗಿದ್ದಾರೆ.

ರಾಜ್ಯಸಭೆ ಸದಸ್ಯರಾಗಿ ಚಿದಂಬರಂ ಅವರಿಗೆ ಇದು ಎರಡನೇ ಅವಧಿ. ಮೊದಲ ಅವಧಿಯಲ್ಲಿ ಅವರು ಮಹಾರಾಷ್ಟ್ರದಿಂದ ಆಯ್ಕೆ ಆಗಿದ್ದರು.

ನಾಮಪತ್ರಗಳನ್ನು ಹಿಂಪಡೆಯಲು ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ವರೆಗೆ ಸಮಯಾವಕಾಶ ನಿಗದಿಪಡಿಸಲಾಗಿತ್ತು. ಅವಧಿ ಮುಗಿದ ಬಳಿಕ ಅವಿರೋಧವಾಗಿ ಆಯ್ಕೆ ಆಗಿರುವ ಅಭ್ಯರ್ಥಿಗಳ ಹೆಸರುಗಳನ್ನು ಘೋಷಿಸಲಾಯಿತು. ಪಂಜಾಬ್‌ನಿಂದ ಆಮ್ ಆದ್ಮಿ ಪಕ್ಷದ (ಎಎಪಿ) ಬಲ್ಬೀರ್ ಸಿಂಗ್ ಸೀಚೆವಾಲ್ ಮತ್ತು ವಿಕ್ರಂಜಿತ್ ಸಿಂಗ್ ಸಹ್ನೆ ಅವರು ಅವಿರೋಧವಾಗಿ ಆಯ್ಕೆ ಆದರು.

ಆಂಧ್ರ ಪ್ರದೇಶದ ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್‌ನ ನಾಲ್ವರು ಅಭ್ಯರ್ಥಿಗಳು ಆಯ್ಕೆ ಆದರು. ವಿ. ವಿಜಯಸಾಯಿ ರೆಡ್ಡಿ, ಬೀಡಾ ಮುಸ್ತಾನ್ ರಾವ್, ಆರ್. ಕೃಷ್ಣಯ್ಯ ಮತ್ತು ನಿರಂಜನ್ ರೆಡ್ಡಿ ಅವರು ಆಯ್ಕೆ ಆದವರು.

ಜಾರ್ಖಂಡ್‌ನಿಂದ ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ಅಭ್ಯರ್ಥಿ ಮಹುವಾ ಮಾಜಿ ಮತ್ತು ಬಿಜೆಪಿ ಅಭ್ಯರ್ಥಿ ಆದಿತ್ಯ ಸಾಹು ಅವರು ಆಯ್ಕೆ ಆದರು. ಛತ್ತೀಸಗಡದ ಆಡಳಿತಾರೂಢ ಕಾಂಗ್ರೆಸ್‌ನ ಅಭ್ಯರ್ಥಿಗಳಾದ ರಾಜೀವ್ ಶುಕ್ಲಾ ಮತ್ತು ರಂಜೀತ್ ರಾಜನ್ ಅವರು ಅವಿರೋಧವಾಗಿ ಆಯ್ಕೆ ಆಗಿದ್ದಾರೆ. ವಿರೋಧ ಪಕ್ಷವಾದ ಬಿಜೆಪಿ ಅಭ್ಯರ್ಥಿಯನ್ನು ಕಣಕ್ಕಿಳಿಸಿದರಲಿಲ್ಲ.

ಮಧ್ಯಪ್ರದೇಶದಿಂದ ಕಾಂಗ್ರೆಸ್ ಅಭ್ಯರ್ಥಿ, ಹಿರಿಯ ವಕೀಲ ವಿವೇಕ್ ತಂಖಾ ಮತ್ತು ಬಿಜೆಪಿಯ ಅಭ್ಯರ್ಥಿಗಳಾದ ಸುಮಿತ್ರಾ ವಾಲ್ಮೀಕಿ, ಕವಿತಾ ಪಾಟೀದಾರ್ ಅವರು ಅವಿರೋಧವಾಗಿ ಆಯ್ಕೆ ಆಗಿದ್ದಾರೆ.

‘ಹಿಂದೂಗಳ ಹತ್ಯೆ: ಬಿಜೆಪಿ, ಆರ್‌ಎಸ್‌ಎಸ್ ಏಕೆ ಮೌನ?’

ರಾಯಪುರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಯುತ್ತಿರುವ ಮುಸ್ಲಿಮೇತರರ ಹತ್ಯೆ ಕುರಿತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೆಲ್, ಬಿಜೆಪಿ ಮತ್ತು ಆರ್‌ಎಸ್‌ಎಸ್ ಈ ಬಗ್ಗೆ ಏಕೆ ಮೌನ ವಹಿಸಿವೆ ಎಂದು ಪ್ರಶ್ನಿಸಿದ್ದಾರೆ.

ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 370ನೇ ವಿಧಿ ರದ್ದು ಪಡಿಸಿರುವುದರಿಂದ ಜಮ್ಮು, ಕಾಶ್ಮೀರದಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಬರಲಿದೆ ಎಂದು ಬಿಜೆಪಿ ನಾಯಕರು ಹೇಳಿದ್ದರು. ಆದರೆ, ಪರಿಸ್ಥಿತಿ ಇದಕ್ಕೆ ವಿರುದ್ಧವಾಗಿದೆ. ಈಗ ’ದಿ ಕಾಶ್ಮೀರ್ ಫೈಲ್ಸ್’ ಚಿತ್ರ ವೀಕ್ಷಿಸುವ ಸಮಯ ಬಂದಿದೆ. ಹಿಂದೂಗಳ ಹತ್ಯೆಯಾದರೂ ಬಿಜೆಪಿ, ಆರ್‌ಎಸ್‌ಎಸ್ ಮೌನವಾಗಿದೆ. ಕಾಶ್ಮೀರದಲ್ಲಿ ಬಿಜೆಪಿ ಕಾರ್ಯತಂತ್ರ ವಿಫಲವಾಗಿದೆ. ಸರ್ಕಾರಿ ನೌಕರರನ್ನು ರಕ್ಷಿಸಲು ಸಾಧ್ಯವಾಗದಿದ್ದಲ್ಲಿ ಜನಸಾಮಾನ್ಯರ ಪಾಡೇನು? ಕಾಶ್ಮೀರದ ಪಂಡಿತರು ಮತ್ತು ಹಿಂದೂಗಳ ಹತ್ಯೆಗಳಿಗೆ ಯಾರು ಜವಾಬ್ದಾರರು? ಅವರನ್ನು ರಕ್ಷಿಸಲು ಅಲ್ಲಿನ ಸರ್ಕಾರ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದರು.

ಹೈದರಾಬಾದ್: ಪ್ರಭಾವಿ ಮಕ್ಕಳ ಕೃತ್ಯದ ಶಂಕೆ ● ಒಬ್ಬ ಆರೋಪಿ ಬಂಧನ

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಇಲ್ಲಿನ ಜುಬಿಲಿ–ಬಂಜಾರಾ ಹಿಲ್ಸ್ ಪ್ರದೇಶದಲ್ಲಿ ಕಳೆದ ಶನಿವಾರ ಮರ್ಸಿಡಿಸ್ ಬೆಂಜ್ ಕಾರಿನಲ್ಲಿ 17 ವರ್ಷದ ಬಾಲಕಿ ಮೇಲೆ ಐವರು ಬಾಲಕರ ಗುಂಪೊಂದು ಸಾಮೂಹಿಕ ಅತ್ಯಾಚಾರ ಎಸಗಿದೆ.

ಪ್ರಕರಣ ಸಂಬಂಧ 18 ವರ್ಷದ ಆರೋಪಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

‘ಈ ಪ್ರಕರಣದಲ್ಲಿರುವ ಆರೋಪಿಗಳು ಎಐಎಂಐಎಂ ಶಾಸಕರ ಪುತ್ರ, ವಕ್ಫ್ ಅಧಿಕಾರಿ ಮತ್ತು ಟಿಆರ್‌ಎಸ್ ಮುಖಂಡರೊಬ್ಬರ ಪುತ್ರರು ಎಂಬ ಶಂಕೆಯಿದೆ. ಹಾಗಾಗಿ, ತೆಲಂಗಾಣ ಪೊಲೀಸರು ಪ್ರಕರಣವನ್ನು ಮುಚ್ಚಿ ಹಾಕಲುಯತ್ನಿಸುತ್ತಿದ್ದಾರೆ’ ಎಂದುಬಿಜೆಪಿ ಸೇರಿದಂತೆ ಪ್ರತಿಪಕ್ಷಗಳು ಆರೋ ಪಿಸಿವೆ.

ಘಟನೆಯ ವಿವರ: ಶನಿವಾರ ಮಧ್ಯಾಹ್ನ ಜುಬಿಲಿ ಹಿಲ್ಸ್‌ನ ರಸ್ತೆ ಸಂಖ್ಯೆ 36ರಲ್ಲಿನ ಪಬ್‌ಗೆ ಬಾಲಕಿಯು ತನ್ನ ಸ್ನೇಹಿತರೊಂದಿಗೆ ಪಾರ್ಟಿಗೆ ತೆರಳಿದ್ದಳು. ಅಲ್ಲಿ ಕೆಲ ಹುಡುಗರು ಆಕೆಯೊಂದಿಗೆ ಸ್ನೇಹ ಬೆಳೆಸಿದರು. ಬಳಿಕ ಅವರು ಪಬ್‌ನಿಂದ ಹೊರಬಂದು ಬಂಜಾರಾ ಹಿಲ್ಸ್‌ನ ಬೇಕರಿಯೊಂದರಲ್ಲಿ ಕಾಲ ಕಳೆದು, ಬೆಂಜ್ ಮತ್ತು ಇನೋವಾ ಕಾರಿನಲ್ಲಿ ಏಕಾಂತ ಸ್ಥಳಕ್ಕೆ ತೆರಳಿದರು. ಅಲ್ಲಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಬಾಲಕರು, ಆಕೆಯನ್ನು ಅದೇ ಪಬ್‌ನಲ್ಲಿ ಬಿಟ್ಟು ಹೋಗಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಬಾಲಕಿಯ ತಂದೆಯು ಪಬ್‌ನಿಂದ ಆಕೆಯನ್ನು ಮನೆಗೆ ಕರೆದೊಯ್ದಿದ್ದು, ಪೋಷಕರು ಆಕೆಯ ಕತ್ತಿನ ಸುತ್ತ ಆಗಿದ್ದ ರಕ್ತದ ಗಾಯಗಳ ಕುರಿತು ಪ್ರಶ್ನಿಸಿದ್ದಾರೆ. ಆಗ ಬಾಲಕಿಯು ಕಾರಿನಲ್ಲಿ ಐವರು ಬಾಲಕರು ತನಗೆ ಲೈಂಗಿಕ ಕಿರುಕುಳ ನೀಡಿದ್ದಾಗಿ ತಿಳಿಸಿದ್ದಾಳೆ. ಈ ಕುರಿತು ಆಕೆಯ ತಂದೆ ದೂರು ನೀಡಿದ್ದು, ಜುಬಿಲಿ ಹಿಲ್ಸ್ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಎಫ್‌ಐಆರ್ ದಾಖಲಾಗಿದೆ. ಪೋಕ್ಸೊ ಕಾಯ್ದೆ ಅಡಿಯೂ ದೂರು ದಾಖಲಾಗಿದೆ.

‘ಬಾಲಕಿಯ ಹೇಳಿಕೆಯನ್ನು ಪಡೆದಿದ್ದು, ಘಟನಾ ಸ್ಥಳದಲ್ಲಿದ್ದ ಸಿಸಿ ಟಿವಿ ದೃಶ್ಯಾವಳಿ ಮತ್ತು ಇತರ ಪುರಾವೆಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುತ್ತಿದ್ದೇವೆ. ಇದುವರೆಗೆ ಯಾರನ್ನೂ ಬಂಧಿಸಲಾಗಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ವಿಳಂಬ ತಂತ್ರಕ್ಕೆ ಬಿಜೆಪಿ ಆಕ್ರೋಶ

‘ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ಕಾರನ್ನು ವಶಪಡಿಸಿಕೊಂಡು, ಸಿಸಿಟಿವಿ ದೃಶ್ಯಗಳನ್ನೂ ಪರಿಶೀಲಿಸಿದ್ದಾರೆ. ಆದರೆ, ಒಬ್ಬ ಆರೋಪಿಯನ್ನೂ ಬಂಧಿಸಿಲ್ಲ. ಆರೋಪಿಗಳು ಬಾಲಕರೇ ಅಥವಾ ಅಲ್ಲವೇ ಎಂಬುದನ್ನು ಕೋರ್ಟ್ ನಿರ್ಧರಿಸುತ್ತದೆ. ಈ ವಿಳಂಬ ತಂತ್ರ ಏಕೆ?’ ಎಂದು ತೆಲಂಗಾಣದ ಬಿಜೆಪಿಯ ವಕ್ತಾರ ಕೃಷ್ಣಸಾಗರ್ ರಾವ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅಥವಾ ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಅನುಮತಿಗಾಗಿ ಪೊಲೀಸರು ಕಾಯುತ್ತಿದ್ದಾರೆಯೇ’ ಎಂದೂ ಅವರು ಪ್ರಶ್ನಿಸಿದ್ದಾರೆ. ಬಾಲಕಿಗೆ ನ್ಯಾಯ ಸಿಗುವವರೆಗೂ ಹೋರಾಟ ನಡೆಸುವುದಾಗಿ ತೆಲಂಗಾಣ ಬಿಜೆಪಿ ತಿಳಿಸಿದೆ.

ಅಭಯಾರಣ್ಯದ ಇಎಸ್‌ಜಡ್‌ನಲ್ಲಿ ಗಣಿಗಾರಿಕೆಗಿಲ್ಲ ಒಪ್ಪಿಗೆ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ರಾಷ್ಟ್ರೀಯ ಉದ್ಯಾನ ಅಥವಾ ವನ್ಯಜೀವಿ ಅಭಯಾರಣ್ಯವೆನಿಸಿದ ಪ್ರತಿ ಸಂರಕ್ಷಿತ ಅರಣ್ಯವು ಗಡಿರೇಖೆಯಿಂದ ಕನಿಷ್ಠ ಒಂದು ಕಿ.ಮೀ.ವರೆಗೆ ಪರಿಸರ ಸೂಕ್ಷ್ಮ ವಲಯ (ಇಎಸ್‌ಜಡ್) ಹೊಂದಿರಬೇಕು. ಅಲ್ಲಿ ಗಣಿಗಾರಿಕೆ ಮತ್ತು ಇತರ ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ಅನುಮತಿ ನೀಡಲಾಗದು’ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್, ಬಿ.ಆರ್. ಗವಾಯಿ ಮತ್ತು ಅನಿರುದ್ಧ ಬೋಸ್ ಅವರಿದ್ದ ತ್ರಿಸದಸ್ಯ ಪೀಠವು, ರಾಜಸ್ಥಾನದ ವನ್ಯಜೀವಿ ಅಭಯಾರಣ್ಯ ‘ಜಮ್ವಾ ರಾಮ್‌ಗಡ’ ಮತ್ತು ಸುತ್ತಮುತ್ತಲಿನ ಗಣಿಗಾರಿಕೆ ಚಟುವಟಿಕೆಗಳ ವಿವಾದದ ವಿಚಾರಣೆ ನಡೆಸುವಾಗ, ವನ್ಯಜೀವಿ ಅಭಯಾರಣ್ಯಗಳು ಮತ್ತು ರಾಷ್ಟ್ರೀಯ ಉದ್ಯಾನಗಳ ಸುತ್ತಲಿನ ಇಎಸ್‌ಜೆಡ್ ನಿಗದಿಪಡಿಸಲು ನಿರ್ದೇಶನ ನೀಡಿದೆ.

ಗೋವಾ ಫೌಂಡೇಶನ್ ಪ್ರಕರಣದಲ್ಲಿ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ಪ್ರಸ್ತಾವನೆ ಸಲ್ಲಿಸದ ಅಭಯಾರಣ್ಯಗಳು ಅಥವಾ ರಾಷ್ಟ್ರೀಯ ಉದ್ಯಾನಗಳಿಗೆ ಸಂಬಂಧಿಸಿ 2006ರ ಡಿ. 4ರಂದು ಸುಪ್ರೀಂ ಕೋರ್ಟ್ ನೀಡಿದ ಆದೇಶದ ಪ್ರಕಾರ 10 ಕಿ.ಮೀ. ಬಫರ್ ವಲಯವನ್ನು ಇಎಸ್‌ಜಡ್ ಆಗಿ ಪರಿಗಣಿಸಬೇಕು. 2011ರ ಫೆ. 9ರಂದು ಹೊರಡಿಸಿರುವ ಮಾರ್ಗಸೂಚಿಗಳನ್ನು ಜಾರಿಗೊಳಿಸಬೇಕು ಎಂದು ಪೀಠ ನಿರ್ದೇಶನ ನೀಡಿದೆ.

ಎಲ್ಲ ರಾಷ್ಟ್ರೀಯ ಉದ್ಯಾನಗಳು ಮತ್ತು ಅಭಯಾರಣ್ಯಗಳ ಇಎಸ್‌ಜಡ್‌ಗೆ ಸಂಬಂಧಿಸಿದ ಮಾರ್ಗಸೂಚಿಗಳು ಸರಿಯಾಗಿ ಪಾಲನೆಯಾಗಬೇಕು ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಗೃಹ ಕಾರ್ಯದರ್ಶಿಯವರಿಗೆ ನ್ಯಾಯಾಲಯ ಆದೇಶಿಸಿದೆ.

‘ಬಿ ವರ್ಗದ ಸಂರಕ್ಷಿತ ಅರಣ್ಯಗಳಿಗೆ ಸಂಬಂಧಿಸಿ ಕೇಂದ್ರದ ಉನ್ನಾಧಿಕಾರ ಸಮಿತಿ ನೀಡಿರುವ ಶಿಫಾರಸುಗಳಂತೆ ಇಎಸ್‌ಜೆಡ್ ಕನಿಷ್ಠ 1 ಕಿ.ಮೀ. ಇರಲೇಬೇಕೆನ್ನುವುದು ನಮ್ಮ ಅಭಿಮತ. ವಿಶೇಷ ಸಂದರ್ಭಗಳಲ್ಲಿ ಬದಲಾವಣೆಗಳಿಗೆ ಒಳಪಟ್ಟು, ಇದು ಪ್ರಮಾಣಿತ ಸೂತ್ರವಾಗಿದೆ’ ಎಂದು ಪೀಠ ಹೇಳಿದೆ.

ಕಾನ್ಪುರ: ಪ್ರವಾದಿಗೆ ಅವಮಾನ ಮಾಡಿದ ಆರೋಪ, 18 ಮಂದಿ ಸೆರೆ

ಗುಂಪುಗಳ ನಡುವೆ ಘರ್ಷಣೆ, ಕಲ್ಲು ತೂರಾಟ

ಕಾನ್ಪುರ(ಉತ್ತರ ಪ್ರದೇಶ): ದೂರದರ್ಶನದ ಚರ್ಚೆಯೊಂದರಲ್ಲಿ ಪ್ರವಾದಿ ಮೊಹಮ್ಮದ್ ಅವರನ್ನು ಅವಮಾನಿಸಿದ ಆರೋಪದ ಮೇಲೆ ಉದ್ರಿಕ್ತ ಜನರ ಗುಂಪು ಬಲವಂತವಾಗಿ ಅಂಗಡಿಗಳನ್ನು ಬಂದ್ ಮಾಡಿಸಲು ಯತ್ನಿಸಿದಾಗ ಹಿಂಸಾಚಾರ ಭುಗಿಲೆದ್ದು, ಎರಡು ಗುಂಪುಗಳು ಪರಸ್ಪರ ಬಾಂಬ್ ಎಸೆದು, ಕಲ್ಲು ತೂರಾಟ ನಡೆಸಿವೆ.

ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದು ಈ ಸಂಬಂಧ 18 ಮಂದಿಯನ್ನು ಬಂಧಿಸಲಾಗಿದೆ.

ಶುಕ್ರವಾರದ ಪ್ರಾರ್ಥನೆ ಬಳಿಕ ಪರೇಡ್, ನೈಸಡಕ್ ಮತ್ತು ಯತೀಂಖಾನ ಪ್ರದೇಶದಲ್ಲಿ ಘರ್ಷಣೆ ನಡೆದಿದೆ. ಇತ್ತೀಚೆಗೆ ದೂರದರ್ಶನದ ಚರ್ಚೆಯೊಂದರಲ್ಲಿ ಬಿಜೆಪಿ ವಕ್ತಾರೆ ನೂಪುರ್ ಶರ್ಮಾ ಅವರು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ, ಒಂದು ಗುಂಪಿನ ಸದಸ್ಯರು ಅಂಗಡಿಗಳನ್ನು ಬಲವಂತವಾಗಿ ಮುಚ್ಚಲು ಪ್ರಯತ್ನಿಸಿದಾಗ, ಮತ್ತೊಂದು ಗುಂಪಿನ ಕಡೆಯವರು ಬಾಂಬ್ ಎಸೆದು, ಗುಂಡು ಹಾರಿಸಿದರು ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಅಂಗಡಿಗಳನ್ನು ಮುಚ್ಚುವಂತೆ ವ್ಯಾಪಾರಿಗಳನ್ನು ಒತ್ತಾಯಿಸಿದ ಗುಂಪು ಪೊಲೀಸರೊಂದಿಗೆ ಘರ್ಷಣೆ ನಡೆಸಿತು. ನಂತರ ಗುಂಪು ಚದುರಿಸಲು

ಉತ್ತರಪ್ರದೇಶದ ಕಾನ್ಪುರದಲ್ಲಿ ಉದ್ರಿಕ್ತ ಜನರು ಕಲ್ಲು ತೂರಾಟ ನಡೆಸಿದರು –ಪಿಟಿಐ ಚಿತ್ರ

ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಘಟನೆಯ ವಿಡಿಯೊ ತುಣುಕು ಆಧರಿಸಿ ಹಿಂಸಾಚಾರದಲ್ಲಿ ಭಾಗಿಯಾದವರನ್ನು ಬಂಧಿಸಲಾಗಿದ್ದು, ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಅವರ ಆಸ್ತಿಗಳನ್ನು ವಶಪಡಿಸಿಕೊಳ್ಳಲಾಗುವುದು ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಪ್ರಶಾಂತ್ ಕುಮಾರ್ ತಿಳಿಸಿದ್ದಾರೆ.

ಸ್ಥಳೀಯ ನಾಯಕರು ಸೇರಿದಂತೆ ಮೌಲಾನಾ ಮೊಹಮ್ಮದ್ ಅಲಿ (ಎಂಎಂಎ) ಜೌಹರ್ ಅಭಿಮಾನಿಗಳ ಸಂಘದ ಮುಖ್ಯಸ್ಥ ಹಯಾತ್ ಜಾಫರ್ ಹಶ್ಮಿ ಅವರು ಅಂಗಡಿಗಳನ್ನು ಬಂದ್ ಮಾಡುವ ಮೂಲಕ ಪ್ರತಿಭಟನೆ ನಡೆಸುವಂತೆ ಕರೆ ನೀಡಿದ್ದರು. ಅಲ್ಲದೆ ನಗರದಲ್ಲಿ ಮೆರವಣಿಗೆ ನಡೆಸಿದ ವೇಳೆ ಇತರ ಸಮುದಾಯದ ಸದಸ್ಯರನ್ನು ಎದುರಿಸಿದರು. ಇದರ ಪರಿಣಾಮ ಘರ್ಷಣೆಗಳು ಸಂಭವಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಪೊಲೀಸ್ ಮತ್ತು ಗುಪ್ತಚರ ಇಲಾಖೆ ವೈಫಲ್ಯ ಎದ್ದು ಕಾಣುತ್ತಿದೆ. ರಾಷ್ಟ್ರಪತಿ, ಪ್ರಧಾನಿ, ಮುಖ್ಯಮಂತ್ರಿ ನಗರದಲ್ಲಿದ್ದಾಗ ನೂಪುರ್ ಶರ್ಮಾ ನೀಡಿದ ಪ್ರಚೋದನಕಾರಿ ಹೇಳಿಕೆ ಅಶಾಂತಿ ಸೃಷ್ಟಿಸಿದೆ. ಬಿಜೆಪಿ ನಾಯಕರನ್ನು ಬಂಧಿಸಬೇಕು’ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಎಂದು ಟ್ವೀಟ್‌ನಲ್ಲಿ ಒತ್ತಾಯಿಸಿದ್ದಾರೆ.

ಸಾಮಾಜಿಕ ಮಾಧ್ಯಮ: ಮೇಲ್ಮನವಿ ಸಮಿತಿ ರಚನೆಯ ಕರಡು ಪ್ರಸ್ತಾವನೆ ವಾಪಸ್

ನವದೆಹಲಿ: ಸಾಮಾಜಿಕ ಮಾಧ್ಯಮಗಳ ಕುಂದು ಕೊರತೆ ಅಧಿಕಾರಿಗಳು ನೀಡುವ ತೀರ್ಪಿನ ವಿರುದ್ಧ ಸಲ್ಲಿಕೆಯಾಗುವ ಅರ್ಜಿಗಳ ವಿಚಾರಣೆಗಾಗಿ ಮೇಲ್ಮನವಿ ಸಮಿತಿಯೊಂದನ್ನು ರಚಿಸಲು ಮುಂದಾಗಿದ್ದ ಕೇಂದ್ರ ಸರ್ಕಾರವು, ಪ್ರಸ್ತಾವನೆಯ ಕರಡು ತಿದ್ದುಪಡಿಯ ಟಿಪ್ಪಣಿಯನ್ನು ಹಿಂಪಡೆದಿದೆ.

ಕರಡು ಟಿಪ್ಪಣಿಯನ್ನು ಹಿಂತೆಗೆದುಕೊಳ್ಳುವ ಕುರಿತು ಕೇಂದ್ರ ಸರ್ಕಾರವು ಅಧಿಕೃತವಾಗಿ ತಿಳಿಸಿಲ್ಲ. ಆದರೆ, ಉದ್ದೇಶಿತ ಕರಡು ತಿದ್ದುಪಡಿಯ ಟಿಪ್ಪಣಿಯು ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಪೋರ್ಟಲ್‌ನಲ್ಲಿ ಕಾಣೆಯಾಗಿದೆ.

‘ಇತರ ಕೆಲವು ವಿಷಯಗಳನ್ನು ಸೇರಿಸಿದ ನಂತರ ಪರಿಷ್ಕೃತ ಕರಡನ್ನು ಮತ್ತೆ ಪ್ರಕಟಿಸಲಾಗುವುದು’ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ಸಂಹಿತೆ) ನಿಯಮಗಳು–2021ಕ್ಕೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಉದ್ದೇಶಿಸಿತ್ತು.

ನಮ್ಮವರಿಂದಲೇ ಮೂಸೆವಾಲಾ ಹತ್ಯೆ: ಬಿಷ್ಣೋಯ್ ಹೇಳಿಕೆ

ನವದೆಹಲಿ (ಪಿಟಿಐ): ‘ಕೆನಡಾ ಮೂಲದ ಗೋಲ್ಡಿ ಬ್ರಾರ್ ಜೊತೆಗೂಡಿ ನನ್ನ ತಂಡದ ಸದಸ್ಯರು ಗಾಯಕ ಸಿಧು ಮೂಸೆವಾಲಾ ಹತ್ಯೆಗೆ ಸಂಚು ರೂಪಿಸಿದ್ದರು ಎಂದು ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ತನಿಖಾಧಿಕಾರಿಗಳಿಗೆ ತಿಳಿಸಿದ್ದಾನೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಕಳೆದ ಆಗಸ್ಟ್ 7ರಂದು ಅಕಾಲಿದಳ ನಾಯಕ ವಿಕ್ರಂಜೀತ್ ಸಿಂಗ್ ಹತ್ಯೆ ಪ್ರಕರಣದಲ್ಲಿ ಮೂಸೆವಾಲಾ ಭಾಗಿಯಾಗಿದ್ದರು. ಅದಕ್ಕೆ ಪ್ರತೀಕಾರವಾಗಿ ಹತ್ಯೆ ನಡೆಸಲಾಯಿತೆಂದು ಆತ ತಿಳಿಸಿದ್ದಾನೆ’ ಎಂದು ಪೊಲೀಸರು ಹೇಳಿದ್ದಾರೆ.

‘ಲಾರೆನ್ಸ್ ಬಿಷ್ಣೋಯ್ ಸದ್ಯ ದೆಹಲಿ ವಿಶೇಷ ಪೊಲೀಸ್ ಘಟಕದ ವಶದಲ್ಲಿ ಇದ್ದಾನೆ. ಆದರೆ, ಆತ ತನಿಖೆಗೆ ಸಹಕರಿಸುತ್ತಿಲ್ಲ. ತನ್ನ ಗ್ಯಾಂಗ್‌ನ ಸದಸ್ಯರ ಹೆಸರನ್ನೂ ಬಹಿರಂಗ ಪಡಿಸುತ್ತಿಲ್ಲ’ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ ರಜಾಕಾಲದ ಪೀಠ ಅಭಿಮತ; ಅಕ್ರಮ ನಿರ್ಮಾಣದ ಆರೋಪದ ಪಿಐಎಲ್ ವಜಾ

‘ಪುರಿ ಜಗನ್ನಾಥ ದೇಗುಲದಲ್ಲಿ ಮೂಲಸೌಕರ್ಯ ಅತ್ಯವಶ್ಯಕ’

ನವದೆಹಲಿ (ಪಿಟಿಐ): ’ಪುರಿಯ ಪ್ರಸಿದ್ಧ ಶ್ರೀ ಜಗನ್ನಾಥ ದೇವಸ್ಥಾನದಲ್ಲಿ ಭಕ್ತರಿಗೆ ಶೌಚಾಲಯಗಳು ಮತ್ತು ಸ್ನಾನಗೃಹಗಳಂತಹ ಅಗತ್ಯ ಸೌಕರ್ಯ ಕಲ್ಪಿಸಲು ಒಡಿಶಾ ಸರ್ಕಾರ ನಡೆಸುತ್ತಿರುವ ನಿರ್ಮಾಣ ಚಟುವಟಿಕೆಗಳು ಸಾರ್ವಜನಿಕ ಹಿತಾಸಕ್ತಿಯಿಂದ ಅತ್ಯವಶ್ಯಕ’ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಹಿಮಾ ಕೊಹ್ಲಿ ಅವರಿದ್ದ ರಜಾಕಾಲದ ಪೀಠವು, ದೇಗುಲದ ಮೂಲಸೌಕರ್ಯ ನಿರ್ಮಾಣ ಕಾಮಗಾರಿ ಪ್ರಶ್ನಿಸಿ ಭಗವಾನ್ ಜಗನ್ನಾಥನ ಭಕ್ತರಾದ ಅರ್ಧೇಂದು ಕುಮಾರ್ ದಾಸ್ ಮತ್ತು ಸುಮಂತ ಕುಮಾರ್ ಘಡೇಯ್ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ವಜಾಗೊಳಿಸಿತು.

ಮೃಣಾಲಿನಿ ಪಾಧಿ ಪ್ರಕರಣದಲ್ಲಿ ಈ ನ್ಯಾಯಾಲಯದ ತ್ರಿಸದಸ್ಯ ಪೀಠವು ನೀಡಿದ ನಿರ್ದೇಶನಗಳ ಅನುಸಾರ ನಿರ್ಮಾಣ ಚಟುವಟಿಕೆ ನಡೆಯುತ್ತಿದೆ. ದೇವಾಲಯಕ್ಕೆ ಭೇಟಿ ನೀಡುವ ಲಕ್ಷಾಂತರ ಭಕ್ತರಿಗೆ ಮೂಲ ಸೌಕರ್ಯ ಒದಗಿಸಲು ಕೈಗೊಂಡಿರುವ ಚಟುವಟಿಕೆಗಳನ್ನು ಯಾವುದೇ ಕಾರಣಕ್ಕೂ ತಡೆಹಿಡಿಯಲಾಗದು ಎಂದು ಪೀಠ ಸ್ಪಷ್ಟವಾಗಿ ಹೇಳಿದೆ.

ಇದಕ್ಕೂ ಮೊದಲು ಅರ್ಜಿದಾರರ ಪರ ವಾದಿಸಿದ ಹಿರಿಯ ವಕೀಲರಾದ ಮಹಾಲಕ್ಷ್ಮಿ ಪಾವನಿ, ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ತ್ವ ಸ್ಥಳಗಳು ಹಾಗೂ ಅವಶೇಷಗಳ ಕಾಯ್ದೆ 1958ರ ಪ್ರಕಾರ ನಿಷೇಧಿತ ಪ್ರದೇಶದಲ್ಲಿ ಅಥವಾ ನಿಯಂತ್ರಿತ ಪ್ರದೇಶದಲ್ಲಿ ಯಾವುದೇ ನಿರ್ಮಾಣ, ಅಸ್ತಿತ್ವದಲ್ಲಿರುವ ಕಟ್ಟಡಗಳ ಪುನರ್‌ನಿರ್ಮಾಣ, ದುರಸ್ತಿ, ನವೀಕರಣ ಕೈಗೆತ್ತಿಕೊಳ್ಳಲು ಸ್ಪಷ್ಟ ನಿರ್ಬಂಧವಿದೆ.

ಆದರೆ, ರಾಜ್ಯ ಸರ್ಕಾರ ಇದನ್ನು ಉಲ್ಲಂಘಿಸಿ, ದೇವಸ್ಥಾನದಲ್ಲಿ ಅಕ್ರಮವಾಗಿ ಉತ್ಖನನ ಮತ್ತು ನಿರ್ಮಾಣ ಕೆಲಸಗಳನ್ನು ನಡೆಸುತ್ತಿದೆ. ಇದು ಪ್ರಾಚೀನ ದೇವಾಲಯದ ರಚನೆಗೆ ಗಂಭೀರ ಅಪಾಯ ಉಂಟು ಮಾಡುತ್ತದೆ ಎಂದು ಪೀಠದ ಗಮನಕ್ಕೆ ತಂದರು.

ಆದರೆ, ಈ ವಾದ ತಿರಸ್ಕರಿಸಿದ ಪೀಠವು, ಪುರುಷರು ಮತ್ತು ಮಹಿಳೆಯರಿಗೆ ಶೌಚಾಲಯ, ಸ್ನಾನಗೃಹಗಳು, ವಿದ್ಯುತ್ ಮುಂತಾದ ಅಗತ್ಯ ಮೂಲ ಸೌಕರ್ಯ ಒದಗಿಸುವ ಉದ್ದೇಶದಿಂದ ಕಾಮಗಾರಿಗಳನ್ನು ನಡೆಸಲಾಗುತ್ತಿದೆ ಎಂದು ಹೇಳಿದೆ.

ಅರ್ಜಿದಾರರ ಮೇಲ್ಮನವಿಯಲ್ಲಿ ಯಾವುದೇ ಹುರುಳಿಲ್ಲ ಎಂದು ಅಭಿಪ್ರಾಯಪಟ್ಟ ಪೀಠವು, ಈ ಅರ್ಜಿಯನ್ನು ವಜಾಗೊಳಿಸಿದೆ.

ಜತೆಗೆ ಅರ್ಜಿದಾರರಿಗೆ ₹1 ಲಕ್ಷ ದಂಡವನ್ನು ವಿಧಿಸಿ, ನಾಲ್ಕು ವಾರಗಳೊಳಗೆ ಪಾವತಿಸುವಂತೆ ಗಡುವು ನೀಡಿದೆ.

‘ಪಿಐಎಲ್ ನಾಯಿ ಕೊಡೆಗಳಾಗದಂತೆ ಚಿವುಟಬೇಕು’

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳು ‘ನಾಯಿ ಕೊಡೆಗಳಂತೆ’ ಬೆಳೆಯುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್ ಶುಕ್ರವಾರ ಕಳವಳ ವ್ಯಕ್ತಪಡಿಸಿದೆ.

ಅಭಿವೃದ್ಧಿ ಚಟುವಟಿಕೆಗಳಿಗೆ ಧಕ್ಕೆಯಾಗದಂತೆ ಕ್ಷುಲ್ಲಕವಾದ ಪಿಐಎಲ್‌ಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕಬೇಕು ಎಂದು ಅದು ಹೇಳಿದೆ.

ಜಗನ್ನಾಥ ದೇವಸ್ಥಾನದ ನಿರ್ಮಾಣ ಚಟುವಟಿಕೆಗಳ ವಿರುದ್ಧದ ಪಿಐಎಲ್ ಅರ್ಜಿಗಳನ್ನು ವಜಾಗೊಳಿಸುವಾಗ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಹಿಮಾ ಕೊಹ್ಲಿ ಅವರಿದ್ದ ರಜಾಕಾಲದ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಪಿಐಎಲ್ ಅರ್ಜಿಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯೇ ಇರುವುದಿಲ್ಲ. ಬಹುತೇಕ ಅರ್ಜಿಗಳು ಪ್ರಚಾರದ ಹಿತಾಸಕ್ತಿ ಅಥವಾ ವೈಯಕ್ತಿಕ ಹಿತಾಸಕ್ತಿ ದಾವೆಗಳಾಗಿವೆ. ನಾವು ಇಂತಹ ಕ್ಷುಲ್ಲಕ ಅರ್ಜಿಗಳನ್ನು ಸಲ್ಲಿಸಲು ಸಮ್ಮತಿಸುವುದು ಕಾನೂನು ಪ್ರಕ್ರಿಯೆಯ ದುರುಪಯೋಗವಲ್ಲದೇ ಮತ್ತೇನೂ ಅಲ್ಲ’ ಎಂದು ಪೀಠವು ಕಟುವಾಗಿ ಹೇಳಿದೆ.

ಪ್ರಧಾನ ಇಂಜಿನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ.,
4ನೇ ಮಹಡಿ, ಪಿ.ಡಬ್ಲ್ಯೂ.ಡಿ., ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001
ಸಂಖ್ಯೆ. ಲೋಇ/01/ಪಿಆರ್‌ಎಎಂಸಿ/2022–23 ದಿನಾಂಕ : 03.06.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಧಾರವಾಡ ಜಿಲ್ಲೆ 01 ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್‌ನಿಂದ (www.eproc.karnataka.gov.in) ದಿನಾಂಕ : 03.06.2022 ಸಂಜೆ 05:30 ರಿಂದ ಪಡೆಯಬಹುದಾಗಿರುತ್ತದೆ.
ವಾಸಾಸಂಇ/ವಾ.ಪ್ರ/748/ಶ್ರೇಷ್ಠ/2022–23 ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ
ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

(ಜಲ ಸಂಪನ್ಮೂಲ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ, ಪುನರವಸತಿ ವಿಭಾಗ ನಂ.4, ಬೀಳಗಿ, ಕ್ಯಾಂಪ:– ನವನಗರ–ಬಾಗಲಕೋಟೆ ಇವರ ಕಾರ್ಯಾಲಯ.
ಸಂ: ಕೃಮೇಯೋ/ಕಾನಿಅ/ಪುವಿ–4/ಯೋವಿ–2/ಟೆಂಡರ್–4/22–23/295 ದಿನಾಂಕ: 03–06–2022.
ಅಲ್ಪಾವಧಿ ಟೆಂಡರ್ ಪ್ರಕಟಣೆ (02ನೇ ಕರೆ)
(ಇ–ಪ್ರೊಕ್ಯೂರಮೆಂಟ್ ಮುಖಾಂತರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಸಂ: 818 (ರೂ: 92.46 ಲಕ್ಷ) ಹಾಗೂ ಇಂಡೆಂಟ್ ಸಂ: 824 (ರೂ: 89.20 ಲಕ್ಷ) ಗಳಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಬಹುದಾದ ಕೊನೆಯ ದಿನಾಂಕ: 13–06–2022 ಸಂಜೆ 17.00 ಗಂಟೆವರೆಗೆ. ಟೆಂಡರ್ ಮಾಹಿತಿ, ನಿಬಂಧನೆ ಹಾಗೂ ವಿವರಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ www.eproc.karnataka govt.in ನಲ್ಲಿ ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.
ಸಹಿ/– ಎಸ್ ಎಲ್.ಚಿನ್ನಣ್ಣವರ),
ಕಾರ್ಯನಿರ್ವಾಹಕ ಅಭಿಯಂತರರು,
ಕೃಮೇಯೋ, ಪುನರವಸತಿ ವಿಭಾಗ ನಂ.4 ಬೀಳಗಿ,
ಕ್ಯಾಂಪ:– ನವನಗರ–ಬಾಗಲಕೋಟೆ.
ವಾ.ಸಾ.ಇ/ಬಾಗಲಕೋಟೆ/130/2022–23/ದೇಶಪಾಂಡೆಪಬ್ಲಿಸಿಟಿ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246, ಫ್ಯಾಕ್ಸ್: 080–22215602
ಸಂಖ್ಯೆ: ಡಿವೈಇಎಸ್/ತಾಂಶಾಖೆ/ಕ್ರೀಯೋ/76/2022–23 ದಿನಾಂಕ: 02–06–2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿ ವಿವರ	ಟೆಂಡರ್ ಮೊತ್ತ	ಇ.ಎಂ.ಡಿ ಮೊತ್ತ
1	ಮಂಡ್ಯ ನಗರದ ಸರ್. ಎಂ. ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣವನ್ನು ಉನ್ನತೀಕರಿಸುವ ಕಾಮಗಾರಿ ಕುರಿತು.	ರೂ. 812.74 ಲಕ್ಷಗಳು	ರೂ. 12,19,109/–

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: http://eproc.karnataka.gov.in ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 17–06–2022ರಂದು ಸಮಯ: 11.00 ಗಂಟೆಯವರೆಗೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18–06–2022ರಂದು ಸಮಯ: 11.30 ಗಂಟೆಗೆ.
3) ಹಣಕಾಸು ಬಿಡ್ ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ವಾಸಾಸಂಇ/ವಾ.ಪ್ರ/744/ಅಡ್ವರ್ಟೋರ್/2022–23 ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ – ಯಲಹಂಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು– 560 002.
ಸಂಖ್ಯೆ:ಕಾಪಾಅ/ರಮೂಸೌ/ಯಲಹಂಕ/ಟೆಂಡರ್/01/2ನೇ ಕರೆ/2022–23 ದಿನಾಂಕ: 03.06.2022
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
ಟರ್ನ್‌ಕೀ ಲಂಪ್‌ಸಮ್ ನಿಗದಿತ ದರ ಯಾವುದೇ ವ್ಯತ್ಯಾಸವಿಲ್ಲದ ಗುತ್ತಿಗೆ ಆಧಾರದಲ್ಲಿ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ– ಯಲಹಂಕ ವಿಭಾಗ), ಬೃ.ಬೆಂ.ಮ.ಪಾಲಿಕೆ ಇವರು ಅರ್ಹ ಟೆಂಡರ್‌ದಾರರಿಂದ ಟರ್ನ್‌ಕೀ, ಲಂಪ್‌ಸಮ್, ನಿಗದಿತ ದರದ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಿಗದಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಟೆಂಡರ್‌ದಾರರ ಸ್ವಂತ ವಿನ್ಯಾಸದ ಆಧಾರದಡಿ ಯಾವುದೇ ವ್ಯತ್ಯಾಸವಿಲ್ಲದಂತೆ (ಬದಲಿ ಪ್ರಸ್ತಾವನೆಯನ್ನು ಕೇವಲ ಒಂದಕ್ಕೆ ಮಾತ್ರ ಅನುಮತಿ ನೀಡಿ ನಿಗದಿಪಡಿಸಲಾಗಿದೆ) ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ (₹ ಲಕ್ಷಗಳಲ್ಲಿ)
ಯಲಹಂಕ ರೈಲು ನಿಲ್ದಾಣದ ಬಳಿ ಯಲಹಂಕ ಹಳೆ ಟೌನ್ ಮತ್ತು ಹೊಸ ಟೌನ್‌ಗೆ ಸಂಪರ್ಕಿಸುವ ಉದ್ದೇಶಿತ ರೈಲ್ವೇ ಕೆಳ ಸೇತುವೆಗೆ ಅಪ್ರೋಚ್ ರ್‍ಯಾಂಪ್‌ಗಳನ್ನು ನಿರ್ಮಾಣ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು.	472.79	4.73

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ 06.06.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 16.06.2022ರ ಸಂಜೆ 5:30 ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ, ಯಲಹಂಕ ವಿಭಾಗದಲ್ಲಿ ಟೆಂಡರ್ ಆಕ್ಷೇಪಣೆ ಸ್ವೀಕರಿಸಲು ಕೊನೆಯ ದಿನಾಂಕ: 09.06.2022ರ ಮಧ್ಯಾಹ್ನ 3:00 ಗಂಟೆಯವರೆಗೆ. (4) ಪೂರ್ವ–ಟೆಂಡರ್ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, (ರಸ್ತೆ ಮೂಲಭೂತಸೌಕರ್ಯ) ಇಲ್ಲಿ ದಿನಾಂಕ 09.06.2022ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, (ರಸ್ತೆ ಮೂಲಭೂತಸೌಕರ್ಯ–ಯಲಹಂಕ ವಿಭಾಗ) ಇಲ್ಲಿ ದಿನಾಂಕ 18.06.2022ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ರಮೂಸೌಕರ್ಯ–ಯಲಹಂಕ ವಿಭಾಗ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಉದ್ಯೋಗ ಸ್ಥಳದಲ್ಲಿ

ಮೂರು ದಿನಗಳ ನೋವಿಗೆ ವಿರಾಮದ ಮುಲಾಮು

ಡಾ. ವಸುಂಧರಾ ಭೂಪತಿ

'ಅಮ್ಮ, ನಿನ್ನೆ ಕಚೇರಿಯಲ್ಲಿ ನನ್ನ ಸಹೋದ್ಯೋಗಿ ಸೀಮಾಗೆ ಹೊಟ್ಟೆನೋವು ಶುರುವಾಯ್ತು. ಅವಳಿಗೆ ಪಿರಿಯಡ್ಸ್ ಸಮಯ. ತುಂಬಾ ಒದ್ದಾಡುತ್ತಿದ್ದಳು. ಕೆಲಸ ಮಾಡೋಕೂ ಆಗದೆ ರಜೆ ಹಾಕಿ ಮನೆಗೆ ಹೋದಳು' – ಕಚೇರಿಯ ಹಿಂದಿನ ದಿನದ ವಾರ್ತೆ ಹೇಳಿದಳು ಸೊಸೆ ಅನುಪಮಾ.

ಆಕೆಯ ಮಾತು ಕೇಳುತ್ತಲೇ, 'ಯಾಕೆ, ನಿಮ್ಮ ಕಚೇರಿಯಲ್ಲಿ ವಿಶ್ರಾಂತಿ ಕೊಠಡಿ ಇಲ್ವಾ?' ಎಂದೆ.

'ಇಲ್ಲಮ್ಮ. ಪ್ರತಿ ತಿಂಗಳೂ ಒಬ್ಬರಲ್ಲ ಒಬ್ಬರು ಇಂಥದ್ದೇ ಪರಿಸ್ಥಿತಿ ಅನುಭವಿಸುತ್ತಿರುತ್ತಾರೆ' ಎಂದು ಪ್ರತಿಕ್ರಿಯಿಸಿದಳು ಅನು. ಈಕೆಯ ಮಾತಿಗೆ ಮತ್ತೊಬ್ಬ ಸೊಸೆ ದಿವ್ಯಾ ದನಿಗೂಡಿಸುತ್ತಾ, 'ನಮ್ಮ ಕಚೇರಿಯಲ್ಲೂ ಇದೇ ಕಥೆ' ಎಂದಳು.

'ನಿಮ್ಮ ಕಚೇರಿಗಳಲ್ಲಿರುವ ಎಲ್ಲಾ ಮಹಿಳಾ ಉದ್ಯೋಗಿಗಳು ಸೇರಿ ವಿಶ್ರಾಂತಿ ಕೊಠಡಿ ಬೇಕು ಅಂತಮುಖ್ಯಸ್ಥರನ್ನು ಕೇಳಿ. ಇಲ್ಲದಿದ್ದರೆ, ಆ ಸಮಯದಲ್ಲಿ ತೀವ್ರನೋವು ಇರುವವರಿಗೆ ರಜೆ ಕೊಡಿ ಅಂತ ಮನವಿ ಮಾಡಿ' ಎಂದು ಸಲಹೆ ಕೊಟ್ಟೆ.

***

ಹೌದು, ಮುಟ್ಟಿನ ಅವಧಿಯಲ್ಲಿ ಇಂಥ ನೋವು, ಮನಸ್ಸಿಗೆ ಕಿರಿಕಿರಿ ಎನ್ನಿಸುವುದು ಸಾಮಾನ್ಯ. ಯಾರು ಮಾತನಾಡಿಸಿದರೂ ಸಿಡಿ ಸಿಡಿ ಎನ್ನುವ ಹಾಗಾಗುತ್ತದೆ. ನಕಾರಾತ್ಮಕ ಆಲೋಚನೆಗಳು ಬರುತ್ತಿರುತ್ತವೆ. ಕೆಲಸವೂ ಸಾಗುವುದಿಲ್ಲ. 'ಕೋವಿಡ್' ನಂತರದಲ್ಲಂತೂ ಈ ಸಮಸ್ಯೆಗಳು ತುಸು ಹೆಚ್ಚಾಗಿವೆ. ವರ್ಕ್ ಫ್ರಂ ಹೋಮ್ ಮುಗಿಸಿ ಕಚೇರಿಗೆ ತೆರಳಿರುವ ಕೆಲವರಿಗೆ ಸಮಸ್ಯೆಯ ತೀವ್ರತೆ ಅನುಭವವಾಗುತ್ತಿದೆ. ಇದನ್ನು ಅರಿತೇ ಕೆಲವು ಕೆಲವು ದೇಶಗಳು, ಉದ್ಯೋಗಿಗಳಿಗೆ ಮುಟ್ಟಿನ ಅವಧಿಯಲ್ಲಿ ವಿರಾಮ ನೀಡುವಂತಹ ವ್ಯವಸ್ಥೆಯೊಂದನ್ನು ಜಾರಿಗೊಳಿಸಿವೆ.

ವಿಜ್ಞಾನ-ತಂತ್ರಜ್ಞಾನ ಎಷ್ಟೇ ಮುಂದುವರೆದರೂ ಮುಟ್ಟಿನ ಸಮಸ್ಯೆಗಳು ಮಾತ್ರ ಬದಲಾವಣೆ ಆಗಲಾರವು. ಪ್ರತಿ ತಿಂಗಳೂ ಮಹಿಳೆಯರು ಈ ಕಿರಿಕಿರಿ, ನೋವು ಅನುಭವಿಸಲೇಬೇಕು. ಒಬ್ಬೊಬ್ಬರಲ್ಲಿ ಒಂದೊಂದು ಬಗೆಯದಾಗಿರುತ್ತವೆ. ಪ್ರತಿ ತಿಂಗಳೂ ಹೊಟ್ಟೆನೋವು, ಸೊಂಟನೋವು, ಸ್ತನಗಳಲ್ಲಿ ನೋವು, ಕಾಲು, ತೊಡೆಗಳಲ್ಲಿ ಸೆಳೆತ, ಅಧಿಕ ರಕ್ತಸ್ರಾವ, ಉರಿಮೂತ್ರ, ಮಲಬದ್ಧತೆ ಮತ್ತು ಮಾನಸಿಕವಾಗಿ ಆತಂಕ, ಬೇಸರ, ಕೋಪ ಮತ್ತು ಖಿನ್ನತೆ ಸಾಮಾನ್ಯ. ಬಹಳಷ್ಟು ಮಹಿಳೆಯರು ಈ ನೋವನ್ನು ಸಹಿಸಿ ಕೊಳ್ಳುತ್ತಾರೆ, ಆದರೆ, ಅದನ್ನು ವ್ಯಕ್ತಪಡಿಸುವುದಿಲ್ಲ.

ಋತುಸ್ರಾವದ ಸಮಯದಲ್ಲಿ ಮುಟ್ಟಿನ ಹೊಟ್ಟೆ ನೋವು ಅನುಭವಿಸದಿರುವ ಮಹಿಳೆಯರೇ ಅಪರೂಪ. ಎಲ್ಲರಲ್ಲೂ ಸ್ವಾಭಾವಿಕವಾಗಿ ಮುಟ್ಟಿನ ಆರಂಭಕ್ಕೆ ಮುಂಚೆ ಮತ್ತು ಆರಂಭದ ದಿನ ಈ ನೋವು ಅಧಿಕ. ಉದರದ ಮಾಂಸ ಖಂಡಗಳಲ್ಲಿ ಜರುಗುವ ಆಕುಂಚನ, ಸಂಕೋಚನಗಳಿಂದಾಗಿ ಸಲೀಸಾಗಿ ರಕ್ತಸ್ರಾವವಾಗಲು ಈ ಹೊಟ್ಟೆನೋವು ಕಾಣಿಸಿಕೊಳ್ಳುತ್ತದೆ. ಕೆಲವರಲ್ಲಿ ಆರಂಭದಲ್ಲಿ ಹೊಟ್ಟೆನೋವು ಕಾಣಿಸಿಕೊಳ್ಳುತ್ತದೆ. ಇನ್ನೂ ಕೆಲವರಲ್ಲಿ 'ಕಾಪರ್ ಟಿ' ಧಾರಣೆ ನಂತರ ಕಾಣಿಸಿಕೊಳ್ಳಬಹುದು. ಗರ್ಭಕೋಶದ ಸೋಂಕು ಇದ್ದಲ್ಲಿ ಮತ್ತು ಹುಟ್ಟಿನಿಂದಲೇ ಕೆಲವರಲ್ಲಿ ಹಿಂದಕ್ಕೆ ಬಾಗಿದ ಗರ್ಭಕೋಶ ಇದ್ದಲ್ಲಿ ನೋವು ಸದಾ ಇದ್ದೇ ಇರುತ್ತದೆ.



> ಮುಟ್ಟಿನ ಅವಧಿಯಲ್ಲಿ ವಿವಿಧ ತರಹದ ನೋವುಗಳು ಬಾಧಿಸುತ್ತವೆ. ಈ ಸಮಯದಲ್ಲಿ ವಿಶ್ರಾಂತಿ ಅಗತ್ಯ. ಹಾಗಾಗಿ ಪ್ರತಿ ಉದ್ಯೋಗದ ಸ್ಥಳದಲ್ಲಿ ಮುಟ್ಟಿನ ರಜೆ ನೀಡುವ ಸೌಲಭ್ಯ ಅಥವಾ ವಿಶ್ರಾಂತಿ ತೆಗೆದುಕೊಳ್ಳಲು ಒಂದು ಕೊಠಡಿ ಇರಬೇಕು. ಈ ಅವಧಿಯಲ್ಲಿ ಮಹಿಳೆಯರು ವಿಶ್ರಾಂತಿ ತೆಗೆದುಕೊಂಡಲ್ಲಿ ಅವರ ಕಾರ್ಯಕ್ಷಮತೆ ಮತ್ತಷ್ಟು ಹೆಚ್ಚುತ್ತದೆ.

ವಿದೇಶಗಳಲ್ಲಿ 'ಮುಟ್ಟಿನ ರಜೆ'

ಇಂಥ ಹಲವು ಕಾರಣಗಳಿಂದಾಗಿಯೇ ಮಹಿಳೆಯರಿಗೆ ಪಿರಿಯಡ್ಸ್ ಸಮಯದಲ್ಲಿ ವಿಶ್ರಾಂತಿ ಖಂಡಿತಾ ಅಗತ್ಯ. ಈ ಹಿನ್ನೆಲೆಯಲ್ಲಿ ಉದ್ಯೋಗದ ಸ್ಥಳಗಳಲ್ಲಿ ಮುಟ್ಟಿನ ರಜೆ ನೀಡುವ ಕುರಿತು ಬಹಳ ಕಾಲದಿಂದಲೂ ವಿಶ್ವದಾದ್ಯಂತ ಚರ್ಚೆಗಳು ನಡೆಯುತ್ತಲೇ ಇವೆ. ಆದರೆ, ಇಂಡೋನೇಷ್ಯಾ, ಜಪಾನ್, ದಕ್ಷಿಣ ಕೊರಿಯಾ ಮತ್ತು ತೈವಾನ್ ಸೇರಿದಂತೆ ಆಗ್ನೇಯ ಏಷ್ಯಾದ ಕೆಲವು ರಾಷ್ಟ್ರಗಳು ಈಗಾಗಲೇ 'ಮುಟ್ಟಿನ ರಜೆ' ಸೌಲಭ್ಯ ಅನುಷ್ಠಾನಗೊಳಿಸಿವೆ. ಇಂಡೋನೇಷ್ಯಾ ಸರ್ಕಾರ ಉದ್ಯೋಗಿಗಳಿಗೆ ತಿಂಗಳಿಗೆ ಎರಡು ದಿನಗಳ ಮುಟ್ಟಿನ ರಜೆಯ ಹಕ್ಕನ್ನು ನೀಡಿದೆ. ಆದರೆ ಇವು ಹೆಚ್ಚುವರಿ ರಜೆಗಳಲ್ಲ. ಜಪಾನ್‌ನಲ್ಲಿ ಈ ಕಾನೂನು 70 ವರ್ಷಗಳಿಂದ ಜಾರಿಯಲ್ಲಿದೆ. ತೈವಾನ್‌ನಲ್ಲಿ ಮಹಿಳೆಯರಿಗೆ ವರ್ಷಕ್ಕೆ ಮೂರು ದಿನಗಳ 'ಮುಟ್ಟಿನ ರಜೆ' ನೀಡುತ್ತದೆ. ಇದನ್ನು 30 ದಿನಗಳ 'ಸಾಮಾನ್ಯ ಅನಾರೋಗ್ಯ ರಜೆ'ಯ ಲೆಕ್ಕಕ್ಕೆ ಸೇರಿಸುವುದಿಲ್ಲ.

ಆಫ್ರಿಕಾದ ಜಾಂಬಿಯಾದಲ್ಲಿ ಪ್ರತಿ ತಿಂಗಳು ಮಹಿಳೆಯರಿಗೆ ಒಂದು ದಿನ ರಜೆ ತೆಗೆದುಕೊಳ್ಳುವುದನ್ನು ಕಾನೂನುಬದ್ಧಗೊಳಿಸಲಾಗಿದೆ. ಈ ರಜೆ ಕೊಡಲು ನಿರಾಕರಿಸಿದರೆ ಆ ಉದ್ಯೋಗಿಯು ತನ್ನ ಉದ್ಯೋಗದಾತರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಬಹುದು.

ಸ್ಪೇನ್‌ನಲ್ಲಿ ಮಸೂದೆ ಪ್ರಸ್ತಾವನೆ

ಕೋವಿಡ್ ಬಿಕ್ಕಟ್ಟಿನ ನಂತರ ಸ್ಪೇನ್ ದೇಶದಲ್ಲಿ 'ಮುಟ್ಟಿನ ರಜೆ' ತೆಗೆದುಕೊಳ್ಳುವ ಅವಕಾಶ ನೀಡುವಂತಹ ಹೊಸ ಕಾನೂನು ರಚಿಸಲು ಸಂಸತ್ತಿನಲ್ಲಿ ಮಸೂದೆಯೊಂದು ಮಂಡನೆಯಾಗಿದೆ. ಅದಕ್ಕೆ ಅನುಮೋದನೆ ದೊರೆತರೆ, ಮಹಿಳೆಯರಿಗಾಗಿ ಇಂಥ ಕಾನೂನು ರೂಪಿಸಿದ ಮೊದಲ ಪಾಶ್ಚಿಮಾತ್ಯ ರಾಷ್ಟ್ರವಾಗಲಿದೆ. 'ಸಂತಾನೋತ್ಪತ್ತಿ ಆರೋಗ್ಯ ಮತ್ತು ಗರ್ಭಪಾತ ಹಕ್ಕುಗಳ' ಕುರಿತಾದ ವಿಸ್ತೃತ ಕರಡು ಮಸೂದೆಯ ಭಾಗವಾಗಿ ಸ್ಪೇನ್ ಸರ್ಕಾರ ಈ ಕ್ರಮವನ್ನು ಅನುಮೋದಿಸುವ ನಿರೀಕ್ಷೆಯಿದೆ. ಈ ಪ್ರಸ್ತಾವಿತ ಕಾನೂನು ಪ್ರಕಾರ, ಪ್ರತಿ ತಿಂಗಳು ಮುಟ್ಟಿನ ಸಮಯದಲ್ಲಿ ತೀವ್ರ ನೋವಿನಿಂದ ಬಳಲುತ್ತಿರುವ ಮಹಿಳೆಯರು ಕನಿಷ್ಠ ಮೂರು ದಿನ ಅನಾರೋಗ್ಯದ ರಜೆ (ಸಿಕ್ ಲೀವ್) ತೆಗೆದುಕೊಳ್ಳಬಹುದು. ಗಳಿಕೆ ಅಥವಾ ಗಳಿಕೆಯಿಲ್ಲದ (ಪೇಡ್/ಅನ್ ಪೇಡ್) ರಜೆಯನ್ನು ತೆಗೆದುಕೊಳ್ಳುವ ಆಯ್ಕೆಯೂ ಇದೆ.

ಕಾನೂನಿನ ಪ್ರಕಾರ ಕಂಪನಿಗಳಲ್ಲಿ ಮಹಿಳೆಯರಿಗೆ ರಜೆ ತೆಗೆದುಕೊಳ್ಳಲು ಅವಕಾಶವಿದ್ದರೂ, ಮುಟ್ಟಿನ ಸಮಯದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ವೇತನ ಸಹಿತ ರಜೆ ಅಥವಾ ಹೆಚ್ಚುವರಿ ವೇತನವನ್ನು ನೀಡುವುದನ್ನು ಕಡ್ಡಾಯಗೊಳಿಸುವುದಿಲ್ಲ. ಆದರೆ, ದಕ್ಷಿಣ ಕೊರಿಯಾದಲ್ಲಿ, ಉದ್ಯೋಗಿಗಳು ಮುಟ್ಟಿನ ರಜೆ ತೆಗೆದುಕೊಳ್ಳದಿದ್ದರೆ ಅವರಿಗೆ ಹೆಚ್ಚುವರಿ ವೇತನವನ್ನು ಖಾತ್ರಿಪಡಿಸಲಾಗುತ್ತದೆ. ಆದರೂ ಇದರ ಪ್ರಯೋಜನವನ್ನು ತೆಗೆದುಕೊಳ್ಳುವವರ ಸಂಖ್ಯೆ ಕಡಿಮೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ 2017ರಲ್ಲಿ ಜಪಾನ್ ಸರ್ಕಾರ ನಡೆಸಿದ ಸಮೀಕ್ಷೆಯಲ್ಲಿ ಕೇವಲ ಶೇ 0.9ರಷ್ಟು ಮಹಿಳಾ ಉದ್ಯೋಗಿಗಳು ಈ ರಜೆ ತೆಗೆದುಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಇದೇ ಸಮಯದಲ್ಲಿ ದಕ್ಷಿಣ ಕೊರಿಯಾದಲ್ಲಿ ಕೇವಲ ಶೇ 19.7ರಷ್ಟು ಮಹಿಳೆಯರು ಇಂತಹ ಕಾನೂನಿನ ಉಪಯೋಗ ಪಡೆದಿದ್ದಾರೆ.

ಭಾರತದಲ್ಲಿ ಹೇಗಿದೆ?

ಮುಟ್ಟಿನ ಸಮಯದಲ್ಲಿ ಸರ್ಕಾರದಿಂದ ಅನುಮೋದಿತ ರಜೆ ಇರುವ ನಮ್ಮ ದೇಶದ ಏಕೈಕ ರಾಜ್ಯ ಬಿಹಾರ. 1992ರ ಜನವರಿಯಲ್ಲಿ ಬಿಹಾರ ಸರ್ಕಾರ ಈ ಕುರಿತ ಆದೇಶವೊಂದನ್ನು ಹೊರಡಿಸಿ 'ಎಲ್ಲಾ ಮಹಿಳಾ ಉದ್ಯೋಗಿಗಳಿಗೆ ತಮ್ಮ ಸಾಮಾನ್ಯ ರಜೆಯ ಹೊರತಾಗಿ ಪ್ರತಿ ತಿಂಗಳು ಎರಡು ಸತತ ರಜೆ ಪಡೆಯುವ ಹಕ್ಕಿದೆ' ಎಂದು ಘೋಷಿಸಿತು. ಇದರ ಜೊತೆಗೆ ಕೆಲವು ಖಾಸಗಿ ಕಂಪನಿಗಳು ತಮ್ಮ ತಮ್ಮ ಇತಿಮಿತಿಯಲ್ಲಿ 'ಮಹಿಳಾ ಉದ್ಯೋಗಿ ಸ್ನೇಹಿ' ನೀತಿಗಳನ್ನು ಅಳವಡಿಸಿಕೊಂಡಿವೆ.

ಇದಲ್ಲದೇ 2017ರಲ್ಲಿ ಅರುಣಾಚಲ ಪ್ರದೇಶದ ಸಂಸದ ನಿನೊಂಗ್ ಎರಿಂಗ್ ಅವರು ಸಂಸತ್ತಿನಲ್ಲಿ 'ದಿ ಮೆನ್ಸ್ಟ್ರುಯೇಷನ್ ಬೆನಿಫಿಟ್ಸ್ ಬಿಲ್ 2017' ಎಂಬ ಖಾಸಗಿ ಮಸೂದೆ ಮಂಡಿಸಿದ್ದಾರೆ. ಇದರ ಅಡಿಯಲ್ಲಿ ಕೇಂದ್ರ/ರಾಜ್ಯ ಸರ್ಕಾರಗಳಲ್ಲಿ ನೋಂದಾಯಿತ ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರುವ ಮಹಿಳೆಯರು ಪ್ರತಿ ತಿಂಗಳು ಎರಡು ದಿನಗಳ ಋತುಚಕ್ರದ ರಜೆಗೆ ಅರ್ಹರಾಗಿರುತ್ತಾರೆ. ಇದು ವಾರ್ಷಿಕವಾಗಿ ಒಟ್ಟಾರೆ 24 ದಿನಗಳ ರಜೆಯಾಗುತ್ತದೆ. ಈ ಬಗ್ಗೆ ಚರ್ಚೆಯಾಗಿ ಇದೊಂದು ಕಾನೂನಾಗಬೇಕಾಗಿದೆ.

ಒಟ್ಟಾರೆ ಮುಟ್ಟಿನ ಸಮಯದಲ್ಲಿ ಪ್ರತಿ ಉದ್ಯೋಗದ ಸ್ಥಳದಲ್ಲಿ ಮಹಿಳೆಯರಿಗೆ ರಜೆ ನೀಡುವ ಸೌಲಭ್ಯ ಅಥವಾ ವಿಶ್ರಾಂತಿ ತೆಗೆದುಕೊಳ್ಳಲು ಒಂದು ಕೊಠಡಿ ಇರಲೇಬೇಕು. ಈ ಅವಧಿಯಲ್ಲಿ ವಿಶ್ರಾಂತಿ ತೆಗೆದುಕೊಂಡಲ್ಲಿ ಅವರ ಕಾರ್ಯಕ್ಷಮತೆ ಮತ್ತಷ್ಟು ಹೆಚ್ಚುತ್ತದೆ. ಜೊತೆಗೆ, ಇಂಥದೊಂದು ಕಾನೂನು ಬಂದಲ್ಲಿ ಉದ್ಯೋಗಸ್ಥ ಮಹಿಳೆಯರಿಗೆ ಮುಟ್ಟಿನ ದಿನಗಳು ಹೆಚ್ಚು ಸಹನೀಯವಾಗಲು ಸಾಧ್ಯ. ❖

30ರ ಹರೆಯದಲ್ಲಿ ಎರಡನೇ ಮಗು ಸಾಧ್ಯವೇ?

ಸ್ಪಂದನ

ಡಾ. ವೀಣಾ ಎಸ್. ಭಟ್

1. ನನಗೆ ಮದುವೆಯಾಗಿ 8 ವರ್ಷ ಆಯಿತು. 7 ವರ್ಷದ ಒಬ್ಬ ಮಗ ಇದ್ದಾನೆ. 2ನೇ ಮಗುವಿಗೆ ಪ್ರಯತ್ನಿಸುತ್ತಿದ್ದೀವಿ. ಈ ಸಮಯದಲ್ಲಿ ಒಮ್ಮೆ ಗರ್ಭಪಾತ ಆಯಿತು. ಇದಾದ ನಂತರ ಪಿ.ಸಿ.ಒ.ಡಿ ಸಮಸ್ಯೆ ಕಾಣಿಸಿಕೊಂಡಿದೆ. ಈಗ ಒಂದು ವರ್ಷದಿಂದ ಎರಡನೇ ಮಗುವಿಗೆ ಪ್ರಯತ್ನಿಸುತ್ತಿದ್ದೇವೆ. ಆಗ್ತಾ ಇಲ್ಲ. ನನಗೆ ಈಗ 30 ವರ್ಷ. ನನ್ನ ತೂಕ 56 ಕೆ.ಜಿ. ಡಾಕ್ಟರ್ ನನಗೆ ಮೈಕ್ರೊ ಮಾತ್ರೆ ಮತ್ತು ಫೋಲ್‌ಕ್ಯೂರ್ 5 ಎಂ.ಜಿ ಮಾತ್ರೆ ಕೊಟ್ಟಿದ್ದಾರೆ. 2 ತಿಂಗಳಿಂದ ತೆಗೆದುಕೊಳ್ಳುತ್ತಿದ್ದೇನೆ. ಎರಡು ತಿಂಗಳಿನಿಂದ ವಾಕಿಂಗ್, ಡಯಟ್ ಎಲ್ಲಾ ಮಾಡ್ತಾ ಇದ್ದೀನಿ, ಆದರೆ ಗರ್ಭಧರಿಸುತ್ತಿಲ್ಲ. ದಯವಿಟ್ಟು ಸಲಹೆ ನೀಡಿ.

ಹೆಸರು, ಊರು ತಿಳಿಸಿಲ್ಲ

ನಿಮಗೀಗಾಗಲೇ 30 ವರ್ಷವಾಗಿರುವುದರಿಂದ ಎರಡನೇ ಮಗು ಪಡೆಯುವುದಕ್ಕೆ ನಿಮ್ಮ ಪ್ರಯತ್ನವನ್ನು ಮುಂದುವರೆಸಿ. ಫೋಲಿಕ್ ಆಸಿಡ್ ಮಾತ್ರೆಯನ್ನು ಮುಂದುವರೆಸಿ. ತಜ್ಞವೈದ್ಯರ ಸಲಹೆಯ ಮೇರೆಗೆ ಮುಟ್ಟಾಗಿ ಎರಡನೇ ದಿನದಿಂದ 5 ದಿನಗಳ ಕಾಲ ಅಂಡಾಶಯದಿಂದ ಅಂಡಾಣು ಬಿಡುಗಡೆಯಾಗಲು ಪ್ರಚೋದಿಸುವ ಮಾತ್ರೆಗಳನ್ನು ತೆಗೆದುಕೊಂಡು ಋತುಫಲಪ್ರದ ದಿನಗಳಲ್ಲಿ ಲೈಂಗಿಕ ಸಂಪರ್ಕ ಮಾಡಿ. ಖಂಡಿತ 6 ತಿಂಗಳೊಳಗೆ ಗರ್ಭಧಾರಣೆಯಾಗುತ್ತದೆ. ಹಾಗೂ ಆಗದಿದ್ದಲ್ಲಿ ಟ್ಯೂಬ್ ಟೆಸ್ಟಿಂಗ್ ಮಾಡಿಸಿಕೊಳ್ಳಿ. ತಜ್ಞವೈದ್ಯರ ಮೇಲ್ವಿಚಾರಣೆಯಲ್ಲಿ ಚಿಕಿತ್ಸೆ ಮುಂದುವರೆಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomi@prajavani.co.in ಗೆ ಕಳಿಸಬಹುದು.

ಮಕ್ಕಳ ಆಸಕ್ತಿಗಿರಲಿ ಆದ್ಯತೆ

ಬಿ.ಕೆ.ಸುಮತಿ

ನಿಖಿತಾಗೆ ಆಟ ಆಡೋದು ತುಂಬಾ ಇಷ್ಟ. ಆದರೆ ಶಾಲೆ ಮುಗಿಸಿ ಬಂದು ಆಟ ಆಡಲು ಹೋದರೆ ಓದಿನಲ್ಲಿ ಹಿಂದೆ ಬೀಳ್ತೀಯಾ. ಮೊದಲು ಓದು ಆಮೇಲೆ ಆಟ ಅಂತಾರೆ ಪೋಷಕರು.

'ನಿಮ್ಮ ಮಕ್ಕಳು 10 ನೇ ತರಗತಿಗೆ ಬಂದಿದ್ದಾರೆ ಅಂತ ಸಂಗೀತದ ಕ್ಲಾಸನ್ನ ಯಾಕೆ ತಪ್ಪಿಸುತ್ತಿದ್ದೀರಿ. ಹಾಗಾದ್ರೆ ಇಷ್ಟು ವರ್ಷ, ಅವರನ್ನು ಕ್ಲಾಸ್‌ಗೆ ಕಳಿಸಿದ್ದು ಯಾಕೆ? 10ನೇ ತರಗತಿ ಪರೀಕ್ಷೆ ಅಷ್ಟೇ ಸಂಗೀತ ಕೂಡ ಮುಖ್ಯ ಅಂತ ನಿಮಗೆ ಯಾಕೆ ಅರ್ಥ ಆಗಲ್ಲ? ಸಂಗೀತ ತರಬೇತಿಯನ್ನು ಯಾಕೆ ಎರಡನೇ ದರ್ಜೆಯ ಕಲಿಕೆ ಅಂತ ನೋಡ್ತೀರಿ?' ಅಂತ ಪೋಷಕರೊಬ್ಬರನ್ನು ಪ್ರಶ್ನೆ ಮಾಡುತ್ತಾರೆ ಸಂಗೀತದ ಟೀಚರ್ ಪದ್ಮಾ.

ಮಕ್ಕಳ ಆಸಕ್ತಿ ವಿಷಯದಲ್ಲಿ ಪೋಷಕರೇಕೆ ಹೀಗೆ ನಡೆದುಕೊಳ್ಳುತ್ತಾರೆ? ಅವರ ಆಸಕ್ತಿಗಳಿಗೆ ಏಕೆ ಆದ್ಯತೆ ನೀಡುವುದಿಲ್ಲ? ಅಂಕಗಳಿಕೆಯಷ್ಟೇ ಮಕ್ಕಳ ಯಶಸ್ಸಿನ ಮಾನದಂಡವಾಗಬೇಕೆ? ಅವರಿಗಿಷ್ಟವಾದದ್ದನ್ನು ಕಲಿತು ಅದರಲ್ಲೂ ಯಶಸ್ಸುಗಳಿಸಬಹುದಲ್ಲವೇ?

– ಇತ್ತೀಚೆಗೆ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾದಾಗ ಹೆಚ್ಚು ಮತ್ತು ಕಡಿಮೆ ಅಂಕ ಪಡೆದ ಮಕ್ಕಳ ಪೋಷಕರ ವರ್ತನೆ ಗಮನಿಸಿದಾಗ, ಇಂಥ ಪ್ರಶ್ನೆಗಳು ಮನದಲ್ಲಿ ಸಾಲಿಟ್ಟವು. ಇದೇ ವೇಳೆ, ಓದಿನಲ್ಲಿ ಫೇಲಾಗಿ ತಮ್ಮ ಆಸಕ್ತಿ ಕ್ಷೇತ್ರದಲ್ಲೇ ಯಶಸ್ಸು ಸಾಧಿಸಿ ಅನೇಕರಿಗೆ ಸ್ಫೂರ್ತಿಯಾದ ವ್ಯಕ್ತಿಗಳೂ ನೆನಪಾದರು !

ಇವೆಲ್ಲ ನೋಡಿದಾಗ, ನನಗನ್ನಿಸಿದ್ದು, ಮಕ್ಕಳ ಯಶಸ್ಸಿಗೆ ಅಂಕಗಳೇ ಮಾನದಂಡವಾಗಬೇಕಿಲ್ಲ. ಅವರಲ್ಲಿರುವ ಆಸಕ್ತಿಯನ್ನು ಗುರುತಿಸಿ, ಅದಕ್ಕೆ ನೀರೆರೆದರೆ ಸಾಕು, ಅಂತ ಎನ್ನಿಸುತ್ತದೆ.

ಆಸಕ್ತಿ ಗುರುತಿಸಬೇಕು

ಮಕ್ಕಳಲ್ಲಿ ಅಗಾಧವಾದ ಸೃಜನಶೀಲ ಶಕ್ತಿ ಇದೆ. ಇದರ ಪ್ರದರ್ಶನಕ್ಕೆ ಒಂದಷ್ಟು ಅವಕಾಶ ನೀಡಬೇಕು. ಮಕ್ಕಳಲ್ಲಿರುವ ಈ ಜ್ಞಾನದ ಶಕ್ತಿಯನ್ನು ಅರ್ಥ ಮಾಡಿಕೊಳ್ಳುವ ಕೆಲಸ ಪೋಷಕರದ್ದು.

ಅದು ಬಹಳ ಸುಲಭ. ಮಗುವಿನ ಆಸೆ, ಆಸಕ್ತಿಗಳನ್ನು ಗಮನಿಸುತ್ತಾ ಹೋದರೆ ಖಂಡಿತ ಅರ್ಥವಾಗುತ್ತಾ ಹೋಗುತ್ತದೆ. ನೋಡಿ, ಮಗುವೊಂದು ಸಿಕ್ಕ ಸಿಕ್ಕ ವಸ್ತುಗಳನ್ನು ಹಿಡಿದು ತಾಳ ಹಾಕುತ್ತಾ ಸಂಗೀತದ ನಾದ ಆಲಿಸುತ್ತಿದೆ ಎಂದರೆ, ಅದಕ್ಕೆ ಮೂಲಭೂತವಾಗಿ ಸಂಗೀತದಲ್ಲಿ ಆಸಕ್ತಿ ಇದೆ ಎಂದುಕೊಳ್ಳಬಹುದು.

ಸಿಕ್ಕಸಿಕ್ಕ ಹಲಗೆ ತುಂಡುಗಳನ್ನು ಬ್ಯಾಟ್ ಮಾಡಿಕೊಂಡು ಬಾಲ್ ಹಿಡಿದುಕೊಂಡು ಆಟ ಆಡುತ್ತಾ ಮೈಕೈ ಧೂಳು ಮಾಡಿಕೊಳ್ಳುತ್ತಾ ಸದಾ ಹೊರಗೆ ಇರುತ್ತಿದ್ದರೆ ಆ ಮಗುವನ್ನು ಕ್ರೀಡೆಗೆ ಕಳುಹಿಸಲು ಅನುಮಾನಿಸಬೇಕಿಲ್ಲ.



ಪೇಪರು ಪೆನ್ನು ಹಿಡಿದು ಗೀಚುತ್ತಾ 'ನಾನು ಬರೆಯುತ್ತೇನೆ, ಅಮ್ಮನ ಹಾಗೆ ಲೆಕ್ಕ ಮಾಡುತ್ತೇನೆ ಅಪ್ಪನ ಹಾಗೆ ಅಕ್ಷರ ಬರೆಯುತ್ತೇನೆ, ಆಫೀಸಿಗೆ ಹೋಗುತ್ತೇನೆ' ಎಂದು ಅನುಕರಿಸುವ ಮಗು ಓದು ಬರಹದಲ್ಲಿ ಹೆಚ್ಚು ಆಸಕ್ತಿ ತೋರಿಸಬಹುದು. ಅಕ್ಷರಗಳನ್ನು ಬೇಗನೆ ಕಲಿಯಬಹುದು, ಪೆನ್ಸಿಲ್ ಹಿಡಿತ ಇಂತಹ ಮಕ್ಕಳಿಗೆ ಬೇಗನೆ ಬಂದುಬಿಡುತ್ತದೆ.

ಹೀಗೆ ಆಸಕ್ತಿಗಳನ್ನು ಅರಿಯುತ್ತಾ ಮಕ್ಕಳನ್ನು ಮುನ್ನಡೆಸಲು ಸಾಧ್ಯವಿದೆ. ಹಾಗಾಗಿ, ಪರೀಕ್ಷೆ ಎಲ್ಲದಕ್ಕೂ ಮಾನದಂಡ ಅಲ್ಲ. ಅಂಕಗಳೂ ಮಕ್ಕಳ 'ಕ್ರಿಯಾಶೀಲತೆ' ಅಳೆಯುವ ಪರಿಕರಗಳೂ ಅಲ್ಲ. ಮಕ್ಕಳಿಗೆ ಅಕ್ಷರಗಳ ಅರಿವು ಬೇಕು ನಿಜ. ಆದರೆ ಅದಕ್ಕಾಗಿ ಅಂಕ ಮತ್ತು ರ್‍ಯಾಂಕುಗಳನ್ನು ಪಡೆಯುವ ಗೀಳಾಗಬಾರದು. ಏಕೆಂದರೆ, ಬದಲಾದ ಶೈಕ್ಷಣಿಕ–ಔದ್ಯೋಗಿಕ ವಾತಾವರಣದಲ್ಲಿ ಎಲ್ಲಾ ಕಡೆ ಅಂಕಗಳಿಗಿಂತ ವ್ಯಕ್ತಿತ್ವಕ್ಕೆ ಹೆಚ್ಚು ಮನ್ನಣೆ ಸಿಗುತ್ತಿದೆ ಎಂಬುದನ್ನು ಗಮನಿಸಬೇಕು. ವ್ಯಕ್ತಿತ್ವ, ವರ್ತನೆ(Attitude) ಚೆನ್ನಾಗಿದ್ದರೆ ಸಾಕು ಉತ್ತಮ ವೇತನ ನೀಡಿ ತಾವೇ ತರಬೇತಿ ಕೊಟ್ಟು ಕೆಲಸವನ್ನು ಕೊಡುವ ಕಂಪನಿಗಳಿವೆ. ಹಾಗಾಗಿ, ಉತ್ತಮ ವ್ಯಕ್ತಿತ್ವ ಬೆಳೆಸುವ ನಿಟ್ಟಿನಲ್ಲಿ ತಂದೆ ತಾಯಿಗಳು ಸಾಗಬೇಕು.

ಆಸಕ್ತಿಯನ್ನು ಪ್ರೋತ್ಸಾಹಿಸಿ

ಮಕ್ಕಳಲ್ಲಿ ಹುದುಗಿರುವ ಇಂಥ ಸುಪ್ತ ಆಸಕ್ತಿ, ಪ್ರತಿಭೆಯನ್ನು ಗುರುತಿಸಿದ ಮೇಲೆ, ಅದನ್ನು ಪ್ರೋತ್ಸಾಹಿಸಬೇಕು. ಹಾಡು ಗುನುಗುವ ಮಗುವಿಗೆ ಸಂಗೀತ ಕಲಿಯಲು ಉತ್ತೇಜಿಸಬೇಕು. ಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಗಳನ್ನು ನೋಡುತ್ತಾ ಅದನ್ನು ಅನುಕರಿಸುವ ಮಗುವಿಗೆ ಚಿತ್ರಕಲೆ ಅಭ್ಯಾಸ ಮಾಡಿಸಬೇಕು.

'ಸಂಗೀತ ಕಲಿಯುತ್ತೇನೆ' ಎನ್ನುವ ಮಕ್ಕಳಿಗೆ, 'ಮೊದಲು ಓದು, ನಂತರ ಸಂಗೀತ ಕಲಿ' ಎಂದು ಗದರಿಸಿ, ಉತ್ಸಾಹ ಕುಂದಿಸಬೇಡಿ. ಹಾಗೆ ಮಾಡಿದರೆ ಓದಿನಲ್ಲೂ ಆಸಕ್ತಿ ಕಳೆದುಕೊಳ್ಳಬಹುದು. ಬದಲಿಗೆ, 'ನಾಳೆಯಿಂದಲೇ ಸಂಗೀತ ಕಲಿಯಲು ಹೋಗು' ಎಂದು ಹೇಳಿ ನೋಡಿ. ಆ ಮಗು ತನ್ನಿಷ್ಟದ ಸಂಗೀತದ ಜೊತೆಗೆ, ಓದಿನಲ್ಲೂ ಮುಂದೆ ಬರಬಹುದು. ಹೀಗೆ ಸುಪ್ತ ಶಕ್ತಿ, ಆಸಕ್ತಿಯನ್ನು ಪೋಷಿಸಿದಾಗ ಅದು ಅವರ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗುತ್ತದೆ. ಕಾರ್ಯ ಕ್ಷಮತೆ, ನೆನಪಿನ ಶಕ್ತಿ ಹೆಚ್ಚುತ್ತದೆ.

ಈಗ ಮಕ್ಕಳು ಪ್ರೌಢಶಾಲೆ ಹಂತಕ್ಕಿಂತ ಮುಂಚೆಯೇ ತಮ್ಮ ಗುರಿ ಹುಡುಕಿಕೊಂಡು ಯಶಸ್ವಿಯಾಗುತ್ತಿರುವ ಉದಾಹರಣೆಗಳಿವೆ. ಹಾಗಾಗಿ, ಮಕ್ಕಳಿಗೆ ಏನು ಬೇಕು ಎನ್ನುವುದನ್ನು ಪೋಷಕರು ಸರಿಯಾಗಿ ಅರಿತುಕೊಳ್ಳಬೇಕು.

ಈಗಿರುವ 'ಅಂಕ'ದ ಪರದೆ ಸರಿಸಿ, 'ಸುಂಕ'ಗಳ ನಾಟಕಕ್ಕೆ ಬ್ರೇಕ್ ಹಾಕಿ, ಮಕ್ಕಳಲ್ಲಿರುವ 'ಆಸಕ್ತಿ'ಗೆ ನೀರೆರೆಯುವ ಕೆಲಸವನ್ನು ಪೋಷಕರು ಮಾಡಬೇಕು. ಈ ನಿಟ್ಟಿನಲ್ಲಿ ಬದಲಾವಣೆಯ ಗಾಳಿ ಬೀಸಲಿ ಎಂದು ಆಶಿಸೋಣ. ❖

GRT JEWELLERS Since 1964

ಬೆಳ್ಳಿಯ ಶುದ್ಧತೆಯನ್ನು ನಿಮ್ಮ ಟೇಬಲ್‌ಗೆ ತನ್ನಿ.

ಮನೆಯಲ್ಲಿ ನಿಮ್ಮ ಅನುಭವಗಳ ಮೂಲಕ ಸ್ವಚ್ಛವಾದ ಬೆಳ್ಳಿ ಹೊಳೆಯಲಿ.
GRTಯ 92.5 ಬೆಳ್ಳಿಯಲ್ಲಿ ರಚಿಸಲಾದ ವಿಶಾಲ ಶ್ರೇಣಿಯ ಡಿನ್ನರ್ ಸೆಟ್‌ಗಳಿಂದ ಆಯ್ಕೆಮಾಡಿ.

25%* ರಿಯಾಯಿತಿ ಬೆಳ್ಳಿ ವಸ್ತುಗಳ ವೇಸ್ಟೇಜ್ (VA) ನ ಮೇಲೆ

10%* ರಿಯಾಯಿತಿ ಬೆಳ್ಳಿ ಆಭರಣಗಳ MRPಯ ಮೇಲೆ

*ನಿಬಂಧನೆಗಳು ಅನ್ವಯಿಸುತ್ತವೆ.

FLAT ₹2,000 CASHBACK# SBI card

#Min. Trxn.: ₹40,000. Valid once per card account.
Validity: 20 May - 12 Jun 2022. T&C Apply.

(Cash back offer applicable on all purchases)

AVAIL ATTRACTIVE GIFTS ON UPI PAYMENTS.

Karnataka | Andhra Pradesh | Telangana | Tamil Nadu | Puducherry || Singapore

Shop online at: www.oriana.com | mail@grtjewels.com | GRT LIVE VIDEO SHOPPING Shop from the comfort of your home

❦ ಸುಭಾಷಿತ ❦

ಜನರಿಗೆ ಹಿರಿಯರಿಂದ ಬರುವ ಆಭರಣಗಳಲ್ಲಿ ಭಾಷೆಯೂ ಒಂದು. ಅದು ಚೆನ್ನಾಗಿದ್ದಷ್ಟೂ ಭೂಷಣ.

–ಬಿ.ಎಂ.ಶ್ರೀ.

ಆಧಾರ್ ಸಂಖ್ಯೆ ಸುರಕ್ಷತೆ ಸರ್ಕಾರವೇ ಹೊಣೆ

ಆಧಾರ್ ಸಂಖ್ಯೆಯನ್ನು ಹೊಂದಿರುವ ಚೀಟಿಯ ನಕಲು ಪ್ರತಿಯನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ, ಅದು ದುರ್ಬಳಕೆ ಆಗುವ ಸಾಧ್ಯತೆ ಇರುತ್ತದೆ ಎಂದು ಕೇಂದ್ರ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು (ಯುಐಡಿಎಐ) ಈಚೆಗೆ ಪತ್ರಿಕಾ ಪ್ರಕಟಣೆ ಹೊರಡಿಸಿತ್ತು. ಇದರ ವಿಚಾರವಾಗಿ ವಿವಿಧ ವಲಯಗಳಿಂದ ಆತಂಕ ವ್ಯಕ್ತವಾದ ನಂತರದಲ್ಲಿ ಪತ್ರಿಕಾ ಹೇಳಿಕೆಯೊಂದನ್ನು ಹೊರಡಿಸಿದ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಆಧಾರ್ ಸಂಖ್ಯೆ ಇರುವ ಗುರುತಿನ ಚೀಟಿಯ ನಕಲು ಪ್ರತಿಯನ್ನು ಹಂಚಿಕೊಳ್ಳುವ ಸಂದರ್ಭದಲ್ಲಿ 'ಯಾವತ್ತೂ ಅನುಸರಿಸುವ ಎಚ್ಚರಿಕೆ'ಯ ಕ್ರಮಗಳನ್ನು ಮಾತ್ರ ಪಾಲಿಸಿದರೆ ಸಾಕು ಎಂದು ಹೇಳಿತು. ಯುಐಡಿಎಐ ಹೊರಡಿಸಿದ್ದ ಪತ್ರಿಕಾ ಪ್ರಕಟಣೆಯನ್ನು ಹಿಂಪಡೆಯುತ್ತಿರುವುದಾಗಿಯೂ ಸಚಿವಾಲಯ ಹೇಳಿತು. ಆಧಾರ್ ಸಂಖ್ಯೆ ಇರುವ ಗುರುತಿನ ಚೀಟಿಯ ನಕಲು ಪ್ರತಿಯನ್ನು ಹಂಚಿಕೊಳ್ಳುವ ವಿಚಾರದಲ್ಲಿನ ಈ ಎರಡು ಬೆಳವಣಿಗೆಗಳು, ಆಧಾರ್ ಹೆಸರಿನಲ್ಲಿ ಸಂಗ್ರಹಿಸಲಾಗಿರುವ ಪ್ರಜೆಗಳ ಮಾಹಿತಿಯ ಸುರಕ್ಷತೆ ಬಗ್ಗೆ ಮತ್ತೆ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಈ ಮಾಹಿತಿಯನ್ನು ಬಳಸಿ ಜನರ ಮೇಲೆ ಕಣ್ಗಾವಲು ಇರಿಸಬಹುದೇ ಎಂಬ ಕಳವಳವನ್ನೂ ಪುನಃ ಮೂಡಿಸಿವೆ. ಆಧಾರ್ ಗುರುತಿನ ಚೀಟಿಯ ನಕಲು ಪ್ರತಿಗಳನ್ನು ಯುಐಡಿಎಐ ಕಡೆಯಿಂದ ಪರವಾನಗಿ ಪಡೆದಿಲ್ಲದ ಹೋಟೆಲ್, ಸಿನಿಮಾ ಮಂದಿರ ಅಥವಾ ಇತರ ಯಾವುದೇ ಸಂಸ್ಥೆಯ ಜೊತೆ ಹಂಚಿಕೊಳ್ಳಬೇಡಿ ಎಂದು ಮೊದಲಿನ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಇ–ಆಧಾರ್ ಚೀಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಸಾರ್ವಜನಿಕ ಕಂಪ್ಯೂಟರ್ ಕೇಂದ್ರಗಳನ್ನು ಬಳಕೆ ಮಾಡಿಕೊಳ್ಳಬಾರದು ಎಂದೂ ಅದು ಎಚ್ಚರಿಕೆ ನೀಡಿತ್ತು. ಆಧಾರ್ ಸಂಖ್ಯೆಯ ಕೊನೆಯ ನಾಲ್ಕು ಅಂಕಿಗಳನ್ನು ಮಾತ್ರ ತೋರಿಸುವ ಆಧಾರ್ ಕಾರ್ಡ್ ಬಳಸುವಂತೆಯೂ ಸಲಹೆ ನೀಡಿತ್ತು. ಇದು ಹಲವರಲ್ಲಿ ಆತಂಕಕ್ಕೆ ಕಾರಣವಾಯಿತು. ತಾವು ಆಧಾರ್ ಗುರುತಿನ ಚೀಟಿಯ ನಕಲು ಪ್ರತಿಯನ್ನು ಹಲವರಿಗೆ ಈಗಾಗಲೇ ನೀಡಿ ಆಗಿದೆ ಎಂದು ಅವರು ಹೇಳಿದರು. ಆದರೆ, 'ತಪ್ಪು ವ್ಯಾಖ್ಯಾನಕ್ಕೆ ಗುರಿಯಾಗುವ ಸಾಧ್ಯತೆ ಇದೆ' ಎಂಬ ಕಾರಣ ನೀಡಿ ಯುಐಡಿಎಐ ನೀಡಿದ್ದ ಎಚ್ಚರಿಕೆಯನ್ನು ಸಚಿವಾಲಯವು ಒಂದು ದಿನದ ನಂತರ ಹಿಂದಕ್ಕೆ ಪಡೆಯಿತು.

ದೇಶದ ಪ್ರಜೆಗಳ ಬೃಹತ್ ಪ್ರಮಾಣದ ಖಾಸಗಿ ಮಾಹಿತಿಯು ಈಗ ಸರ್ಕಾರದ ಬಳಿ ಇದೆ. ಹೀಗಾಗಿ, ಆ ಮಾಹಿತಿಯು ದುರ್ಬಳಕೆ ಆಗದಂತೆ ನೋಡಿಕೊಳ್ಳುವ ಹೊಣೆಯೂ ಅದರ ಮೇಲೆಯೇ ಇದೆ

ಹನ್ನೆರಡು ಅಂಕಿಗಳ ಆಧಾರ್ ಸಂಖ್ಯೆಗೆ ನೀಡಿರುವ ಮಾಹಿತಿಯ ಸುರಕ್ಷತೆಯ ಬಗ್ಗೆ ಗಂಭೀರ ಪ್ರಶ್ನೆಗಳು ಹಿಂದಿನಿಂದಲೂ ಇವೆ. ಆದರೆ, ಮಾಹಿತಿಯು ಸಂಪೂರ್ಣ ಸುರಕ್ಷಿತ, ಅದನ್ನು ವಾಣಿಜ್ಯ ಉದ್ದೇಶಕ್ಕೆ ಅಥವಾ ಕಣ್ಗಾವಲು ಇರಿಸುವ ಉದ್ದೇಶಕ್ಕೆ ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಇಲ್ಲ ಎಂದು ಕೇಂದ್ರ ಸರ್ಕಾರವು ಮೊದಲಿನಿಂದಲೂ ಪ್ರತಿಪಾದಿಸುತ್ತ ಬಂದಿದೆ. ಹೀಗಿದ್ದರೂ, ಒಂದು ಎಚ್ಚರಿಕೆಯನ್ನು ನೀಡಿ, ಅದನ್ನು ಹಿಂದಕ್ಕೆ ಪಡೆದ ನಂತರದಲ್ಲಿ ಮೂಡಿರುವ ಪ್ರಶ್ನೆಗಳು ಹಲವು. ಯುಐಡಿಎಐ ಕಡೆಯಿಂದ ಮೊದಲು ಎಚ್ಚರಿಕೆ ಕೊಟ್ಟದ್ದು ಏಕೆ? ಅದನ್ನು ಹಿಂದಕ್ಕೆ ಪಡೆಯುವ ಪತ್ರಿಕಾ ಹೇಳಿಕೆಯಲ್ಲಿ ಇರುವ 'ಮಾಮೂಲಿ ಎಚ್ಚರಿಕೆ' ಅಂದರೆ ಏನು? ಅನಕ್ಷರಸ್ಥರು, ಡಿಜಿಟಲ್ ಸಾಕ್ಷರತೆ ಇಲ್ಲದವರು ಈ ಬಗೆಯ ಎಚ್ಚರಿಕೆಯನ್ನು ಹೇಗೆ ತೆಗೆದುಕೊಳ್ಳಬೇಕು? ಸ್ವಂತ ಕಂಪ್ಯೂಟರ್ ಹೊಂದಿಲ್ಲದಿರುವವರು ಆಧಾರ್ ಗುರುತಿನ ಚೀಟಿಯನ್ನು ಎಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬೇಕಿತ್ತು? ಆಧಾರ್ ಸಂಖ್ಯೆಯನ್ನು ಸರ್ಕಾರದ ಸೇವೆಗಳನ್ನು ತಲುಪಿಸಲು ಮಾತ್ರ ಬಳಕೆ ಮಾಡಿಕೊಳ್ಳಲಾಗುವುದು, ಅದನ್ನು ಗುರುತಿನ ಚೀಟಿಯಾಗಿ ಬಳಸಿಕೊಳ್ಳುವುದಿಲ್ಲ ಎಂದು ಮತ್ತೆ ಮತ್ತೆ ಹೇಳಲಾಗಿತ್ತು. ಆದರೆ ಈಗ ಖಾಸಗಿ ಸಂಸ್ಥೆಗಳು, ಕಂಪನಿಗಳು ಸಹ ಆಧಾರ್ ಸಂಖ್ಯೆಯನ್ನು ಬಹಳ ಸಹಜವಾಗಿ ಕೇಳುತ್ತಿವೆ. ಹಲವು ಸಂಸ್ಥೆಗಳಿಗೆ ಆಧಾರ್ ಸಂಖ್ಯೆಯನ್ನು ದೃಢೀಕರಿಸಲು ಸಾಧನಗಳು ಇಲ್ಲ, ಅನುಮತಿಯೂ ಇಲ್ಲ. ಹೀಗಿದ್ದರೂ ಅವು ಆಧಾರ್ ನಕಲು ಪ್ರತಿಯನ್ನು ಪಡೆದುಕೊಳ್ಳುತ್ತಿವೆ. ಇವನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆಗಳು ಇದ್ದೇ ಇವೆ.

ಆಧಾರ್ ಸಂಖ್ಯೆಯನ್ನು ದುರ್ಬಳಕೆ ಮಾಡಿಕೊಳ್ಳಬಹುದು ಎಂಬುದನ್ನು ಸಾಮಾಜಿಕ ಕಾರ್ಯಕರ್ತರು ಹಿಂದೆ ತೋರಿಸಿಕೊಟ್ಟಿದ್ದಾರೆ. ಕೆಲವು ವರ್ಷಗಳ ಹಿಂದೆ ಪತ್ರಿಕೆಯೊಂದು, ₹ 500 ಪಾವತಿಸಿದರೆ ಲಕ್ಷಾಂತರ ಸಂಖ್ಯೆಯಲ್ಲಿ ಆಧಾರ್ ಸಂಖ್ಯೆ ಮತ್ತು ವೈಯಕ್ತಿಕ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ವರದಿ ಮಾಡಿತ್ತು. ಆಧಾರ್‌ನೊಂದಿಗೆ ಜೋಡಣೆಯಾಗಿರುವ ಬಯೊಮೆಟ್ರಿಕ್ ವಿವರಗಳನ್ನು ನಿಷ್ಕ್ರಿಯಗೊಳಿಸಬೇಕು ಎಂದು ತೆಲಂಗಾಣ ಪೊಲೀಸರು ಈಚೆಗೆ ಒಂದಿಷ್ಟು ಮಂದಿಗೆ ಸೂಚಿಸಿದ್ದರು. ಆಧಾರ್ ಮಾಹಿತಿಯನ್ನು ಸಂಗ್ರಹಿಸುವ, ಅದನ್ನು ಹಂಚಿಕೊಳ್ಳುವ ಪ್ರಕ್ರಿಯೆಯ ಬಗ್ಗೆ ಆಮೂಲಾಗ್ರ ಪರಿಶೀಲನೆ ಆಗಬೇಕು ಎಂಬುದನ್ನು ಇಂತಹ ಪ್ರಕರಣಗಳು ಹೇಳುತ್ತಿವೆ. ದೇಶದ ಪ್ರಜೆಗಳ ಬೃಹತ್ ಪ್ರಮಾಣದ ಖಾಸಗಿ ಮಾಹಿತಿಯು ಈಗ ಸರ್ಕಾರದ ಬಳಿ ಇದೆ. ಹೀಗಾಗಿ, ಆ ಮಾಹಿತಿಯು ದುರ್ಬಳಕೆ ಆಗದಂತೆ ನೋಡಿಕೊಳ್ಳುವ ಹೊಣೆಯೂ ಅದರ ಮೇಲೆಯೇ ಇದೆ. ದೇಶದಲ್ಲಿ ಖಾಸಗಿತನದ ಹಕ್ಕನ್ನು ರಕ್ಷಿಸುವ ಕಾಯ್ದೆಯೊಂದು ಇನ್ನೂ ಜಾರಿಗೆ ಬಂದಿಲ್ಲದಿರುವುದು ಮಾಹಿತಿ ದುರ್ಬಳಕೆಯ ಅಪಾಯ ಜಾಸ್ತಿಯಾಗುವಂತೆ ಮಾಡಿದೆ.

ದಿನದ ಟ್ವೀಟ್

ಇದು ಸರಿಯೇ?

ಹೈದರಾಬಾದ್‌ನ ಅತ್ಯಾಚಾರ ಪ್ರಕರಣದಲ್ಲಿ ಐವರು ಆರೋಪಿಗಳಿದ್ದಾರೆ. ಆದರೆ ಆರೋಪಿಗಳು ನಾಲ್ವರು ಮಾತ್ರ, ಅತ್ಯಾಚಾರ ಎಸಗುವ ಮೊದಲೇ ಶಾಸಕರ ಪುತ್ರ ಕಾರಿನಿಂದ ಇಳಿದುಹೋಗಿದ್ದ ಎಂಬ ಮಾಹಿತಿಯನ್ನು ಪೊಲೀಸರು ಮಾಧ್ಯಮಗಳಿಗೆ ಸೋರಿಕೆ ಮಾಡಿದ್ದಾರೆ! ಸಿಸಿ ಟಿವಿ ದೃಶ್ಯಾವಳಿಗಳು ಸ್ಪಷ್ಟವಾಗಿ ಇಲ್ಲ ಎಂಬ ಕಾರಣಕ್ಕೆ ಸಂಜೆಯವರೆಗೂ ಪೊಲೀಸರು ಯಾರನ್ನೂ ಬಂಧಿಸಿರಲಿಲ್ಲ. ಆದರೂ ಶಾಸಕರ ಪುತ್ರ ಕಾರಿನಿಂದ ಯಾವಾಗ ಇಳಿದುಹೋದ ಎಂಬುದು ಮಾತ್ರ ಅವರಿಗೆ ನಿಖರವಾಗಿ ತಿಳಿಯಿತೇ?

ರೇವತಿ, ಪತ್ರಕರ್ತೆ

ಕಿಡಿನುಡಿ

ಮಧ್ಯಪ್ರದೇಶದ ವಿದಿಶಾದಲ್ಲಿ ಹಾಡಹಗಲೇ ಮತ್ತೊಬ್ಬ ಆರ್‌ಟಿಐ ಕಾರ್ಯಕರ್ತನನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಅವರು ಸಂಗ್ರಹಿಸಿದ್ದ ಎಲ್ಲ ಮಾಹಿತಿಯನ್ನೂ ಬಹಿರಂಗಪಡಿಸಬೇಕು. ಇಂತಹ ನೂರಾರು ಪ್ರಕರಣಗಳು ನಡೆದಿವೆ. ಆದರೂ ಭ್ರಷ್ಟಾಚಾರದ ವಿರುದ್ಧ ಹೋರಾಡುವವರ ರಕ್ಷಣೆಗಾಗಿ ರೂಪಿಸಿದ ಕಾಯ್ದೆಯನ್ನು (2014ರಲ್ಲಿ ಅನುಮೋದನೆಗೊಂಡಿದೆ) ಸರ್ಕಾರ ಈವರೆಗೂ ಜಾರಿಗೊಳಿಸಿಲ್ಲ.

ಧೀರಜ್ ಮಿಶ್ರಾ, ಪತ್ರಕರ್ತ

25 ವರ್ಷಗಳ ಹಿಂದೆ

ಬುಧವಾರ, 4-6-1997

● **ರಾಜ್ಯದ ರತ್ನಮಾಲಾ ಸೇರಿ ನಾಲ್ವರು ಕೇಂದ್ರ ಸಂಪುಟಕ್ಕೆ**

ನವದೆಹಲಿ, ಜೂನ್ 3– ಪ್ರಧಾನಿ ಇಂದ್ರಕುಮಾರ್ ಗುಜ್ರಾಲ್ ಅವರು ಕರ್ನಾಟಕದ ರತ್ನಮಾಲಾ ಸವಣೂರ, ಬಿಹಾರದ ಕಮಲಾ ಸಿನ್ಹಾ, ತಮಿಳುನಾಡಿನ ಜಯಂತಿ ನಟರಾಜನ್ ಮತ್ತು ಆಂಧ್ರ ಪ್ರದೇಶದ ರೇಣುಕಾ ಚೌಧರಿ ಅವರನ್ನು ಸಂಪುಟಕ್ಕೆ ತೆಗೆದುಕೊಳ್ಳುವ ಮೂಲಕ ತಮ್ಮ ಒಂದೂವರೆ ತಿಂಗಳ ಮಂತ್ರಿಮಂಡಲವನ್ನು ವಿಸ್ತರಿಸಿದರು. ಇದುವರೆಗೂ ಬಿಹಾರದ ಕಾಂತಿಸಿಂಗ್ ಸಂಪುಟದ ಏಕೈಕ ಮಹಿಳೆಯಾಗಿದ್ದರು. ಮಹಿಳೆಯರ ಸಂಖ್ಯೆ ಐದಕ್ಕೆ ಹೆಚ್ಚಿತು.

● **ಪದಕ ಬೇಟೆ: ಕರ್ನಾಟಕದ ಮೇಲುಗೈ**

ಬೆಂಗಳೂರು, ಜೂನ್ 3– ಕರ್ನಾಟಕ ತಂಡದವರು ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಇಂದು ಕೂಡಾ ತಮ್ಮ ಪದಕ ಬೇಟೆಯಲ್ಲಿ ಅಗ್ರಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಕರ್ನಾಟಕ ಈವರೆಗೆ ಒಟ್ಟು ಹತ್ತು ಚಿನ್ನ ಸೇರಿದಂತೆ 27 ಪದಕಗಳನ್ನು ಗಳಿಸಿದೆ.

50 ವರ್ಷಗಳ ಹಿಂದೆ

ಭಾನುವಾರ, 4-6-1972

● **ಕೋಮುಗಲಭೆಗಳ ದಮನಕ್ಕೆ ಪೊಲೀಸ್ ಬಿಗಿವರ್ತನೆ ಅಗತ್ಯ**

ಬೆಂಗಳೂರು, ಜೂನ್ 3– ಆಗಾಗ ದೇಶದ ಹಲವೆಡೆಗಳಲ್ಲಿ ವಿವಿಧ ರೂಪಗಳಲ್ಲಿ ತಲೆಹಾಕುತ್ತಿರುವ ಕೋಮುಗಲಭೆಗಳನ್ನು ಹತ್ತಿಕ್ಕುವಲ್ಲಿ ಪೊಲೀಸ್ ಮತ್ತು ನ್ಯಾಯ ಇಲಾಖೆಗಳು ಬಿಗಿಯಿಂದ ವರ್ತಿಸಬೇಕಾದ ಅಗತ್ಯವನ್ನು ಕೇಂದ್ರವು ರಾಜ್ಯ ಸರ್ಕಾರಗಳಿಗೆ ಮನಗಾಣಿಸಿದೆ.

ಈ ಸಂಬಂಧದಲ್ಲಿ ನಗರದಲ್ಲಿ ಇಂದು ಮುಕ್ತಾಯವಾದ ದಕ್ಷಿಣದ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು, ಐ.ಜಿ.ಪಿ.ಗಳು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರುಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಗೃಹ ಇಲಾಖೆ ಕಾರ್ಯದರ್ಶಿ ಗೋವಿಂದ ನಾರಾಯಣ್ ಅವರು, ಆಡಳಿತ ಯಂತ್ರವು ಗಲಭೆಯ ಮುನ್ಸೂಚನೆಗಳಿಗಾಗಿ ಸದಾ ಜಾಗೃತವಾಗಿರಬೇಕು ಎಂದು ಕರೆ ನೀಡಿದರು.

● **ಕೋಮುವಾರು ಸಂಘಗಳ ಕವಾಯತು ನಿಷೇಧಿಸಲು ಸರ್ಕಾರಕ್ಕೆ ಅಧಿಕಾರ**

ನವದೆಹಲಿ, ಜೂನ್ 3– ಹಿಂಸಾಚಾರ ಎಸಗುವ ಉದ್ದೇಶಗಳಿಗಾಗಿ ಶಿಕ್ಷಣ ನೀಡುವ, ಕೋಮು, ಭಾಷೆ ಅಥವಾ ಪ್ರಾದೇಶಿಕ ಭಾವನೆಗಳನ್ನು ಕೆರಳಿಸುವುದಕ್ಕಾಗಿ ಪ್ರಚಾರದಲ್ಲಿ ತೊಡಗುವ ಸಂಸ್ಥೆಗಳನ್ನು ಕಾನೂನುಬಾಹಿರ ಎಂದು ಘೋಷಿಸಬಹುದಾದ ವಿಧೇಯಕಕ್ಕೆ ಸಂಸತ್ತು ಅನುಮೋದನೆ ನೀಡಿದೆ.

ಲಕ್ಷಾಂತರ ಗಿಡಗಳನ್ನು ನೆಟ್ಟ ಅಂಕಿಅಂಶ ಲಭ್ಯವಾಗುತ್ತದೆ. ಆದರೆ ವಾಸ್ತವದಲ್ಲಿ...

ನೆಟ್ಟ ಗಿಡ ಹೇಳುತ್ತದೆ ಬೇರೆಯದೇ ಕತೆ

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಜೂನ್ 5 ಎಂದರೆ ಅಂದು ವಿಶ್ವ ಪರಿಸರ ದಿನಾಚರಣೆ ಎಂದು ಮಕ್ಕಳೂ ಹೇಳುವಷ್ಟು ಮಹತ್ವ ಈ ದಿನಕ್ಕಿದೆ. ಅಧಿಕಾರಸ್ಥರು ಆ ದಿನ ಬೆಳಗ್ಗೆಯೇ ಸಸಿ ನೆಟ್ಟು ನೀರು ಹಾಕುತ್ತಾರೆ. ಫೋಟೊಕ್ಕೊಂದು ಪೋಸು ಸಿಗುತ್ತದೆ. 1972ರಿಂದಲೂ ಈ ಪ್ರಕ್ರಿಯೆ ನಡೆಯುತ್ತಲೇ ಇದೆ. ಹಾಗಾದರೆ, ಈ ಕ್ರಮದಿಂದ ಇಡೀ ಕರುನಾಡು ಹಸಿರಾಗಿ ಕಂಗೊಳಿಸಬೇಕಿತ್ತಲ್ಲವೇ? ಈ ಹಸಿರಿನ ಕಾರಣಕ್ಕೆ ಸಾಮಾಜಿಕ ಆರೋಗ್ಯ ನಳನಳಿಸುತ್ತಿರಬೇಕಿತ್ತಲ್ಲವೇ? ಇದೇ ಹಸಿರಿನ ಕಾರಣಕ್ಕೆ ಜಲಸಮೃದ್ಧಿ ಆಗಿರಬೇಕಿತ್ತಲ್ಲವೇ? ಆಗಿಲ್ಲವೆಂದರೆ, ನೆಟ್ಟ ಗಿಡಗಳನ್ನು ಭೂಮಿ ನುಂಗಿತೇ? ಮತ್ತೇನಾಯಿತು?

ರಾಜ್ಯದಲ್ಲಿನ 200ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಇರುವ ಅರಣ್ಯ ಇಲಾಖೆಗೆ ಸೇರಿದ ನರ್ಸರಿಗಳಲ್ಲಿ ಪ್ರತಿವರ್ಷ ಲಕ್ಷಾಂತರ ಗಿಡಗಳನ್ನು ಬೆಳೆಸಲಾಗುತ್ತದೆ. ಇದಕ್ಕಾಗಿಯೇ ಪ್ರತ್ಯೇಕ ಬಜೆಟ್ ಮೀಸಲಾಗಿರುತ್ತದೆ. ಮಧ್ಯ ಪಶ್ಚಿಮಘಟ್ಟದ ಸಾಗರದಂತಹ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆ ಹಾಗೂ ಸಾಮಾಜಿಕ ಅರಣ್ಯ ಇಲಾಖೆಯಡಿ ಎರಡು ನರ್ಸರಿಗಳಿವೆ. ವರ್ಷಂಪ್ರತಿ ಈ ನರ್ಸರಿಗಳಲ್ಲಿ ಕನಿಷ್ಠ ನಾಲ್ಕು ಲಕ್ಷ ಸಸಿಗಳನ್ನು ಬೆಳೆಸುತ್ತಾರೆ ಹಾಗೂ ಪ್ರತೀ ಮಳೆಗಾಲದಲ್ಲಿ ಇಲಾಖಾ ಪ್ಲಾಂಟೇಷನ್‌ಗಳಲ್ಲಿ ಹಾಗೂ ಸಾರ್ವಜನಿಕ ವಿತರಣೆಯ ಮೂಲಕ ಅವುಗಳನ್ನು ನೆಡಲಾಗುತ್ತದೆ. ರಾಜ್ಯದ ಇನ್ನೂರು ತಾಲ್ಲೂಕುಗಳಲ್ಲಿ ವರ್ಷಕ್ಕೆ ತಲಾ ಒಂದು ಲಕ್ಷ ಸಸಿಗಳನ್ನು ನೆಡಲಾಗುತ್ತದೆ ಎಂದು ಭಾವಿಸಿದರೆ, ಕಳೆದ 25 ವರ್ಷಗಳಲ್ಲಿ 50 ಕೋಟಿ ಸಸಿಗಳು ಭೂಮಿಗೆ ತಮ್ಮ ಬೇರಿಳಿಸಿ ಬೆಳೆಯಬೇಕಿತ್ತು. ಹಾಗಾಗಿಲ್ಲವೆಂದರೆ ಬೇರೆ ಏನೋ ಬಲವಾದ ಕಾರಣ ಇರಬೇಕಲ್ಲವೇ?

ಗಿಡಗಳನ್ನು ಬೆಳೆಸುವುದು ಕ್ರಮಬದ್ಧವಾಗಿ ನಡೆಯುವ ಒಂದು ಪ್ರಕ್ರಿಯೆ. ಇದು, ಅರಣ್ಯ ಇಲಾಖೆಯ ನರ್ಸರಿಗೂ ಅನ್ವಯಿಸುತ್ತದೆ, ಖಾಸಗಿ ನರ್ಸರಿಗೂ ಅನ್ವಯಿಸುತ್ತದೆ. ಮೊದಲು ಎಲ್ಲಾ ಜಾತಿಯ ಬೀಜಗಳನ್ನು ಸಂಗ್ರಹಿಸಬೇಕು. ಅರಣ್ಯ ಇಲಾಖೆಯಲ್ಲಿ ಬೀಜಗಳನ್ನು ಸಂಗ್ರಹಿಸಲು ಪ್ರತ್ಯೇಕ ವಿಭಾಗವೇ ಇದೆ. ಕಾಡಿನಲ್ಲಿ ಬೆಳೆದ ಅತ್ಯುತ್ತಮ ತಾಯಿಮರದಿಂದ ಸಂಗ್ರಹಿಸಿದ ಬೀಜಗಳು ಒಳ್ಳೆಯ ಗಿಡಗಳ ಸೃಷ್ಟಿಗೆ ಕಾರಣವಾಗಬಲ್ಲವು. ಈ ಮೊದಲ ಹೆಜ್ಜೆಯಲ್ಲೇ ಎಡವಟ್ಟು ಆಗುವುದು ಹೆಚ್ಚು. ಬೀಜ ಸಂಗ್ರಹ ವಿಭಾಗವೂ ಬೀಜಗಳನ್ನು ಸಂಗ್ರಹಿಸಿ ಕೊಡಲು ಖಾಸಗಿ ವ್ಯಕ್ತಿಗಳನ್ನು ನೆಚ್ಚಿಕೊಂಡಿರುವುದೇ ಅದಕ್ಕೆ ಕಾರಣ.

ಕಾಡಿನಲ್ಲಿ ಸಿಗುವ ಎಲ್ಲಾ ಬಗೆಯ ದುರ್ಬಲ ಹಾಗೂ ಸಬಲ ಬೀಜಗಳು ಗುತ್ತಿಗೆದಾರರ ಮೂಲಕ ಅರಣ್ಯ ಇಲಾಖೆಯ ಬೀಜ ನಿರ್ವಹಣೆ ವಿಭಾಗಕ್ಕೆ ಬಂದು, ಅಲ್ಲಿಂದ ತಾಲ್ಲೂಕು ಅರಣ್ಯ ಕಚೇರಿಗಳಿಗೆ ರವಾನೆಯಾಗುತ್ತವೆ. ಇದೇ ಬೀಜಗಳು ಅರಣ್ಯ ಇಲಾಖೆಯ ನರ್ಸರಿಗಳನ್ನು ಸೇರುತ್ತವೆ. ಅಲ್ಲಿ ವಿಶೇಷ ಆರೈಕೆಯ ಮೂಲಕ ಮಡಿ ಮಾಡಿ ಸಸಿಗಳನ್ನು ಬೆಳೆಸಲಾಗುತ್ತದೆ.

ವಿವಿಧ ಗಿಡಗಳ ಬೆಳವಣಿಗೆಯ ಆಧಾರದ ಮೇಲೆ ವಿವಿಧ ಪ್ಲಾಸ್ಟಿಕ್ ತೊಟ್ಟೆಗಳಲ್ಲಿ ಅವನ್ನು ಬೆಳೆಸಲಾಗುತ್ತದೆ. ಗಿಡಗಳು ಆರೋಗ್ಯವಂತವಾಗಿ ಬೆಳೆಯಬೇಕು ಎಂಬ ದೃಷ್ಟಿಯಿಂದ ಕಾಲಕಾಲಕ್ಕೆ ಅವುಗಳಿಗೆ ರಾಸಾಯನಿಕ ಗೊಬ್ಬರವನ್ನು, ಬೇಸಿಗೆ ಮತ್ತು ಚಳಿಗಾಲದಲ್ಲಿ ಪ್ರತಿನಿತ್ಯ ಎರಡು ಬಾರಿ ನೀರನ್ನು ನೀಡಿ ಪೋಷಣೆ ಮಾಡುತ್ತಾರೆ. ಅದೇ ಗಿಡ ಒಂದಡಿ ಎತ್ತರ ಬೆಳೆಯುತ್ತಿದ್ದಂತೆಯೇ ಮತ್ತೊಂದು ದೊಡ್ಡ ಪ್ಲಾಸ್ಟಿಕ್ ತೊಟ್ಟೆಗೆ ಅದನ್ನು ಸ್ಥಳಾಂತರಿಸಲಾಗುತ್ತದೆ. ವೇಗವಾಗಿ ಬೆಳೆಯುವ ನೇರಳೆ ಸಸಿಗಳ ಬೇರುಗಳು ಆಳಕ್ಕಿಳಿಯಲು ಅವಕಾಶ ಸಿಗದೆ ತೊಟ್ಟೆಯಲ್ಲಿ ಸುರುಳಿ ಸುತ್ತಿಕೊಳ್ಳುತ್ತವೆ. ಒಮ್ಮೆ ಸುರುಳಿಯಾದ ಬೇರುಗಳು ಮತ್ತೆಂದೂ ಮೊದಲಿನ ಹಂತಕ್ಕೆ ಬರುವುದಿಲ್ಲ. ಆ ಗಿಡಗಳನ್ನು ನೀವು ನೆಟ್ಟರೂ ಅವುಗಳ ಬೆಳವಣಿಗೆ ಅತ್ಯಂತ ನಿಧಾನಗತಿಯಲ್ಲಿರುತ್ತದೆ. ಗಿಡ ಬೆಳೆಸುವ ಈ ಮಾದರಿಯನ್ನು ಅರಣ್ಯ ಇಲಾಖೆಯ ಬೀಜ ನಿರ್ವಹಣೆ ವಿಭಾಗ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗಗಳ ವೈಫಲ್ಯವೆಂದು ಕರೆಯಬಹುದು. ನೇರಳೆ ಬೀಜವನ್ನು ನೇರವಾಗಿ ಭೂಮಿಯೊಳಕ್ಕೆ ಹಾಕಿದರೆ ಯಾವುದೇ ವಿಶೇಷ ಆರೈಕೆ ಇಲ್ಲದೆ ಅದು ವೇಗವಾಗಿ ಬೆಳೆಯಬಲ್ಲದು.

ನರ್ಸರಿಯ ಗಿಡಗಳ ಆರೋಗ್ಯ ತಪಾಸಣೆಯು ಪ್ರತಿವರ್ಷ ನಡೆಯುತ್ತದೆ. ಅರಣ್ಯ ಇಲಾಖೆಯ ಮೇಲಧಿಕಾರಿಗಳು ನಡೆಸುವ ಈ ತಪಾಸಣೆಯಲ್ಲಿ ಗಿಡಗಳ ಆರೋಗ್ಯ ಉತ್ತಮವಾಗಿಲ್ಲ ಎಂದು ಗೊತ್ತಾದರೆ ಕುತ್ತು ಬರುವುದು ಅಲ್ಲಿನ ವಲಯ ಅರಣ್ಯಾಧಿಕಾರಿಗೆ. ಆ ಅಧಿಕಾರಿಯ ಸೇವಾ ದಾಖಲೆಯಲ್ಲಿ ಒಂದು ಕಪ್ಪುಚುಕ್ಕೆ ಬಿತ್ತೆಂದು ಅರ್ಥ. ಆದಕಾರಣ ಸಸಿ ಆರೋಗ್ಯವಾಗಿ ಇರುವಂತೆ ನೋಡಿಕೊಳ್ಳುವುದು ಅನಿವಾರ್ಯ ಆಗಿರುತ್ತದೆ. ಅದಕ್ಕಾಗಿ ನೈಸರ್ಗಿಕ ವಿಧಾನಗಳಿಂದ ದೂರ ಸರಿದು, ರಸಗೊಬ್ಬರಗಳನ್ನು ಬಳಸುವುದುಂಟು. ಮೂರು ವರ್ಷಗಳ ನಂತರ ಅವುಗಳು ನೆಡಲಿಕ್ಕೆ ಅರ್ಹವಾಗುತ್ತವೆ.

ಇಲ್ಲೊಂದು ತಾಂತ್ರಿಕ ಸಮಸ್ಯೆ ಇದೆ. ಮೂರು ವರ್ಷಗಳ ಕಾಲ ಯಥೇಚ್ಛ ನೀರು, ರಸಗೊಬ್ಬರ ಪಡೆದು ಬೆಳೆದ ಗಿಡಗಳನ್ನು ಮಳೆಗಾಲದಲ್ಲಿ ಪ್ಲಾಂಟೇಷನ್‌ನಲ್ಲಿ ನೆಟ್ಟರೆ, ಚಳಿಗಾಲದಲ್ಲಿ ಅವು ಬದುಕಲಾರವು. ಅವುಗಳ ನೈಸರ್ಗಿಕ ಚಕ್ರವನ್ನು ಮುಂದಿನ ಬದುಕಿನ ಹೋರಾಟಕ್ಕೆ ಸಜ್ಜುಗೊಳಿಸಿ ಆ ನಂತರ ನೆಟ್ಟರೆ ಬದುಕುವ ಸಂಭವ ಹೆಚ್ಚು. ಆ ಕಾರಣಕ್ಕಾಗಿಯೇ ಮೂರು ವರ್ಷ ಬೆಳೆದ ಗಿಡಗಳನ್ನು ನೆಡುವುದಕ್ಕೂ ಮುಂಚಿನ ಒಂದು ತಿಂಗಳು ಗೊಬ್ಬರ, ನೀರು ನೀಡುವುದನ್ನು ನಿಲ್ಲಿಸಿ, ಕಷ್ಟದ ವಾತಾವರಣಕ್ಕೆ ಹೊಂದಿಕೊಳ್ಳಲು ಸಜ್ಜುಗೊಳಿಸಬೇಕು. ಇದಕ್ಕೆ ಹಾರ್ಡನಿಂಗ್ ಎಂದು ಕರೆಯುತ್ತಾರೆ.

ಈ ಪ್ರಕ್ರಿಯೆಯಲ್ಲಿ ಹಲವು ಗಿಡಗಳು ಸತ್ತುಹೋಗುವ ಅಪಾಯವೂ ಇರುತ್ತದೆ. ಆಗ ಮತ್ತೆ ಅಪಾಯ ಬರುವುದು ಸ್ಥಳೀಯ ಅಧಿಕಾರಿಗೆ. ಅಧಿಕಾರಿಯ ಸೇವಾ ದಾಖಲೆಯಲ್ಲಿ ಮತ್ತೊಂದು ಕಪ್ಪುಚುಕ್ಕೆ ಮೂಡುತ್ತದೆ. ಹಾಗಾಗಿ ಈ ಹಾರ್ಡನಿಂಗ್ ಪ್ರಕ್ರಿಯೆ ನಡೆಯುವುದಿಲ್ಲ. ಇದನ್ನು ಬೇಕಾದರೆ ನೀವು ಆಡಳಿತ ವೈಫಲ್ಯವೆಂದು ಕರೆಯಬಹುದು.

ಒಂದು ಹದ ಮಳೆ ಬಿದ್ದು, ಬಿಸಿಲು ಬಂದು ಮತ್ತೆ ನೆಲ ಕಾಯಬೇಕು. ನೆಟ್ಟ ಗಿಡಗಳಿಗೆ ಬೇರು ಬಿಡಲು ಆಗ ಸೂಕ್ತ ವಾತಾವರಣ ಇರುತ್ತದೆ. ಇಷ್ಟು ವೈಜ್ಞಾನಿಕವಾಗಿ ಕೆಲಸ ಮಾಡುವ ಕಲೆ ನಮ್ಮ ಯಾವ ಇಲಾಖೆಗೂ ಸಿದ್ಧಿಸಿಲ್ಲ. ಒಬ್ಬ ವಲಯ ಅರಣ್ಯಾಧಿಕಾರಿಯ ವ್ಯಾಪ್ತಿಯಲ್ಲಿ ಎರಡು ಲಕ್ಷ ಸಸಿಗಳನ್ನು ನೆಡುವ ಗುರಿಯಿದೆ ಎಂದುಕೊಳ್ಳಿ. ಜೂನ್ ಐದರಿಂದ ಸಸಿಗಳನ್ನು ನೆಡಲು ಪ್ರಾರಂಭಿಸಿದರೆ ಮಳೆಗಾಲ ಮುಗಿಯುವ ಸೆಪ್ಟೆಂಬರ್‌ವರೆಗೂ ಗಿಡ ನೆಡುವ ಕಾರ್ಯಕ್ರಮ ನಡೆಯುತ್ತಿರುತ್ತದೆ. ಜುಲೈ ಮತ್ತು ಆಗಸ್ಟ್ ತಿಂಗಳ ಜೋರು ಮಳೆಗಾಲದಲ್ಲಿ ನೆಟ್ಟ ಗಿಡಗಳ ಬೇರು ಕೊಳೆತು ಸಾಯುವ ಪ್ರಮಾಣ ಹೆಚ್ಚಿರುತ್ತದೆ. ಇದನ್ನು ಅನುಷ್ಠಾನ ವೈಫಲ್ಯವೆಂದು ಕರೆಯಬಹುದು.

ಇನ್ನು ಗಿಡಗಳನ್ನು ನೆಟ್ಟ ನಂತರದ ಮೂರು ವರ್ಷಗಳ ಕಾಲ ಅವುಗಳ ನಿರ್ವಹಣೆ ಮಾಡಬೇಕು. ಬೇಸಿಗೆಯಲ್ಲಿ ಬೆಂಕಿಗೆ ಆಹುತಿಯಾಗದಂತೆ ನೋಡಿಕೊಳ್ಳಬೇಕು, ಜಾನುವಾರುಗಳ ಬಾಯಿಗೆ ಸಿಗದಂತೆ ಕಾಯಬೇಕು, ಒತ್ತುವರಿ ಹುನ್ನಾರ ಇಟ್ಟುಕೊಂಡವರು ನೆಟ್ಟ ಗಿಡಗಳನ್ನು ಸವರಿ ಹಾಕದಂತೆ ನೋಡಿಕೊಳ್ಳಬೇಕು. ಇಂತಹ ಕೆಲಸಗಳನ್ನು ಇಲಾಖೆಯಲ್ಲಿ ನಿಯೋಜಿತರಾದ ಗಾರ್ಡುಗಳು ಮಾಡಬೇಕು.

ಇಂತಹ ಮುಂಚೂಣಿ ಸಿಬ್ಬಂದಿಯ ತೀವ್ರವಾದ ಕೊರತೆ ಇಲಾಖೆಯಲ್ಲಿದೆ. ಈ ಕೊರತೆಯನ್ನು ನೀಗಿಸಲು ದಿನಗೂಲಿ ವಾಚರ್‌ಗಳನ್ನು ನೇಮಿಸಿಕೊಳ್ಳಲಾಗಿದೆ. ಆದರೆ, ಅವರಿಗೆ ಕಾಲಕಾಲಕ್ಕೆ ಸಂಬಳ ನೀಡಲು ಇಲಾಖೆ ಪರದಾಡುತ್ತಿದೆ. ಹೀಗಾಗಿ, ಕುಟುಂಬ ಸಾಕಲು ಇವರೂ ಅನಿವಾರ್ಯವಾಗಿ ಕಳ್ಳತನವನ್ನು ಬೆಂಬಲಿಸಬೇಕಾದ ಪರಿಸ್ಥಿತಿ ಇದೆ. ಇದನ್ನು ಬೇಕಾದರೆ ಸರ್ಕಾರದ ವೈಫಲ್ಯವೆಂದು ನೇರವಾಗಿ ಕರೆಯಬಹುದು.

ಕೊನೆಯದಾಗಿ, ಗಿಡವನ್ನು ಹೇಗೆ ನೆಡಬೇಕು ಎಂಬುದನ್ನು ನೋಡೋಣ. 3 ಅಡಿ ಆಳ, ಅಗಲ ಗುಂಡಿಯನ್ನು ತೆಗೆಯಬೇಕು. ಮೇಲೆ ಸಿಗುವ ಒಂದೂವರೆ ಅಡಿ ಮೇಲ್ಮಣ್ಣನ್ನು ಮತ್ತೆ ಗುಂಡಿಯ ಒಳಕ್ಕೆ ಹಾಕಬೇಕು. ನಂತರದಲ್ಲಿ ಗಿಡವನ್ನು ನೆಟ್ಟು, ಗಿಡದ ಬುಡವನ್ನು ತುಳಿದು ಗಟ್ಟಿಗೊಳಿಸಬೇಕು. ನಂತರದಲ್ಲಿ ಉಳಿದ ಮಣ್ಣನ್ನು ಮುಚ್ಚಿ, ನೆಟ್ಟ ಗಿಡವು ಗಾಳಿಗೆ ಅಲ್ಲಾಡದಂತೆ ತಡೆಯಲು ಕೋಲು ನಿಲ್ಲಿಸಿ ಹಗ್ಗ ಕಟ್ಟಬೇಕು. ಇದು ಯಾವುದೂ ಸಾಧ್ಯವಾಗುವುದಿಲ್ಲ.

ಪ್ಲಾಸ್ಟಿಕ್ ತೊಟ್ಟೆಗಳ ಸಮೇತ ನೆಟ್ಟ ಗಿಡಗಳ ಲೆಕ್ಕವಾಗಲೀ ತಂದ ಗಿಡಗಳನ್ನು ನೆಡದೆ ಹಾಗೇ ಬಿಟ್ಟ ಗಿಡಗಳ ಲೆಕ್ಕವಾಗಲೀ ಯಾರಿಗೂ ಸಿಗುವುದೇ ಇಲ್ಲ. ಈ ವರ್ಷ ಇಂತಿಷ್ಟು ಲಕ್ಷ ಗಿಡಗಳನ್ನು ಇಂತಿಂತಲ್ಲಿ ನೆಡಲಾಯಿತು ಎಂಬ ಅಂಕಿ-ಅಂಶವು ಇಲಾಖೆಯ ದತ್ತಾಂಶ ಕೋಣೆಯಲ್ಲಿ ಲಭ್ಯವಾಗುತ್ತದೆಯೇ ವಿನಾ ವಾಸ್ತವದ ಅಂಕಿಅಂಶಗಳು ಬೇರೆಯದೇ ಕತೆ ಹೇಳುತ್ತವೆ. ಇದನ್ನು ಸಾಮೂಹಿಕ ಪ್ರಜ್ಞೆಯ ವೈಫಲ್ಯವೆಂದು ಕರೆಯೋಣವೇ? ಮುಂದಿನ ದಿನಗಳಲ್ಲಿ ಇಂತಹ ವೈಫಲ್ಯಗಳನ್ನು ಮೀರಿ ಅರಣ್ಯ ಬೆಳೆಯಲಿ.

ಚುರುಮುರಿ

ಸುವರ್ಣ ಸಂಡಿಗೆ!

• ತುರುವೇಕೆರೆ ಪ್ರಸಾದ್

'ರೀ ಅಲಮೇಲಮ್ಮನೋರೇ, ಈ ವರ್ಷ ಏನಾದ್ರೂ ಹೊಸ ಸಂಡಿಗೆ ಇಟ್ರಾ?' ಎಂದು ಕಾಂಪೌಂಡ್ ಬಳಿ ಬಂದರು ಅಂಬುಜಮ್ಮ.

'ಅಯ್ಯೋ ಇಲ್ಲ ಕಣ್ರೀ, ಸಂಡಿಗೆನೂ ಇಲ್ಲ ಪೇಣಿನೂ ಇಲ್ಲ. ಹೊತ್ತಲ್ಲದ ಹೊತ್ತಲ್ಲಿ ನೆಂಟರು ಬಂದ್ ಹಾಗೆ ಅಕಾಲದಲ್ಲಿ ಮಳೆ ಹಿಡ್ಕೊಂಡಿತ್ತಲ್ಲ'ಎಂದು ಅಲವತ್ತುಕೊಂಡರು ಅಲಮೇಲಮ್ಮ.

'ನಿಜ ರೀ, ಮುಂಚೆ ಬರೀ ಮುಂಗಾರು, ಹಿಂಗಾರು ಮಾರುತ ಅಂತ ಇದ್ದವು, ಈಗ ಇಡೀ ವರ್ಷ ಸೈಕ್ಲೋನು, ವಾಯುಭಾರ ಕುಸಿತ'.

'ಅದೂ ಅಲ್ದೆ ಸಂಡಿಗೆ ಹಾಕಕ್ಕೆ ನಮ್ ಯಜಮಾನ್ರೂ ಫ್ರೀ ಇಲ್ಲವಲ್ಲ! ಹೋದ್ ವರ್ಷ ವರ್ಕ್ ಫ್ರಂ ಹೋಮು ಅಂತ ಮನೇಲೇ ಇದ್ರು. ಅವರನ್ನೇ ಟೆರೇಸ್‌ಗೆ ಹತ್ಸಿ ಸಂಡಿಗೆ ಇಡ್ಸಿದ್ದೆ. ಈ ವರ್ಷ ಆ ಸೌಭಾಗ್ಯನೂ ಇಲ್ಲದಾಗಿದೆ'.

'ನನ್ ಕತೆ ಕೇಳಿ. ಸಂಡಿಗೇನ ಪ್ಲಾಸ್ಟಿಕ್ ಮೇಲೆ ಹಾಕ್ಬಾರ್ದು ನೋಡಿ, ಅದಕ್ಕೇ ನಮ್ಮೆಜಮಾನ್ರ ಪಂಚೆ ಮೇಲೇ ಹಾಕ್ತಿದ್ದೆ. ಪಂಚೆ ಇದ್ರಲ್ವ ಸಂಡಿಗೆ ಹಾಕೋದು ಅಂತ ನಮ್ಮೆಜಮಾನ್ರು ಬರ್ಮುಡಾ ಹಾಕ್ಕೊಂಡೇ ಓಡಾಡಕ್ಕೆ ಶುರು ಮಾಡಿದಾರೆ'.

'ಪಂಚೆನೋ ಲುಂಗಿನೋ ಹೇಗೋ ಅಡ್ಜೆಸ್ಟ್ ಮಾಡ್ಕೊಬಹುದು. ಆದ್ರೆ ಒಣಗಿಸಕ್ಕೆ ಜಾಗನೇ ಇಲ್ಲ. ಟೆರೇಸ್ ಮೇಲಿಟ್ರೆ ಚಿರಿ ಚಿರಿ ಮಳೆಯ ಪಿರಿ ಪಿರಿ... ಕೆಳಗೆ ಮನೆ ಮುಂದೆ ಹಾಕುದ್ರೆ ಬೀದಿ ನಾಯಿಗಳ ಕಾಟ, ಜೊತೆಗೆ ಮುನಿಸಿಪಾಲಿಟಿ ನೀರಿನ ಪೈಪ್ ಒಡುದ್ರೆ ಹಪ್ಪಳ ಇರ್‍ಲಿ ಅಂಗಳನೇ ಕೊಚ್ಕಂಡ್ ಹೋಗುತ್ತೆ'.

'ನಿಜ ರೀ, ಹಪ್ಪಳ, ಸಂಡಿಗೆ ಹರವಿ ಹಾಕೋದೇ ಒಂದು ದೊಡ್ ಸಮಸ್ಯೆ ಆಗೋಗಿದೆ. ಅದಕ್ಕೇ ಅದ್ಯಾರೋ ಪುಣ್ಯಾತ್ಗಿತ್ತಿ ಬೆಳಗಾವಿಲಿ ಸುವರ್ಣಸೌಧದ ಮೆಟ್ಟಿಲ ಮೇಲೆ ಶ್ಯಾವಿಗೆ– ಸಂಡಿಗೆ ಒಣ ಹಾಕಿದ್ಲಂತೆ!'

'ಅದ್ರಲ್ಲಿ ತಪ್ಪೇನಿದೆ? ಶ್ಯಾವಿಗೆ– ಸಂಡಿಗೆ ಅಲ್ದೆ ಜನಪ್ರತಿನಿಧಿಗಳನ್ನ ಒಣಹಾಕಕ್ಕೆ ಆಗುತ್ತಾ? ಅದ್ರಲ್ಲೂ ಒಂದು ಸಮಸ್ಯೆ ಆಗಿದ್ಯಂತೆ'?

'ಏನಂತೆ?'

'ಅಯ್ಯೋ, ಸ್ಥಳಮಹಿಮೆ ರೀ! ಆ ಶ್ಯಾವಿಗೆ– ಸಂಡಿಗೆ ಜನಪ್ರತಿನಿಧಿಗಳ ಥರ ಜಿಗುಟಾಗಿ ಪಂಚೆಗೆ ಅಂಟ್ಕೊಂಡ್ ಕೂತಿದೆಯಂತೆ, ಕಿತ್ರೂ ಬರಲ್ಲವಂತೆ. ಸರ್ಕಾರಿ ಜಾಗದಲ್ಲಿ ಸಂಡಿಗೆ ಹಾಕೋದು ದನ ಮೇಯೋಕೇ ಲಾಯಕ್ಕು' ಎಂದು ನಕ್ಕರು ಅಲಮೇಲಮ್ಮ.

ಸಂಗತ

'ನಪುಂಸಕ' ನಿಂದನೆ ತರವೇ?

ಪ್ರಜಾಪ್ರಭುತ್ವದ ಮೂಲ ಲಕ್ಷಣವಾದ ವಾಗ್ವಾದವನ್ನು ಯಾವ ಮಟ್ಟಕ್ಕೆ ಇಳಿಸುತ್ತಿದ್ದೇವೆ ಎಂಬ ಪರಿವೆಯೇ ರಾಜಕಾರಣಿಗಳಿಗೆ ಇದ್ದಂತಿಲ್ಲ

• ಸಿ.ಜಿ.ಮಂಜುಳಾ

ಭಿನ್ನಾಭಿಪ್ರಾಯಗಳನ್ನು ಸಂವಾದ ಅಥವಾ ವಾಗ್ವಾದಗಳಲ್ಲಿ ಮಂಡಿಸುತ್ತಾ ರಚನಾತ್ಮಕವಾಗಿ ಚರ್ಚೆಯನ್ನು ವಿಸ್ತರಿಸುವುದು ಆರೋಗ್ಯವಂತ ಪ್ರಜಾಪ್ರಭುತ್ವದ ಲಕ್ಷಣ. ಆದರೆ, ಬೌದ್ಧಿಕ ದಿವಾಳಿತನದಿಂದಾಗಿ ನಮ್ಮ ರಾಜಕಾರಣಿಗಳು ಆಯ್ದುಕೊಳ್ಳುತ್ತಿರುವುದು ನಿಂದನಾತ್ಮಕ ಭಾಷೆಯನ್ನು. 'ಗಂಡಸ್ತನ', 'ನಪುಂಸಕ' ಎಂಬಂಥ 'ನುಡಿಮುತ್ತು'ಗಳು ಇತ್ತೀಚಿನ ದಿನಗಳಲ್ಲಿ ಹಾರಾಡುತ್ತಿವೆ.

ಎಲ್ಲ ರಾಜಕೀಯ ಪಕ್ಷಗಳೂ ಪರಸ್ಪರರ ಕುರಿತಾದ ದಾಳಿಗಳಲ್ಲಿ ಇಂಥಾ ಪದಗಳ ಬಳಕೆಯಲ್ಲಿ ಯಾವುದೇ ಮುಜುಗರ ತೋರುತ್ತಿಲ್ಲ. ತಮಗಿರುವ ಸಾಂವಿಧಾನಿಕ ಸ್ಥಾನಮಾನ ಹಾಗೂ ಪ್ರಜಾಪ್ರಭುತ್ವದ ಮೂಲ ಲಕ್ಷಣವೇ ಆದ ವಾಗ್ವಾದವನ್ನು ಯಾವ ಮಟ್ಟಕ್ಕೆ ಇಳಿಸುತ್ತಿದ್ದೇವೆ ಎಂಬ ಪರಿವೆಯೇ ಇಲ್ಲದೆ ನಾಲಿಗೆ ಹರಿಬಿಡುತ್ತಿರುವುದು ಶೋಚನೀಯ. ಈ ಕೆಸರೆರಚಾಟಕ್ಕೆ ನಾಡಿನ ವಿದ್ವತ್ ಲೋಕವನ್ನೂ ಎಳೆದುತಂದಿರುವ ಮೈಸೂರು ಸಂಸದ ಪ್ರತಾಪ್ ಸಿಂಹ, ಬರಹಗಾರರನ್ನು 'ವಿಚಾರ ನಪುಂಸಕರು' ಎಂದು ಹಳಿದಿದ್ದಾರೆ.

'ಲೈಂಗಿಕ ಸಾಮರ್ಥ್ಯ' ಇಲ್ಲದವರು ಎಂಬ ಅರ್ಥವನ್ನು 'ನಪುಂಸಕ' ಪದ ಧ್ವನಿಸುತ್ತದೆ. ಬಲಶಾಲಿ ಹಾಗೂ ಪುರುಷತ್ವದ ವಿಜೃಂಭಣೆಗೆ ತದ್ವಿರುದ್ಧ ಪದ ಇದು. ಈ ಪದದ ಅಂತರಾರ್ಥಗಳು ಹುಟ್ಟು ಪಡೆದಿರುವುದು ಗಂಡಾಳ್ವಿಕೆಯ ಸಂಸ್ಕೃತಿಯಲ್ಲಿ ಎಂಬುದನ್ನು ನಮ್ಮ ರಾಜಕೀಯ ನೇತಾರರ ಸಂವೇದನೆಗೆ ಇಳಿಸುವುದು ಸಾಧ್ಯವಿದೆಯೇ?

ವಾಗ್ವಾದಕ್ಕಿಂತ ನಿಂದನೆಗಳೇ ಸಹಜ ವಿದ್ಯಮಾನವಾಗಿ ಪರಿಣಮಿಸುತ್ತಿರುವುದು ಸದ್ಯದ ರಾಜಕೀಯ ಸಂಕಥನವಾಗಿಬಿಟ್ಟಿದೆ. 2014ರಲ್ಲಿ ಲೋಕಸಭೆ ಚುನಾವಣೆಗೆ ಮುಂಚೆ, ಆಗಿನ ಕೇಂದ್ರ ಸಚಿವರಾಗಿದ್ದ ಕಾಂಗ್ರೆಸ್‌ನ ಸಲ್ಮಾನ್ ಖುರ್ಷಿದ್ ಅವರು ನರೇಂದ್ರ ಮೋದಿ ಅವರನ್ನು 'ನಪುಂಸಕ' ಎಂದು ಕರೆದಿದ್ದರು. ಅಷ್ಟೊಂದು ಶಕ್ತಿಶಾಲಿ ವ್ಯಕ್ತಿಯೆಂದು ಪ್ರತಿಪಾದಿಸಿಕೊಳ್ಳುತ್ತಾ ಪ್ರಧಾನಿಯಾಗಬಯಸುವ ವ್ಯಕ್ತಿ, 2002ರ ಗುಜರಾತ್ ಕೋಮುಗಲಭೆ ಸಂದರ್ಭದಲ್ಲಿ ಗೋಧ್ರಾ ಜನರನ್ನು ರಕ್ಷಿಸಲು ವಿಫಲವಾದ 'ನಪುಂಸಕ' ಎಂದು ಜರೆದಿದ್ದರು.

2004ರಲ್ಲಿ ಬಿಜೆಪಿಯ ಯಶವಂತ ಸಿನ್ಹಾ ಅವರು, ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು 'ಶಿಖಂಡಿ' ಎಂದಿದ್ದರು. ಅಷ್ಟೇ ಅಲ್ಲ, 2012ರಲ್ಲಿ ಅಣ್ಣಾ ಹಜಾರೆ ತಂಡದ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದ ಪ್ರಶಾಂತ್ ಭೂಷಣ್ ಅವರೂ ಮನಮೋಹನ್ ಸಿಂಗ್ ಅವರು ಕಾಂಗ್ರೆಸ್‌ಗೆ ಮಹಾಭಾರತದ ಶಿಖಂಡಿಯಂತಿದ್ದಾರೆ ಎಂದು ಟೀಕಿಸಿದ್ದರು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಬಿಜೆಪಿ ನಾಯಕರೊಬ್ಬರು 'ಹಿಜ್ರಾ' ಎಂದು ಕರೆದದ್ದೂ ಇದೆ.

ಲೋಕಸಭೆಯಲ್ಲೂ ನಪುಂಸಕ ಪದ ಬಳಕೆಯಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ಕಾವೇರಿ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಪದೇ ಪದೇ ಮುಂದೂಡಿಕೆ ಕೋರುತ್ತಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಆಗ ಸಂಸದರಾಗಿದ್ದ ಡಾ. ಸುಬ್ರಮಣಿಯನ್ ಸ್ವಾಮಿ ಅವರು ವಾಜಪೇಯಿ ನೇತೃತ್ವದ ಸರ್ಕಾರವನ್ನು ಟೀಕಿಸಲು 1998ರಲ್ಲಿ 'ನಪುಂಸಕ' ಪದ ಬಳಸಿದ್ದರು. ಸಚಿವ ರಾಮ್ ನಾಯಕ್ ಪ್ರತಿಭಟಿಸಿದಾಗ ಸುಬ್ರಮಣಿಯನ್ ಸ್ವಾಮಿ 'ಶಕ್ತಿಹೀನರು ಎಂಬುದನ್ನು ಹೇಳಲು ಸಂಸದೀಯ ಪದ 'ಇಂಪೊಟೆಂಟ್' ಬಳಸಿದ್ದೇನೆ. ವಯಾಗ್ರಾ ಅರ್ಥದಲ್ಲಿ ಬಳಸಿಲ್ಲ!' ಎಂದಿದ್ದರು. 'ಎಲ್ಲರಿಗೂ ಇಂಪೊಟೆಂಟ್' ಎಂದರೆ ಏನೆಂದು ಅರ್ಥವಾಗುತ್ತದೆ' ಎಂದು ಲಾಲು ಪ್ರಸಾದ್ ಹೇಳಿದ ನಂತರ, ಸಭಾಧ್ಯಕ್ಷರು ನಪುಂಸಕ ಪದವನ್ನು ಕಡತದಿಂದ ಕಿತ್ತುಹಾಕಲು ನಿರ್ಧರಿಸಿದರು. ಆದರೆ ಇಂಗ್ಲಿಷ್ ಪದ 'ಇಂಪೊಟೆಂಟ್' ದಾಖಲೆಗಳಲ್ಲಿ ಉಳಿಯಿತು.

ನಮ್ಮ ಚಿಂತನೆಗಳನ್ನು ಧ್ವನಿಸುವಂತಹದ್ದು ಭಾಷೆ. ವ್ಯಕ್ತಿಯ ಚಹರೆ, ಜೀವಶಾಸ್ತ್ರೀಯ ಗುಣಲಕ್ಷಣಗಳನ್ನು ನಿಂದನೆಯ ವಸ್ತುವಾಗಿಸುವುದು ಎಷ್ಟು ಸರಿ? ಭಾಷೆಯಲ್ಲಿ ಧ್ವನಿಸುವ ನಕಾರಾತ್ಮಕ ಸಂವೇದನೆಯು ಬಹುಪಾಲು ಜನರ ಮಧ್ಯೆ ಸಹಜವೆಂಬಂತೆ ಸ್ವೀಕೃತಗೊಳ್ಳುತ್ತಾ ಸಾಗಿದರೆ, ಈವರೆಗೆ ಮಹಿಳೆಯರು ಹಾಗೂ ಲೈಂಗಿಕ ಅಲ್ಪಸಂಖ್ಯಾತರು ಹೋರಾಟಗಳಿಂದ ಪಡೆದುಕೊಂಡಿರುವುದು ಎಲ್ಲಿಗೆ ಹೋಗಿ ಮುಟ್ಟುತ್ತದೆ?

ಸಾರ್ವಜನಿಕ, ಖಾಸಗಿ ಹಾಗೂ ವರ್ಚುವಲ್ ತಾಣಗಳಲ್ಲಿ ಮಹಿಳೆಯನ್ನು ಅಂಜಿಸಿ ಹಿಂಸಿಸುವ, ತುಚ್ಛೀಕರಿಸುವ ಹಾಗೂ ಸ್ತ್ರೀ ದ್ವೇಷದ ನಿಂದನೀಯ ನಡವಳಿಕೆಗಳನ್ನು ನಿಯಂತ್ರಿಸಲು ಶಾಸನ ರಚಿಸಬೇಕೆಂದು ತಮಿಳುನಾಡು ಶಾಸಕಿ ಎ. ತಮಿಳ್‌ಅರಸಿ, ತಿರುವನಂತಪುರದಲ್ಲಿ ಇತ್ತೀಚೆಗೆ ನಡೆದ ಶಾಸಕಿಯರ ಸಮ್ಮೇಳನದಲ್ಲಿ ಮಂಡಿಸಿದ ನಿರ್ಣಯದಲ್ಲಿ ಕರೆ ನೀಡಿದ್ದಾರೆ. ಸ್ತ್ರೀದ್ವೇಷ ಅಥವಾ ಮಹಿಳೆ ವಿರುದ್ಧದ ಪೂರ್ವಗ್ರಹದ ಮಾತುಗಳನ್ನು ದ್ವೇಷ ಅಪರಾಧಗಳ ವರ್ಗಕ್ಕೆ ಸೇರಿಸಬೇಕೆಂಬ ಚರ್ಚೆ ಬ್ರಿಟನ್‌ನಲ್ಲಿ ಇತ್ತೀಚೆಗೆ ದೊಡ್ಡ ಮಟ್ಟದಲ್ಲಿ ನಡೆದಿರುವುದನ್ನೂ ಗಮನಿಸಬೇಕು.

ಕೇಂದ್ರ ಆರೋಗ್ಯ ಸಚಿವಾಲಯವು ಇತ್ತೀಚೆಗೆ ಬಿಡುಗಡೆ ಮಾಡಿದ ರಾಷ್ಟ್ರೀಯ ಆರೋಗ್ಯ ಸಮೀಕ್ಷೆ-5 (ಎನ್‌ಎಫ್‌ಎಚ್‌ಎಸ್-5) ಪ್ರಕಾರ, ಭಾರತದಲ್ಲಿ ಪ್ರತೀ ಮೂವರು ವಿವಾಹಿತ ಮಹಿಳೆಯರಲ್ಲಿ ಒಬ್ಬರು, ಗಂಡನಿಂದ ಲೈಂಗಿಕ ಅಥವಾ ಭಾವನಾತ್ಮಕ ಹಿಂಸಾಚಾರಕ್ಕೆ ಒಳಗಾಗುತ್ತಾರೆ. ಆಶ್ಚರ್ಯದ ಸಂಗತಿ ಎಂದರೆ, ಕರ್ನಾಟಕದಲ್ಲಿನ ಶೇ 48.4ರಷ್ಟು ಮಹಿಳೆಯರು ಗಂಡನಿಂದ ಹಿಂಸೆ ಅನುಭವಿಸುತ್ತಿದ್ದು, ಈ ವಿಷಯದಲ್ಲಿ ರಾಜ್ಯವು ರಾಷ್ಟ್ರದಲ್ಲೇ ಮೊದಲ ಸ್ಥಾನದಲ್ಲಿದೆ. ಇದಕ್ಕೆ ಮೂಲ ಕಾರಣ, ಮಹಿಳೆ ವಿರುದ್ಧದ ಪೂರ್ವಗ್ರಹಗಳೇ ಎಂಬುದನ್ನು ನಾವು ಹಾಗೂ ಶಾಸನಗಳನ್ನು ರಚಿಸುವ ದೊಡ್ಡ ಜವಾಬ್ದಾರಿ ಹೊಂದಿರುವ ನಮ್ಮ ಜನಪ್ರತಿನಿಧಿಗಳು ಮರೆಯದಿರಲಿ.

ವಾಚಕರ ವಾಣಿ

ಅನಿಲ ಸಬ್ಸಿಡಿ ಎಲ್ಲರಿಗೂ ಸಿಗಲಿ

ಕೇಂದ್ರ ಸರ್ಕಾರವು ಉಜ್ವಲಾ ಯೋಜನೆಯಡಿ ಅಡುಗೆ ಅನಿಲ ಸಂಪರ್ಕ ಪಡೆದ ಫಲಾನುಭವಿಗಳಿಗೆ ₹ 200 ಸಬ್ಸಿಡಿ ನೀಡಲು ನಿರ್ಧರಿಸಿರುವುದು ಸ್ವಾಗತಾರ್ಹ. ಆದರೆ ಈ ಸೌಲಭ್ಯವನ್ನು ಎಲ್ಲರಿಗೂ ನೀಡಿದ್ದರೆ, ಬೆಲೆ ಏರಿಕೆಯ ಬಿಸಿಯಿಂದ ನಲುಗುತ್ತಿರುವ ಜನಸಾಮಾನ್ಯರಿಗೆ ಒಂದಷ್ಟು ನೆಮ್ಮದಿ ಸಿಗುತ್ತಿತ್ತು. ಹಲವಾರು ವರ್ಷಗಳಿಂದ ಅಡುಗೆ ಅನಿಲಕ್ಕೆ ನೀಡುತ್ತಿದ್ದ ಸಬ್ಸಿಡಿಯನ್ನು ಏಕಾಏಕಿ ನಿಲ್ಲಿಸಲಾಗಿದೆ. ಸಬ್ಸಿಡಿ ನೀಡುವುದರಲ್ಲಿ ಈಗ ತಾರತಮ್ಯ ಮಾಡುತ್ತಿರುವುದು ವಿಷಾದನೀಯ. ಸರ್ಕಾರ ಈ ನಿರ್ಧಾರವನ್ನು ಪುನರ್‌ಪರಿಶೀಲಿಸಿ, ಸಬ್ಸಿಡಿ ಸೌಲಭ್ಯವನ್ನು ಈ ಹಿಂದಿನಂತೆ ಎಲ್ಲರಿಗೂ ಮುಂದುವರಿಸಬೇಕು.

ಭಾಸ್ಕರ್ ಶೆಟ್ಟಿ, ಹಾಸನ

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮೌನವೇಕೆ?

ಪಠ್ಯಪುಸ್ತಕ ಪರಿಷ್ಕರಣೆ ವಿಷಯದಲ್ಲಿ ನಡೆದಿರುವ ಚರ್ಚೆಗಳು, ಪಠ್ಯದಲ್ಲಿ ಸೇರಿದ್ದ ತಮ್ಮ ಬರಹಗಳನ್ನು ಕೆಲವರು ವಾಪಸ್ ಪಡೆಯುತ್ತಿರುವ ವಿದ್ಯಮಾನ ಇವೆಲ್ಲವೂ ನಾಡಿಗೆ ಏನನ್ನು ಹೇಳುವುದಕ್ಕೆ ಬಯಸುತ್ತಿವೆ ಎಂಬುದನ್ನು ಊಹೆ ಮಾಡುವುದಕ್ಕೂ ಸಾಧ್ಯವಿಲ್ಲವಾಗಿದೆ. ಕಾಲಕಾಲಕ್ಕೆ ಪಠ್ಯವನ್ನು ಪರಿಷ್ಕರಣೆ ಮಾಡುವುದು ಅನಿವಾರ್ಯ ಇರಬಹುದು. ಆದರೆ ಪರಿಷ್ಕರಣೆಗೆ ಯಾರನ್ನು ನಿಯೋಜಿಸಬೇಕು ಎಂಬುದನ್ನು ನಿರ್ಧರಿಸುವವರು ಎಡವಿದ್ದು ಎಲ್ಲಿ? ಎಡ-ಬಲ ಪಂಥಗಳ ಹೇಳಿಕೆಗಳು, ಸಮರ್ಥನೆಗಳು ಏನೇ ಇದ್ದರೂ ಭವಿಷ್ಯದ ಮಕ್ಕಳ ಗತಿಯೇನು?

ಸಕಾಲಕ್ಕೆ ಪಠ್ಯ ಪೂರೈಕೆಯಾಗದೆ ಕಂಗಾಲಾಗಿರುವ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿ ಬಳಗ ಒಂದೆಡೆಯಾದರೆ, ಪಠ್ಯದಲ್ಲಿ ಏನು ಇರಬೇಕು, ಏನು ಇರಬಾರದು ಎನ್ನುವ ವರ್ಗ ಇನ್ನೊಂದು ಬದಿಯಿದೆ. 15 ದಿನಗಳಿಂದ ಪಠ್ಯಪರಿಷ್ಕರಣೆ ಕುರಿತು ವಿಪರೀತ ಮಟ್ಟದ ಚರ್ಚೆ ಮುಂದುವರಿದಿದ್ದರೂ ದೇಶದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಮೌನ ವಹಿಸಿರುವುದು ಏಕೆ? ಈ ಚರ್ಚೆಯನ್ನು ತಾರ್ಕಿಕವಾದ ಅಂತ್ಯಕ್ಕೆ ತೆಗೆದುಕೊಂಡು ಹೋಗುವ ಜವಾಬ್ದಾರಿ ಅವರದೂ ಅಲ್ಲವೇ? ಹಾಗಾದರೆ ಅವರ ಮೌನ ಏನನ್ನು ಹೇಳುತ್ತಿದೆ?

ಡಾ. ಜಿನದತ್ತ ದೇಸಾಯಿ, ಡಾ. ಬಸವರಾಜ ಜಗಜಂಪಿ, ಡಾ. ಆನಂದ ಜಕ್ಕಣ್ಣವರ, ಡಾ. ಗೀತಾಂಜಲಿ ಮುದಕವಿ, ಬೆಳಗಾವಿ

ಮಕ್ಕಳ ಬೈಸಿಕಲ್ ಚಾಲನೆ: ಸಿಗಲಿ ಸಹಕಾರ

ಕೋವಿಡ್ ಪರಿಸ್ಥಿತಿಯಿಂದ ಆದಂತಹ ಅನುಕೂಲಗಳಲ್ಲಿ, ನಗರ ಪ್ರದೇಶದ ಕೆಲವರು ಬೈಸಿಕಲ್‌ಗಳನ್ನು ಬಳಸಲು ಆರಂಭಿಸಿದ್ದೂ ಒಂದು. ಅದರಲ್ಲೂ ಮಕ್ಕಳು ಮನೆಯಿಂದ ಹೊರ ಬಂದು ಸೈಕಲ್ ತುಳಿಯಲು ಆರಂಭಿಸಿದರು. ಈಗ ಶಾಲೆಯಿಂದ ಮನೆಗೆ ಬಂದಾಕ್ಷಣ ಸೈಕಲ್‌ನಲ್ಲಿಯೇ ಟ್ಯೂಷನ್‌ಗೆ ಹೋಗುವುದು, ಆಟವಾಡುವುದು ಹೆಚ್ಚಾಗಿದೆ.

ಇತ್ತೀಚೆಗೆ ಸೈಕಲ್ ಮಾರಾಟ ಹೆಚ್ಚಿದೆ. ಸೈಕಲ್‌ಗಳ ಓಡಾಟವೂ ರಸ್ತೆಯಲ್ಲಿ ಹೆಚ್ಚಿದೆ. ಮಕ್ಕಳಿಗೆ ಸೈಕಲ್ ಸವಾರಿ ಆಟವಾಗಿರುವುದರಿಂದ ಉತ್ಸಾಹದಲ್ಲಿ ಓಡಾಡುತ್ತಾರೆ. ಆದಕಾರಣ ನಗರ ಪ್ರದೇಶದ ಬಡಾವಣೆಗಳ ಸಣ್ಣ ರಸ್ತೆಗಳು, ಗಲ್ಲಿಗಳಲ್ಲಿ ಓಡಾಡುವಾಗ ಮೋಟರ್ ವಾಹನಗಳ ಚಾಲಕರು ಜಾಗರೂಕತೆಯಿಂದ, ಜವಾಬ್ದಾರಿಯುತವಾಗಿ ವಾಹನ ಚಲಾಯಿಸುವ ಅವಶ್ಯಕತೆಯಿದೆ. ಇಲ್ಲವಾದರೆ ಎಳೆಯ ಜೀವಗಳಿಗೆ ತೊಂದರೆ ಉಂಟಾಗುತ್ತದೆ.

ಎಸ್.ರವಿ, ಮೈಸೂರು

ತೂಕದ ಹೇಳಿಕೆ ಅರ್ಥಪೂರ್ಣ

'ಪ್ರತೀ ಮಸೀದಿಯಲ್ಲೂ ಶಿವಲಿಂಗ ಹುಡುಕುವ ಮತ್ತು ಪ್ರತಿದಿನ ಹೊಸ ವಿವಾದ ಸೃಷ್ಟಿಸುವ ಅಗತ್ಯವಿಲ್ಲ' ಎಂಬ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಹೇಳಿಕೆ ಕೆಲವು ಸಂಘಟನೆಗಳ ಕಣ್ಣು ತೆರೆಸಬೇಕು. ಮುಸ್ಲಿಮರು ಹೊರಗಿನಿಂದ ಬಂದು ದೇವಸ್ಥಾನಗಳನ್ನು ಧ್ವಂಸಗೊಳಿಸಿದ್ದಾರೆ. ಇದು ಈಗ ಇತಿಹಾಸ. ಆಗಿದ್ದು ಆಗಿಹೋಗಿದೆ. ಇಂತಹ ಪ್ರತಿಯೊಂದು ವಿಷಯವನ್ನೂ ಮುನ್ನೆಲೆಗೆ ತರುವ ಬದಲು, ಮಾತುಕತೆಯಿಂದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು ಎನ್ನುವ ಅವರ ಸಲಹೆ ಚಿಂತನಾರ್ಹ ಮತ್ತು ಈ ದಿಸೆಯಲ್ಲಿ ಬಿಗುವಿನ ವಾತಾವರಣವನ್ನು ತಿಳಿಗೊಳಿಸಲು ಅವರ ಈ ಹೇಳಿಕೆ ಸಹಾಯಕವಾಗಬಹುದು. ದೇಶದ ಎಲ್ಲಾ ಮಸೀದಿಗಳ ಸಮೀಕ್ಷೆ ನಡೆಸಬೇಕು ಎನ್ನುವ ಒತ್ತಾಯದ ಹಿನ್ನೆಲೆಯಲ್ಲಿ ಅವರ ಈ ಹೇಳಿಕೆ ತೂಕ ಪಡೆದುಕೊಂಡಿದೆ.

ರಮಾನಂದ ಶರ್ಮಾ, ಬೆಂಗಳೂರು

ಮರುಪರೀಕ್ಷೆ ನಡೆಯುವುದೆಂದು?

545 ಹುದ್ದೆಗಳಿಗೆ ನಡೆದ ಪಿಎಸ್‌ಐ ಪರೀಕ್ಷೆಯಲ್ಲಿ ಅಕ್ರಮ ನಡೆದ ಆರೋಪ ಕೇಳಿಬಂದ ಕಾರಣ, ನೇಮಕಾತಿ ರದ್ದು ಮಾಡಿ, ಸದ್ಯದಲ್ಲಿಯೇ ಮರುಪರೀಕ್ಷೆ ನಡೆಸುವುದಾಗಿ ಗೃಹ ಸಚಿವರು ಮಾಧ್ಯಮಗೋಷ್ಠಿಯಲ್ಲಿ ಪ್ರಕಟಿಸಿದ್ದರು. ಮರುಪರೀಕ್ಷೆಯ ದಿನಾಂಕ ಘೋಷಣೆ ಮಾಡುತ್ತೇವೆ ಎಂದು ಅವರು ಹೇಳಿದರೇ ವಿನಾ ಇನ್ನೂ ಅದರ ಬಗ್ಗೆ ಚಿಂತಿಸಲು ಅವರಿಗೆ ಸಮಯ ಸಿಕ್ಕಿದಂತೆ ಕಾಣುತ್ತಿಲ್ಲ. ನಿಯತ್ತಾಗಿ ಪರೀಕ್ಷೆ ಬರೆದವರು ಮತ್ತೆ ಪರೀಕ್ಷೆ ಯಾವಾಗ ಎಂದು ಕಾದಿದ್ದೇ ಬಂತು. ಸರ್ಕಾರ ನಿದ್ರೆಯಿಂದ ಎಚ್ಚರಗೊಳ್ಳಲಿ, ಪರೀಕ್ಷೆಯ ದಿನಾಂಕ ಘೋಷಣೆಯಾಗಲಿ.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಪ್ರಧಾನಿ ಗಮನ ಸೆಳೆಯಬೇಕಿದೆ

ಕದ್ದು ಸಾಗಣೆ ಮಾಡಿದ ಅತ್ಯಮೂಲ್ಯ ಕಲಾಕೃತಿಗಳನ್ನು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮರಳಿ ಭಾರತಕ್ಕೆ ತಂದಿದೆ ಎಂದು ಬಿಜೆಪಿ ಮುಖಂಡ ಲಕ್ಷಣ ಸವದಿ ಟ್ವೀಟ್ ಮೂಲಕ ತಿಳಿಸಿದ್ದಾರೆ (ಪ್ರ.ವಾ., ಜೂನ್ 3). ಈ ವಿಷಯ ತಿಳಿದು ಬಹಳ ಸಂತೋಷವಾಯಿತು. ನಮ್ಮ ಭಾರತದ ಸಂಪತ್ತನ್ನು ಕೊಳ್ಳೆ ಹೊಡೆದು ವಿದೇಶಿ ಬ್ಯಾಂಕುಗಳಲ್ಲಿ ಅಡಗಿಸಿ ಇಟ್ಟಿರುವ ಕಪ್ಪುಹಣದ ವಿಚಾರ ಪ್ರಧಾನಮಂತ್ರಿ ಸಹಿತ ದೇಶದ ಎಲ್ಲ ನಾಗರಿಕರಿಗೂ ಗೊತ್ತಿದೆ.

ಪ್ರಧಾನಿ ಅವರು ನಮ್ಮ ದೇಶದ ಸಂಪತ್ತಾದ ಕಲಾಕೃತಿಗಳನ್ನು ಮರಳಿ ತಂದ ಮಾದರಿಯಲ್ಲಿ ಈ ಕಪ್ಪುಹಣವನ್ನೂ ತಂದರೆ ಜನ ಅವರಿಗೆ ಆಭಾರಿಯಾಗಿ ಇರುತ್ತಾರೆ. ಸವದಿ ಅವರು ಈ ಬಗ್ಗೆಯೂ ಟ್ವೀಟ್ ಮಾಡಿ ಪ್ರಧಾನಿ ಅವರ ಗಮನ ಸೆಳೆಯಬೇಕು.

ಹುಸೇನಬಾಷಾ ತಳೇವಾಡ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವೇಶ್ಯಾವೃತ್ತಿಗೆ ಕಾನೂನು ಮಾನ್ಯತೆ ಕುರಿತು ಎರಡು ವ್ಯಾಖ್ಯಾನಗಳು

ಇಷ್ಟಪಟ್ಟು ವೃತ್ತಿ ಮಾಡುವುದಕ್ಕೆ ಅಡ್ಡಿ ಏಕೆ?

• ಅಕ್ಕಯ್ ಪದ್ಮಶಾಲಿ

‘ಲೈಂಗಿಕ ಕಾರ್ಯಕರ್ತೆಯರನ್ನು ಪೊಲೀಸರು ದೈಹಿಕವಾಗಿ ಅಥವಾ ಮೌಖಿಕವಾಗಿ ಹೀಗಳೆಯುವಂತಿಲ್ಲ ಹಾಗೂ ಈ ಕಾರ್ಯಕರ್ತೆಯರ ವಿರುದ್ಧ ಕ್ರಿಮಿನಲ್ ಕ್ರಮ ಕೈಗೊಳ್ಳಬೇಡಿ’ ಎಂದು ಕೋರ್ಟ್ (ಬುದ್ಧದೇವ್ ಕರ್ಮಾಸ್ಕರ್ ವರ್ಸಸ್ ಪಶ್ಚಿಮ ಬಂಗಾಳ ರಾಜ್ಯ ಮತ್ತು ಇತರರು ಪ್ರಕರಣ) ಪುನರುಚ್ಚರಿಸಿರುವುದು ಮಹತ್ವದ ಸಂಗತಿ. ಈ ತೀರ್ಪು ಬರೀ ಲೈಂಗಿಕ ಕಾರ್ಯಕರ್ತೆಯರಿಗಷ್ಟೇ ಅಲ್ಲ, ಈ ವೃತ್ತಿಯಲ್ಲಿರುವ ಲೈಂಗಿಕ ಅಲ್ಪಸಂಖ್ಯಾತರಿಗೂ ಅನ್ವಯಿಸುತ್ತದೆ

ವೇಶ್ಯಾವಾಟಿಕೆಯು ಜಗತ್ತಿನ ಅತಿ ಪುರಾತನ ವೃತ್ತಿಗಳಲ್ಲೊಂದು. ಕೆಲವು ದೇಶಗಳು ಇದನ್ನು ಕಾನೂನುಬದ್ಧಗೊಳಿಸಿದರೆ, ಕೆಲವು ಕಾನೂನುಬಾಹಿರ ಮಾಡಿವೆ. ವಿವಾಹ ಸಂಸ್ಥೆಯ ಜತೆಜತೆಗೇ ಈ ವೃತ್ತಿಯೂ ಅಸ್ತಿತ್ವಕ್ಕೆ ಬಂದಿದೆ. ಜಗತ್ತಿನ ಇತಿಹಾಸ, ಸಾಹಿತ್ಯದ ಪುಟಗಳಲ್ಲಿ ವೇಶ್ಯೆಯರು, ವೇಶ್ಯಾವಾಟಿಕೆಯ ಬಗ್ಗೆ ಹೇರಳ ವರ್ಣನೆಯೂ ಸಿಗುತ್ತದೆ. ಕನ್ನಡದ ಕಾವ್ಯಗಳಲ್ಲಿ ಅಷ್ಟಾದಶ ವರ್ಣನೆಗಳಲ್ಲಿ ವೇಶ್ಯಾವಾಟಿಕೆಯೂ ಸ್ಥಾನ ಪಡೆದಿದೆ.

ಕಾಳಿದಾಸ, ಕಲ್ಹಣ, ಆದಿಕವಿ ಪಂಪ, ಹರಿಹರ, ರಾಘವಾಂಕ, ನೇಮಿಚಂದ್ರ, ಜನ್ನ ಸೇರಿದಂತೆ ಅನೇಕರು ವೇಶ್ಯೆಯರ ಬಗ್ಗೆ ತಮ್ಮ ಕಾವ್ಯಗಳಲ್ಲಿ ಉಲ್ಲೇಖಿಸಿದ್ದಾರೆ. ಶೂದ್ರಕನ ಸಂಸ್ಕೃತ ನಾಟಕ ‘ಮೃಚ್ಛಕಟಿಕ’ವು ಡವೇಶ್ಯೆಯೊಬ್ಬಳ ಸಾಮಾಜಿಕ ಬದುಕನ್ನು ಚಿತ್ರಿಸುತ್ತದೆ. ಅನೇಕ ಕೃತಿಗಳಲ್ಲಿ ವೇಶ್ಯೆಯರ ಸಾಂಸ್ಕೃತಿಕ ಮಹತ್ವವನ್ನು ಮನಗಾಣಿಸಲಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಶರಣರು ಮಾಡಿದ ಸಾಮಾಜಿಕ ಕ್ರಾಂತಿಯಲ್ಲಿ ಶಿವಶರಣೆ, ವಚನಕಾರ್ತಿ ಸೂಳೆ ಸಂಕವ್ವೆ ಅವರಿಗೂ ಸ್ಥಾನವಿದೆ. ಒಂದೇ ವಚನ ಬರೆದ ಸೂಳೆ ಸಂಕವ್ವೆ ಅವರ ಕುರಿತು ಮುದೇನೂರು ಸಂಗಣ್ಣನವರು ನಾಟಕ ಬರೆದಿದ್ದಾರೆ. ಅಂತೆಯೇ, ಸಂಶೋಧಕ ಚಿದಾನಂದ ಮೂರ್ತಿಯವರು ಕೈಗೊಂಡ ಶಾಸನಗಳ ಸಂಶೋಧನೆಯಲ್ಲೂ ವೇಶ್ಯೆಯರ ಬದುಕಿನ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ.

‘ಪ್ರಾಚೀನ ಕಾಲದಲ್ಲಿ ವೇಶ್ಯೆಯರಿಗೆ ಉನ್ನತ ಸ್ಥಾನಮಾನಗಳಿದ್ದವು. ಅನೇಕ ದೇವಾಲಯಗಳಲ್ಲಿ ಪೂಜಾರಿ, ಧರ್ಮಗುರುಗಳೊಂದಿಗೆ ವೇಶ್ಯೆಯರು ಸಂಬಂಧ ಹೊಂದಿರುತ್ತಿದ್ದರು. ಸಿರಿಯಾದ ದೇವಾಲಯಗಳಲ್ಲಿ ವೇಶ್ಯಾವೃತ್ತಿಯೂ ಒಂದು ಸಂಪ್ರದಾಯವಾಗಿತ್ತು. ಪ್ರಾಚೀನ ಸಮಾಜದಲ್ಲಿ ವೇಶ್ಯಾವಾಟಿಕೆಯು ಒಪ್ಪಿತ ಮೌಲ್ಯವೇ ಆಗಿತ್ತು’ ಎನ್ನುತ್ತಾರೆ ಪ್ರೊ.ಶಿವರಾಮಯ್ಯ. (ಕೃತಿ: ವೇಶ್ಯೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರು)

ಸಾಮಾಜಿಕ ಬದ್ಧತೆ: ಇತಿಹಾಸ ಮತ್ತು ವರ್ತಮಾನದ ಪುಟಗಳಲ್ಲಿ ವೇಶ್ಯೆಯರಿಗೆ ಸಾಮಾಜಿಕ ಕಳಕಳಿ ಇತ್ತು ಎನ್ನುವ ಉಲ್ಲೇಖಗಳೂ ದೊರೆಯುತ್ತವೆ. ದೇವನಾಂಪ್ರಿಯ ಅಶೋಕನ ಕಾಲದಲ್ಲಿ ಒಮ್ಮೆ ಗಂಗಾ ನದಿಯ ಪ್ರವಾಹ ಉಕ್ಕೇರಿದಾಗ, ಅದನ್ನು ಇಳಿಸುವವರು ಯಾರೂ ಇಲ್ಲವೇ ಎಂಬ ಪ್ರಶ್ನೆ ಎದುರಾಗುತ್ತದೆ. ಮಹಾಮಂತ್ರಿ ಸೇರಿದಂತೆ ಘಟಾನುಘಟಿಗಳೇ ಕೈಚೆಲ್ಲಿದಾಗ ಬಿಂದುಮತಿ ಎಂಬ ವೇಶ್ಯೆ ತನ್ನ ವೃತ್ತಿಯಲ್ಲಿನ ನಿಷ್ಠೆ, ಶ್ರದ್ಧೆ, ಪ್ರಾಮಾಣಿಕತೆಯನ್ನು ಪಣಕ್ಕಿಟ್ಟು, ಪ್ರವಾಹ ಇಳಿಸಿದ ಉಲ್ಲೇಖ ದೊರೆಯುತ್ತದೆ.

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನಲ್ಲಿ ಸೂಳೆಯೊಬ್ಬರು ಕಟ್ಟಿಸಿದ ಕೆರೆ ‘ಸೂಳೆಕೆರೆ’ ಅಂತಲೇ ಪ್ರಸಿದ್ಧಿ ಪಡೆದಿದೆ. ‘ಸೂಳೆ’ ಅನ್ನುವ ಹೆಸರು ಕೇಳಲು ಸರಿಯಲ್ಲವೆಂದು ಕೆಲವರು ಆ ಕೆರೆಯನ್ನು ‘ಶಾಂತಿ ಸಾಗರ’ ಎಂದು ಬದಲಾಯಿಸಿದ್ದೂ ಉಂಟು. ತಮ್ಮ ದೇಹದ ಹಸಿವಿಗೆ ಸೂಳೆ ಬೇಕೆನ್ನುವವರಿಗೆ ಆಕೆ ಕಟ್ಟಿಸಿದ ಕೆರೆಗೆ ಆಕೆಯ ಹೆಸರಿಡುವುದು ಮುಜುಗರದ ಸಂಗತಿ ಎನ್ನುವುದು ಸೋಗಲಾಡಿತನವಲ್ಲದೆ ಮತ್ತೇನು? ಎಂ. ಚಿದಾನಂದ ಮೂರ್ತಿ ಅವರು ತಮ್ಮ ಸಂಶೋಧನೆಯಲ್ಲಿ ಉಲ್ಲೇಖಿಸಿರುವಂತೆ ಸೂಳೆಯರು ಕೂಡಾ ತೆರಿಗೆ ಕಟ್ಟುತ್ತಿದ್ದರಂತೆ. ಮಹಾರಾಷ್ಟ್ರದ ಗಂಗೂಬಾಯಿ ಕಾಠಿಯಾವಾಡಿ ಅವರ ಸಾಮಾಜಿಕ ಬದ್ಧತೆಯನ್ನು ಮರೆಯಲಾದೀತೇ.

ಲೈಂಗಿಕತೆಯ ಹಿಂದಿನ ಪರಂಪರೆಯನ್ನು ಗಮನಿಸಿದಾಗ ಅನೇಕ ದೇವಾಲಯಗಳಲ್ಲಿ ಹೆಣ್ಣು-ಗಂಡು, ಹೆಣ್ಣು-ಹೆಣ್ಣು, ಗಂಡು-ಗಂಡಿನ ನಡುವಿನ ಮಿಥುನ ಶಿಲ್ಪಗಳಿವೆ. ಇಂಥ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ ಎಂದರೆ ಆ ಕಾಲದಲ್ಲಿ ಇಂಥ ವಿಚಾರಗಳ ಕುರಿತು ಮುಕ್ತವಾಗಿ ಚರ್ಚೆ ಆಗುತ್ತಿತ್ತು ಅಂತಲೇ ಅರ್ಥವಲ್ಲವೇ? ಒಬ್ಬ ವೇಶ್ಯೆಯ ಜತೆಗೆ ರಾಜ ಸಂಪರ್ಕ ಇಟ್ಟುಕೊಂಡಿದ್ದರೆ ರಾಜ ಆಕೆಯನ್ನು ಗೌರವಯುತವಾಗಿ ನಡೆಸಿಕೊಂಡು, ಆಕೆಯ ಜೀವನಕ್ಕೆ ಬೇಕಾಗುವಷ್ಟು ಧನ-ಸಂಪತ್ತನ್ನು ನೀಡುತ್ತಿದ್ದ. ಹಲವು ರಾಜರು ವೇಶ್ಯೆಯರ ಹೆಸರಿನಲ್ಲಿ ಸಾಮಾಜಿಕ ಕಾರ್ಯಗಳನ್ನೂ ಕೈಗೊಂಡಿದ್ದಾರೆ.

ಆಗಿನ ಸಮಾಜದಲ್ಲಿ ವೇಶ್ಯಾವಾಟಿಕೆ ಒಪ್ಪಿತ ಮೌಲ್ಯವೇ ಆಗಿದ್ದರೂ ಬಹುತೇಕ ಕೆಳವರ್ಗದ ಮಹಿಳೆಯರೇ ವೇಶ್ಯೆಯಾಗಿರುವುದು ಕಂಡು ಬರುತ್ತದೆ. ಮೇಲ್ವರ್ಗದ ಪುರುಷರು ಕೆಳವರ್ಗದ ಸ್ತ್ರೀಯರನ್ನು ಇಷ್ಟಪಟ್ಟರೂ ವಿವಾಹವಾಗದೇ, ಅವರನ್ನು ತಮ್ಮ ವೇಶ್ಯೆಯರನ್ನಾಗಿಟ್ಟುಕೊಳ್ಳುವುದೇ ಪುರುಷಾಧಿಪತ್ಯದ ಸಂಕೇತವಾಗಿತ್ತು. ಆ ಪರಿಪಾಟ ಈಗಲೂ ಬದಲಾಗಿಲ್ಲ. ಅದಕ್ಕಾಗಿಯೇ ದೇವದಾಸಿಯಂಥ ಅನಿಷ್ಟ ಪದ್ಧತಿಗಳು ಜಾರಿಗೆ ಬಂದವು.

ಹಸನಾದೀತೇ ಬದುಕು?: ಪುರಾಣ, ಇತಿಹಾಸ ಮತ್ತು ವರ್ತಮಾನ ಈ ಮೂರು ಕಾಲಘಟ್ಟಗಳಲ್ಲೂ ಲೈಂಗಿಕ ವೃತ್ತಿನಿರತ ಮಹಿಳೆಯರ ಬದುಕು ಹಸನಾಗಿಲ್ಲ. ಲೈಂಗಿಕ ಕಾರ್ಯಕರ್ತೆಯರ ಮೇಲಿನ ದೌರ್ಜನ್ಯ ಮತ್ತು ಹಿಂಸೆಗೆ ಶತಮಾನಗಳ ಇತಿಹಾಸವಿದೆ. ಆದರೆ, ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿರುವ ತೀರ್ಪು ಕಗ್ಗತ್ತಲಲ್ಲಿ ಬೆಳ್ಳಿಯ ಕೋಲ್ಮಿಂಚಿನಂತೆ ಗೋಚರಿಸುತ್ತಿದೆ.

‘ಲೈಂಗಿಕ ಕಾರ್ಯಕರ್ತೆಯರನ್ನು ಪೊಲೀಸರು ದೈಹಿಕವಾಗಿ ಅಥವಾ ಮೌಖಿಕವಾಗಿ ಹೀಗಳೆಯುವಂತಿಲ್ಲ ಹಾಗೂ ಈ ಕಾರ್ಯಕರ್ತೆಯರ ವಿರುದ್ಧ ಕ್ರಿಮಿನಲ್ ಕ್ರಮ ಕೈಗೊಳ್ಳಬೇಡಿ’ ಎಂದು ಕೋರ್ಟ್ (ಬುದ್ಧದೇವ್ ಕರ್ಮಾಸ್ಕರ್ ವರ್ಸಸ್ ಪಶ್ಚಿಮ ಬಂಗಾಳ ರಾಜ್ಯ ಮತ್ತು ಇತರರು ಪ್ರಕರಣ) ಪುನರುಚ್ಚರಿಸಿರುವುದು ಮಹತ್ವದ ಸಂಗತಿ. ಈ ತೀರ್ಪು ಬರೀ ಲೈಂಗಿಕ ಕಾರ್ಯಕರ್ತೆಯರಿಗಷ್ಟೇ ಅಲ್ಲ, ಈ ವೃತ್ತಿಯಲ್ಲಿರುವ ಲೈಂಗಿಕ ಅಲ್ಪಸಂಖ್ಯಾತರಿಗೂ ಅನ್ವಯಿಸುತ್ತದೆ.

ಈ ವೃತ್ತಿಯಲ್ಲಿ ಭಾಗಿಯಾಗಿರುವ ಮಹಿಳೆಯರಲ್ಲಿ ಹಿಂದುಳಿದ, ತುಳಿತಕ್ಕೊಳಗಾದವರೇ ಹೆಚ್ಚು. ಮೇಲ್ವರ್ಗದವರು ಕಮ್ಮಿ. ಮನೆಗಳು, ಅಪಾರ್ಟ್‌ಮೆಂಟ್, ಯೂನಿಸೆಕ್ಸ್ ಪಾರ್ಲರ್‌ಗಳಲ್ಲಿ ವೇಶ್ಯಾವಾಟಿಕೆಯ ಹೆಸರಲ್ಲಿ ಲಕ್ಷಾಂತರ ರೂಪಾಯಿಯ ವಹಿವಾಟು ನಡೆಯುತ್ತಿರುವುದು ತಿಳಿಯದ ಸಂಗತಿಯೇನಲ್ಲ. ಸಾಮಾಜಿಕ ರಕ್ಷಣೆ ಮತ್ತು ಭದ್ರತೆ ದೊರೆಯದ ಬಹುತೇಕ ಮಹಿಳೆಯರಿಗೆ ಈ ವೃತ್ತಿ ಅನಿವಾರ್ಯ ಆಯ್ಕೆಯಾಗಿದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿ ಯೆಂದರೆ ಮಾನವ ಕಳ್ಳ ಸಾಗಣೆಯನ್ನು ನೇರವಾಗಿ ಲೈಂಗಿಕ ವೃತ್ತಿಯೊಂದಿಗೆ ತಳಕು ಹಾಕಲಾಗುತ್ತಿದೆ. ಆದರೆ, ಇಷ್ಟಪಟ್ಟು ಈ ವೃತ್ತಿಗೆ ಬರುವವರನ್ನೂ ಕಳ್ಳ ಸಾಗಣೆಯ ಕಾಯ್ದೆಯಡಿ ತರುವುದು ತಪ್ಪು ಎನ್ನುವುದು ನನ್ನ ಅಭಿಪ್ರಾಯ. ಲೈಂಗಿಕ ವೃತ್ತಿಯೇ ನನ್ನ ಜೀವನ ಆಗಿರುವಾಗ ಅದು ನನ್ನ ಹಕ್ಕಾಗಿರುತ್ತದೆ. ಈ ಕಾರ್ಯಕರ್ತೆಯರನ್ನು ಪುನರ್ವಸತಿ ಮಾಡುವುದಾಗಿ ಹೇಳಿ ನಡೆಸುವ ದೌರ್ಜನ್ಯಗಳು ಸಾಕು. ಯಾರಿಗೆ ಈ ವೃತ್ತಿ ಇಷ್ಟವಿಲ್ಲವೋ ಅವರಿಗೆ ಪುನರ್ವಸತಿ ಮಾಡಲಿ. ಆದರೆ, ಇದೇ ವೃತ್ತಿ ಇಷ್ಟಪಟ್ಟು ಮಾಡುವವರಿಗೆ ಯಾರೂ ಅಡ್ಡಿಪಡಿಸಬಾರದು. ಅವರ ಹಕ್ಕುಗಳನ್ನು ಕಾಪಾಡುವ ಹೊಣೆ ಸರ್ಕಾರಗಳದ್ದು.

ಸಬಲೀಕರಣದ ಸವಾಲು: ಕೋರ್ಟಿನ ಈ ತೀರ್ಪನ್ನು ನಮ್ಮ ಸಮಾಜ ಹೇಗೆ ಸ್ವೀಕರಿಸುತ್ತದೆ? ಸರ್ಕಾರಗಳು ಹೇಗೆ ನೋಡುತ್ತವೆ ಎಂಬುದು ದೊಡ್ಡ ಪ್ರಶ್ನೆ. ಅಂತೆಯೇ ಲೈಂಗಿಕ ಕಾರ್ಯಕರ್ತೆಯರ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಬಲೀಕರಣವು ಸವಾಲಾಗಿ ಪರಿಣಮಿಸುತ್ತದೆ.

ಈ ಹಿಂದೆ ಲೈಂಗಿಕ ಕಾರ್ಯಕರ್ತೆಯರನ್ನು ನಮ್ಮ ಸಮಾಜ ತನ್ನ ಸಂಸ್ಕೃತಿಯ ಭಾಗವಾಗಿಯೇ ಪರಿಗಣಿಸಿತ್ತು. ಆದರೆ, ಈಗ ಅವರನ್ನು ಸಂಸ್ಕೃತಿಯ ಭಾಗವನ್ನಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೂಡಾ ಪರಿಗಣಿಸುತ್ತಿಲ್ಲ. ವೈವಿಧ್ಯವೇ ನಮ್ಮ ಸಂಸ್ಕೃತಿ ಆಗಿರುವಾಗ ಕನಿಷ್ಠ ಗೌರವವೂ ದಕ್ಕಿಲ್ಲ. ಇವೆಲ್ಲವನ್ನೂ ಬೇರೆ ಬೇರೆ ಆಯಾಮಗಳಲ್ಲಿ ನೋಡಿದಾಗ ಅವುಗಳಿಗೆ ಇದುವರೆಗೆ ಯಾರಿಂದಲೂ ಉತ್ತರ ಕಂಡುಕೊಳ್ಳಲು ಆಗಿಲ್ಲ.

ಲೇಖಕಿ: ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಪರ ಹೋರಾಟಗಾರ್ತಿ

ನಿರೂಪಣೆ: ಮಂಜುಶ್ರೀ ಎಂ. ಕಡಕೋಳ

ಪ್ರಜಾವಾಣಿ ಚರ್ಚೆ



ಖುಷಿಯಿಂದ ಮಾಡುವ ವೃತ್ತಿ ಅಲ್ಲವೇ ಅಲ್ಲ

ಕಾನೂನಿನಲ್ಲಿ ಒಪ್ಪಿಗೆ ದೊರಕಿದೆ ಎಂದಾಕ್ಷಣ, ಈ ವೃತ್ತಿಯನ್ನು ಸಾಮಾಜಿಕ ಮನ್ನಣೆ ಪಡೆದ ಬೇರೆಯ ವೃತ್ತಿಗಳಂತೆಯೇ ಖುಷಿಯಿಂದ ಒಪ್ಪಿಕೊಳ್ಳುವ ಹೆಣ್ಣು ಮಕ್ಕಳು ಇದ್ದಾರೆಯೇ? ಇದು ತಮ್ಮ ವೃತ್ತಿ ಎಂದು ಸಾರ್ವಜನಿಕವಾಗಿ ಘೋಷಿಸಿಕೊಳ್ಳುವರೇ? ನೈತಿಕ-ಅನೈತಿಕ ದೃಷ್ಟಿಗಿಂತ ಮಾನಸಿಕ-ದೈಹಿಕ ಆರೋಗ್ಯದ ದೃಷ್ಟಿಯಲ್ಲಿ ಈ ವೃತ್ತಿ ಸದಾ ಕಾರುಣ್ಯವನ್ನು ಬೇಡುವಂಥದ್ದೇ. ಎಲ್ಲರೂ ಖುಷಿಯಿಂದ ಸ್ವಾಗತಿಸುವಂಥ ಉದ್ಯೋಗವಂತೂ ಖಂಡಿತ ಅಲ್ಲ

• ತೇಜಸ್ವಿನಿ ಹೆಗಡೆ

ವೇಶ್ಯೆ, ವೇಶ್ಯಾವೃತ್ತಿ ಎಂದ ತಕ್ಷಣ ಜನರಲ್ಲಿ ತೀವ್ರ ತಿರಸ್ಕಾರ, ಅವಹೇಳನ, ಭೀತಿ, ಆತಂಕ– ಇವೆಲ್ಲ ಭಾವಗಳು ತುಂಬಿಕೊಳ್ಳುತ್ತವೆ. ಇಂದಿನ ನಮ್ಮ ಸಾಮಾಜಿಕ ಮೌಲ್ಯಗಳು ಹದಗೆಡುತ್ತಿರುವುದಕ್ಕೆ ಈ ವೃತ್ತಿಯೇ ಕಾರಣ ಎಂಬ ದೂರನ್ನು ಕೇಳುತ್ತಿರುತ್ತೇವೆ. ಆದರೆ ವೇಶ್ಯಾವೃತ್ತಿಯೆನ್ನುವುದು ಇಂದು ನಿನ್ನೆಯದಲ್ಲ, ಅದಕ್ಕೆ ಕಾನೂನಾತ್ಮಕ ರಕ್ಷಣೆ ದೊರಕಿರುವುದು ಇದೇ ಮೊದಲ ಬಾರಿಯೂ ಅಲ್ಲ.

ಪ್ರಾಚೀನ ಕಾಲದಿಂದಲೂ ಗಣಿಕೆಯರ (ವೇಶ್ಯೆ) ಒಂದು ವರ್ಗವನ್ನು ಆಗಿನ ಆಡಳಿತವೂ ಸಮಾಜವೂ ಒಪ್ಪಿಕೊಂಡು ಮಾನ್ಯತೆ ನೀಡಿತ್ತು. ಇದಕ್ಕೆ ಪ್ರಬಲವಾದ ಕಾರಣ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಿಡುವುದು. ಹಿಂದಿನಿಂದಲೂ ಸಮಾಜದಲ್ಲಿ ಪುಂಡರು, ಪೋಕರಿಗಳು, ಗೃಹಸ್ಥಾಶ್ರಮಕ್ಕೆ ಬದ್ಧರಾಗಿಲ್ಲದವರು, ಪತ್ನಿಗೆ ಇನ್ನಿಲ್ಲದಂತೇ ಕಿರುಕುಳ ಕೊಡುವವರಿದ್ದರು. ಇಂಥವರ ಹತೋಟಿಗೆ, ಸಮಾಜದಲ್ಲೊಂದು ಸಮತೋಲನ ಕಾಪಿಟ್ಟುಕೊಳ್ಳಲು ಸಾಂಪ್ರದಾಯಿಕ ಪದ್ಧತಿಯ ನೆಪದಲ್ಲೋ, ವಂಶಾವಳಿಯ ಉದ್ಯೋಗವೆಂದೋ ವೇಶ್ಯಾಗೃಹಗಳನ್ನು, ಬೀದಿಗಳನ್ನು ಅನಾದಿಕಾಲದಿಂದಲೂ ನಮ್ಮಲ್ಲಿ ಕಾಣಬಹುದು.

ಹಿಂದೆ ಗಣಿಕೆಯರಿಗೆಂದೇ ಪ್ರತ್ಯೇಕ ಮನೆ/ಬೀದಿಗಳನ್ನು ಕಲ್ಪಿಸಲಾಗಿತ್ತು. ಹಲವರಿಗೆ ರಾಜಾಶ್ರಯವೂ ದೊರಕಿ, ವಿಶೇಷ ಸಂದರ್ಭಗಳಲ್ಲಿ ದೇವಾಲಯಗಳಲ್ಲಿ ನಾಟ್ಯ ಪ್ರದರ್ಶನಕ್ಕೆ ಆಹ್ವಾನವನ್ನು ನೀಡಲಾಗುತ್ತಿತ್ತು. ಗಣಿಕೆಯರಲ್ಲೂ ಹಲವು ವರ್ಗಗಳಿದ್ದವು. ವೇಶ್ಯಾಗೃಹಗಳಲ್ಲಿ ಆಯ್ಕೆಗಳಿಗೆ ಅವಕಾಶವಿಲ್ಲದೇ ಎಲ್ಲರಿಗೂ ತಮ್ಮನ್ನು ಒಪ್ಪಿಸಿಕೊಳ್ಳುವ, ತಮ್ಮದೇ ಗೃಹದೊಳಗೆ ತಾವು ಇಚ್ಛೆಪಟ್ಟ, ಆಯ್ದುಕೊಂಡ ವಿಟನನ್ನು ಸೇರುವ, ತಮ್ಮ ನಿವಾಸ ಅಥವಾ ಗ್ರಾಹಕನ ನಿವಾಸ ಇವೆರಡನ್ನೂ ಬಿಟ್ಟು ಬೇರೆಲ್ಲೋ ಒಂದಾಗುವ ಅಭಿಸಾರಿಕೆಯರು ಹೀಗೆ. ಚಾರುದತ್ತನ ವಸಂತಸೇನೆ, ವೈಶಾಲಿ ನಗರದ ರಾಜಮನೆತನಕ್ಕೆ ಸೇರಿದ ಪ್ರಸಿದ್ಧ ಶ್ರೀಮಂತ ಗಣಿಕೆ ಆಮ್ರಪಾಲಿ- ಇವರೆಲ್ಲರೂ ಸಮಾಜದಲ್ಲಿ ಒಂದು ಗೌರವವನ್ನು, ಆಯ್ಕೆಯ ಸ್ವಾತಂತ್ರ್ಯವನ್ನು ಹೊಂದಿದವರಾಗಿದ್ದರು.

ಆದರೆ, ಇಂದು ವೇಶ್ಯಾವೃತ್ತಿಯನ್ನು ನೇರವಾಗಿ ಒಪ್ಪಿಕೊಂಡು ನಡೆಸುತ್ತಿರುವವರಲ್ಲದೇ ಸಾಮಾಜಿಕ ತಿರಸ್ಕಾರಕ್ಕೆ ಅಂಜಿ ಅಥವಾ ತಮ್ಮ ಕುಟುಂಬದ ಮಾನ ಕಾಪಾಡುವುದಕ್ಕಾಗಿ ಗುಟ್ಟಾಗಿ ಈ ವೃತ್ತಿಗೆ ಒಳಪಟ್ಟಿರುವವರು ಬಹಳಷ್ಟಿದ್ದಾರೆ. ಕೋಲ್ಕತ್ತದ ರೆಡ್ ಲೈಟ್ ಏರಿಯಾ, ಮುಂಬಯಿಯ ಕಾಮಾಟಿಪುರ, ದೆಹಲಿ, ಗ್ವಾಲಿಯರ್ ಪ್ರದೇಶಗಳಲ್ಲಿರುವ ಬಹುದೊಡ್ಡ ವೇಶ್ಯಾವಾಟಿಕೆಯ ಬೀದಿಗಳು– ಇಲ್ಲೆಲ್ಲ ಈ ವೃತ್ತಿಗೆ ಹಲವು ಕಾರಣಗಳಿಂದ ನೂಕಲ್ಪಟ್ಟ ಹೆಣ್ಣು ಮಕ್ಕಳ ಬದುಕು ಮಾತ್ರ ಪಶುವಿಗಿಂತ ಕಡೆಯಾಗಿರುತ್ತದೆ. ಆಯ್ಕೆಯ ಸ್ವಾತಂತ್ರ್ಯದ ಮಾತಿರಲಿ, ಅವರ ದೇಹ ಅನೇಕ ರೋಗಗಳ ಮೂಟೆಯಾಗಿ ನರಕ ಸದೃಶ್ಯವಾಗಿರುತ್ತದೆ. ದುರದೃಷ್ಟವಶಾತ್, ಹಿಂದಿನಿಂದಲೂ ಆಚರಣೆಯಲ್ಲಿದ್ದ ದೇವದಾಸಿ ಪದ್ಧತಿಯು ಇಂದಿಗೂ ನಮ್ಮಲ್ಲಿ ಹಲವೆಡೆ ಜಾರಿಯಲ್ಲಿದೆ.

ಸುಪ್ರೀಂ ಕೋರ್ಟ್ ವೇಶ್ಯಾವೃತ್ತಿಗೆ ಇತ್ತೀಚೆಗೆ ಮಾನ್ಯತೆ ನೀಡಿದೆ. ಪೋಲೀಸರು ಶೋಧ ನಡೆಸುವ ಸಂದರ್ಭದಲ್ಲಿ ವೇಶ್ಯೆಯರನ್ನು ಮಾನವೀಯತೆಯಿಂದ ನೋಡಿಕೊಳ್ಳಬೇಕು ಮತ್ತು ಇನ್ನಿತರ ವೃತ್ತಿಗಳಲ್ಲಿ ಇರುವವರಿಗೆ ನೀಡುವ ಎಲ್ಲಾ ರೀತಿಯ ಹಕ್ಕುಗಳನ್ನು ಅವರಿಗೂ ನೀಡಬೇಕು ಎಂದು ಸ್ಪಷ್ಟವಾಗಿ ಹೇಳಿದೆ. ಅದೇ ರೀತಿ ಮಾಧ್ಯಮಗಳು ಅವರ ವಿವರಗಳನ್ನು ಬಹಿರಂಗಪಡಿಸಬಾರದು ಎಂದಿದೆ. ವೇಶ್ಯೆಯರು ಅಪರಾಧಿಗಳಲ್ಲ, ಬಲಿಪಶುಗಳು. ಇಂತಹ ವೃತ್ತಿಗೆ ಅವರನ್ನು ತಳ್ಳಿದವರು, ತಾಣ ಕಲ್ಪಿಸುವವರು ನಿಜವಾದ ಅಪರಾಧಿಗಳಾಗಿದ್ದು, ಅಂಥವರನ್ನು ಬಂಧಿಸುವ ಅಧಿಕಾರವನ್ನು ನೀಡಿದೆ. ಅಲ್ಲದೇ, ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಲೈಂಗಿಕ ಕ್ರಿಯೆಗೆ ತೊಡಗುವ ಅಥವಾ ಅದಕ್ಕಾಗಿ ಕರೆಯನ್ನು ನೀಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದಿದೆ. ಆದರೆ ಇಲ್ಲಿ ನನ್ನ ಪ್ರಶ್ನೆ ಎಂದರೆ ಈ ಕಾನೂನು ಮಾನ್ಯತೆಯು ವೇಶ್ಯೆಯರ ಬದುಕಿನಲ್ಲಿ ಮತ್ತು ಸಮಾಜದಲ್ಲಿ ಯಾವ ರೀತಿಯ ಮಹತ್ತರ ಬದಲಾವಣೆಯನ್ನು ತರಬಹುದು?

ಎಳವೆಯಲ್ಲೇ ಆಮಿಷ, ವಂಚನೆ ಇನ್ನಿತರ ಕಾರಣಗಳಿಂದ ದೊಡ್ಡ ನಗರಗಳನ್ನು ಸೇರುವ ಹೆಣ್ಣು ಮಕ್ಕಳು ಬಹುಪಾಲು ಬಲಿಯಾಗುವುದು ವೇಶ್ಯಾವೃತ್ತಿಗೆ. ಒಮ್ಮೆ ಈ ಸುಳಿಗೆ ಸಿಲುಕಿದರೆ, ಆಮೇಲೆ ಹೊರಬರುವುದು ಸುಲಭವಲ್ಲ. ಸಮಾಜ ಅವರಿಗೆ ಆ ಅವಕಾಶವನ್ನು ಸುಲಭದಲ್ಲಿ ಕಲ್ಪಿಸುವುದೂ ಇಲ್ಲ. ನೈತಿಕತೆ-ಅನೈತಿಕತೆಯ ಚೌಕಟ್ಟು ಕಾನೂನಿನಲ್ಲಿ ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಹಿಂದೆ ಮದುವೆಯಾಚೆಯ ಸಂಬಂಧವು ಅನೈತಿಕ, ಕಾನೂನುಬಾಹಿರ ಎಂದಿದ್ದರೆ ಈಗಿನ ಕಾನೂನು ಪ್ರಕಾರ, ಪರಸ್ಪರ ಒಪ್ಪಿದ್ದರೆ ಕಾನೂನು ಬಾಹಿರ ಅಲ್ಲ. ಹೀಗಾಗಿ ವಿವಾಹೇತರ ಸಂಬಂಧವನ್ನು ಯಾರೂ ಎಷ್ಟೂ ಹೊಂದಬಹುದು. ಇದರಿಂದ ಸಮಾಜದಲ್ಲಿ ಆಗುತ್ತಿರುವ ಸೂಕ್ಷ್ಮ ವಿಪ್ಲವಗಳು, ಅಂತಹ ದಂಪತಿಗಳ ವೈವಾಹಿಕ ಬದುಕು ಮತ್ತು ಅವರ ಮಕ್ಕಳ ಮಾನಸಿಕ ಸ್ವಾಸ್ಥ್ಯ, ಇಂತಹ ಬಹು ಸಂಬಂಧಗಳನ್ನು ಇಟ್ಟುಕೊಳ್ಳುವ ವ್ಯಕ್ತಿಗೆ ಎದುರಾಗುವ ದೈಹಿಕ ಅನಾರೋಗ್ಯಗಳು - ಇವೆಲ್ಲವನ್ನೂ ಕಾನೂನು ಸರಿಪಡಿಸಲು ಸಾಧ್ಯವಾಗುವುದೇ?

ಯಾವುದೋ ಕಾರಣದಿಂದ ವೇಶ್ಯಾವೃತ್ತಿಯನ್ನು ಒಪ್ಪಿಕೊಂಡು ನಡೆಸುತ್ತಿರುವವರಿಗೆ ಕಾನೂನಾತ್ಮಕ ಮಾನ್ಯತೆ ಸಿಕ್ಕಿರುವುದು ಮುಳುಗುವವರಿಗೆ ಹುಲ್ಲುಕಡ್ಡಿ ಸಿಕ್ಕಂತೆ ಮಾತ್ರ. ಇದರಿಂದ, ಪ್ರತಿದಿನದ ನರಕದಿಂದ ಬಿಡುಗಡೆ ಹೊಂದಲು ಮತ್ತು ಇದೇ ಕಾನೂನಿನೊಳಗಿನ ಹುಳುಕುಗಳನ್ನು ಬಳಸಿಕೊಂಡು ನಡೆಸಲಾಗುವ ದೌರ್ಜನ್ಯಗಳನ್ನು ತಡೆಯಲು ಸಾಧ್ಯವೇ? ಕಾನೂನು ಮಾನ್ಯತೆ ಸಿಕ್ಕಿದೆ ಎಂದಾಕ್ಷಣ ಅನಪೇಕ್ಷಿತ ವೃತ್ತಿಯನ್ನು ಇನ್ನಿತರ ವೃತ್ತಿಯಂತೆ ಮನಸಾರೆ ಒಪ್ಪಿ ನಡೆಸಬಹುದೇ? ಇಂತಹ ಪ್ರಶ್ನೆಗಳು ಹಾಗೇ ಉಳಿದುಕೊಂಡುಬಿಡುತ್ತವೆ. ರೆಡ್ ಲೈಟ್ ಏರಿಯಾಗಳಿಗೆ ಸೇರಲ್ಪಟ್ಟ ಹೆಣ್ಣು ಮಕ್ಕಳಿಗೆ ಒಂದು ಸಣ್ಣ ಮಾನಸಿಕ ಧೈರ್ಯ, ಸಮಾಧಾನವನ್ನು ಈ ತೀರ್ಪು ಕೊಡಬಹುದು. ಆದರೆ ಈ ಕೋವಿಡ್ ಸಮಯದಲ್ಲುಂಟಾದ ಆರ್ಥಿಕ ಹೊಡೆತಗಳಿಂದ ತಮ್ಮ ಕುಟುಂಬವನ್ನು ನಿರ್ವಹಿಸಲಾಗದೇ ಈ ವೃತ್ತಿಯನ್ನು ಗುಟ್ಟಾಗಿ (ತಮ್ಮ ಹಾಗೂ ತಮ್ಮವರ ಮಾನಕ್ಕೆ ಅಂಜಿ) ಅಪ್ಪಿಕೊಂಡವರಿಗೆ ಅದೆಷ್ಟರ ಮಟ್ಟಿಗೆ ಸಹಕಾರಿಯಾಗುವುದೋ ಗೊತ್ತಿಲ್ಲ. ಅನಿವಾರ್ಯವಾಗಿ ಈ ವೃತ್ತಿಯಲ್ಲಿ ತೊಡಗಿರುವವಳನ್ನು ಆಕೆ ಅಕ್ರಮವಾಗಿ ದಂಧೆ ನಡೆಸುತ್ತಿದ್ದಾಳೆ ಎಂದೋ ಇಲ್ಲ ಮತ್ಯಾವುದಾದರೂ ಆರೋಪ ಹೊರಿಸಿ ಬಂಧಿಸಿದರೆ, ತಾನು ನಿರಪರಾಧಿ, ಕಾನೂನಿನ ಪರಿಧಿಯಲ್ಲೇ ವೃತ್ತಿ ಮಾಡುತ್ತಿರುವವಳು ಎಂಬುದನ್ನು ಸಾಬೀತುಪಡಿಸಲು ಆಕೆ ಅದೆಷ್ಟು ಹೋರಾಡಬಲ್ಲಳು? ವೇಶ್ಯಾವೃತ್ತಿಗೆ ಕಾನೂನು ಮಾನ್ಯತೆ ಸಿಕ್ಕಾಕ್ಷಣ ನಮ್ಮ ಸಮಾಜ ಅವಳನ್ನು ದೂಷಿಸದೇ ಆಕೆಯ ಈ ವೃತ್ತಿಗೆ ಕಾರಣರಾದ ಪುರುಷರು, ಅವಳನ್ನಿಟ್ಟುಕೊಂಡು ದಂಧೆ ನಡೆಸುವವರು ಇವರೆಲ್ಲರ ಅಪರಾಧಗಳನ್ನು ಪರಿಗಣಿಸುತ್ತದೆಯೇ? ಇನ್ನು, ಪುರುಷರೂ ಹಲವು ಕಾರಣಗಳಿಗೆ ಇದೇ ವೃತ್ತಿಯನ್ನು ನಡೆಸುತ್ತಿದ್ದಾರೆ ಎಂಬುದು ಅರಿಯದ್ದೇನಲ್ಲ. ಆದರೆ ಸಮಾಜ ಅಂತಹ ಪುರುಷರನ್ನು ನೋಡುವ ದೃಷ್ಟಿಗೂ ಮಹಿಳೆಯರನ್ನು ಕಾಣುವ ರೀತಿಗೂ ಬಹಳ ವ್ಯತ್ಯಾಸವಿದೆ. ಕಾನೂನು ಸಮಾನತೆ ಘೋಷಿಸಬಹುದು, ಆದರೆ ಸಾಮಾಜಿಕ ಭದ್ರತೆ ನೀಡಿ, ನಿಷ್ಪಕ್ಷಪಾತದಿಂದ ಕಾನೂನು ಜಾರಿಯಾಗುವಂತೆ ನೋಡಿಕೊಳ್ಳುವುದು ಸಾಧ್ಯವೇ?

ಕಾನೂನಿನಲ್ಲಿ ಒಪ್ಪಿಗೆ ದೊರಕಿದೆ ಎಂದಾಕ್ಷಣ, ಈ ವೃತ್ತಿಯನ್ನು ಸಾಮಾಜಿಕ ಮನ್ನಣೆ ಪಡೆದ ಬೇರೆಯ ವೃತ್ತಿಗಳಂತೆಯೇ ಖುಷಿಯಿಂದ ಒಪ್ಪಿಕೊಳ್ಳುವ ಹೆಣ್ಣು ಮಕ್ಕಳು ಇದ್ದಾರೆಯೇ? ಇದು ತಮ್ಮ ವೃತ್ತಿ ಎಂದು ಸಾರ್ವಜನಿಕವಾಗಿ ಘೋಷಿಸಿಕೊಳ್ಳುವರೇ? ನೈತಿಕ-ಅನೈತಿಕ ದೃಷ್ಟಿಗಿಂತ ಮಾನಸಿಕ-ದೈಹಿಕ ಆರೋಗ್ಯದ ದೃಷ್ಟಿಯಲ್ಲಿ ಈ ವೃತ್ತಿ ಸದಾ ಕಾರುಣ್ಯವನ್ನು ಬೇಡುವಂಥದ್ದೇ. ಎಲ್ಲರೂ ಖುಷಿಯಿಂದ ಸ್ವಾಗತಿಸುವಂಥ ಉದ್ಯೋಗವಂತೂ ಖಂಡಿತ ಅಲ್ಲ.

ಅಸಹಾಯಕರು, ಬಡವರು, ವಂಚನೆಗೊಳಗಾದವರು ಮಾತ್ರ ಈ ವೃತ್ತಿಗೆ ತಳ್ಳಲ್ಪಡುತ್ತಾರೆ ಎನ್ನಲಾಗದು. ಉತ್ತಮ ಸ್ಥಿತಿಯಲ್ಲಿರುವ ಯುವಕ/ಯುವತಿಯರು ವಿಲಾಸಿ ಜೀವನಕ್ಕೆ ಹಾತೊರೆದು, ದುಶ್ಚಟಗಳಿಗೆ ದಾಸರಾಗಿ ಈ ವೃತ್ತಿಗೆ ಸ್ವಯಂಪ್ರೇರಿತರಾಗಿ ಹೋಗುವವರೂ. ಆದರೆ ಇಂಥವರಿಗೆ ಇದು ವೃತ್ತಿಗಿಂತ ಪ್ರವೃತ್ತಿಯೆನಿಸಿಕೊಳ್ಳುವುದು ಮತ್ತು ಇವರದ್ದು ರೆಡ್ ಲೈಟ್ ಏರಿಯಾ ವ್ಯಾಪ್ತಿಗೆ ಬರುಂಥದ್ದಲ್ಲ. ಆದರೆ ಇದು ಅವರ ಸ್ವೇಚ್ಛೆ ಆಗಿರುತ್ತದೆಯೇ ಹೊರತು ಕಾನೂನಿನ ದೃಷ್ಟಿಯಲ್ಲಿ ಅಪರಾಧ ಎಂದೆನ್ನಿಸಿಕೊಳ್ಳದು. ಹೀಗಾಗಿ ಈಗ ಮಾನ್ಯತೆ ದೊರಕಿರುವುದು ರೆಡ್ ಲೈಟ್ ಏರಿಯಾಗಳಲ್ಲಿ ನಲುಗುತ್ತಿರುವ ಅಸಹಾಯಕರ ಮನೋಬಲದ ವೃದ್ಧಿಗೆ. ಆ ದಿಸೆಯಲ್ಲಿ ಇದೊಂದು ಅನಿವಾರ್ಯವಾಗಿದ್ದಂಥ ತೀರ್ಪೇ ಹೊರತು ಯಾರೂ ಈ ವೃತ್ತಿಯನ್ನು ಎಲ್ಲೆಂದರಲ್ಲಿ ಮುಕ್ತವಾಗಿ ನಡೆಸಲು ಕೊಟ್ಟಿರುವ ಅವಕಾಶವಲ್ಲ.

ಲೇಖಕಿ: ಕಾದಂಬರಿಕಾರ್ತಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 138

ಬ್ರಹ್ಮನಿಗೆ ಬುದ್ಧಿ ಹೇಳಿದ ವಿಷ್ಣು

ಮಹಾಯೋಗಿ ಮಹಾದೇವನನ್ನು ಕಾಮಪಾಶಕ್ಕೆ ಸಿಲುಕಿಸುವ ಸತತ ಪ್ರಯತ್ನಗಳು ವಿಫಲವಾಗಿದ್ದರಿಂದ ಮನ್ಮಥ ಖಿನ್ನನಾದ. ಮಹಾವಿರಾಗಿ ಶಿವನನ್ನು ವಿಚಲಿತನನ್ನಾಗಿಸಲು ತನ್ನಿಂದ ಸಾಧ್ಯವಿಲ್ಲ ಎಂದು ಹೇಳಿದ ಮನ್ಮಥ ತನ್ನ ಪತ್ನಿ ರತಿ ಮತ್ತು ಆತನ ಪರಿವಾರವಾದ ವಸಂತ, ಮಾರಗಣಗಳೊಂದಿಗೆ ತನ್ನ ಆಶ್ರಮಕ್ಕೆ ತೆರಳಿದ ಎಂದು ಬ್ರಹ್ಮ ಹೇಳುತ್ತಾನೆ. ಆಗ ನಾರದ ಮತ್ತೆ ‘ಮುಂದೇನಾಯಿತು’ ಎಂದು ಕಾತುರದಿಂದ ಒತ್ತಾಯಿಸುತ್ತಾನೆ.

ಆಗ ಬ್ರಹ್ಮ ‘ಎಲೈ ನಾರದ, ಚಂದ್ರಶೇಖರನ ದಿವ್ಯಚರಿತ್ರೆಯನ್ನು ಸಂಪೂರ್ಣವಾಗಿ ಹೇಳುವೆನು. ಅದನ್ನು ಕೇಳಿದ ಮಾತ್ರದಿಂದಲೇ ನರರು ಕಾಮವಿಕಾರವಿಲ್ಲದವರಾಗುವರು’ ಎಂದು ಹೇಳಿ, ಚರಿತ್ರೆಯನ್ನು ಮುಂದುವರೆಸುತ್ತಾನೆ.

ಶಿವನನ್ನು ಮೋಹಗೊಳಿಸುವ ಮನೋರಥ ಸಿದ್ಧಿಸದಿದ್ದಾಗ ನನಗೆ ತುಂಬಾ ದುಃಖವಾಗಿ, ನನ್ನ ಗರ್ವವೆಲ್ಲಾ ಇಳಿದುಹೋಯಿತು. ಶಿವನು ಯಾವ ವಿಕಾರವೂ ಇಲ್ಲದವನು, ಜಿತೇಂದ್ರಿಯನು, ಜ್ಞಾನಯೋಗದ ಲ್ಲಿರುವವನು. ಇಂಥ ಶಿವನನ್ನು ಹೇಗೆ ಸ್ತ್ರೀಯನ್ನು ಪರಿಗ್ರಹಿಸುವಂತೆ ಮಾಡುವುದು? ಅವನ ಮನಸ್ಸನ್ನು ಕೆಡಿಸುವ ಬಗೆ ಹೇಗೆ ಎಂದು ಆಲೋಚಿಸಿ, ನನಗೆ ಶರೀರವನ್ನು ಕೊಟ್ಟ ವಿಷ್ಣುವನ್ನು ಭಕ್ತಿಯಿಂದ ಸ್ಮರಿಸಿದೆ. ನನ್ನ ಮೊರೆಯನ್ನು ಕೇಳಿ ಭಗವಂತನಾದ ಹರಿಯು ಪ್ರತ್ಯಕ್ಷನಾದ.

‘ನೀನು ಈಗ ನನ್ನನ್ನು ಸ್ಮರಿಸಿದುದೇಕೆ? ಏತಕ್ಕಾಗಿ ನನ್ನನ್ನು ಸ್ತುತಿಸುತ್ತಲಿರುವೆ?’ ಎಂದು ಕೇಳಿದ. ಇದಕ್ಕೆ ಬ್ರಹ್ಮ ‘ರುದ್ರನನ್ನು ಮೋಹಗೊಳಿಸುವ ಮಾರ್ಗ ತಿಳಿಸು. ಈಗಾಗಲೇ ಎರಡು ಬಾರಿ ಮನ್ಮಥನನ್ನು ರತಿ, ವಸಂತ, ಮಾರಗಣಗಳೊಡನೆ ಕಳುಹಿಸಿದೆ. ಅವರೆಲ್ಲರೂ ರುದ್ರನ ಬಳಿಗೆ ಹೋಗಿ ಅನೇಕ ಪ್ರಯತ್ನಗಳನ್ನು ಮಾಡಿದರು. ಆದರೆ ಏಕರೂಪವಾದ ಬ್ರಹ್ಮವಸ್ತುವನ್ನು ನೋಡುತ್ತಲಿರುವ ಬ್ರಹ್ಮಸ್ವರೂಪ ನಾದ ಜ್ಞಾನಯೋಗಿ ಶಿವನಿಗೆ ಮೋಹವೇ ಉಂಟಾಗಲಿಲ್ಲ’ ಎಂದ.

ಬ್ರಹ್ಮನ ಮಾತನ್ನು ಕೇಳಿ ಹರಿಗೆ ಆಶ್ಚರ್ಯವಾಯಿತು. ಶಿವನ ಸ್ವರೂಪವನ್ನು ತಿಳಿದವನೂ ಸರ್ವಜ್ಞನೂ ಆದ ಅವನು ‘ಎಲೈ ಬ್ರಹ್ಮನೆ, ನಿನಗೆ ಏಕೆ ಇಂತಹ ದುರ್ಬುದ್ಧಿ ಬಂದಿತು? ನಿಜವನ್ನು ಹೇಳು’ ಎಂದು ಪ್ರಶ್ನಿಸಿದಾಗ, ಬ್ರಹ್ಮ ನಡೆದ ಸಮಾಚಾರವನ್ನೆಲ್ಲಾ ಹೇಳುತ್ತಾನೆ. ಸೃಷ್ಟಿಯ ಪ್ರಾರಂಭದಲ್ಲಿ ದಕ್ಷ ಮೊದಲಾದ ಹತ್ತು ಜನ ಪುತ್ರರೂ, ಓರ್ವ ಸುಂದರಿ ಯಾದ ಪುತ್ರಿ ಸಂಧ್ಯೆ ಜನಿಸಿದ್ದು, ಅವನ ಹೃದಯದಿಂದ ಧರ್ಮಪುರುಷ ಜನಿಸಿದರೆ, ಮನಸ್ಸಿನಿಂದ ಮನ್ಮಥ ಜನಿಸಿದ್ದು, ಆಗ ಮಗಳು ಸಂಧ್ಯೆ ಮೇಲೆಯೇ ತನಗೆ ಮೋಹವುಂಟಾಗಿದ್ದು, ಇದಕ್ಕಾಗಿ ಶಿವನು ಬಂದು ತನ್ನನ್ನು ಪುತ್ರರನ್ನೂ ನಿಂದಿಸಿದ್ದನ್ನು ಹೇಳುತ್ತಾನೆ.

‘ನನ್ನಿಂದ ಜನಿಸಿದವನಾದ ರುದ್ರ ಎಲ್ಲರ ಎದುರಿನಲ್ಲಿ ನಿಂದಿಸಿದ್ದರಿಂದ ನನಗೆ ತುಂಬಾ ದುಃಖವಾಗಿದೆ. ಮಹಾವಿರಾಗಿ ಎಂದು ಮೆರೆ ಯುತ್ತಿರುವ ಆ ಶಿವನು ಪತ್ನಿಯನ್ನು ಪರಿಗ್ರಹಿಸಿದರೆ ನನಗೆ ಸಮಾಧಾನ ವಾಗುತ್ತದೆ. ಇದಕ್ಕಾಗಿ ನೀನು ಶಿವನನ್ನು ಮೋಹ ಗೊಳಿಸುವ ಮಾರ್ಗ ತಿಳಿಸು’ ಎಂದು ಬ್ರಹ್ಮ ಕೋರುತ್ತಾನೆ. ಬ್ರಹ್ಮನ ಮಾತನ್ನು ಕೇಳಿ ವಿಷ್ಣು ನಕ್ಕು ಹೇಳಿದ, ‘ನಾನು ಈಗ ಹೇಳುವ ವಿಷಯವು ವೇದ ಮತ್ತು ಆಗಮಗಳಲ್ಲಿ ಪರಮಾರ್ಥವೆಂದು ನಿರೂಪಿಸಲ್ಪಟ್ಟಿದೆ. ಎಲೈ ವಿಧಿಯೇ, ನಿನಗೆ ಇಷ್ಟು ತಿಳಿವಳಿಕೆಯಿಲ್ಲದೇ ಹೋಯಿತೇ? ವೇದವನ್ನು ತಿಳಿದವನೂ ಮತ್ತು ಸಕಲ ಜಗತ್ತನ್ನು ಸೃಷ್ಟಿಸುವವನೂ ಆದ ನಿನಗೆ ಇಂತಹ ಕೆಟ್ಟ ಬುದ್ಧಿ ಏಕೆ ಉಂಟಾಯಿತು? ಈ ಅವಿವೇಕವನ್ನು ತ್ಯಜಿಸು. ಇಂತಹ ದುರ್ಬುದ್ಧಿಯನ್ನು ಮಾಡಬೇಡ. ಎಲ್ಲಾ ವೇದಗಳು ಯಾವ ಪರವಸ್ತುವನ್ನು ನಿರೂಪಿಸುವುವೋ ಆ ವಸ್ತುವನ್ನು ಸ್ಮರಿಸುತ್ತಾ ಅದನ್ನು ಸ್ತುತಿಸು. ಪರಮಾತ್ಮನಾದ ರುದ್ರ ನನ್ನು ನಿನ್ನ ಪುತ್ರನೆಂದು ತಪ್ಪಾಗಿ ತಿಳಿದಿರುವೆಯಲ್ಲಾ, ಅವನೇ ಪರಮಾತ್ಮನೆಂದು ನಿನಗೆ ತಿಳಿಯಲಿಲ್ಲವೇ? ವೇದವನ್ನು ತಿಳಿದವನಾದ ನೀನು, ಆ ಜ್ಞಾನವೆಲ್ಲವನ್ನು ಮರೆತೆಯಾ? ಗುಣಗಳ ನಿಮಿತ್ತವಾಗಿ ಬ್ರಹ್ಮ-ವಿಷ್ಣು-ರುದ್ರ ಎಂಬ ಮೂರು ರೂಪ ಗಳನ್ನು ಧರಿಸಿ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡು ತ್ತಾನೆ. ಆದರೆ ವಸ್ತುತಃ ಅವನು ಸತ್ವ-ರಜಸ್ಸು-ತಮೋಗುಣಗಳ ಸಂಬಂಧವಿಲ್ಲದವನು’ ಎಂದು ವಿಷ್ಣು ತನ್ನ ಪುತ್ರನಾದ ಬ್ರಹ್ಮನಿಗೆ ಬುದ್ಧಿ ಹೇಳುತ್ತಾನೆ. •

ಪದಬಂಧ 4978

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತರ್ಕ ಮಾಡುತ್ತಿರುವ ಹಂಚಿಕೆದಾರ! (4)
3.ಸತಿಯ ಒಳ್ಳೆ ಬುದ್ಧಿ! (3)
5.ಕರುವಿಗೆ ತೋರಿದ ದಯೆ (3)
7.ಪಾಯ ತೋಡುವಾಗ ಹೂಡಿದ ಯುಕ್ತಿ (3)
8.ಸಮಯವನ್ನು ವ್ಯರ್ಥವಾಗಿ ಕಳೆಯುವುದು (5)
11.ಗೋಮಯದಿಂದಸಾರಿಸುವಿಕೆ (3)
12.ಮೈಸೂರು ಎಂದರೆನೆನಪಾಗುವಹೂವು (3)
15.ನಗ ಖರೀದಿಗೆ ತಕ್ಕುದಾದ ಷಹರು (3
16.ದಾಯಾದಿ ಮನೆ ಬಳಿ ನೆರೆದ ಗುಂಪು (4)

ಮೇಲಿಂದ ಕೆಳಕ್ಕೆ

1.ಪ್ರತಿಕೂಲವಾದುದನ್ನು ಹೀಗೆನ್ನಿ (3)
2.ಕೆಮ್ಮಿದಾಗ ಹೊರ ಬೀಳುವ ಶ್ಲೇಷ್ಮ (2)
3.ಯಮನ ಬಳಿ ಕಳೆದ ಕಾಲ (3)
4.ಪ್ರತಿಯಾಗಿ ಹೇಳುವ ಮಂತ್ರ (4)
6.ನಿಂದೆಯು ಕೊನೆಗೆ ದೀರ್ಘವಾಗಿದೆ (3)
7.ಕನ್ನಡಿಗನು ನೀಡಿದ ಎಕ್ಸಾಂಪಲ್! (5)
9.ತಿರುಗಿದಾಗ ಸಾವು ಕಾಣಿಸಿತಲ್ಲಾ? (3)
10.ಕೊನೆಗೆ ಮರ್ಯಾದೆಯನ್ನಿಟ್ಟು ಮಾಡಿರುವ ಹೋಲಿಕೆ! (4)
11.ಹತ್ತು ನೂರಿದು (3)
13.ಇಳೆಯ ಹತ್ತಿರವಿರುವ ಮಿತ್ರ! (3)
14.ವಂಚನೆಗೊಂದು ಪರ್ಯಾಯ ಪದ (2)



4977ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭಾವ 3.ಪ್ರಯಾಸ
6.ರಸಿಕ 8.ಪರಿಕರ
10.ಪ್ರಖರ 11.ಕನಕ
12.ರಸವಾದ 15.ಮಕರ
17.ಕಮ್ಮಾರ 18.ನಿಜ

ಮೇಲಿಂದ ಕೆಳಕ್ಕೆ:
2.ವಕ್ತಾರ 3.ಪ್ರತೀಕ
4.ಸಲ್ಲಾಪ 5.ಸುಂಕ
7.ಸಿತಾರ 9.ರಥಿಕ
10.ಪ್ರಚಾರ 11.ಕಣಕ
13.ಸಸಿ 14.ದಶಕ
15.ಮಧುರ 16.ರಜನಿ

ಸುಡೊಕು 5364

		8	2		5		6	
			4			8		5
	4	5			9		3	
4	6		9		7			
				4		1		6
8		7	5		6		4	9
		4			2			7
7						6		3
	8		7			2		

5363 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜೂನ್ 4, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ –ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಪಂಚಮಿ ಗಂ. 28-53 ನಕ್ಷತ್ರ: ಪುಷ್ಯ ಗಂ. 21-55 ಯೋಗ: ಧ್ರುವ ಗಂ. 28-19, ಕರಣ: ಬವ ಗಂ. 15-50, ವೃಷಭ ಮಾಸದ 20 ನೇ ದಿನ.
ರಾಹುಕಾಲ : ಬೆಳಿಗ್ಗೆ 09:00 – 10:30
ಸೂರ್ಯೋದಯ : 06-06 ಸೂರ್ಯಾಸ್ತ : 06-51
ಮುಸ್ಲಿಂ ದಿನಾಂಕ : 04 ಜುಲ್ಹಾಯದ್
ಅದೃಷ್ಟ ಸಂಖ್ಯೆ : 10, 12

ಮೇಷ: ದೇವರ ಕೃಪೆಯಿಂದ ನಿಮ್ಮ ಭಾಗ್ಯದ ಬಾಗಿಲು ತೆರೆಯುವುದು. ನಿಮ್ಮ ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ನಿಮಗೆ ಹೆಚ್ಚು ಆನಂದ ಸಿಗಬಹುದು. ಪುಸ್ತಕ ವ್ಯಾಪಾರಿಗಳಿಗೆ ಒಳ್ಳೆಯ ಲಾಭವಾಗುವ ಸಂಭವ.

ವೃಷಭ: ನಿಮ್ಮ ಕೆಲಸ ಕಾರ್ಯಗಳಿಗೆ ಯಾವುದೇ ತರಹದ ಅಡ್ಡಿ ಆತಂಕಗಳು ಇಲ್ಲ. ವೃತ್ತಿಯಲ್ಲಿ ಅವಸರದ ನಿರ್ಧಾರದಿಂದ ಕೆಲಸಗಳನ್ನು ಒಪ್ಪಿಕೊಳ್ಳಬೇಡಿ. ಸಾಮಾಜಿಕವಾಗಿ ಜನರ ಸಂಪರ್ಕ ಬೆಳೆಸಿಕೊಳ್ಳುವುದನ್ನು ಅಭ್ಯಾಸಮಾಡಿ.

ಮಿಥುನ: ಆಂತರಿಕ ಒಪ್ಪಂದಗಳಿಂದ ವ್ಯವಹಾರದಲ್ಲಿ ಲಾಭ. ಖಾದ್ಯ ಪದಾರ್ಥಗಳ ಉತ್ಪಾದನಾ ಕೆಲಸಗಳು ಚುರುಕುಗತಿಯಿಂದ ಸಾಗುವುದು. ಹಿರಿಯರಿಂದ ತಿಳಿದುಕೊಂಡಿದ್ದ ವಿಷಯಗಳು ನಿಮ್ಮ ಉಪಯೋಗಕ್ಕೆ ಬರಲಿದೆ.

ಕರ್ಕಾಟಕ: ಅನಾರೋಗ್ಯವು ಉದ್ಯೋಗದಲ್ಲಿ ಹಿನ್ನಡೆಯಾಗುವಂತೆ ಮಾಡುವುದು. ಸಿಹಿ ಪದಾರ್ಥಗಳ ಮಾರಾಟದಿಂದ ಲಾಭ. ಹೆಂಡತಿ ಅಥವಾ ಹೆಂಡತಿಯ ಮನೆಗೋಸ್ಕರವಾಗಿ ಖರ್ಚು ಮಾಡಬೇಕಾದ ಪರಿಸ್ಥಿತಿ ಬರಲಿದೆ.

ಸಿಂಹ: ಜೋರಾದ ವಹಿವಾಟಿನಿಂದ ಸಗಟು ಧಾನ್ಯ ವರ್ತಕರಿಗೆ ಲಾಭ. ಬಿಡುವಿಲ್ಲದ ಕೆಲಸಗಳು ಮತ್ತು ಮೇಲಧಿಕಾರಿಗಳ ಹೆಚ್ಚಿನ ಒತ್ತಡಗಳಿಂದಾಗಿ ವೈಯಕ್ತಿಕ ವಿಷಯಗಳತ್ತ ಗಮನ ಹರಿಸಲು ಸಮಯವಿಲ್ಲದಂತಾಗುವುದು.

ಕನ್ಯಾ: ಉನ್ನತ ವರ್ಗದ ಅಧಿಕಾರಿಯೊಬ್ಬರಿಂದ ನಿಮ್ಮ ವರ್ಗಾವಣೆ ಕೆಲಸ ಸಲೀಸು. ಮಕ್ಕಳ ದೈನಂದಿನ ಚಟುವಟಿಕೆ ಕಡೆ ಹೆಚ್ಚಿನ ಗಮನ ನೀಡಿ. ರಾಜಕೀಯ ವ್ಯಕ್ತಿಗಳೊಂದಿಗೆ ಒಡನಾಟ ಬೆಳೆಸಿಕೊಳ್ಳಲೇಬೇಕಾದ ಸನ್ನಿವೇಶ.

ತುಲಾ: ಮಗಳಿಗೆ ಅನಿರೀಕ್ಷಿತವಾಗಿ ಹೊಸ ಕೆಲಸ ಸಿಕ್ಕಿ ಸಂತೋಷವಾಗುವುದು. ಮನಸ್ಸಿನ ದುಗುಡಗಳು ಹಂತ ಹಂತವಾಗಿ ಕಡಿಮೆಯಾಗಿ ಸ್ನೇಹಿತರ ಪಾತ್ರವೇ ಜೀವನದಲ್ಲಿ ಮುಖ್ಯವೆನಿಸಲಿದೆ. ಕುಟುಂಬದಲ್ಲಿ ಸುಖ ನೆಮ್ಮದಿ ವೃದ್ಧಿ.

ವೃಶ್ಚಿಕ: ನಿಮ್ಮ ಪ್ರಯತ್ನಗಳು ನಿಷ್ಫಲವೆನಿಸುವುದಿಲ್ಲ. ನಿರುದ್ಯೋಗಸ್ಥರಿಗೆ ಹೊರ ರಾಜ್ಯದಲ್ಲಿ ಕೆಲಸ ನಿರ್ವಹಿಸುವ ಅವಕಾಶ ಎದುರಾದರೆ ಒಪ್ಪಿಕೊಳ್ಳುವುದು ಉತ್ತಮ. ಊರಿನ ರಾಜಕೀಯ ಸನ್ನಿವೇಷಗಳಿಂದ ಅನುಕೂಲ.

ಧನು: ವಹರಿಸುವಾಗ ಬುದ್ಧಿವಂತಿಕೆ ಅಗತ್ಯ. ಇತರರ ಮಾತನ್ನು ತಪ್ಪಾಗಿ ಅರ್ಥೈಸಿ ಸಂಬಂಧಿಕರಲ್ಲಿ ಭಿನ್ನಾಭಿಪ್ರಾಯ ಬೇಡ. ಸಂಸ್ಥೆಯ ವತಿಯಿಂದ ತರಬೇತಿ ಅವಕಾಶಗಳು ಎದುರಾದಲ್ಲಿ ಸದುಪಯೋಗಪಡಿಸಿಕೊಳ್ಳಿ.

ಮಕರ: ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಕುಶಲಮತಿ ಹೊಂದಿರುವ ನೀವು ಸಣ್ಣ-ಪುಟ್ಟ ತಪ್ಪುಗಳನ್ನು ಮಾಡುವ ಲಕ್ಷಣ. ಕೆಲಸದಲ್ಲಿ ಹೆಚ್ಚಿನ ಗಮನವಿಲ್ಲದಿದ್ದರೆ ದಂಡತೆತ್ತುವಂತಾಗಲಿದೆ.

ಕುಂಭ: ಸಹೋದ್ಯೋಗಿಗಳೊಂದಿಗಿನ ಭಿನ್ನಾಭಿಪ್ರಾಯಗಳು ನಿವಾರಣೆಯಾವಂತೆ ವರ್ತಿಸಿ. ಬಾಲ್ಯ ಸ್ನೇಹಿತರೊಂದಿಗೆ ಹೆಚ್ಚಿನ ಸಮಯ ಕಳೆಯುವ ಸಂದರ್ಭ. ಸೇವಾ ಹಿರಿತನದಿಂದ ಹೆಚ್ಚಿನ ಸ್ಥಾನಮಾನ.

ಮೀನ: ಮಹತ್ವದ ವಿಷಯವಾದ್ದರಿಂದ ಗಂಭೀರ ಚಿಂತನೆ ಅಗತ್ಯ. ಜೊತೆಗೆ ವಕೀಲರ ಸಲಹೆ, ಮಾರ್ಗದರ್ಶನ ಪಡೆದು ಮುನ್ನುಗ್ಗುವುದು ಅತ್ಯುತ್ತಮ. ಪ್ರಾಮಾಣಿಕವಾಗಿ ನಡೆಯುವ ನಿಮಗೆ ವ್ಯವಹಾರಗಳಲ್ಲಿ ಉತ್ತಮ ಆದಾಯ.

ಅಮೆರಿಕ: ಗುಂಡಿನ ದಾಳಿ– 3 ಸಾವು

ಅಮೆಸ್, ಅಮೆರಿಕ (ಎಪಿ): ಅಯೋವಾ ರಾಜ್ಯದ ಅಮೆಸ್‌ನಲ್ಲಿ ಗುರುವಾರ ರಾತ್ರಿ ವ್ಯಕ್ತಿಯೊಬ್ಬ ಇಬ್ಬರು ಮಹಿಳೆಯರನ್ನು ಗುಂಡಿಕ್ಕಿ ಕೊಂದು, ನಂತರ ತಾನೂ ಗುಂಡು ಹೊಡೆದುಕೊಂಡಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮೆಸ್ ಹೊರವಲಯದಲ್ಲಿರುವ ಕಾರ್ನರ್‌ಸ್ಟೋನ್ ಚರ್ಚ್ ಹೊರಗೆ ನಡೆದ ಗುಂಡಿನ ದಾಳಿ ನಡೆದಿದೆ. ದಾಳಿಕೋರ ಹತ್ಯೆ ಮಾಡಿದ ಬಳಿಕ ತನಗೆ ತಾನೇ ಗುಂಡು ಹೊಡೆದುಕೊಂಡಂತೆ ತೋರುತ್ತದೆ. ಆತನ ಸಾವಿನ ಬಗ್ಗೆಯೂ ತನಿಖೆ ನಡೆಯುತ್ತಿದೆ' ಎಂದು ಸ್ಟೋರಿ ಕೌಂಟಿ ಪೊಲೀಸ್ ಮುಖ್ಯಸ್ಥ ನಿಕೋಲಾಸ್ ಲೆನ್ನಿ, ಹೇಳಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ.ಟಿ.ಶ್ರೀನಿವಾಸ್
ಮರಣ–25.05.2022
ಸದಸ್ಯರು, ಜನತಾ ಶಿಕ್ಷಣ ಸಂಸ್ಥೆ
ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ
ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ,
ಪ್ರಾಂಶುಪಾಲರು, ಮುಖ್ಯೋಪಾಧ್ಯಾರು
ಮತ್ತು ಸಿಬ್ಬಂದಿ ವರ್ಗ
ವಿವೇಕಾನಂದ ಶಾಲಾ ಕಾಲೇಜುಗಳು
ಬೆಂಗಳೂರು–560055

ಸವಿನೆನಪು

ವಿ. ಕಲ್ಯಾಣಮ್ಮ
ಕೆ. ಎ. ವೆಂಕಟೇಶ ರೆಡ್ಡಿ ಅವರ ಧರ್ಮಪತ್ನಿ
4–6–2002
ನಿಮ್ಮ ನೆನಪು ಸದಾ ಹಸಿರು. ನಿಮ್ಮ ಆತ್ಮಕ್ಕೆ
ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ
ಕೆ. ಎ. ವೆಂಕಟೇಶ ರೆಡ್ಡಿ
ಕುಡ್ಲು, ಬೆಂಗಳೂರು
Class - I 'A' K.P.W.D. Contractor
ಮತ್ತು ಮಕ್ಕಳು
S.B.W. Asphalts & Co.

ಸಮಾರೋಪ ಸಮಾರಂಭ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಅಭಿಪ್ರಾಯ

'ಪ್ರತಿ ಮಸೀದಿಯಲ್ಲಿ ಶಿವಲಿಂಗ ಶೋಧ ಬೇಡ'

ನಾಗಪುರ(ಪಿಟಿಐ): 'ಜ್ಞಾನವಾಪಿ ವಿವಾದವು ಕೆಲವು ನಂಬಿಕೆಯ ವಿಚಾರಗಳನ್ನು ಒಳಗೊಂಡಿದೆ. ನ್ಯಾಯಾಲಯದ ತೀರ್ಪನ್ನು ಎಲ್ಲರೂ ಒಪ್ಪಬೇಕು. ಆದರೆ, ಪ್ರತಿ ಮಸೀದಿಯಲ್ಲಿ ಶಿವಲಿಂಗ ಹುಡುಕುವ ಮತ್ತು ಪ್ರತಿ ದಿನ ಹೊಸ ವಿವಾದ ಸೃಷ್ಟಿಸುವ ಅಗತ್ಯವಿಲ್ಲ' ಎಂದು ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.



ಮೋಹನ್ ಭಾಗವತ್

ಗುರುವಾರ ಇಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂರನೇ ವರ್ಷದ ಅಧಿಕಾರಿ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಜ್ಞಾನವಾಪಿ ಆವರಣದ ಕೊಳದಲ್ಲಿ ಶಿವಲಿಂಗ ಕಂಡುಬಂದಿದೆ ಎಂದು ಜ್ಞಾನವಾಪಿ ಪ್ರಕರಣದಲ್ಲಿ ಹಿಂದೂ ಅರ್ಜಿದಾರರು ನೀಡಿರುವ ಹೇಳಿಕೆ ಉಲ್ಲೇಖಿಸಿ, 'ನಮಗೆ ಅಂತಹ ಸ್ಥಳಗಳಲ್ಲಿ ವಿಶೇಷ, ಸಾಂಕೇತಿಕ ನಂಬಿಕೆ ಇರುವುದು ನಿಜ. ಆದರೆ, ಪ್ರತಿದಿನ ಹೊಸ ವಿಷಯ ಎತ್ತಬಾರದು. ವಿವಾದಗಳನ್ನು ಏಕೆ ಉಲ್ಬಣಗೊಳಿಸಬೇಕು' ಎಂದು ಭಾಗವತ್ ಪ್ರಶ್ನಿಸಿದರು.

'ಅಯೋಧ್ಯೆ ಹೋರಾಟದಲ್ಲಿ ಭಾಗವಹಿಸಿದ್ದು ಒಂದು ಅಪವಾದ. ಭವಿಷ್ಯದಲ್ಲಿ ಇಂತಹ ಹೋರಾಟಗಳನ್ನು ಕೈಗೊಳ್ಳುವುದಿಲ್ಲವೆಂದು ಆರೆಸ್ಸೆಸ್ ಈಗಾಗಲೇ ಸ್ಪಷ್ಟಪಡಿಸಿದೆ. ಈಗ ವಾರಾಣಸಿಯ ಜ್ಞಾನವಾಪಿ ಮಸೀದಿ ಕುರಿತು ಚರ್ಚೆ ನಡೆಯುತ್ತಿದೆ. ಇದಕ್ಕೆ ಇತಿಹಾಸವಿದೆ, ಅದನ್ನು ನಾವು ಬದಲಿಸಲು ಸಾಧ್ಯವಿಲ್ಲ. ಆ ಇತಿಹಾಸವನ್ನು ನಾವು ಅಥವಾ ಇಂದಿನ ಹಿಂದೂಗಳು ಅಥವಾ ಮುಸ್ಲಿಮರು ಮಾಡಿದ್ದಲ್ಲ. ಇದು ಇಸ್ಲಾಂ ಭಾರತಕ್ಕೆ ಬಂದಾಗ ಸಂಭವಿಸಿದೆ. ಆಕ್ರಮಣಕಾರರು, ಸ್ವಾತಂತ್ರ್ಯ ಬಯಸುವವರ ಸ್ಥೈರ್ಯ ಕುಂದಿಸಲು ದೇವಾಲಯಗಳನ್ನು ನಾಶಪಡಿಸಿದರು. ಅಂತಹ ಭಗ್ನಗೊಂಡ ಸಾವಿರಾರು ದೇವಾಲಯಗಳು ಈಗಲೂ ಇವೆ. ಆದರೆ ಆರೆಸ್ಸೆಸ್ ಈ ವಿಷಯದ ಬಗ್ಗೆ ಏನನ್ನೂ ಹೇಳಲು ಬಯಸುವುದಿಲ್ಲ' ಎಂದು ಭಾಗವತ್ ಹೇಳಿದರು.

'ನವೆಂಬರ್ 9ರ ರಾಮಜನ್ಮಭೂಮಿ ಆಂದೋಲನ ಸಂಬಂಧ ನಾವು ಹೇಳಬೇಕಾದ್ದನ್ನು ಹೇಳಿದ್ದೆವು. ಅದು ನಮ್ಮ ಸ್ವಭಾವಕ್ಕೆ ವಿರುದ್ಧವಾಗಿದ್ದರೂ ನಾವು ಅದರಲ್ಲಿ ಭಾಗಿಯಾದೆವು. ಕೆಲವು ಐತಿಹಾಸಿಕ ಕಾರಣಗಳಿಗಾಗಿ ಮತ್ತು ಅಂದಿನ ಪರಿಸ್ಥಿತಿಯಿಂದಾಗಿ ನಾವು ಆ ಕೆಲಸ ಪೂರ್ಣಗೊಳಿಸಿದೆವು. ಆದರೆ, ಪ್ರತಿ ಬಾರಿಯೂ ಇದು ಸಂಭವಿಸುವುದಿಲ್ಲ. ಜನರು ನ್ಯಾಯಾಲಯಗಳ ಮೊರೆ ಹೋಗುತ್ತಾರೆ. ನ್ಯಾಯಾಂಗ ವ್ಯವಸ್ಥೆಯನ್ನು ಪವಿತ್ರ ಮತ್ತು ಸರ್ವೋಚ್ಚವೆಂದು ಪರಿಗಣಿಸಿ ನ್ಯಾಯಾಲಯದ ಆದೇಶವನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಜ್ಞಾನವಾಪಿ ಮಸೀದಿ-ಕಾಶಿ ವಿಶ್ವನಾಥ ದೇವಾಲಯ ವಿವಾದದಲ್ಲಿ ಎಲ್ಲರೂ ಪರಸ್ಪರ ಒಪ್ಪಿಗೆಯೊಂದಿಗೆ ಪರಿಹಾರ ಕಂಡುಕೊಳ್ಳಬೇಕು' ಎಂದು ಭಾಗವತ್ ಸಲಹೆ ನೀಡಿದ್ದಾರೆ.

ಭಯೋತ್ಪಾದನೆ ಬೇಡ: ಭಾಗವತ್

'ಯಾವುದೇ ಸಮುದಾಯವು ಭಯೋತ್ಪಾದನೆಯನ್ನು ಬೆಂಬಲಿಸಬಾರದು' ಎಂದು ಮೋಹನ್ ಭಾಗವತ್ ಹೇಳಿದ್ದಾರೆ.

'ಹಿಂದೂ ಸಮುದಾಯವು ಯಾವುದೇ ರೀತಿಯ ಉಗ್ರವಾದ ಸ್ವೀಕರಿಸುವುದಿಲ್ಲ. ಹಾಗಾಗಿಯೇ ಯಹೂದಿಗಳು ಅಥವಾ ಪಾರ್ಸಿಗಳು ಸೇರಿ ಎಲ್ಲ ರೀತಿಯ ಜನರು ಹಿಂದೂ ಸಮುದಾಯದ ಆಶ್ರಯ ಪಡೆದರು. ಹಿಂದೂಗಳು ತಮ್ಮ ಹಿಂದೂ ಗುಣ ಸುಧಾರಿಸಿಕೊಳ್ಳಬೇಕು. ಹೆಚ್ಚು ಶಕ್ತಿಶಾಲಿಯಾಗಬೇಕು. ಒಗ್ಗಟ್ಟಿನ ಹಿಂದೂ ಸಮುದಾಯವು ಜಾಗತಿಕ ಸಂಘರ್ಷಗಳನ್ನು ಪರಿಹರಿಸುವ ಮೂಲಕ ಹೊಸ ಜಗತ್ತನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ' ಎಂದು ಅವರು ಹೇಳಿದರು.

'ಎಲ್ಲರೂ ಪರಸ್ಪರರ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಗೌರವಿಸಬೇಕು. ಹೃದಯದಲ್ಲಿ, ಮಾತಿನಲ್ಲಿ ಅಥವಾ ಕೆಲಸದಲ್ಲಿ ಯಾವುದೇ ಉಗ್ರವಾದ ಇರಬಾರದು. ಎರಡೂ ಕಡೆಯಿಂದ ಬೆದರಿಕೆಯ ಮಾತುಗಳು ಇರಬಾರದು. ಹಿಂದೂಗಳ ಕಡೆಯಿಂದ ಬೆದರಿಕೆ ಕಡಿಮೆಯಾಗಿದೆ. ಹಿಂದೂಗಳು ಸಂಯಮ ಕಾಪಾಡಿಕೊಂಡಿದ್ದಾರೆ. ದೇಶ ವಿಭಜನೆಯ ವೇಳೆ ಹಿಂದೂಗಳು ಅಪಾರ ಬೆಲೆ ತೆತ್ತಿದ್ದಾರೆ' ಎಂದರು.

'ಮುಸ್ಲಿಮರ ಆರಾಧನಾ ವಿಧಾನ ಹೊರಗಿನಿಂದ ಬಂದಿದ್ದರೂ ಮುಸ್ಲಿಮರು ಹೊರಗಿನವರಲ್ಲ. ಅವರ ಮತ್ತು ನಮ್ಮ ಸಂಪ್ರದಾಯವು ಒಂದೇ ಆಗಿದೆ. ಕೆಲವು ರಾಷ್ಟ್ರೀಯವಾದಿ ಮುಸ್ಲಿಮರು ಅನೇಕ ಸ್ವಾತಂತ್ರ್ಯ ಹೋರಾಟಗಳಲ್ಲಿ ಹಿಂದೂಗಳೊಂದಿಗೆ ಕೈಜೋಡಿಸಿದ್ದಾರೆ. ಅವರು ನಮ್ಮ ಭಾಗವತ್ ಹೇಳಿದರು.

'ಮುಸ್ಲಿಮರು ತಮ್ಮ ಸ್ವಂತ ಪೂರ್ವಜರ ವಂಶಸ್ಥರು ಮತ್ತು ರಕ್ತ ಸಂಬಂಧದಿಂದ ಸಹೋದರರು ಎಂಬುದನ್ನು ಹಿಂದೂಗಳು ಅರ್ಥ ಮಾಡಿಕೊಳ್ಳಬೇಕು. ಅವರು ಮಾತೃ ಧರ್ಮಕ್ಕೆ ವಾಪಸಾಗಲು ಬಯಸಿದರೆ ಅವರನ್ನು ನಾವು ಮುಕ್ತವಾಗಿ ಸ್ವಾಗತಿಸುತ್ತೇವೆ. ಅವರು ಹಿಂತಿರುಗದಿದ್ದರೂ ಪರವಾಗಿಲ್ಲ, ಎಲ್ಲರೂ ಅವರವರ ಧರ್ಮ ಅನುಸರಿಸಲಿ. ನಮ್ಮಲ್ಲಿ ಈಗಾಗಲೇ 33 ಕೋಟಿ ದೇವರುಗಳಿವೆ. ಇನ್ನಷ್ಟು ಸೇರಿಸಿಕೊಳ್ಳುತ್ತೇವೆ' ಎಂದರು.

ಉತ್ತರಪ್ರದೇಶ: ಹೂಡಿಕೆದಾರರ ಶೃಂಗಸಭೆಯಲ್ಲಿ ಪ್ರಧಾನಿ ಹೇಳಿಕೆ

ಜಗತ್ತಿನ 'ವಿಶ್ವಾಸಾರ್ಹ ಪಾಲುದಾರ' ಭಾರತ

ಲಖನೌ (ಪಿಟಿಐ): ಜಿ–20 ರಾಷ್ಟ್ರಗಳಲ್ಲಿ ಭಾರತವು ಅತಿವೇಗವಾಗಿ ಬೆಳೆಯುತ್ತಿರುವ ರಾಷ್ಟ್ರವಾಗಿದ್ದು, ಇಂದು ಜಗತ್ತು ಹುಡುಕುತ್ತಿರುವ 'ವಿಶ್ವಾಸಾರ್ಹ ಪಾಲುದಾರ' ರಾಷ್ಟ್ರವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

ಉತ್ತರಪ್ರದೇಶದ ಹೂಡಿಕೆದಾರರ ಮೂರನೇ ಶೃಂಗಸಭೆಯಲ್ಲಿ ಮಾತನಾಡಿದ ಅವರು, '₹ 80 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ 1,406 ಯೋಜನೆಗಳನ್ನು ಆರಂಭಿಸಿದ್ದು, ಭಾರತಕ್ಕೆ ದೊಡ್ಡ ಅವಕಾಶಗಳ ಮಹಾಪೂರವೇ ಹರಿದುಬಂದಿದೆ' ಎಂದು ಹೇಳಿದರು.

'ಜಾಗತಿಕ ಚಿಲ್ಲರೆ ಸೂಚ್ಯಂಕದಲ್ಲಿ ಭಾರತವು ಎರಡನೇ ಸ್ಥಾನದಲ್ಲಿದ್ದು, ವಿಶ್ವದ ಮೂರನೇ ಅತಿದೊಡ್ಡ ಇಂಧನ ಗ್ರಾಹಕ ರಾಷ್ಟ್ರವಾಗಿದೆ. ಇಂದು ಜಗತ್ತು ಭಾರತದ ಸಾಮರ್ಥ್ಯವನ್ನು ನೋಡುತ್ತಿದೆ ಮತ್ತು ಅದರ ಕಾರ್ಯಕ್ಷಮತೆಯನ್ನು ಪ್ರಶಂಸಿಸುತ್ತಿದೆ. ಕಳೆದ ಹಣಕಾಸು ವರ್ಷದಲ್ಲಿ 30 ಲಕ್ಷ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಸರಕುಗಳನ್ನು ರಫ್ತು ಮಾಡುವ ಮೂಲಕ ದೇಶವು ದಾಖಲೆ ನಿರ್ಮಿಸಿದೆ. ಬಿಜೆಪಿ ನೇತೃತ್ವದ ಸರ್ಕಾರವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ 8 ವರ್ಷಗಳಲ್ಲಿ ಸುಧಾರಣೆ-ಕಾರ್ಯನಿರ್ವಹಿಸುವಿಕೆ-ಪರಿವರ್ತನೆ ಎಂಬ ಮಂತ್ರದೊಂದಿಗೆ ಮುನ್ನಡೆದಿದೆ. ನೀತಿ ಸ್ಥಿರತೆ, ಸಮನ್ವಯ ಮತ್ತು ವ್ಯವಹಾರವನ್ನು ಸುಲಭಗೊಳಿಸಲು ಒತ್ತು ನೀಡಲಾಗಿದೆ' ಎಂದು ವಿವರಿಸಿದರು.

ದೇಶಕ್ಕೆ ಪ್ರಬಲ ಪ್ರತಿಪಕ್ಷ ಬೇಕು: ಮೋದಿ

ಲಖನೌ: 'ದೇಶಕ್ಕೆ ಪ್ರಬಲ ಪ್ರತಿಪಕ್ಷ ಬೇಕಾಗಿದೆ. ಅದಕ್ಕಾಗಿ ವಂಶಾಡಳಿತದ ರಾಜಕಾರಣವನ್ನು ದೂರವಿಡುವುದು ಅತ್ಯಗತ್ಯ. ಆಗ ಮಾತ್ರ ಪ್ರಜಾಪ್ರಭುತ್ವವು ಬಲಗೊಳ್ಳುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಹುಟ್ಟೂರು ಉತ್ತರಪ್ರದೇಶದ ಕಾನ್ಪುರ ಗ್ರಾಮಾಂತರ ಜಿಲ್ಲೆಯ ಪರೌಂಕ್ ಗ್ರಾಮದಲ್ಲಿ ಶುಕ್ರವಾರ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, 'ವಂಶಾಡಳಿತದ ರಾಜಕಾರಣವನ್ನು ಮಾತನಾಡುವಾಗ ನಿರ್ದಿಷ್ಟ ರಾಜಕೀಯ ಪಕ್ಷವನ್ನು ಗುರಿಯಾಗಿಸಿಕೊಂಡಿದ್ದೇನೆ ಎಂದು ಕೆಲವರು ಭಾವಿಸುತ್ತಾರೆ. ಆದರೆ, ನನ್ನನ್ನು ಅಪಾರ್ಥ ಮಾಡಿಕೊಳ್ಳಬೇಡಿ. ನಾನು ಯಾವುದೇ ನಿರ್ದಿಷ್ಟ ರಾಜಕೀಯ ಪಕ್ಷದ ವಿರೋಧಿಯಲ್ಲ. ಅದರಲ್ಲಿ ವೈಯಕ್ತಿಕವಾಗಿ ಏನೂ ಇಲ್ಲ' ಎಂದರು.

'ಉತ್ತರ ಪ್ರದೇಶಕ್ಕೆ ಕಾಶಿ,ಮಥುರಾ ಹೆಗ್ಗುರುತು, ಅಮೇಠಿ ಅಲ್ಲ'

ಲಖನೌ: 'ಉತ್ತರ ಪ್ರದೇಶವನ್ನು ಇಂದು ಕಾಶಿ, ಮಥುರಾ ಮತ್ತು ಅಯೋಧ್ಯೆ ಮೂಲಕ ಗುರುತಿಸಲಾಗುತ್ತಿದೆ. ಸಫೈ ಅಥವಾ ಅಮೇಠಿ ಮೂಲಕ ಅಲ್ಲ' ಎಂದು ಉತ್ತರ ಪ್ರದೇಶದ ಕೈಗಾರಿಕಾ ಅಭಿವೃದ್ಧಿ ಸಚಿವ ನಂದಗೋಪಾಲ್ ನಂದಿ ಪ್ರತಿಪಾದಿಸಿದ್ದಾರೆ.

ಸಫೈ ಎಂಬುದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರ ಹುಟ್ಟೂರು ಆಗಿದ್ದರೆ, ಅಮೇಠಿ ಈ ಹಿಂದೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿನಿಧಿಸುತ್ತಿದ್ದ ಲೋಕಸಭಾ ಕ್ಷೇತ್ರವಾಗಿದೆ. ಹೂಡಿಕೆದಾರರ ಸಮಾವೇಶದಲ್ಲಿ ಮಾತನಾಡಿದ ನಂದಗೋಪಾಲ್, ಜ್ಞಾನವಾಪಿ ಮಸೀದಿ ಕುರಿತ ಕಾನೂನು ಹೋರಾಟ ತೀವ್ರಗೊಳ್ಳುತ್ತಿರುವ ವೇಳೆಯೇ ಸಚಿವರ ಈ ಹೇಳಿಕೆ ಹೊರಬಿದ್ದಿದೆ.

ಪ್ರಾಚೀನ ಹೆಗ್ಗುರುತುಗಳನ್ನು ಮರುಸ್ಥಾಪಿಸಲು ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾಗಳು ಕ್ರಮ ವಹಿಸಿವೆ. ಬಿಜೆಪಿ ಸರ್ಕಾರಗಳ ಕಾರ್ಯದಿಂದ ಶ್ರೀರಾಮ, ಶ್ರೀಕೃಷ್ಣ ಮತ್ತು ಬಾಬಾ ವಿಶ್ವನಾಥನ ಭಕ್ತರು ಸಂತಸಗೊಂಡಿದ್ದಾರೆ ಎಂದು ಅವರು ಹೇಳಿದರು.

ಹೂಡಿಕೆದಾರರ ಸಮಾವೇಶವನ್ನು ಪ್ರಧಾನಿ ಮೋದಿ ಉದ್ಘಾಟಿಸಿದ್ದು, 1400ಕ್ಕೂ ಹೆಚ್ಚು ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಈ ಯೋಜನೆಗಳ ಒಟ್ಟು ಅಂದಾಜು ವೆಚ್ಚ ₹ 80,000 ಕೋಟಿ ಆಗಿದ್ದು, ಈ ಯೋಜನೆಗಳು 21ನೇ ಶತಮಾನದಲ್ಲಿ ರಾಜ್ಯವನ್ನು ಅಭಿವೃದ್ಧಿಯ ದಿಕ್ಕಿನಲ್ಲಿ ಒಯ್ಯಲಿವೆ ಎಂದು ಹೇಳಲಾಗಿದೆ.

ಸುದ್ದಿ 2 ನಿಮಿಷ

ಉತ್ತರಾಖಂಡ ಸಿ.ಎಂಗೆ ದಾಖಲೆ ಅಂತರದ ಗೆಲುವು

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಚಂಪಾವತ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ದಾಖಲೆಯ 55 ಸಾವಿರ ಮತಗಳ ಅಂತರದಿಂದ ಜಯ ಗಳಿಸಿದ್ದಾರೆ. ಕಾಂಗ್ರೆಸ್‌ನ ನಿರ್ಮಲಾ ಗಹ್‌ಟೋರಿ ಪ್ರತಿಸ್ಪರ್ಧಿಯಾಗಿದ್ದರು.

ಬಿಜೆಪಿಯ ಧಾಮಿ ಅವರು 58,258 ಮತಗಳನ್ನು ಪಡೆದರೆ, ಪ್ರತಿಸ್ಪರ್ಧಿ ಕಾಂಗ್ರೆಸ್‌ನ ನಿರ್ಮಲಾ ಕೇವಲ 3,233 ಮತಗಳನ್ನು ಪಡೆಯುವ ಮೂಲಕ ಠೇವಣಿ ಕಳೆದುಕೊಂಡರು. ಮೇ 31ರಂದು ನಡೆದ ಉಪಚುನಾವಣೆಯಲ್ಲಿ ಶೇ 64ರಷ್ಟು ಮತದಾನವಾಗಿತ್ತು.

ಉತ್ತರಾಖಂಡದ ಉಪಚುನಾವಣೆಗಳಲ್ಲಿ ಯಾವುದೇ ಮುಖ್ಯಮಂತ್ರಿ ಸೋತಿಲ್ಲ. ಆದರೆ, ಮತಗಳಿಕೆ ಕುರಿತಂತೆ ಇದು ಅತ್ಯಧಿಕ ದಾಖಲೆಯಾಗಿದೆ. ಈ ಹಿಂದೆ ವಿಜಯ್ ಬಹುಗುಣ ಅವರು ಸಿತಾರ್‌ಗಂಜ್ ಕ್ಷೇತ್ರದಿಂದ 40,000 ಮತಗಳ ಅಂತರದಿಂದ ಗೆದ್ದಿದ್ದರು.

ಫೆಬ್ರುವರಿಯಲ್ಲಿ ನಡೆದಿದ್ದ ವಿಧಾನ ಸಭೆ ಚುನಾವಣೆಯಲ್ಲಿ ಧಾಮಿ ಖತಿಮಾ ಕ್ಷೇತ್ರದಲ್ಲಿ ಪರಾಭವಗೊಂಡಿದ್ದರು. ಮುಖ್ಯಮಂತ್ರಿಯಾಗಿ ಮುಂದುವರಿಯಲು ವಿಧಾನಸಭೆಗೆ ಆಯ್ಕೆ ಆಗುವುದು ಅಗತ್ಯವಾಗಿತ್ತು. 'ಜನರ ನಂಬಿಕೆ ಇಲ್ಲಿ ಗೆದ್ದಿದೆ' ಎಂದು ಧಾಮಿ ಫಲಿತಾಂಶ ಕುರಿತು ಪ್ರತಿಕ್ರಿಯಿಸಿದರು.

ರಾಹುಲ್‌ಗೆ ಇ.ಡಿ ಹೊಸ ಸಮನ್ಸ್ 13ರಂದು ಹಾಜರಾಗಲು ಸೂಚನೆ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಚಂಪಾವತ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ದಾಖಲೆಯ 55 ಸಾವಿರ ಮತಗಳ ಅಂತರದಿಂದ ಜಯಗಳಿಸಿದ್ದಾರೆ. ಕಾಂಗ್ರೆಸ್‌ನ ನಿರ್ಮಲಾ ಗಹ್‌ಟೋರಿ ಪ್ರತಿಸ್ಪರ್ಧಿಯಾಗಿದ್ದರು.

ಬಿಜೆಪಿಯ ಧಾಮಿ ಅವರು 58,258 ಮತಗಳನ್ನು ಪಡೆದರೆ, ಪ್ರತಿಸ್ಪರ್ಧಿ ಕಾಂಗ್ರೆಸ್‌ನ ನಿರ್ಮಲಾ ಕೇವಲ 3,233 ಮತಗಳನ್ನು ಪಡೆಯುವ ಮೂಲಕ ಠೇವಣಿ ಕಳೆದುಕೊಂಡರು. ಮೇ 31ರಂದು ನಡೆದ ಉಪಚುನಾವಣೆಯಲ್ಲಿ ಶೇ 64ರಷ್ಟು ಮತದಾನವಾಗಿತ್ತು.

ಉತ್ತರಾಖಂಡದ ಉಪಚುನಾವಣೆಗಳಲ್ಲಿ ಯಾವುದೇ ಮುಖ್ಯಮಂತ್ರಿ ಸೋತಿಲ್ಲ. ಆದರೆ, ಮತಗಳಿಕೆ ಕುರಿತಂತೆ ಇದು ಅತ್ಯಧಿಕ ದಾಖಲೆಯಾಗಿದೆ. ಈ ಹಿಂದೆ ವಿಜಯ್ ಬಹುಗುಣ ಅವರು ಸಿತಾರ್‌ಗಂಜ್ ಕ್ಷೇತ್ರದಿಂದ 40,000 ಮತಗಳ ಅಂತರದಿಂದ ಗೆದ್ದಿದ್ದರು.

ಫೆಬ್ರುವರಿಯಲ್ಲಿ ನಡೆದಿದ್ದ ವಿಧಾನಸಭೆ ಚುನಾವಣೆಯಲ್ಲಿ ಧಾಮಿ ಖತಿಮಾ-ಕ್ಷೇತ್ರದಲ್ಲಿ ಪರಾಭವಗೊಂಡಿದ್ದರು.ಮುಖ್ಯಮಂತ್ರಿಯಾಗಿ ಮುಂದುವರಿಯಲು ವಿಧಾನಸಭೆಗೆ ಆಯ್ಕೆ ಆಗುವುದು ಅಗತ್ಯವಾಗಿತ್ತು. 'ಜನರ ನಂಬಿಕೆ ಇಲ್ಲಿ ಗೆದ್ದಿದೆ' ಎಂದು ಧಾಮಿ ಫಲಿತಾಂಶ ಕುರಿತು ಪ್ರತಿಕ್ರಿಯಿಸಿದರು.

ಕಟ್ಟೆಚ್ಚರ ವಹಿಸಲು ಐದು ರಾಜ್ಯಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಕಳೆದ ಒಂದು ವಾರದಿಂದ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸೋಂಕು ಹರಡದಂತೆ ತೀವ್ರ ನಿಗಾ ವಹಿಸಲು ಕರ್ನಾಟಕ, ತಮಿಳುನಾಡು, ತೆಲಂಗಾಣ, ಮಹಾರಾಷ್ಟ್ರ ರಾಜ್ಯಗಳಿಗೆ ಕೇಂದ್ರ ಆರೋಗ್ಯ ಸಚಿವಾಲಯ ಎಚ್ಚರಿಸಿದೆ.



ಸೋಂಕು ಹರಡದಂತೆ ಸಂಬಂಧಪಟ್ಟ ರಾಜ್ಯಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಮುಂಬೈ ಉಪನಗರ ಸೇರಿದಂತೆ ಮಹಾರಾಷ್ಟ್ರದ ಆರು ಜಿಲ್ಲೆಗಳಲ್ಲಿ ಸೋಂಕು ಗಣನೀಯವಾಗಿ ಏರಿಕೆಯಾಗಿದೆ. ಮೇ 27ರಿಂದ ಜೂನ್ 2ರ ಅವಧಿಯಲ್ಲಿ 2,330 ಹೊಸ ಪ್ರಕರಣಗಳು ವರದಿಯಾಗಿದೆ. ಮುಂಬೈ, ಠಾಣೆ, ರಾಯಗಡದಲ್ಲಿ ಕಳೆದ ವಾರಕ್ಕೆ ಹೋಲಿಸಿದರೆ ಪ್ರಕರಣಗಳ ಸಂಖ್ಯೆ ದುಪ್ಪಟ್ಟು ಏರಿಕೆಯಾಗಿದೆ.

ಬೆಂಗಳೂರು ನಗರದಲ್ಲಿ ವಾರದಲ್ಲಿ 1,063 ಪ್ರಕರಣಗಳು ವರದಿಯಾಗಿದ್ದು, ಪಾಸಿಟಿವಿಟಿ ದರ ಶೇ 1.84ರಷ್ಟಿದೆ. ಚೆನ್ನೈ, ಚೆಂಗಲ್ಪಟ್ಟು ಜಿಲ್ಲೆಗಳಲ್ಲಿ ಪಾಸಿಟಿವಿಟಿ ದರ ಶೇ 3ರಷ್ಟಿದೆ. ಕೇರಳದಲ್ಲೂ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ವಾರದಲ್ಲಿ 6,556 ಪ್ರಕರಣ ವರದಿಯಾಗಿದೆ.

ಕೋವಿಡ್ ಪರೀಕ್ಷೆ, ಲಸಿಕೆ ಸೇರಿದಂತೆ ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿ ಅನುಸರಿಸುವಂತೆ ಸೂಚಿಸಿದೆ.

84 ದಿನಗಳ ಬಳಿಕ 4,000ಕ್ಕೂ ಅಧಿಕ ಪ್ರಕರಣ

ನವದೆಹಲಿ (ಪಿಟಿಐ): ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ತಾಸುಗಳ ಅವಧಿಯಲ್ಲಿ ದೇಶದಲ್ಲಿ 4,041 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದೇ ಅವಧಿಯಲ್ಲಿ 10 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. 84 ದಿನಗಳ ಬಳಿಕ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 21,177ಕ್ಕೆ ಏರಿಕೆಯಾಗಿದೆ. ಒಟ್ಟು ಸೋಂಕಿತರ ಸಂಖ್ಯೆ 4,31,68,585ಕ್ಕೆ ಹಾಗೂ ಮೃತಪಟ್ಟವರ ಸಂಖ್ಯೆ 5,24,651ಕ್ಕೆ ತಲುಪಿದೆ. ಚೇತರಿಕೆ ಪ್ರಮಾಣ ಶೇ 98.74ರಷ್ಟಿದೆ. ದೈನಂದಿನ ಪಾಸಿಟಿವಿಟಿ ದರ ಶೇ 0.95ರಷ್ಟಿದೆ. ಇದುವರೆಗೆ ಒಟ್ಟು 193.83 ಕೋಟಿ ಡೋಸ್ ಲಸಿಕೆ ನೀಡಲಾಗಿದೆ.

ಪ್ರಿಯಾಂಕಾ ಗಾಂಧಿಗೂ ಕೊರೊನಾ ದೃಢ

ನವದೆಹಲಿ: ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರಿಗೂ ಕೋವಿಡ್ ಕಾಣಿಸಿಕೊಂಡಿದ್ದು, ವೈದ್ಯರ ಸಲಹೆ ಮೇರೆಗೆ ಮನೆಯಲ್ಲಿಯೇ ಪ್ರತ್ಯೇಕವಾಗಿ ವಾಸವಾಗಿದ್ದಾರೆ.

ಟ್ವೀಟರ್ ಮೂಲಕ ಈ ಮಾಹಿತಿ ಹಂಚಿಕೊಂಡಿರುವ ಪ್ರಿಯಾಂಕಾ, 'ಕೊರೊನಾ ಸೋಂಕಿನ ಸೌಮ್ಯ ಲಕ್ಷಣಗಳಿರುವ ಕಾರಣಕ್ಕೆ ಕೊರೊನಾ ಸೋಂಕು ಪತ್ತೆ ಪರೀಕ್ಷೆಗೆ ಒಳಗಾಗಿದ್ದೆ. ಪಾಸಿಟಿವ್ ಎಂದು ವರದಿ ಬಂದಿದ್ದು ನನ್ನ ಸಂಪರ್ಕಕ್ಕೆ ಬಂದವರು ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಮನವಿ ಮಾಡುತ್ತೇನೆ' ಎಂದು ಬರೆದುಕೊಂಡಿದ್ದಾರೆ.

ಪ್ರಿಯಾಂಕಾ ಬುಧವಾರ ಲಖನೌನಲ್ಲಿ ರಾಜ್ಯಮಟ್ಟದ ' ಚಿಂತನಾ ಶಿಬಿರ'ದಲ್ಲಿ ಪಾಲ್ಗೊಂಡು, ನವದೆಹಲಿಗೆ ವಾಪಸ್ ಆಗಿದ್ದರು. ಗುರುವಾರ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿತ್ತು.

ಅಗತ್ಯ ವಸ್ತುಗಳ ಸಂಗ್ರಹಕ್ಕೆ ರಾಜಪಕ್ಸ ಸೂಚನೆ

ಕೊಲಂಬೊ (ಪಿಟಿಐ): ಸಾಕಷ್ಟು ಪ್ರಮಾಣದಲ್ಲಿ ಆಹಾರ ಪದಾರ್ಥಗಳು ಹಾಗೂ ಅಗತ್ಯ ವಸ್ತುಗಳನ್ನು ಸಂಗ್ರಹಿಸುವಂತೆ ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಆಹಾರ ಪದಾರ್ಥಗಳ ಕೃತಕ ಅಭಾವ ಸೃಷ್ಟಿಸಲು ಯತ್ನಿಸುವವರ ವಿರುದ್ಧವೂ ಕ್ರಮ ಕೈಗೊಳ್ಳುವುದಾಗಿ ಅವರು ಎಚ್ಚರಿಸಿದ್ದಾರೆ.

ಸೆಪ್ಟೆಂಬರ್ ವೇಳೆಗೆ ಅಕ್ಕಿ ಹಾಗೂ ಇತರ ಆಹಾರ ಸಾಮಗ್ರಿಗಳ ಕೊರತೆ ಉಂಟಾಗಲಿದೆ ಎಂದು ತಜ್ಞರು ಈಚೆಗೆ ಎಚ್ಚರಿಕೆ ನೀಡಿದ್ದರು. ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರೂ ಈ ಬಗ್ಗೆ ಎಚ್ಚರಿಸಿದ್ದರು. ಹಾಗಾಗಿ, ಅಧ್ಯಕ್ಷ ಗೊಟಬಯ ಅವರು ಈ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಭಾರತದಿಂದ ಔಷಧಿ ಸಾಮಗ್ರಿ: ದ್ವೀಪರಾಷ್ಟ್ರಕ್ಕೆ 3.3 ಟನ್‌ಗಳಷ್ಟು ಔಷಧಿ ಸಾಮಗ್ರಿಗಳನ್ನು ಪೂರೈಸಲಾಗಿದೆ ಎಂದು ಶ್ರೀಲಂಕಾದಲ್ಲಿನ ಭಾರತದ ಹೈಕಮಿಷನ್ ಕಚೇರಿ ಟ್ವೀಟ್ ಮಾಡಿದೆ.

ಭಾರತೀಯ ಅಮೆರಿಕನ್ ಹರಿಣಿ ಲೋಗನ್ 'ಸ್ಪೆಲಿಂಗ್ ಬೀ' ಚಾಂಪಿಯನ್

ಹ್ಯೂಸ್ಟನ್(ಪಿಟಿಐ): 2022ನೇ ಸಾಲಿನ 'ಸ್ಕ್ರಿಪ್ಸ್ ನ್ಯಾಷನಲ್ ಸ್ಪೆಲಿಂಗ್ ಬೀ' ಸ್ಪರ್ಧೆಯಲ್ಲಿ ಭಾರತೀಯ ಅಮೆರಿಕನ್, 14 ವರ್ಷದ ಹರಿಣಿ ಲೋಗನ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಹರಿಣಿ ಲೋಗನ್

90 ಸೆಕೆಂಡ್‌ನಲ್ಲಿ 26 ಪದಗಳ ಪೈಕಿ 22 ಪದಗಳನ್ನು ತಪ್ಪಿಲ್ಲದೆ ಹೇಳುವ ಮೂಲಕ ಪ್ರತಿಸ್ಪರ್ಧಿ 12 ವರ್ಷದ ವಿಕ್ರಂ ರಾಜು ಅವರನ್ನು ಪರಾಭವಗೊಳಿಸಿದ್ದಾರೆ. ಆ ಮೂಲಕ ₹ 38.80 ಲಕ್ಷ ನಗದು ಬಹುಮಾನ, ಸ್ಕ್ರಿಪ್ಸ್ ಟ್ರೋಫಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಹರಿಣಿ ಲೋಗನ್, ವಾಷಿಂಗ್ಟನ್‌ನಲ್ಲಿ 8ನೇ ತರಗತಿಯಲ್ಲಿ ಓದುತ್ತಿದ್ದಾರೆ.

ಈ ಸ್ಪರ್ಧೆಯಲ್ಲಿ 234 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಪೈಕಿ 12 ಮಕ್ಕಳು ಅಂತಿಮ ಸುತ್ತನ್ನು ಪ್ರವೇಶಿಸಿದ್ದರು.

ಅಲ್ಪಸಂಖ್ಯಾತರ ಮೇಲಿನ ದಾಳಿಗೆ ಅಧಿಕಾರಿಗಳ ಬೆಂಬಲ: ದೂರು

ಅಮೆರಿಕದ ಆರೋಪ ಅಲ್ಲಗಳೆದ ಭಾರತ

ನವದೆಹಲಿ (ಪಿಟಿಐ/ರಾಯಿಟರ್ಸ್): 'ಜಾಗತಿಕ ಧಾರ್ಮಿಕ ಸ್ವಾತಂತ್ರ್ಯದ ಕುರಿತ ವರದಿಯಲ್ಲಿ ಅಮೆರಿಕ ಮಾಡಿರುವ ಆರೋಪಗಳನ್ನು ಭಾರತ ಶುಕ್ರವಾರ ತಿರಸ್ಕರಿಸಿದ್ದು, 'ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಮತಬ್ಯಾಂಕ್ ರಾಜಕಾರಣ ನಡೆಯುತ್ತಿರುವುದು ದುರದೃಷ್ಟಕರ' ಎಂದು ತಿರುಗೇಟು ನೀಡಿದೆ.

'ಅಮೆರಿಕದ ಹಿರಿಯ ಅಧಿಕಾರಿಗಳ ಮಾಹಿತಿ ಕೊರತೆಯ ಹೇಳಿಕೆಗಳು ಮತ್ತು ವಾರ್ಷಿಕ ವರದಿಯನ್ನು ಗಮನಿಸಿದ್ದೇವೆ. ಇದೊಂದು ಪೂರ್ವಗ್ರಹ ಮತ್ತು ಪಕ್ಷಪಾತ ದೃಷ್ಟಿಕೋನದ ವರದಿ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ತಿರುಗೇಟು ನೀಡಿದ್ದಾರೆ.

'ನಮ್ಮದು ಬಹುತ್ವದ ಸಮಾಜ. ದೇಶವು ಧಾರ್ಮಿಕ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳನ್ನು ಗೌರವಿಸುತ್ತದೆ. ಅಮೆರಿಕದ ಜೊತೆಗಿನ ನಮ್ಮ ನಿರಂತರ ಮಾತುಕತೆಗಳಲ್ಲಿ ಅಲ್ಲಿನ ಜನಾಂಗೀಯ ಪ್ರೇರಿತ ದಾಳಿಗಳು, ದ್ವೇಷದ ಅಪರಾಧಗಳು ಮತ್ತು ಬಂದೂಕು ಹಿಂಸಾಚಾರ ಸೇರಿ ಹಲವು ವಿಚಾರಗಳ ಬಗ್ಗೆ ನಿರಂತರ ಕಳವಳ ವ್ಯಕ್ತಪಡಿಸಿದ್ದೇವೆ' ಎಂದು ಅವರು ಹೇಳಿದರು.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಗುರುವಾರ ಬಿಡುಗಡೆ ಮಾಡಿದ ಧಾರ್ಮಿಕ ಸ್ವಾತಂತ್ರ್ಯದ ವಾರ್ಷಿಕ ವರದಿಯು '2021ರ ಉದ್ದಕ್ಕೂ ಭಾರತದಲ್ಲಿ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ಬೆದರಿಕೆ, ದಾಳಿಗಳು, ಹತ್ಯೆಗಳು ನಡೆದಿವೆ. ಗೋಹತ್ಯೆ, ಗೋಮಾಂಸ ಮಾರಾಟ ಆರೋಪದಲ್ಲಿ ಹಿಂದೂಯೇತರರ ಮೇಲೆ ಗೋರಕ್ಷಕರು ದಾಳಿ ಮಾಡಿದ್ದಾರೆ' ಎಂದು ಹೇಳಿದೆ.

'ವಿಶ್ವದಾದ್ಯಂತ ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳು ಅಪಾಯದಲ್ಲಿವೆ. ಭಾರತದಲ್ಲಿ ಅಲ್ಪಸಂಖ್ಯಾತರು ಮತ್ತು ಪೂಜಾ ಸ್ಥಳಗಳ ಮೇಲೆ ದಾಳಿಗಳು ಹೆಚ್ಚುತ್ತಿರುವುದನ್ನು ದೇಶದಲ್ಲಿನ ಕೆಲವು ಅಧಿಕಾರಿಗಳು ಬೆಂಬಲಿಸುತ್ತಿದ್ದಾರೆ ಅಥವಾ ನಿರ್ಲಕ್ಷಿಸುತ್ತಿದ್ದಾರೆ' ಎಂದು ಬ್ಲಿಂಕನ್ ಮತ್ತು ವಿಶ್ವದೆಲ್ಲೆಡೆ ಧಾರ್ಮಿಕ ಸ್ವಾತಂತ್ರ್ಯದ ಮೇಲೆ ನಿಗಾ ವಹಿಸುವ ವಿದೇಶಾಂಗ ಇಲಾಖೆಯ ರಾಯಭಾರಿ ರಷದ್ ಹುಸೇನ್ ಆರೋಪಿಸಿದ್ದಾರೆ.

'ಆಕ್ರಮಣಕ್ಕೆ 100 ದಿನ: ರಷ್ಯಾ ಗುರಿ ಸಾಧನೆ'

ಮಾಸ್ಕೊ (ಎಎಫ್‌ಪಿ): ಪಾಶ್ಚಿಮಾತ್ಯ ಪರವಾದ ಒಲವು ಹೊಂದಿದ್ದ ನೆರೆಯ ದೇಶ ಉಕ್ರೇನ್ ಮೇಲೆ ವಿಶೇಷ ಸೇನಾ ಕಾರ್ಯಾಚರಣೆ ನಡೆಸಲು ಸೇನೆ ಕಳುಹಿಸಿದ ಮೇಲೆ ನೂರು ದಿನಗಳಲ್ಲಿ ರಷ್ಯಾ ಮಹತ್ವದ ಗುರಿಗಳನ್ನು ಸಾಧಿಸಿದ್ದು, ಕೆಲವು ಫಲಿತಾಂಶಗಳನ್ನು ಪಡೆದಿದೆ ಎಂದು ವ್ಲಾಡಿಮಿರ್ ಪುಟಿನ್ ಆಡಳಿ ಕಚೇರಿ ಕ್ರೆಮ್ಲಿನ್ ಶುಕ್ರವಾರ ಹೇಳಿದೆ.

ರಷ್ಯಾ ಪಡೆಗಳು ಉಕ್ರೇನಿನ ಶೇ 20ರಷ್ಟು ಭೂಪ್ರದೇಶದ ಮೇಲೆ ಹಿಡಿತ ಸಾಧಿಸಿರುವುದನ್ನು ಉಕ್ರೇನ್ ಅಧ್ಯಕ್ಷರು ಅಧಿಕೃತವಾಗಿ ಒಪ್ಪಿಕೊಂಡಿದ್ದಾರೆ. ಲುವಿವ್, ಹಾರ್ಕಿವ್ ಪ್ರದೇಶಗಳ ಮೇಲೆ ರಷ್ಯಾ ಪಡೆಗಳ ಕ್ಷಿಪಣಿ, ಶೆಲ್ ದಾಳಿ ಮುಂದುವರಿದಿದೆ.

ಉಕ್ರೇನ್‌ನಲ್ಲಿ ಕೈಗೊಂಡಿರುವ ವಿಶೇಷ ಕಾರ್ಯಾಚರಣೆಗೆ 100 ದಿನಗಳು ತುಂಬಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೊವ್, 'ನಾವು ಕೆಲವು ಫಲಿತಾಂಶಗಳನ್ನು ಸಾಧಿಸುವಲ್ಲಿ ಯಶಸ್ವಿಯಾಗಿದ್ದೇವೆ' ಎಂದು ಹೇಳಿದರು.

'ರಷ್ಯಾ ಪರವಿರುವ ಡೊನೆಟ್‌ಸ್ಕ್ ಮತ್ತು ಲುಹಾನ್‌ಸ್ಕ್ ಗಣರಾಜ್ಯದ ಜನರನ್ನು ಕೀವ್ ಸೇನೆ ದೌರ್ಜನ್ಯದಿಂದ ರಕ್ಷಿಸಲು ಉಕ್ರೇನ್‌ಗೆ ರಷ್ಯಾ ತನ್ನ ಪಡೆಗಳನ್ನು ಕಳುಸಿದೆ. ಅವರ ರಕ್ಷಣೆಯನ್ನು ಖಾತ್ರಿಪಡಿಸುವ ದೃಷ್ಟಿಯಿಂದ, ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಫಲಿತಾಂಶಗಳೂ ಬಂದಿವೆ. ಉಕ್ರೇನ್‌ನ ನಾಜಿ ಪರ ಸಶಸ್ತ್ರ ಪಡೆಗಳಿಂದ ಹಲವು ಪ್ರದೇಶಗಳನ್ನು ವಿಮೋಚನೆಗೊಳಿಸಲಾಗಿದೆ. ಸೇನಾ ಕಾರ್ಯಾಚರಣೆಯು ಎಲ್ಲ ಗುರಿಗಳನ್ನು ಸಾಧಿಸುವವರೆಗೆ ಮುಂದುವರಿಯುತ್ತದೆ' ಎಂದು ಪೆಸ್ಕೊವ್ ಹೇಳಿದರು.

ಉಕ್ರೇನ್ ವಿಜಯಶಾಲಿ: ಝೆಲೆನ್‌ಸ್ಕಿ

'ರಷ್ಯಾ ಪ್ರಾರಂಭಿಸಿದ ಯುದ್ಧದಲ್ಲಿ ಉಕ್ರೇನ್ ವಿಜಯಶಾಲಿಯಾಗಲಿದೆ' ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಶುಕ್ರವಾರ ಹೇಳಿದ್ದಾರೆ.

ರಷ್ಯಾ ಆಕ್ರಮಣ ಉಕ್ರೇನಿಗರ ಪ್ರತಿರೋಧದಿಂದ ಮಂದಗತಿಯಲ್ಲಿದ್ದು, ಕೀವ್‌ನಿಂದ ರಷ್ಯಾ ಸೇನೆಗಳನ್ನು ಹಿಂತೆಗೆದುಕೊಂಡು ಪೂರ್ವ ಡಾನ್‌ಬಾಸ್ ಪ್ರದೇಶಕ್ಕೆ ನಿಯೋಜಿಸಿ, ಆ ಭಾಗದಿಂದ ಆಕ್ರಮಣ ನಡೆಸುತ್ತಿದೆ.

ನಮ್ಮ ಜತೆಗೆ ಸೈನಿಕರಷ್ಟೇ ಅಲ್ಲ, ದೇಶದ ಜನರೂ ಸೇನೆಯ ಬೆಂಬಲಕ್ಕೆ ನಿಂತುಕೊಂಡು ಶತದಿನಗಳ ಕಾಲ ದೇಶವನ್ನು ರಕ್ಷಿಸಿದ್ದಾರೆ. ಅಂತಿಮವಾಗಿ ಗೆಲುವು ನಮ್ಮದೇ ಎಂದು ಝೆಲೆನ್‌ಸ್ಕಿ ವಿಡಿಯೊ ಭಾಷಣದಲ್ಲಿ ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

ಎಂಎನ್ಸಿಗೆ ಅಕೌಂಟೆಂಟ್ಸ್ ರಿಪೋರ್ಟರ್ಸ್ ಕಂಪ್ಯೂಟರ್ ಆಪರೇಟರ್ಸ್ ಆಫೀಸ್/ ಅಕೌಂಟ್ಸ್ ಅಸಿಸ್ಟೆಂಟ್ಸ್ ಸ್ಟೋರ್ಕೀಪರ್ಸ್ ಫಿಟ್ಟರ್ಸ್ ವೆಲ್ಡರ್ಸ್ ಎಲೆಕ್ಟ್ರಾನಿಕ್ಸ್ ಮೋನಿಕಾ 7204367465/ 8050107101

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕೆಲಸಕ್ಕೆ ಬೇಕಾಗಿದ್ದಾರೆ:ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು ಹಾಗೂ ಗೃಹಿಣಿಯರು,25 ವರ್ಷ ಮೇಲ್ಪಟ್ಟವರು, SSLC ಹಾಗೂ DEGREE ಪಾಸಾದವರು ಬೇಕಾಗಿದ್ದಾರೆ, ಸಂಬಳ, E.S.I., P.F.ಸೌಲಭ್ಯವಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿರಿ:9663987757.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಕರ್ನಾಟಕದಾದ್ಯಂತ ಕೆಲಸ ಮಾಡಲು ಡಿಪ್ಲೊಮ ಸಿವಿಲ್ ಇಂಜಿನಿಯರ್ ಬೇಕಾಗಿದ್ದಾರೆ. ಹೊಸಬರಿಗೆ ಆದ್ಯತೆ ನೀಡಲಾಗುವುದು. ವಸತಿ ಇರುತ್ತದೆ. ಆಸಕ್ತರು ಸಂಪರ್ಕಿಸಿ: 9036576670

ವ್ಯಾಪಾರ

Business to Business

Services

ನಾವು ವೈಯಕ್ತಿಕ, ವ್ಯಾಪಾರ, ಆಸ್ತಿ, ಕೃಷಿ ಮತ್ತು ಶೈಕ್ಷಣಿಕವನ್ನು ಒದಗಿಸುತ್ತೇವೆ. (ಏಜೆಂಟರು ಸ್ವಾಗತ) Ph. 8222841175, 8278291749

ಶಿಕ್ಷಣ

General

ಸಂಪಾದನೆಯೊಂದಿಗೆ ತರಬೇತಿ. ಏರ್ ಹೋಸ್ಟಸ್,ಏರ್ ಪೋರ್ಟ್ ಮ್ಯಾನೇಜ್ ಮೆಂಟ್,ಏರ್ ಟಿಕೆಟಿಂಗ್ NTT, B.ED, D.ED, MBA,Degree,P.G. (Regular/Correspondence) Ph:9342326501

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Land

North

3 ACRES Land For Sale in Survey No. 61/2/A, North of National Highway No.9 in Manik Nagar Village, Humnabad, Karnataka State.Contact : 9393333321/8074222930/ 9848038381.

1768 SQ.YARDS Commercial Land for Sale in Survey No.169/A&K, Main Highway Road No 9 Humnabad, Karnataka, State. Contact:9393333321/ 8074222930/9848038381

Sites

Airport Road

BDA BIAAPA approved Corner Sites for Sale 14 kms Before Airport 500 meters from Stone Hill School Direct Owner 7337616557 8904050690

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

★ ||ಶ್ರೀಶಾಕಾಂಬರಿದೇವಿ|| ★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 1ದಿನದಲ್ಲಿ ಶಾಶ್ವತ ಪರಿಹಾರ. 9900222591

★ ||ಶ್ರೀಪಾತಾಳಭುವನೇಶ್ವರಿ|| ★ ಆರಾಧನೆಯಿಂದ ಪ್ರೀತಿಪ್ರೇಮ ಸ್ತ್ರೀಪುರುಷ ವಶೀಕರಣ, ದಾಂಪತ್ಯಕಿರಿಕಿರಿ, ಕಂಕಣಭಾಗ್ಯ, ಸಾಲದಭಾದೆ, ಸಂತಾನಭಾಗ್ಯ ಇನ್ನೂಯಾವುದೇ ಕಠಿಣ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. ''ಆತ್ಮರಾಮ್ ಭಟ್'' 9900933145

ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ ವಶೀಕರಣ ಸ್ಪೆಷಲಿಸ್ಟ್ ಪಂಡಿತ್.ರಾಘವೇಂದ್ರ ಗುರೂಜಿ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ. ದೇವಸ್ಥಾನ ಪಕ್ಕ, ಮಂತ್ರಾಲಯ: 9880788899

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಪ್ರವಾಸ

Travel

27.06.2022, 14 ದಿನಗಳ ವೈಷ್ಣವಿದೇವಿ ಕಾಶ್ಮಿರ,ಗುಲ್ಮಾರ್ಗ್ ಅಮರನಾಥ ಯಾತ್ರೆ. 17.07.2022, 11 ದಿನಗಳ ಕಾಶಿಯಾತ್ರೆ. ಸಂಪರ್ಕಿಸಿ: ಐಶ್ವನ್ ಟೂರ್ಸ್ ಅಂಡ್ ಟ್ರಾವೆಲ್ಸ್ ತ್ಯಾಗರಾಜನಗರ ಬೆಂಗಳೂರು-70. 9342287551 8050629305

ಆಗಸ್ಟ್‌ನಲ್ಲಿ 14 ದಿನಗಳ ಅಷ್ಟ ಜ್ಯೋತಿರ್ಲಿಂಗ ಯಾತ್ರೆ. ಸೆಪ್ಟಂಬರ್‌ನಲ್ಲಿ 12 ದಿನಗಳ ಬದರಿನಾಥ್, ಕೇದಾರನಾಥ್ ಯುಮುನೋತ್ರಿ,ಗಂಗೋತ್ರಿ. ಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ,ಬೆಂಗಳೂರು. 9448294477

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
ಪ್ರಜಾವಾಣಿ

Classifieds
EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
SPECIAL RATES FOR
Admission Notice,
Education Success
Congratulation Ads
Email : dhclassifieds@deccanherald.co.in

ಚೆಸ್: ಆನಂದ್ ಅಗ್ರಸ್ಥಾನ ಅಬಾಧಿತ

ಆನಂದ್

ಸ್ಟಾವೆಂಜರ್, ನಾರ್ವೆ (ಪಿಟಿಐ): ಭಾರತದ ವಿಶ್ವನಾಥನ್ ಆನಂದ್ ಅವರು ನಾರ್ವೆ ಚೆಸ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ.

ಮೂರನೇ ಸುತ್ತಿನ ಪಂದ್ಯದಲ್ಲಿ ಚೀನಾದ ವಾಂಗ್ ಹವೊ ಅವರನ್ನು ಸೋಲಿಸಿದ ಆನಂದ್ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಶುಕ್ರವಾರ ನಡೆದ ಕ್ಲಾಸಿಕಲ್ ವಿಭಾಗದ 39 ನಡೆಗಳ ಪಂದ್ಯವು ಡ್ರಾನಲ್ಲಿ ಅಂತ್ಯವಾಗಿತ್ತು. ಫಲಿತಾಂಶ ನಿರ್ಧರಿಸಲು ನಡೆಸಿದ ಆರ್ಮ್‌ಗೆಡೆನ್ ಗೇಮ್‌ನಲ್ಲಿ ಮಾಜಿ ವಿಶ್ವ ಚಾಂಪಿಯನ್ ಆನಂದ್ ಜಯ ಸಾಧಿಸಿದರು.

ಸರ್ಕಾರಿ ನೌಕರರ ಕ್ರೀಡಾಕೂಟ: ಬೆಂಗಳೂರಿಗೆ ಪ್ರಶಸ್ತಿ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯು ಬುಧವಾರ ಕೊನೆಗೊಂಡ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿದೆ.ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕ್ರೀಡಾಕೂಟದಲ್ಲಿ 10 ಸಾವಿರಕ್ಕೂ ಹೆಚ್ಚು ನೌಕರರು ಭಾಗವಹಿಸಿದ್ದರು. ಉಡುಪಿ ಜಿಲ್ಲೆ 2ನೇ ಸ್ಥಾನ ಪಡೆದುಕೊಂಡಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಸ್ತಿ: ಸಾಕ್ಷಿ ಮಲಿಕ್‌ಗೆ ಚಿನ್ನ

ಯುಡಬ್ಲ್ಯುಡಬ್ಲ್ಯು ರ‍್ಯಾಂಕಿಂಗ್ ಸರಣಿ; ದಿವ್ಯಾ ಮಿಂಚು

ಆಲ್ಮೇಟಿ (ಪಿಟಿಐ): ಒಲಿಂಪಿಯನ್ ಸಾಕ್ಷಿ ಮಲಿಕ್ ಐದು ವರ್ಷಗಳ ನಂತರ ಅಂತರರಾಷ್ಟ್ರೀಯ ಕುಸ್ತಿಯಲ್ಲಿ ಚಿನ್ನದ ಪದಕ ಗೆದ್ದ ಸಾಧನೆ ಮಾಡಿದರು.

ಕಜಕಸ್ತಾನದ ಅಲ್ಮೇಟಿಯಲ್ಲಿ ನಡೆಯುತ್ತಿರುವ ಯುಡಬ್ಲ್ಯುಡಬ್ಲ್ಯು ರ‍್ಯಾಂಕಿಂಗ್ ಸರಣಿಯ ಕುಸ್ತಿ ಸ್ಪರ್ಧೆಯಲ್ಲಿ ಶುಕ್ರವಾರ ಹರಿಯಾಣದ ಸಾಕ್ಷಿ ಆತ್ಮವಿಶ್ವಾಸದಿಂದ ಹಾಕಿದ ಪಟ್ಟುಗಳಿಗೆ ಸಿಹಿಫಲ ಲಭಿಸಿತು.

62 ಕೆಜಿ ಮಹಿಳೆಯರ ವಿಭಾಗದ ಬೌಟ್‌ನಲ್ಲಿ ಸಾಕ್ಷಿ ತಾಂತ್ರಿಕ ಉತ್ಕೃಷ್ಟತೆಯ ಆದಾರದಲ್ಲಿ ಕಜಕಸ್ತಾನದ ಐರಿನಾ ಕುಜ್ನೆತ್ಸೋವಾ ವಿರುದ್ಧ ಗೆದ್ದರು. ನಂತರದ ಸುತ್ತಿನಲ್ಲಿ ಉಜ್ಬೇಕಿಸ್ತಾನದ ರುಷಾನಾ ಅಬ್ದಿರಾಸುಲೊವಾ ವಿರುದ್ಧ 9–3ರಿಂದ ಗೆದ್ದರು. ಸೆಮಿಫೈನಲ್ ಪ್ರವೇಶಿಸಿದರು.

ನಾಲ್ಕರ ಘಟ್ಟದಲ್ಲಿ ಮಂಗೋಲಿಯಾದ ಸರ್ನೆಚಿಮೆಡ್ ಸುಖೀ ಹಿಂದೆ ಸರಿದರು. ಇದರಿಂದಾಗಿ ಸಾಕ್ಷಿ ನಿರಾಯಾಸವಾಗಿ ಫೈನಲ್ ಪ್ರವೇಶಿಸಿದರು. ಅವರಿಗೆ ಪ್ರಶಸ್ತಿ ಸುತ್ತಿನಲ್ಲಿ ಮತ್ತೊಮ್ಮೆ ಕುಜ್ನೇತ್ಸವಾ ಎದುರಾದರು. ಅಪಾರ ಆತ್ಮವಿಶ್ವಾಸ ಮತ್ತು ಬಲಶಾಲಿ ಪಟ್ಟುಗಳನ್ನು ಹಾಕಿದ ಸಾಕ್ಷಿಯ ಸಾಮರ್ಥ್ಯಕ್ಕೆ ತಕ್ಕ ಎದುರೇಟು ನೀಡಲು ಕುಜ್ನೇತ್ಸೋವಗೆ ಸಾಧ್ಯವಾಗಲಿಲ್ಲ. ಸಾಕ್ಷಿ 7–4ರಿಂದ ಕುಜ್ನೇತ್ಸಾವಾಗೆ ಅವರ ತವರಿನಲ್ಲಿಯೇ ಸೋಲಿನ ರುಚಿ ತೋರಿಸಿದರು.


ಸಾಕ್ಷಿ ಮಲಿಕ್

ಸಾಕ್ಷಿ ಡಬಲ್ ಲೆಗ್ ದಾಳಿಯ ಮೂಲಕ ಎದುರಾಳಿಯ ಮೇಲೆ ಒತ್ತಡ ಹೇರಿದರು. 5–3ರ ಮುನ್ನಡೆಯಲ್ಲಿ ಪುಟಿದೇಳುವ ಯತ್ನ ಮಾಡಿದ ಕುಜ್ನೇತ್ಸೋವಾಗೆ ಸಾಕ್ಷಿ ದಿಟ್ಟ ತಿರುಗೇಟು ನೀಡಿದರು.

2017ರಲ್ಲಿ ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಚಿನ್ನದ ಪದಕ ಜಯಿಸಿದ್ದರು. 2020 ಮತ್ತು 2022ರಲ್ಲಿ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ಗಳಲ್ಲಿ ಅವರು ಕಂಚಿನ ಪದಕ ಗಳಿಸಿದ್ದರು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಅವರು ಕಂಚು ಗಳಿಸಿದ್ದರು.

57ಕೆಜಿ ವಿಭಾಗದಲ್ಲಿ ಭಾರತದ ಮಾನಸಿ ಫೈನಲ್ ಬೌಟ್‌ನಲ್ಲಿ 3–0ಯಿಂದ ಕಜಕಸ್ತಾನದ ಎಮಾ ಟಿಸಿನಾ ವಿರುದ್ಧ ಗೆದ್ದು, ಚಿನ್ನದ ಪದಕ ಗಳಿಸಿದರು. 68 ಕೆಜಿ ವಿಭಾಗದಲ್ಲಿ ದಿವ್ಯಾ ಫೈನಲ್ ಬೌಟ್‌ನಲ್ಲಿ 10–14ರಿಂದ ಮಂಗೋಲಿಯಾದ ಬೊಲಾರ್‌ಟುಂಗಲಾಗ್ ಜಾರಿಗಾಟ್ ವಿರುದ್ಧ ಸೋತು ಪದಕಕ್ಕೆ ಕೊರಳೊಡ್ಡಿದರು.

ಗುರುವಾರ ಗ್ರಿಕೊ ರೋಮನ್ ಕುಸ್ತಿಯಲ್ಲಿ ನೀರಜ್ ಕಂಚಿನ ಪದಕ ಜಯಿಸಿದ್ದರು. ಇದರಿಂದಾಗಿ ಭಾರತದ ಖಾತೆಗೆ ಒಟ್ಟು ನಾಲ್ಕು ಪದಕ ಸೇರಿವೆ.

ಟಿಟಿ: ಕೋರ್ಟ್ ಮೊರೆಹೋದ ದಿವ್ಯಾ

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಆಡಲಿರುವ ಭಾರತ ಟೇಬಲ್ ಟೆನಿಸ್ ತಂಡದ ಆಯ್ಕೆಯಲ್ಲಿ ತಮಗೆ ಅನ್ಯಾಯವಾಗಿದೆ ಎಂದು ಆರೋಪಿಸಿರುವ ಆಟಗಾರ್ತಿ ದಿವ್ಯಾ ಚಿತಳೆ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

‘ಟಿಟಿಎಫ್‌ಐಗೆ ಹೈಕೋರ್ಟ್ ನೇಮಕ ಮಾಡಿರುವ ಆಡಳಿತ ಸಮಿತಿಯ ಮಾಜಿ ಡೆಕಾಥ್ಲಾನ್ ಅಥ್ಲೀಟ್ ಎಸ್.ಡಿ. ಮೌದ್ಗಿಲ್ ನೇತೃತ್ವದ ಆಯ್ಕೆ ಸಮಿತಿಯು ಈಚೆಗೆ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ತೆರಳುವ ತಂಡವನ್ನು ಆಯ್ಕೆ ಮಾಡಿದೆ. ಮಹಿಳೆಯರ ಡಬಲ್ಸ್‌ನಲ್ಲಿ ಮಣಿಕಾ ಬಾತ್ರಾ ಅವರಿಗೆ ಜೋಡಿಯಾಗಿರಲು ಅರ್ಚನಾ ಕಾಮತ್ ಅವರಿಗೆ ಅವಕಾಶ ನೀಡಲಾಗಿದೆ. ಅದರಿಂದಾಗಿ ನಾನು ಅವಕಾಶವಂಚಿತಳಾಗಿರುವೆ. ಆಯ್ಕೆ ಸಮಿತಿಯ ಕಾರ್ಯವೈಖರಿ ಪಾರದರ್ಶಕವಾಗಿಲ್ಲ‘ ಎಂದು ದಿವ್ಯಾ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಮಣಿಕಾ ಮತ್ತು ಅರ್ಚನಾ ಜೋಡಿಯು ವಿಶ್ವ ರ‍್ಯಾಂಕಿಂಗ್‌ನಲ್ಲಿ 4ನೇ ಸ್ಥಾನದಲ್ಲಿದ್ದಾರೆ. ಆದರೆ ಸದ್ಯದ ನಿಯಮದ ಪ್ರಕಾರ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಆಡಿದ ರೇಟಿಂಗ್‌ನಲ್ಲಿ ಅರ್ಚನಾ ಉತ್ತಮ ಸಾಧನೆ ಮಾಡಿದ್ದರೆ. ಅವರು ರಾಷ್ಟ್ರೀಯ ಟೂರ್ನಿಗಳಲ್ಲಿ ಹೆಚ್ಚು ಆಡದ ಕಾರಣ, ಅದರ ಪಾಯಿಂಟ್ಸ್ ಗಳಿಸಿಲ್ಲ. ಇದರಿಂದಾಗಿ ಅವರಿಗೆ ತಂಡದಲ್ಲಿ ಆಯ್ಕೆಯಾಗುವುದರಿಂದ ಅವಕಾಶ ತಪ್ಪುತ್ತಿದೆ. ಅದಕ್ಕಾಗಿ ಈ ಸಮಸ್ಯೆ ಪರಿಹಾರಕ್ಕಾಗಿ ಸಾಯ್ ಮಧ್ಯಸ್ಥಿಕೆ ವಹಿಸಬೇಕು ಎಂದು ಸಿಒಎ ಈಚೆಗೆ ಸೂಚಿಸಿತ್ತು. ತಂಡದಲ್ಲಿ ದಿವ್ಯಾ ಅವರನ್ನು ಮೀಸಲು ಆಟಗಾರ್ತಿಯನ್ನಾಗಿ ನೇಮಕ ಮಾಡಲಾಗಿತ್ತು.

ಯೂತ್ ಖೇಲೊ ಇಂಡಿಯಾ ಇಂದಿನಿಂದ

ಪದಕ ಬೇಟೆ ಛಲದಲ್ಲಿ ಕರ್ನಾಟಕ

ಬೆಂಗಳೂರು/ಪಂಚಕುಲಾ: ಇಲ್ಲಿಯ ಥಾವು ದೇವಿಲಾಲ್ ಕಾಂಪ್ಲೆಕ್ಸ್‌ನಲ್ಲಿ ಶನಿವಾರದಿಂದ ಆರಂಭವಾಗಲಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ಕರ್ನಾಟಕದ ಈಜು ತಂಡದ ಮೇಲೆ ನಿರೀಕ್ಷೆಯ ಭಾರ ಹೆಚ್ಚಿದೆ.

ಬೇರೆ ಬೇರೆ ರಾಜ್ಯಗಳಿಂದ ಒಟ್ಟು 4700 ಅಥ್ಲೀಟ್‌ಗಳು ಈ ಕೂಟದಲ್ಲಿ ಸ್ಪರ್ಧಿಸುವರು. ಹೋದ ಸಲ ಕರ್ನಾಟಕ ತಂಡವು ಸಮಗ್ರ ಪದಕ ಗಳಿಕೆಯಲ್ಲಿ ನಾಲ್ಕನೇ ಸ್ಥಾನ ಗಳಿಸಿತ್ತು. ಅದರಲ್ಲಿ ರಾಜ್ಯದ ಈಜುಪಟುಗಳದ್ದೇ ಸಿಂಹಪಾಲು ಇತ್ತು. 21 ಚಿನ್ನ, 16 ಬೆಳ್ಳಿ ಮತ್ತು 7 ಕಂಚಿನ ಪದಕಗಳನ್ನು ಈಜು ತಂಡವು ಗೆದ್ದಿತ್ತು. ಕರ್ನಾಟಕದ ಈಜು ತಂಡದಲ್ಲಿ 45 ಸ್ಪರ್ಧಿಗಳು ಮತ್ತು ಐವರು ಕೋಚ್‌ಗಳು ಇದ್ದಾರೆ.

ಇದಲ್ಲದೇ ರಾಜ್ಯಕ್ಕೆ ಜುಡೊ (1), ಬ್ಯಾಸ್ಕೆಟ್‌ಬಾಲ್ (1), ಬ್ಯಾಡ್ಮಿಂಟನ್ (1), ಟೆನಿಸ್ (3), ಅಥ್ಲೆಟಿಕ್ಸ್ (4), ಟಿಟಿ (1), ವೇಟ್‌ಲಿಫ್ಟಿಂಗ್ (3) ಮತ್ತು ವಾಲಿಬಾಲ್ (1) ಕ್ರೀಡೆಗಳಲ್ಲಿಯೂ ಪದಕಗಳು ಒಲಿದಿದ್ದವು. ಈ ಸಲವೂ ಪದಕ ಬೇಟೆಯಾಡುವ ಹುಮ್ಮಸ್ಸಿನಲ್ಲಿ ರಾಜ್ಯ ತಂಡವಿದೆ.

ಕೂಟದಲ್ಲಿ ಒಟ್ಟು 25 ಕ್ರೀಡೆಗಳನ್ನು ಸಂಘಟಿಸಲಾಗುತ್ತಿದೆ. ಕ್ರೀಡಾಂಗಣದಲ್ಲಿರುವ ಬಹುಶಿಸ್ತೀಯ ಕ್ರೀಡೆಗಳಿಗಾಗಿ ನಿರ್ಮಿಸಲಾಗಿರುವ ಒಳಾಂಗಣಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಅಥ್ಲೆಟಿಕ್ಸ್, ಫುಟ್‌ಬಾಲ್, ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ಕಬಡ್ಡಿ, ಹ್ಯಾಂಡ್‌ಬಾಲ್, ಕುಸ್ತಿ, ವಾಲಿಬಾಲ್, ಬಾಕ್ಸಿಂಗ್ ಮತ್ತು ಐದು ದೇಶಿ ಕ್ರೀಡೆಗಳು ನಡೆಯಲಿವೆ.

ಖೇಲೊ ಇಂಡಿಯಾ ಯೂತ್ ಗೇಮ್ಸ್ ಮ್ಯಾಸ್ಕಾಟ್– ಟ್ವಿಟರ್ ಚಿತ್ರ

ಈ ಸಲ ಕರ್ನಾಟಕ ತಂಡ	
ಒಟ್ಟು	194
ಬಾಲಕಿಯರು	110
ಬಾಲಕರು	84

2020ರಲ್ಲಿ ಪದಕವಿಜೇತ ತಂಡಗಳು				
ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಮಹಾರಾಷ್ಟ್ರ	78	77	101	256
ಹರಿಯಾಣ	68	60	72	200
ದೆಹಲಿ	39	36	47	122
ಕರ್ನಾಟಕ	32	26	22	80
ಉತ್ತರಪ್ರದೇಶ	29	28	30	87

ಮೂಲ: ಸಾಯ್ ಮೀಡಿಯಾ

ಅಂಬಾಲಾ (ಜಿಮ್ನಾಸ್ಟಿಕ್ಸ್, ಈಜು), ಶಹಾಬಾದ್ (ಹಾಕಿ), ಚಂಡಿಗಡ (ಆರ್ಚರಿ, ಫುಟ್‌ಬಾಲ್) ಮತ್ತು ನವದೆಹಲಿ (ಸೈಕ್ಲಿಂಗ್ , ಶೂಟಿಂಗ್) ನಗರಗಳಲ್ಲಿಯೂ ಕೂಡ ಬೇರೆ ಬೇರೆ ಸ್ಪರ್ಧೆಗಳು ನಡೆಯಲಿವೆ.

ಹಾಲಿ ಚಾಂಪಿಯನ್ ಮಹಾರಾಷ್ಟ್ರ ತಂಡವು 357 ಅಥ್ಲೀಟ್‌ಗಳನ್ನು ಕಣಕ್ಕಿಳಿಸುತ್ತಿದೆ. ಕೂಟದಲ್ಲಿ ಈ ತಂಡವೇ ಹೆಚ್ಚಿನ ಸಂಖ್ಯೆಯ ಸ್ಪರ್ಧಾಳುಗಳನ್ನು ಹೊಂದಿದೆ. ದೆಹಲಿ ತಂಡದಲ್ಲಿ 339 ಅಥ್ಲೀಟ್‌ಗಳಿದ್ದಾರೆ. ಅಂಡಮಾನ್ – ನಿಕೋಬಾರ್ ತಂಡದಲ್ಲಿ ಆರು ಸ್ಪರ್ಧಿಗಳಷ್ಟೇ ಇದ್ದು, ಅತ್ಯಂತ ಸಣ್ಣ ಬಳಗ ಇದಾಗಿದೆ. ಹೋದ ಸಲ ಕರ್ನಾಟಕ ತಂಡವು ನಾಲ್ಕನೇ ಸ್ಥಾನ ಗಳಿಸಿತ್ತು.

ಅಥ್ಲೆಟಿಕ್ಸ್ ವಿಭಾಗದಲ್ಲಿ 392 ನೋಂದಣಿಗಳಿವೆ. ಇದು ಎಲ್ಲ ವಿಭಾಗಗಳಿಗಿಂತಲೂ ಹೆಚ್ಚು.

18 ವರ್ಷದೊಳಗಿನವರ ಏಷ್ಯನ್ ಬ್ಯಾಸ್ಕೆಟ್‌ಬಾಲ್

ಜೈದೀಪ್ ಮಿಂಚು: ಭಾರತಕ್ಕೆ ಗೆಲುವು

ಬೆಂಗಳೂರು: ಜೈದೀಪ್ ರಾಥೋಡ್ ಮತ್ತು ಕುಶಾಲ್ ಸಿಂಗ್ ಅವರ ಅಮೋಘ ಆಟದ ಬಲದಿಂದ ಭಾರತ ತಂಡವು ಒಡಿಶಾದ ಕಟಕ್ ನಲ್ಲಿ ನಡೆಯುತ್ತಿರುವ ಫಿಬಾ 18 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್‌ಷಿಪ್ ಎಸ್‌ಎಬಿಎ ಕ್ವಾಲಿಫೈಯರ್‌ನಲ್ಲಿ ಟೂರ್ನಿಯ ಪುರುಷರ ವಿಭಾಗದ ಪಂದ್ಯದಲ್ಲಿ ಮಾಲ್ಡಿವ್ಸ್ ಎದುರು ಗೆದ್ದಿತು.

ಜೆ.ಎನ್. ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 154–32 ಅಂಕಗಳ ಭಾರಿ ಅಂತರದಿಂದ ಮಾಲ್ಡೀವ್ಸ್ ತಂಡವನ್ನು ಹಣಿಯಿತು.

ಭಾರತದ ಜೈದೀಪ್ (28), ಕುಶಾಲ್ ಸಿಂಗ್ (24), ಲೋಕೇಂದ್ರ ಸಿಂಗ್ (22) ಮತ್ತು ಶ್ರೇಯಾಂಶ್ ರಾಜ್ ಸಿಂಗ್ (17) ಗೆಲುವಿನ ರೂವಾರಿಗಳಾದರು. ಮಾಲ್ಡಿವ್ಸ್ ಪರ ಅಹಮದ್ ರಯಾನ್ ಇಬ್ರಾಹಿಂ 13 ಅಂಕಗಳನ್ನು ಗಳಿಸಿದರು.

ಪಂದ್ಯದಲ್ಲಿ ಮಾಲ್ಡೀವ್ಸ್ ಆಟಗಾರರ ಪೈಪೋಟಿಯನ್ನು ಎದುರಿಸಿ ಭಾರತದ ಆಟಗಾರ ಚೆಂಡನ್ನು ಬ್ಯಾಸ್ಕೆಟ್‌ನಲ್ಲಿ ಕೊಂಡೊಯ್ಯುತ್ತಿರುವುದು

ಪಂದ್ಯದ ಆರಂಭದಿಂದಲೇ ಭಾರತದ ಆಟಗಾರರು ಪಾರಮ್ಯ ಮೆರೆದರು. ಮೊದಲ ಕ್ವಾರ್ಟರ್‌ನಲ್ಲಿ 33–0ಯಿಂದ ಮುನ್ನಡೆ ಸಾಧಿಸಿದ ಭಾರತವು ಎರಡನೇಯದ್ದರಲ್ಲಿ 71–10ಕ್ಕೆ ಅಂಕಗಳನ್ನು ಹೆಚ್ಚಿಸಿಕೊಂಡಿತು. ಮೂರನೇ ಕ್ವಾರ್ಟರ್‌ನಲ್ಲಿ 44 ಅಂಕ, ಕೊನೆಯ ಕ್ವಾರ್ಟರ್‌ನಲ್ಲಿ 38 ಅಂಕ ಸೂರೆ ಮಾಡಿತು.

ಟೆನಿಸ್: ಮೋಹಿತ್– ತೇಜೊಗೆ ಕಿರೀಟ

ಬೆಂಗಳೂರು: ತಮಿಳುನಾಡಿನ ಮೋಹಿತ್ ಜಯಪ್ರಕಾಶ್ ಮತ್ತು ಓಜಸ್ ತೇಜೊ ಟಾಪ್‌ಸ್ಪಿನ್ ಎಐಟಿಎ ಪ್ರೊ ಸರ್ಕ್ಯೂಟ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಶುಕ್ರವಾರ ನಡೆದ ಪುರುಷರ ಡಬಲ್ಸ್ ವಿಭಾಗದಲ್ಲಿ ಮೋಹಿತ್– ತೇಜೊ 6-0, 6-1ರಿಂದ ಕರ್ನಾಟಕ ದೀಪಕ್ ಎ.– ಮನೀಷ್ ಅವರನ್ನು ಸೋಲಿಸಿದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಮನೀಷ್ ಮತ್ತು ಕರ್ನಾಟಕದ ಪ್ರತಿಭಾ ಪ್ರಸಾದ್ ನಾರಾಯಣ್ ಕೂಡ ಫೈನಲ್ ತಲುಪಿದರು. ಸೆಮಿಫೈನಲ್‌ನಲ್ಲಿ ಮನೀಷ್ 6-0, 6-1ರಿಂದ ದೀಪಕ್ ಅವರನ್ನು ಸೋಲಿಸಿದರು. ಮಹಿಳಾ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಪ್ರತಿಭಾ 7-6 (5), 7-5ರಿಂದ ಅನುಷಾ ಕೊಂಡವೀಟಿ ಎದುರು ಗೆದ್ದರು.

ಮೋಹಿತ್ ಮತ್ತು ಓಜಸ್ ತೇಜೊ

ಎಫ್‌ಸಿ ಬೆಂಗಳೂರಿಗೆ ಜಮೀಲ್ ಕೋಚ್

ಬೆಂಗಳೂರು: ಐ ಲೀಗ್ ಮತ್ತು ಡುರಾಂಡ್ ಕಪ್‌ನಲ್ಲಿ ಉತ್ತಮ ಸಾಧನೆಯಿಂದ ಗಮನ ಸೆಳೆದಿರುವ ಎಫ್‌ಸಿ ಬೆಂಗಳೂರು ಫುಟ್‌ಬಾಲ್ ತಂಡಕ್ಕೆ ದೇಶದ ಪ್ರಮುಖ ತರಬೇತುದಾರರಲ್ಲಿ ಒಬ್ಬರಾದ ಖಾಲೀದ್ ಜಮೀಲ್ ಮುಖ್ಯ ಕೋಚ್ ಆಗಿ ನೇಮಕವಾಗಿದ್ದಾರೆ. ಜಮೀಲ್ ಐ ಲೀಗ್‌ನಲ್ಲಿ ಮುಂಬೈ ಎಫ್‌ಸಿಗೆ ಕೆಲವು ವರ್ಷಗಳ ಕಾಲ ಮಾರ್ಗದರ್ಶನ ನೀಡಿದ್ದರು. ಈ ಸಂದರ್ಭದಲ್ಲಿ ಕ್ಲಬ್ ಮಾಲೀಕರಾದ ಗೌರವ್ ಮನಚಂದಾ ಹಾಜರಿದ್ದರು.

ಕೊಕ್ಕೊ: ಕರ್ನಾಟಕ ಜಯಭೇರಿ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ಕರ್ನಾಟಕ ಕೊಕ್ಕೊ ತಂಡವು ಕ್ಯಾತನಹಳ್ಳಿಯ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದಿವಂಗತ ಕೆ.ಎಸ್. ಪುಟ್ಟಣ್ಣಯ್ಯ ಸ್ಮರಣಾರ್ಥ ಅಖಿಲ ಭಾರತ ಪುರುಷರ ಹೊನಲು–ಬೆಳಕಿನ ಕೊಕ್ಕೊ ಟೂರ್ನಿಯ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಶುಕ್ರವಾರ ಸಂಜೆ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡವು ಕೇವಲ 1 ಅಂಕದ ಅಂತರದಿಂದ ಮುಂಬೈ ಪೊಲೀಸ್ ತಂಡದ ಎದುರು ಜಯಿಸಿತು ಹಾಗೂ ಮುಂಬೈ ಆರ್‌ಬಿಐ ತಂಡವನ್ನು 2 ಅಂಕಗಳಿಂದ ಸೋಲಿಸಿತು. ನವಮುಂಬೈ ನಗರಪಾಲಿಕೆ ತಂಡವು ಮುಂಬೈ ಪೊಲೀಸ್ ತಂಡವನ್ನು 2 ಅಂಕಗಳಿಂದ ಮಣಿಸಿತು. ಮುಂಬೈ ಪಶ್ಚಿಮ ರೈಲ್ವೆ ತಂಡವು ಮಹರಾಷ್ಟ್ರ ರಾಜ್ಯ ಪೊಲೀಸ್ ತಂಡವನ್ನು 11 ಅಂಕಗಳಿಂದ ಸೋಲಿಸಿತು. ಮಹಾರಾಷ್ಟ್ರ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ ತಂಡವು ಸಿಕಂದರಾಬಾದ್ ರೈಲ್ವೆ ತಂಡವನ್ನು 1 ಅಂಕದಿಂದ ಪರಾಭವಗೊಳಿಸಿತು.

ಸೆಂಟರ್ ರೈಲ್ವೆ 1 ಅಂಕದಿಂದ ಗ್ರೇಟರ್ ಮುಂಬೈ ನಗರ ಪಾಲಿಕೆಯನ್ನು, ನವ ಮುಂಬೈ ನಗರ ಪಾಲಿಕೆ ತಂಡವು ಸಿಕಂದರಾಬಾದ್ ತಂಡವನ್ನು ಏಕೈಕ ಅಂಕದಿಂದ ಮಣಿಸಿತು. ಮಹಾರಾಷ್ಟ್ರ ರಾಜ್ಯ ಪೊಲೀಸ್, ಕರ್ನಾಟಕ ಅಧ್ಯಕ್ಷರ ಇಲೆವೆನ್ ತಂಡವನ್ನು ಮಣಿಸಿತು.

ಕರ್ನಾಟಕ ರಾಜ್ಯ ಕೊಕ್ಕೊ ಸಂಸ್ಥೆ ತಂಡದ ಆಟಗಾರ ಮುಂಬೈ ಪೊಲೀಸ್ ತಂಡ ಆಟಗಾರರನ್ನು ಹಿಡಿಯಲು ಯತ್ನಿಸುತ್ತಿರುವುದು

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,628
ಇಂದಿನ ಅಂತ್ಯ	16,584
▼	44
ದಿನದ ಗರಿಷ್ಠ	16,567

ವಿನಿಮಯ ದರ

$ ಡಾಲರ್	77.60
£ ಪೌಂಡ್	97.53
€ ಯುರೊ	83.44
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹495
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹497

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1620)
ಸೋಯಾ (ರಿಫೈನ್ಡ್)	₹1505 (1500)
ಸೂರ್ಯಕಾಂತಿ (ರಿಫೈನ್ಡ್)	₹1790 (1790)
ಪಾಮೋಲಿನ್	₹1480 (1480)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹400-665
ದ್ವಿತಳಿ (ಬಿ.ವಿ)	₹410-866

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹171.50
ಆರ್‌ಎಸ್‌ಎಸ್-5	₹164.50
ಗುಡ್ ಲಾಟ್	₹158

(ಪ್ರತಿ ಕೆ.ಜಿಗೆ)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-26000
2ನೇ ದರ್ಜೆ	₹10000-15000

ನಿರ್ದೇಶಕರ ನೇಮಕ: ನಿಯಮ ತಿದ್ದುಪಡಿ

ನವದೆಹಲಿ (ಪಿಟಿಐ): ಭಾರತದ ಜೊತೆ ಗಡಿ ಹಂಚಿಕೊಂಡಿರುವ ದೇಶಗಳಿಗೆ ಸೇರಿದವರನ್ನು ಭಾರತದ ಕಂಪನಿಗಳ ನಿರ್ದೇಶಕರನ್ನಾಗಿ ನೇಮಿಸಲು ಸರ್ಕಾರದ ಒಪ್ಪಿಗೆ ಪಡೆಯುವುದು ಕಡ್ಡಾಯವಾಗಿದೆ. ಈ ಕುರಿತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

ಈ ಕುರಿತು ಕಂಪನಿ ಕಾಯ್ದೆ 2013ರ ಅಡಿಯಲ್ಲಿ ನಿರ್ದೇಶಕರ ನೇಮಕ ಮತ್ತು ಅರ್ಹತೆಗೆ ಸಂಬಂಧಿಸಿದ ನಿಯಮಗಳಲ್ಲಿ ತಿದ್ದುಪಡಿ ತರಲಾಗಿದೆ.

ಚೀನಾ, ಬಾಂಗ್ಲಾದೇಶ, ಪಾಕಿಸ್ತಾನ, ಭೂತಾನ, ನೇಪಾಳ, ಮ್ಯಾನ್ಮಾರ್ ಮತ್ತು ಅಫ್ಗಾನಿಸ್ತಾನ ಭಾರತದ ಜೊತೆ ಗಡಿ ಹಂಚಿಕೊಂಡಿವೆ. ಕೇಂದ್ರ ಗೃಹ ಸಚಿವಾಲಯದ ಅನುಮತಿ ಪಡೆಯದೇ ಇದ್ದರೆ ಅಂತಹವರ ನಿರ್ದೇಶಕರ ಗುರುತಿನ ಸಂಖ್ಯೆಯ (ಡಿಐಎನ್) ಅರ್ಜಿ ಮಾನ್ಯ ಆಗುವುದಿಲ್ಲ ಎಂದು ಹೇಳಿದೆ.

ಚಿನ್ನ ₹ 294 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ, ಬೆಳ್ಳಿ ದರ ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ ದರ ₹ 294ರಷ್ಟು ಹೆಚ್ಚಾಗಿ ₹ 51,236ರಂತೆ ಮಾರಾಟವಾಯಿತು. ಚಿನ್ನದ ಧಾರಣೆ ಕೆ.ಜಿಗೆ ₹ 523ರಷ್ಟು ಹೆಚ್ಚಾಗಿ ₹ 62,577ಕ್ಕೆ ತಲುಪಿತು.

ಮುಂಬೈ ಧಾರಣೆ

ಶೇಂಗಾ

3-6-2022

ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10350-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1635 (1630)
ಒಂದು ವಾರದ ಡೆಲಿವರಿ	1630 (1625)
ಸೋಯಾ ಕಚ್ಚಾ	1440 (1430)
ಪಾಮ್ ವಾರದ ಡೆಲಿವರಿ	1478 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1750 (1750)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 51,250 (51,100)

ಬೆಳ್ಳಿ ಕೆ.ಜಿ 62,800 (62,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪಿಎಫ್‌ಗೆ ಶೇ 8.1 ಬಡ್ಡಿದರ: ಕೇಂದ್ರದ ಅಧಿಸೂಚನೆ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಠೇವಣಿಗಳಿಗೆ 2021–22ನೇ ಸಾಲಿಗೆ ಶೇ 8.1ರಷ್ಟು ಬಡ್ಡಿದರ ನೀಡಲು ಕೇಂದ್ರ ಸರ್ಕಾರವು ಶುಕ್ರವಾರ ಒಪ್ಪಿಗೆ ನೀಡಿದೆ.

ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಈ ಕುರಿತು ಅಧಿಸೂಚನೆ ಹೊರಡಿಸಿದೆ.

1977–78 ರಿಂದೀಚೆಗಿನ ನೀಡುತ್ತಿರುವ ಅತ್ಯಂತ ಕಡಿಮೆ ಮಟ್ಟದ ಬಡ್ಡಿದರ ಇದಾಗಿದೆ. ಆ ಸಾಲಿನಲ್ಲಿ ಶೇ 8ರಷ್ಟು ಬಡ್ಡಿದರ ನೀಡಲಾಗಿತ್ತು. ಇಪಿಎಫ್‌ಒದಲ್ಲಿ ಐದು ಕೋಟಿಗೂ ಹೆಚ್ಚಿನ ಚಂದಾದಾರರು ಇದ್ದಾರೆ.

2020–21ನೇ ಸಾಲಿಗೆ ಶೇ 8.5ರಷ್ಟು ಬಡ್ಡಿದರ ನೀಡಲಾಗಿತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ಹಣಕಾಸು ವರ್ಷಕ್ಕೆ ನಿಗದಿಪಡಿಸಿರುವ ಬಡ್ಡಿದರವು ಶೇ 0.4ರಷ್ಟು ಕಡಿಮೆ ಆಗಲಿದೆ.

ಪಿಎಫ್ ಠೇವಣಿಗೆ ಶೇ 8.1ರಷ್ಟು ಬಡ್ಡಿ ಕೊಡಬೇಕು ಎಂಬ ತೀರ್ಮಾನವನ್ನು ಇಪಿಎಫ್‌ಒ ಧರ್ಮದರ್ಶಿಗಳ ಮಂಡಳಿಯು ಮಾರ್ಚ್ ತಿಂಗಳಿನಲ್ಲಿ ಕೈಗೊಂಡಿತ್ತು. ಈ ತೀರ್ಮಾನಕ್ಕೆ ಕೇಂದ್ರ ಹಣಕಾಸು ಸಚಿವಾಲಯವು ಒಪ್ಪಿಗೆ ನೀಡಿದೆ. ಬಡ್ಡಿಯ ಮೊತ್ತವು ಚಂದಾದಾರರ ಖಾತೆಗಳಿಗೆ ಜಮಾ ಆಗಲಿದೆ.

ವಿದೇಶಿ ವಿನಿಮಯ ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಮೇ 27ಕ್ಕೆ ಕೊನೆಗೊಂಡ ವಾರದಲ್ಲಿ ₹ 29,798 ಕೋಟಿ ಹೆಚ್ಚಾಗಿದ್ದು, ಒಟ್ಟಾರೆ ಮೀಸಲು ಸಂಗ್ರಹವು ₹ 46.63 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ಅದಕ್ಕೂ ಹಿಂದಿನ ವಾರದಲ್ಲಿ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹ 46.32ಲಕ್ಷ ಕೋಟಿಗಳಷ್ಟು ಇತ್ತು .

ಮೀಸಲು ಸಂಗ್ರಹದಲ್ಲಿ ಅತಿ ಹೆಚ್ಚಿನ ಪಾಲು ಹೊಂದಿರುವ ವಿದೇಶಿ ಕರೆನ್ಸಿಗಳ ಸಂಗ್ರಹವು ₹ 28,013 ಕೋಟಿಗಳಷ್ಟು ಹೆಚ್ಚಾಗಿದ್ದು ₹ 41.66 ಲಕ್ಷ ಕೋಟಿಗೆ ಏರಿಕೆ ಆಗಿದೆ. ಹೀಗಾಗಿ ಒಟ್ಟಾರೆ ಮೀಸಲು ಸಂಗ್ರಹವು ಸಹ ಹೆಚ್ಚಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಕುಮಟ	
ಚಿಪ್ಪು	25509-29509
ಕೋಕ	18019-28289
ಹಳೆಚಾಲಿ	45069-49319
ಹೊಸಚಾಲಿ	33899-37809
ಸಿದ್ದಾಪುರ	
ಬಿಳಿಗೋಟು	22789-30969
ಚಾಲಿ	34119-37799
ಕೋಕ	21199-32699
ಕೆಂಪುಗೋಟು	27380-32199
ರಾಶಿ	45009-48709
ತಟ್ಟಿಬೆಟ್ಟೆ	37419-47099
ಶಿರಸಿ	
ಬೆಟ್ಟೆ	37199-45129
ಬಿಳಿಗೋಟು	22099-31099
ಚಾಲಿ	26699-38139
ರಾಶಿ	29399-50809
ಶಿವಮೊಗ್ಗ	
ಬೆಟ್ಟೆ	49389-52600
ಗೊರಬಲು	18069-37699
ರಾಶಿ	46099-50369
ಸರಕು	59119-77410
ಯಲ್ಲಾಪುರ	
ಬಿಳಿಗೋಟು	26099-33299
ಚಾಲಿ	34099-37899
ಕೋಕ	17601-28969
ಕೆಂಪುಗೋಟು	31000-34969
ರಾಶಿ	46900-55389
ತಟ್ಟಿಬೆಟ್ಟೆ	37784-45889

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16750	16500	16600	239.45 ಸೆಂಟ್ಸ್
ಎಸಿ	9100	8600	9150	
ಆರ್‌ಪಿ	9750	10000	10100	ಲಂಡನ್
ಆರ್‌ಸಿ	4700	4500	4650	2136 ಡಾಲರ್ಸ್

ಸತತ ಹತ್ತನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಬೆಳವಣಿಗೆ: ಎಸ್‌ಆ್ಯಂಡ್‌ಪಿ ಗ್ಲೋಬಲ್ ವರದಿ

ಸೇವಾ ಚಟುವಟಿಕೆ: 11 ವರ್ಷಗಳ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯ ಚಟುವಟಿಕೆಗಳು ಮೇ ತಿಂಗಳಿನಲ್ಲಿ ಕಳೆದ 11 ವರ್ಷಗಳಲ್ಲಿಯೇ ಅತ್ಯಂತ ವೇಗದ ಬೆಳವಣಿಗೆ ಕಂಡಿವೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಸಂಸ್ಥೆ ಹೇಳಿದೆ.

ತಯಾರಿಕಾ ವೆಚ್ಚ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದ್ದರು ಸಹ ಹೊಸ ಯೋಜನೆಗಳಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ವಲಯವು ಉತ್ತಮ ಬೆಳವಣಿಗೆ ಕಂಡಿತು ಎಂದು ಸಮೀಕ್ಷೆಯಲ್ಲಿ ತಿಳಿಸಿದೆ.

ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸರ್ವೀಸಸ್ ಪಿಎಂಐ ಬಿಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ಏಪ್ರಿಲ್‌ನಲ್ಲಿ 57.9 ಇತ್ತು. ಇದು ಮೇ ತಿಂಗಳಿನಲ್ಲಿ 58.9ಕ್ಕೆ ಏರಿಕೆ ಆಗಿದೆ. ಸತತ ಹತ್ತನೇ ತಿಂಗಳಿನಲ್ಲಿಯೂ ಸೇವಾ ವಲಯದ ಚಟುವಟಿಕೆ ಹೆಚ್ಚಾಗಿದೆ. ಪಿಎಂಐ 50ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಸಕಾರಾತ್ಮಕ ಬೆಳವಣಿಗೆ, 50ಕ್ಕಿಂತಲೂ ಕಡಿಮೆ ಮಟ್ಟದಲ್ಲಿ ಇದ್ದರೆ ನಕಾರಾತ್ಮಕ ಬೆಳವಣಿಗೆ

ಮುಖ್ಯಾಂಶಗಳು

- ಹೊಸ ಯೋಜನೆಗಳಿಗೆ ಬೇಡಿಕೆ ಹೆಚ್ಚಳ
- ಆರ್ಥಿಕ ಚೇತರಿಕೆಗೆ ಹಣದುಬ್ಬರ ಅಡ್ಡಿಪಡಿಸುವ ಆತಂಕ

‘ಕೋವಿಡ್ ಸಾಂಕ್ರಾಮಿಕದ ಬಳಿಕ ಆರ್ಥಿಕ ಚಟುವಟಿಕೆಗಳು ಮತ್ತೆ ಆರಂಭ ಆಗಿರುವುದು ಸೇವಾ ವಲಯದ ಬೆಳವಣಿಗೆಯನ್ನು ಹೆಚ್ಚಾಗುವಂತೆ ಮಾಡಿವೆ. ಹೊಸ ಯೋಜನೆಗಳ ಬೇಡಿಕೆಯು 2011ರ ಜುಲೈ ಬಳಿಕ ವೇಗವಾಗಿ ಹೆಚ್ಚಾಗಿದೆ. ಇದರಿಂದಾಗಿ ವಲಯವು 11 ವರ್ಷಗಳಲ್ಲಿಯೇ ಅತ್ಯಂತ ವೇಗದ ಬೆಳವಣಿಗೆ ಕಾಣುವಂತಾಗಿದೆ’ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ.

ಸೇವಾ ವಲಯದ ಬೆಳವಣಿಗೆ



ಪ್ರಜಾವಾಣಿ ಗ್ರಾಫಿಕ್ಸ್ ಮಾಹಿತಿ: ನಿಕೇಯ್, ಐಎಚ್‌ಎಸ್, ಎಸ್‌ಆ್ಯಂಡ್‌ಪಿ ಗ್ಲೋಬಲ್

ಭಾರತದ ಸೇವೆಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆಯು ದುರ್ಬಲವಾಗಿದೆ ಎನ್ನುವುದನ್ನು ಈಚಿನ ಅಂಕಿ–ಅಂಶಗಳು ಸೂಚಿಸುತ್ತಿವೆ. ಕೋವಿಡ್ ಸಾಂಕ್ರಾಮಿಕವು ಆರಂಭ ಆದಾಗಿನಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೊಸ ಯೋಜನೆಗಳಿಗೆ ಬೇಡಿಕೆಯು ಪ್ರತಿ ತಿಂಗಳಿನಲ್ಲಿಯೂ ಇಳಿಮುಖವಾಗಿಯೇ ಇದೆ ಎಂದು ಸಮೀಕ್ಷೆಯಲ್ಲಿ ತಿಳಿಸಲಾಗಿದೆ.

ಹಣದುಬ್ಬರ ದರವು ಹೆಚ್ಚಾಗುತ್ತಲೇ ಇದೆ. ಆಹಾರ, ಇಂಧನ, ರಿಟೇಲ್ ಮತ್ತು ಸಾರಿಗೆ ವೆಚ್ಚ ಸೇರಿದಂತೆ ಎಲ್ಲಾ ವಸ್ತುಗಳ ದರವೂ ಹೆಚ್ಚಾಗುತ್ತಲೇ ಇದೆ.

ಬೆಲೆ ಏರಿಕೆ ಆಗುತ್ತಿರುವುದರಿಂದ ವ್ಯಾಪಾರ ನಡೆಸುವ ಆಶಾವಾದವನ್ನು ಕುಗ್ಗಿಸುತ್ತಿದೆ. ಹಣದುಬ್ಬರದ ಒತ್ತಡವು ಆರ್ಥಿಕ ಚೇತರಿಕೆಗೆ ಅಡ್ಡಿಪಡಿಸಬಹುದು ಎನ್ನುವ ಆತಂಕ ಎದುರಾಗಿದೆ ಎಂದು ಲಿಮಾ ತಿಳಿಸಿದ್ದಾರೆ.

ಸೇವಾ ಕಂಪನಿಗಳು ಮೇ ತಿಂಗಳಿನಲ್ಲಿ ಹೆಚ್ಚುವರಿ ಕೆಲಸಗಾರರನ್ನು ನೇಮಿಸಿಕೊಳ್ಳುವುದನ್ನು ತಡೆಹಿಡಿದಿದ್ದಾರೆ ಎಂದು ಅವರು ಹೇಳಿದ್ದಾರೆ.

ತಯಾರಿಕೆ ಮತ್ತು ಸೇವಾ ವಲಯದ ಒಟ್ಟಾರೆ ಬೆಳವಣಿಗೆಯನ್ನು ಸೂಚಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ಏಪ್ರಿಲ್‌ನಲ್ಲಿ 57.6 ಇತ್ತು. ಮೇ ತಿಂಗಳಿನಲ್ಲಿ 58.3ಕ್ಕೆ ಏರಿಕೆ ಆಗಿದೆ.

ಸಾಲ ಮರುಪಾವತಿಸಲು ಐಎಲ್‌ಎಫ್‌ಎಸ್‌ಗೆ ನಿರ್ದೇಶನ

ನವದೆಹಲಿ (ಪಿಟಿಐ): ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ₹ 16,361 ಕೋಟಿ ಮೊತ್ತದ ಸಾಲವನ್ನು ಮರುಪಾವತಿ ಮಾಡುವಂತೆ ಐಎಲ್‌ಆ್ಯಂಡ್‌ಎಫ್‌ಎಸ್ ಸಮೂಹಕ್ಕೆ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು (ಎನ್‌ಸಿಎಲ್‌ಎಟಿ) ಶುಕ್ರವಾರ ನಿರ್ದೇಶನ ನೀಡಿದೆ.

₹ 11,296 ಕೋಟಿಯನ್ನು ನಗದು ಹಾಗೂ ₹ 5,065 ಕೋಟಿ ಮೊತ್ತವನ್ನು ಇನ್‌ಫ್ರಾಸ್ಟ್ರಕ್ಚರ್ ಇನ್‌ವೆಸ್ಟ್‌ಮೆಂಟ್ ಟ್ರಸ್ಟ್‌ನ ಯುನಿಟ್‌ಗಳ ರೂಪದಲ್ಲಿ ನೀಡುವಂತೆ ಸೂಚನೆ ನೀಡಿದೆ. ಬಹುಪಾಲು ಮೊತ್ತವನ್ನು ಸಮೂಹದ ದೊಡ್ಡ ಕಂಪನಿಗಳಾದ ಐಎಲ್‌ಆ್ಯಂಡ್‌ಎಫ್‌ಎಸ್, ಐಎಫ್‌ಐಎನ್ ಮತ್ತು ಐಟಿಎನ್‌ಎಲ್‌ಗೆ ಸಾಲ ನೀಡಿರುವವರಿಗೆ ವಿತರಿಸುವಂತೆ ಹೇಳಲಾಗಿದೆ. ಹೊಸ ಆಡಳಿತ ಮಂಡಳಿಯ ಒಪ್ಪಿಗೆ ಪಡೆದ ಬಳಿಕವೇ ಸಾಲ ಮರುಪಾವತಿ ಮಾಡುವಂತೆಯೂ ತಿಳಿಸಿದೆ.

ಐ ಎಲ್ ಆ್ಯ ಂ ಡ್ ಎ ಫ್ ಎ ಸ್ ನ ಒಟ್ಟಾರೆ ಸಾಲದ ಮೊತ್ತವು ₹ 99 ಸಾವಿರ ಕೋಟಿ ಇದೆ. ಸರ್ಕಾರಿ ಮತ್ತು ಖಾಸಗಿ ಬ್ಯಾಂಕ್‌ಗಳಲ್ಲದೆ, ಸಾರ್ವಜನಿಕ ನಿಧಿಗಳಿಂದಲೂ ಸಾಲ ಪಡೆದಿದೆ.

ದಿವಾಳಿ ಪ್ರಕ್ರಿಯೆಯನ್ನು ಈ ತಿಂಗಳ ಒಳಗಾಗಿ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಲಾಗಿದೆ. ಮುಂದಿನ ವಿಚಾರಣೆಯು ಜುಲೈ 19ಕ್ಕೆ ನಡೆಯಲಿದೆ ಎಂದು ತಿಳಿಸಿದೆ. ಸಮೂಹವು ಜೂನ್ 30ರ ಒಳಗಾಗಿ ದಿವಾಳಿ ಪ್ರಕ್ರಿಯೆ ಪೂರ್ಣಗೊಳಿಸಿ ಎನ್‌ಸಿಎಲ್‌ಟಿ ಒಪ್ಪಿಗೆಯನ್ನು ಕೇಳುವ ನಿರೀಕ್ಷೆ ಇದೆ.

₹ 55 ಸಾವಿರ ಕೋಟಿ ಸಾಲ ಮರುಪಾವತಿ ಮಾಡಿರುವುದಾಗಿ ಕಂಪನಿಯು ಮಾರ್ಚ್‌ನಲ್ಲಿ ಹೇಳಿದೆ.

ಶೇ 10ರಷ್ಟು ಉದ್ಯೋಗ ಕಡಿತ: ಮಸ್ಕ್

ಸ್ಯಾನ್ ಫ್ರಾನ್ಸಿಸ್ಕೊ (ರಾಯಿಟರ್ಸ್): ಆರ್ಥಿಕ ಸ್ಥಿತಿಯು ತೀವ್ರ ಹದಗೆಟ್ಟಿದ್ದು, ಶೇ 10ರಷ್ಟು ಉದ್ಯೋಗಿಗಳನ್ನು ಕೆಲಸದಿಂದ ತೆಗೆಯುವುದಾಗಿ ಟೆಸ್ಲಾ ಕಂಪನಿಯ ಸಿಇಒ ಇಲಾನ್ ಮಸ್ಕ್ ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಎಲ್ಲಾ ನೇಮಕಾತಿಯನ್ನೂ ತಡೆಹಿಡಿಯಿರಿ ಎನ್ನುವ ಸಂದೇಶ ಇರುವ ಇ-ಮೇಲ್ ಕಳುಹಿಸಿದ್ದಾರೆ. ಈ ಕುರಿತು ಕಂಪನಿಯು ಪ್ರತಿಕ್ರಿಯೆಗೆ ಲಭ್ಯವಾಗಿಲ್ಲ.

2021ರಲ್ಲಿ ಟೆಸ್ಲಾ ಮತ್ತು ಅದರ ಅಂಗಸಂಸ್ಥೆಗಳಿಗೆ 1 ಲಕ್ಷ ಜನರನ್ನು ನೇಮಿಸಿಕೊಂಡಿದೆ.

ಕೆಲಸಕ್ಕೆ ಮರಳಿ ಇಲ್ಲವೇ ಕಂಪನಿಯನ್ನು ಬಿಡಿ ಎಂದು ತನ್ನ ಉದ್ಯೋಗಿಗಳಿಗೆ ಮಂಗಳವಾರ ಕರೆ ನೀಡಿದ ಬಳಿಕ ಮಸ್ಕ್ ಈ ಹೇಳಿಕೆ ನೀಡಿದ್ದಾರೆ. ಪ್ರತಿಯೊಬ್ಬರೂ ವಾರದಲ್ಲಿ ಕನಿಷ್ಠ 40 ಗಂಟೆ ಕಚೇರಿಯಲ್ಲಿ ಕೆಲಸ ಮಾಡಬೇಕು. ಇಲ್ಲವಾದರೆ ನೀವು ರಾಜೀನಾಮೆ ನೀಡಿದ್ದೀರಿ ಎಂದು ಭಾವಿಸಬೇಕಾಗುತ್ತದೆ ಎಂದು ಹೇಳಿದ್ದಾರೆ.

‘ರೆಸ್ಟೋರೆಂಟ್‌ಗಳು ಬಿಲ್‌ನಲ್ಲಿ ಸೇವಾ ಶುಲ್ಕ ಸೇರಿಸುವಂತಿಲ್ಲ’

ನವದೆಹಲಿ (ಪಿಟಿಐ): ‘ರೆಸ್ಟೋರೆಂಟ್‌ಗಳು ಬಿಲ್‌ನಲ್ಲಿ ಸೇವಾ ಶುಲ್ಕವನ್ನು ಸೇರಿಸುವಂತಿಲ್ಲ. ಸೇವೆಯು ಇಷ್ಟವಾದಲ್ಲಿ ಗ್ರಾಹಕರು ಪ್ರತ್ಯೇಕವಾಗಿ ಟಿಪ್ಸ್ ನೀಡಬಹುದು’ ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪೀಯೂಷ್ ಗೋಯಲ್ ಶುಕ್ರವಾರ ಹೇಳಿದ್ದಾರೆ.

ಸೇವಾ ಶುಲ್ಕ ಪಡೆಯದೇ ಇದ್ದರೆ ನಷ್ಟವಾಗುತ್ತದೆ ಎನ್ನುವ ರೆಸ್ಟೋರೆಂಟ್ ಮಾಲೀಕರ ವಾದವನ್ನು ಅವರು ತಳ್ಳಿಹಾಕಿದ್ದಾರೆ.

‘ರೆಸ್ಟೋರೆಂಟ್ ಮಾಲೀಕರು ಕೆಲಸಗಾರರಿಗೆ ಹೆಚ್ಚಿನ ವೇತನ ಕೊಡಬೇಕು ಎಂದಾದಲ್ಲಿ ಆಹಾರ ಉತ್ಪನ್ನಗಳ ದರ ಹೆಚ್ಚಿಸಲು ಅವರು ಸ್ವತಂತ್ರರಾಗಿದ್ದಾರೆ. ದೇಶದಲ್ಲಿ ಆಹಾರ ಉತ್ಪನ್ನಗಳ ದರ ಮೇಲೆ ಯಾವುದೇ ನಿಯಂತ್ರಣ ಇಲ್ಲ’ ಎಂದು ಅವರು ತಿಳಿಸಿದ್ದಾರೆ.

ಸೇವಾ ಶುಲ್ಕ ವಿಧಿಸುತ್ತಿರುವ ಬಗ್ಗೆ ಗ್ರಾಹಕರಿಂದ ದೂರುಗಳು ಬರುತ್ತಿವೆ ಎಂದು ಹೇಳಿರುವ ಅವರು, ‘ಕೆಲಸಗಾರರಿಗೆ ಹೆಚ್ಚಿನ ವೇತನ ನೀಡಲು ಮತ್ತು ಆಹಾರ ಉತ್ಪನ್ನಗಳ ದರ ಹೆಚ್ಚಿಸಲು ನೀವು ಸ್ವತಂತ್ರರು. ಆದರೆ, ಬಿಲ್‌ನಲ್ಲಿ ಮರೆಮಾಚಿದ ವೆಚ್ಚ ಇದ್ದರೆ ಜನರಿಗೆ ನಿಜವಾದ ಬೆಲೆ ಹೇಗೆ ಗೊತ್ತಾಗುತ್ತದೆ’ ಎಂದು ಅವರು ಪ್ರಶ್ನೆ ಮಾಡಿದ್ದಾರೆ.

‘ರೆಸ್ಟೋರೆಂಟ್‌ಗಳಲ್ಲಿ ಗ್ರಾಹಕರಿಗೆ ಸೇವಾ ಶುಲ್ಕ ವಿಧಿಸುವುದನ್ನು ತಡೆಯಲು ಸರ್ಕಾರ ಶೀಘ್ರದಲ್ಲೇ ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸಲಿದೆ’ ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಹೇಳಿದ್ದಾರೆ.

ಫ್ರೆಂಚ್ ಓಪನ್: ಗಾಯದಿಂದ ಹಿಂದೆ ಸರಿದ ಜ್ವೆರೆವ್

14ನೇ ಬಾರಿ ಫೈನಲ್‌ಗೆ ನಡಾಲ್

ಪ್ಯಾರಿಸ್ (ಎಪಿ): ಸ್ಪೇನ್‌ನ ತಾರಾ ಆಟಗಾರ ರಫೆಲ್ ನಡಾಲ್ 14ನೇ ಬಾರಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಫೈನಲ್ ತಲುಪಿದ್ದಾರೆ.

ಫಿಲಿಪ್ ಚಾಟ್ರಿಯರ್ ಅಂಗಣದಲ್ಲಿ ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ಸೆಮಿಫೈನಲ್ ಹಣಾಹಣಿಯಲ್ಲಿ ನಡಾಲ್ ಎದುರು ಸ್ಪರ್ಧಿಸಿದ್ದ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಗಾಯದಿಂದ ಹಿಂದೆ ಸರಿದರು. ಹೀಗಾಗಿ ನಡಾಲ್ ಅವರಿಗೆ ವಾಕ್‌ಓವರ್ ಲಭಿಸಿತು.

ಜ್ವೆರೆವ್‌ಗೆ ಇದು ಕಠಿಣ ಮತ್ತು ದುಃಖದ ಸಂದರ್ಭ. ಗ್ರ್ಯಾನ್‌ಸ್ಲಾಂ ಗೆಲುವಿಗಾಗಿ ಅವರು ಎಷ್ಟು ಬೆವರು ಸುರಿಸಿದ್ದರೆಂದು ನನಗೆ ಗೊತ್ತು. ಭವಿಷ್ಯದಲ್ಲಿ ಅವರು ಖಂಡಿತವಾಗಿ ಗೆಲ್ಲುತ್ತಾರೆ

ರಫೆಲ್ ನಡಾಲ್, ಸ್ಪೇನ್ ಆಟಗಾರ

ಜ್ವೆರೆವ್ ಅವರ ಪಾದ ಉಳುಕಿರುವುದು

ಪಂದ್ಯದಲ್ಲಿ ಜ್ವೆರೆವ್ 6-7 (8-10), 6-6ರಿಂದ ಹಿನ್ನಡೆಯಲ್ಲಿದ್ದ ವೇಳೆ ಅವರ ಬಲಪಾದ ಉಳುಕಿತು. ತೀವ್ರ ನೋವು ಅನುಭವಿಸಿದ ಅವರು, ಸಿಬ್ಬಂದಿಯ ಸಹಾಯದಿಂದ ಗಾಲಿಕುರ್ಚಿಯಲ್ಲಿ ಮೈದಾನ ತೊರೆಯಬೇಕಾಯಿತು.

ವೇದನೆಯಿಂದ ಕಣ್ಣೀರು ಸುರಿಸಿದ 25 ವರ್ಷದ ಆಟಗಾರ ವಾಪಸ್ ಅಂಗಣಕ್ಕೆ ಬಂದು ನಡಾಲ್ ಅವರ ಕೈಕುಲುಕಿ ವಾಕ್‌ಓವರ್ ನೀಡಿದರು.

22ನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಬೆನ್ನಟ್ಟಿರುವ ನಡಾಲ್ (36 ವರ್ಷ), ಫ್ರೆಂಚ್ ಓಪನ್ ಟೂರ್ನಿಯಲ್ಲಿ ಫೈನಲ್ ತಲುಪಿದ ಎರಡನೇ ಅತಿ ಹಿರಿಯ ಆಟಗಾರ ಎನಿಸಿಕೊಂಡರು. 1930ರಲ್ಲಿ 37 ವರ್ಷದ ಬಿಲ್ ಟಿಲ್ಡೆನ್ ರನ್ನರ್‌ಅಪ್ ಆಗಿದ್ದರು.



ನೋವಿನಿಂದ ನೆಲಕ್ಕುರುಳಿದ ಅಲೆಕ್ಸಾಂಡರ್ ಜ್ವೆರೆವ್ ಅವರನ್ನು ಸಂತೈಸಿದ ರಫೆಲ್ ನಡಾಲ್– ಎಎಫ್‌ಪಿ ಚಿತ್ರ

ಗಫ್‌ಗೆ ಸ್ವೆಟೆಕ್ ಸವಾಲು

ಪ್ಯಾರಿಸ್ (ರಾಯಿಟರ್ಸ್): ಎರಡನೇ ಬಾರಿ ಫ್ರೆಂಚ್ ಓಪನ್ ಟೂರ್ನಿಯ ಕಿರೀಟ ಧರಿಸುವ ಹುಮ್ಮಸ್ಸಿನಲ್ಲಿರುವ ಇಗಾ ಸ್ವೆಟೆಕ್ ಶನಿವಾರ ಮಹಿಳಾ ಸಿಂಗಲ್ಸ್ ವಿಭಾಗದ ಫೈನಲ್ ಹಣಾಹಣಿಯಲ್ಲಿ ಅಮೆರಿಕದ ಕೊಕೊ ಗಫ್ ಅವರಿಗೆ ಮುಖಾಮುಖಿಯಾಗಲಿದ್ದಾರೆ.

ಪೋಲೆಂಡ್‌ನ ಇಗಾ ಸತತ 34 ಪಂದ್ಯಗಳಲ್ಲಿ ಜಯ ಸಾಧಿಸಿ ಮುನ್ನುಗ್ಗುತ್ತಿದ್ದು, ಗಫ್ ಸವಾಲು ಮೀರುವ ಉತ್ಸಾಹದಲ್ಲಿದ್ದಾರೆ. ರೋಲ್ಯಾಂಡ್ ಗ್ಯಾರೋಸ್‌ನಲ್ಲಿ 2020ರಲ್ಲಿ ಅವರಿಗೆ ಪ್ರಶಸ್ತಿ ಒಲಿದಿತ್ತು.

21 ವರ್ಷದ ಸ್ವೆಟೆಕ್, ಕೊನೆಯ ಬಾರಿ ಆಡಿದ ಎಂಟು ಫೈನಲ್ಸ್‌ಗಳಲ್ಲಿ ವಿಜಯದ ನಗೆ ಬೀರಿದ್ದಾರೆ. ಈ ಬಾರಿಯ ಫ್ರೆಂಚ್ ಓಪನ್ ಟೂರ್ನಿಯ ನಾಲ್ಕರ ಘಟ್ಟದ ಪಂದ್ಯದಲ್ಲಿ ರಷ್ಯಾದ ದರಿಯಾ ಕಾಸ್ತಕಿನಾ ಅವರಿಗೆ ಸೋಲುಣಿಸಿ ಪ್ರಶಸ್ತಿ ಸುತ್ತು ತಲುಪಿದ್ದಾರೆ. 18 ವರ್ಷದ ಕೊಕೊ ಗಫ್ 2018ರಲ್ಲಿ ಇಲ್ಲಿ ಜೂನಿಯರ್ ವಿಭಾಗದ ಪ್ರಶಸ್ತಿ ಜಯಿಸಿದ್ದರು. ಗ್ರ್ಯಾನ್‌ಸ್ಲಾಂ ಟೂರ್ನಿಯಲ್ಲಿ ಇದು ಅವರ ಮೊದಲ ಫೈನಲ್. ಟೂರ್ನಿಯ ಪ್ರಶಸ್ತಿ ಜಯಿಸಿ ಸ್ಮರಣೀಯವಾಗಿಸಿಕೊಳ್ಳುವ ಹಂಬಲದಲ್ಲಿ ಅವರಿದ್ದಾರೆ.



ಇಗಾ ಸ್ವೆಟೆಕ್

ಕೊಕೊ ಗಫ್ – ಎಎಫ್‌ಪಿ ಚಿತ್ರಗಳು

ಇಗಾ ಸ್ವೆಟೆಕ್	
ದೇಶ	ಪೋಲೆಂಡ್
ವಿಶ್ವ ರ‍್ಯಾಂಕಿಂಗ್	1

ಕೊಕೊ ಗಫ್	
ದೇಶ	ಅಮೆರಿಕ
ವಿಶ್ವ ರ‍್ಯಾಂಕಿಂಗ್	23

‘ಕ್ರೀಡಾನೀತಿ ಜಾರಿ ಮಾಡದ ಫೆಡರೇಷನ್ ಅನುದಾನ ನಿಲ್ಲಿಸಿ’

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರೀಡಾ ನೀತಿಯನ್ನು ಜಾರಿಗೊಳಿಸದ ಕ್ರೀಡಾ ಫೆಡರೇಷನ್‌ಗಳಿಗೆ ಅನುದಾನ ಮತ್ತು ಬೆಂಬಲವನ್ನು ನೀಡಬಾರದು ಎಂದು ದೆಹಲಿ ಹೈಕೋರ್ಟ್ ಕೇಂದ್ರ ಕ್ರೀಡಾ ಸಚಿವಾಲಯಕ್ಕೆ ಆದೇಶ ನೀಡಿದೆ.

‘ನಿಯಮಾವಳಿಯನ್ನು ಜಾರಿಗೊಳಿಸದಿರುವುದು ಕ್ರೀಡಾಭಿವೃದ್ಧಿ ಮತ್ತು ಕಲ್ಯಾಣವನ್ನು ನಿರಾಕರಿಸಿದಂತೆ. ಈ ರೀತಿ ಮಾಡಿದ ಹಲವು ಫೆಡರೇಷನ್‌ಗಳ ಬಗ್ಗೆ ದೂರುಗಳು ಬರುತ್ತಿವೆ. ಆದ್ದರಿಂದ ಇನ್ನು ಮುಂದೆ ನಿಯಮಕ್ಕೆ ಬದ್ಧವಾಗದ ಸಂಸ್ಥೆಗೆ ಹಣ ನೀಡುವ ಪ್ರಶ್ನೆಯೇ ಇಲ್ಲ. ಈ ಫೆಡರೇಷನ್‌ಗಳ ಧೋರಣೆಯಿಂದ ಕಾನೂನು ಕಳೆಗುಂದಿದೆ’ ಎಂದು ವಿಚಾರಣೆ ನಡೆಸುತ್ತಿರುವ ನ್ಯಾಯ ಪೀಠದ ನ್ಯಾಯಮೂರ್ತಿ ನಜ್ಮಿ ವಝೀರಿ ಮತ್ತು ವಿಕಾಸ್ ಮಹಾಜನ್ ಹೇಳಿದ್ದಾರೆ.

ಮಾಸಾಂತ್ಯದಲ್ಲಿ ತಮ್ಮ ಫೆಡರೇಷನ್‌ಗಳಲ್ಲಿ ಹೊಸ ನೀತಿ ಜಾರಿಗೊಳಿಸುವ ಕೆಲಸವನ್ನು ಸಂಪೂರ್ಣ ಮಾಡಬೇಕು. ಈ ಅವಧಿಯಲ್ಲಿ ಕ್ರೀಡಾಪಟುಗಳಿಗೆ ಎಲ್ಲ ರೀತಿಯ ನೆರವು ನೀಡಲು ಭಾರತ ಕ್ರೀಡಾ ಪ್ರಾಧಿಕಾರ ತನ್ನ ಕಾರ್ಯಕ್ಷಮತೆಯನ್ನು ವೃದ್ಧಿಸಿಕೊಳ್ಳಬೇಕು. ಕ್ರೀಡಾ ನೀತಿ ಜಾರಿಗೊಳಿಸದ ಫೆಡರೇಷನ್‌ಗಳನ್ನು ಅಮಾನತು ಮಾಡಬೇಕು ಎಂದೂ ನ್ಯಾಯಪೀಠ ಸೂಚಿಸಿದೆ.

15 ಫೆಡರೇಷನ್‌ಗಳು ಜಾರಿಗೊಳಿಸುವ ಹಾದಿಯಲ್ಲಿವೆ. 6 ಸಂಸ್ಥೆಗಳಿಗೆ ವಿನಾಯಿತಿ ನೀಡಲಾಗಿದೆ. ಐದು ಸಂಸ್ಥೆಗಳು ತಮ್ಮ ನಿಯಮಾವಳಿಯನ್ನು ಪರಿಷ್ಕರಿಸಬೇಕಿದೆ.



ನೆಟ್ಸ್‌ನಲ್ಲಿ ಬೆವರು ಹರಿಸಿದ ದಕ್ಷಿಣ ಆಫ್ರಿಕಾ ಪಡೆ

ನವದೆಹಲಿ (ಪಿಟಿಐ): ಭಾರತ ತಂಡದ ಎದುರು ಟಿ20 ಸರಣಿ ಆಡಲು ಬಂದಿಳಿದಿರುವ ದಕ್ಷಿಣ ಆಫ್ರಿಕಾ ತಂಡವು ಶುಕ್ರವಾರ ಇಲ್ಲಿ ಅಭ್ಯಾಸ ನಡೆಸಿತು.

ಸ್ಪಿನ್ ಬೌಲರ್‌ಗಳಾದ ತಬ್ರೇಜ್ ಶಂಸಿ ಮತ್ತು ಕೇಶವ್ ಮಹಾರಾಜ್ ಅವರು ಹೆಚ್ಚು ಹೊತ್ತು ಬೌಲಿಂಗ್ ಅಭ್ಯಾಸ ನಡೆಸಿದರು. ಭಾರತದ ಪಿಚ್‌ಗಳಲ್ಲಿ ಸ್ಪಿನ್ನರ್‌ಗಳಿಗೆ ಉತ್ತಮ ನೆರವು ಸಿಗುವುದರಿಂದ ಕೇಶವ್ ಮತ್ತು ತಬ್ರೇಜ್ ಅವರು ಮುಖ್ಯ ಪಾತ್ರ ವಹಿಸುವ ನಿರೀಕ್ಷೆ ಇದೆ. ಆದ್ದರಿಂದ ಅವರ ಅಭ್ಯಾಸವು ಹೆಚ್ಚು ಗಮನ ಸೆಳೆಯಿತು. ಅವರೊಂದಿಗೆ ಏಡನ್ ಮರ್ಕರಂ ಕೂಡ ತಮ್ಮ ಬೌಲಿಂಗ್ ಅಭ್ಯಾಸ ನಡೆಸಿದರು.

ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಆಡಿದ್ದ ಆಲ್‌ರೌಂಡರ್ ಡ್ವೇನ್ ಪ್ರಿಟೋರಿಯಸ್ ಕೂಡ ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದರು. ಐದು ವರ್ಷಗಳ ನಂತರ ತಂಡಕ್ಕೆ ಮರಳಿರುವ ವೇಯ್ನ್ ಪಾರ್ನೆಲ್, ಈಚೆಗೆ ಐಪಿಎಲ್‌ನಲ್ಲಿ ಮಿಂಚಿದ್ದ ಕ್ವಿಂಟನ್ ಡಿಕಾಕ್ ಮತ್ತು ರಸಿ ವ್ಯಾನ್ ಡರ್ ಡಸೆ ಕೂಡ ಬ್ಯಾಟಿಂಗ್ ಅಭ್ಯಾಸ ನಡೆಸಿದರು. ಮುಖ್ಯ ಕೋಚ್ ಮಾರ್ಕ್ ಬೌಷರ್ ಮಾರ್ಗದರ್ಶನ ನೀಡಿದರು.

ಇದಕ್ಕೂ ಮುನ್ನ ಫಿರೋಜ್ ಶಾ ಕೋಟ್ಲಾ ಮೈದಾನದಲ್ಲಿ ಆಟಗಾರರಿಗೆ ಕೋವಿಡ್ ಪರೀಕ್ಷೆ ಮಾಡಲಾಯಿತು. ಆರ್‌ಟಿ ಪಿಸಿಆರ್ ಟೆಸ್ಟ್‌ಗಳಲ್ಲಿ ಎಲ್ಲರೂ ನೆಗೆಟಿವ್ ಆಗಿದ್ದಾರೆಂದು ತಿಳಿದುಬಂದಿದೆ.

ವಿಶ್ವಕಪ್ ಶೂಟಿಂಗ್: ಅಂಜುಮ್‌ಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಅನುಭವಿ ಶೂಟರ್ ಅಂಜುಮ್ ಮೌದ್ಗಿಲ್ ಅವರು ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ. ಅಜರ್‌ಬೈಜಾನ್‌ನ ಬಾಕುನಲ್ಲಿ ನಡೆಯುತ್ತಿರುವ ಟೂರ್ನಿಯ ಮಹಿಳೆಯರ 50 ಮೀಟರ್ಸ್ ರೈಫಲ್ ತ್ರಿ ಪೋಸಿಷನ್ಸ್‌ನಲ್ಲಿ ಅವರಿಗೆ ಪದಕ ಒಲಿದಿದೆ. ಪುರುಷರ 3 ಪೋಸಿಷನ್ಸ್‌ನಲ್ಲಿ ಭಾರತ ತಂಡವೂ ಬೆಳ್ಳಿ ಪದಕ ತನ್ನದಾಗಿಸಿಕೊಂಡಿತು.

ಫೈನಲ್ ಪಂದ್ಯದಲ್ಲಿ ಶುಕ್ರವಾರ ಅಂಜುಮ್ 12–16ರಿಂದ ಡೆನ್ಮಾರ್ಕ್‌ನ ರಿಕ್ಕೆ ಮಯಿಂಗ್ ಇಬ್ಸೆನ್ ವಿರುದ್ಧ ಸೋತರು.ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತೆಯಾಗಿರುವ ಅಂಜುಮ್, ರ‍್ಯಾಂಕಿಂಗ್ ಸುತ್ತಿನಲ್ಲಿ ಗುರುವಾರ 600ರ ಪೈಕಿ 587 ಪಾಯಿಂಟ್ಸ್ ಕಲೆಹಾಕಿದ್ದರು. 60 ಶೂಟರ್‌ಗಳ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದರು.

ಅಂಜುಮ್ ಅವರಿಗೆ ವಿಶ್ವಕಪ್‌ನಲ್ಲಿ ಇದು ಎರಡನೇ ಬೆಳ್ಳಿ ಪದಕವಾಗಿದೆ.

ಪುರುಷರ 3 ಪೋಸಿಷನ್ಸ್‌ನಲ್ಲಿ ಫೈನಲ್‌ನಲ್ಲಿ ಸ್ವಪ್ನಿಲ್, ದೀಪಕ್ ಕುಮಾರ್ ಮತ್ತು ಗೋಲ್ಡಿ ಗುರ್ಜರ್ ಅವರಿದ್ದ ತಂಡವು 7–17ರಿಂದ ಕ್ರೊವೇಷ್ಯಾ ಶೂಟರ್‌ಗಳ ಎದುರು ಸೋತಿತು. ಉಕ್ರೇನ್ ತಂಡವು ಕಂಚು ಗೆದ್ದುಕೊಂಡಿತು.

ಫೈವ್ ಎ ಸೈಡ್ ಹಾಕಿ: ಸ್ವಿಟ್ಜರ್ಲೆಂಡ್, ಪಾಕಿಸ್ತಾನ ಎದುರು ಗುರಿಂದರ್ ಬಳಗ ಕಣಕ್ಕೆ

ಭಾರತ ತಂಡಗಳ ಕೌಶಲ, ಫಿಟ್‌ನೆಸ್‌ಗೆ ಸವಾಲು

ಲಾಸನ್ (ಪಿಟಿಐ): ಭಾರತ ತಂಡವು ಚೊಚ್ಚಲ ಎಫ್‌ಐಎಚ್ ಫೈವ್ ಎ ಸೈಡ್ ಹಾಕಿ ಟೂರ್ನಿಯಲ್ಲಿ ಶನಿವಾರ ಕಣಕ್ಕಿಳಿಯಲಿದೆ.

ಸಾಂಪ್ರದಾಯಿಕ ಹಾಕಿಗಿಂತ ಸ್ವಲ್ಪ ಭಿನ್ನವಾಗಿರುವ ಈ ಮಾದರಿಯಲ್ಲಿ ತಂಡದ ಆಟಗಾರರ ಫಿಟ್‌ನೆಸ್ ಮತ್ತು ಕೌಶಲಗಳ ಪರೀಕ್ಷೆ ನಡೆಯಲಿದೆ. ಟಿ20 ಕ್ರಿಕೆಟ್ ಮತ್ತು ರಗ್ಬಿ ಸೆವೆನ್ ಮಾದರಿಯಲ್ಲಿ ಈ ಆಟವನ್ನು ಜನಪ್ರಿಯವಾಗಿಸುವ ಇರಾದೆಯೊಂದಿಗೆ ಅಂತರಾಷ್ಟ್ರೀಯ ಹಾಕಿ ಫೆಡರೇಷನ್ ಈ ಕೂಟವನ್ನು ಆಯೋಜಿಸಿದೆ.

ಗುರಿಂದರ್ ಸಿಂಗ್ ನಾಯಕತ್ವದ ಭಾರತ ತಂಡವು ಮೊದಲ ದಿನವಾದ ಶನಿವಾರ ಸ್ವಿಟ್ಜರ್ಲೆಂಡ್ ಮತ್ತು ಪಾಕಿಸ್ತಾನ ತಂಡಗಳ ಸವಾಲು ಎದುರಿಸಲಿದೆ. ಭಾನುವಾರ ಮಲೇಷ್ಯಾ ಮತ್ತು ಪೋಲೆಂಡ್ ತಂಡಗಳಿಗೆ ಮುಖಾಮುಖಿಯಾಗಲಿದೆ.

ರಜನಿ ಎತಿಮರ್ಪು ಸಾರಥ್ಯದ ಭಾರತ ಮಹಿಳಾ ತಂಡವು ಟೂರ್ನಿಯಲ್ಲಿ ಆಡಲಿದ್ದು, ಶನಿವಾರ ಉರುಗ್ವೆ ಮತ್ತು ಪೋಲೆಂಡ್ ತಂಡಗಳನ್ನು ಎದುರಿಸಲಿದೆ. ಭಾನುವಾರ ಸ್ವಿಟ್ಜರ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ಸವಾಲು ಎದುರಾಗಲಿದೆ. ಈ ಮಾದರಿಯಲ್ಲಿ ಪ್ರತಿ ತಂಡದಲ್ಲಿ ಒಬ್ಬ ಗೋಲ್‌ಕೀಪರ್ ಮತ್ತು ನಾಲ್ವರು ಫೀಲ್ಡ್ ಆಟಗಾರರು ಇರಲಿದ್ದಾರೆ.

ಭಾರತದ ಇಂದಿನ ಪಂದ್ಯಗಳು

ಪುರುಷರ ವಿಭಾಗ		ಮಹಿಳಾ ವಿಭಾಗ	
ಸ್ವಿಟ್ಜರ್ಲೆಂಡ್ ವಿರುದ್ಧ		ಉರುಗ್ವೆ ವಿರುದ್ಧ	
ಪಂದ್ಯ ಆರಂಭ:	ಸಂಜೆ 7.30	ಪಂದ್ಯ ಆರಂಭ:	ಸಂಜೆ 6
ಪಾಕಿಸ್ತಾನ ವಿರುದ್ಧ		ಪೋಲೆಂಡ್ ವಿರುದ್ಧ	
ಪಂದ್ಯ ಆರಂಭ:	ರಾತ್ರಿ 8.30	ಪಂದ್ಯ ಆರಂಭ:	ರಾತ್ರಿ 8

ಲೈವ್ ಸಮಯ: ಭಾರತೀಯ ಕಾಲಮಾನ
ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ಮಿಚೆಲ್, ಬ್ಲಂಡೆಲ್ ದಿಟ್ಟ ಆಟ

ಲಂಡನ್ (ಎಎಫ್‌ಪಿ): ನ್ಯೂಜಿಲೆಂಡ್ ತಂಡವು ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ಟೆಸ್ಟ್‌ನಲ್ಲಿ ಆತಿಥೇಯ ಇಂಗ್ಲೆಂಡ್‌ಗೆ ದಿಟ್ಟ ತಿರುಗೇಟು ನೀಡಿದೆ. ಮೊದಲ ಇನಿಂಗ್ಸ್‌ನಲ್ಲಿ ಒಂಬತ್ತು ರನ್‌ಗಳ ಅಲ್ಪ ಹಿನ್ನಡೆ ಅನುಭವಿಸಿದ್ದ ನ್ಯೂಜಿಲೆಂಡ್ ತಂಡವು ಎರಡನೇ ಇನಿಂಗ್ಸ್‌ನಲ್ಲಿ ಡೆರಿಲ್ ಮಿಚೆಲ್ (ಬ್ಯಾಟಿಂಗ್ 83) ಮತ್ತು ಟಾಮ್ ಬ್ಲಂಡೆಲ್ (ಬ್ಯಾಟಿಂಗ್ 78) ಅವರ ದಿಟ್ಟ ಬ್ಯಾಟಿಂಗ್‌ನಿಂದಾಗಿ 67 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 210 ರನ್ ಗಳಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ ಮ್ಯಾಟಿ ಪಾಟ್ಸ್ ಮತ್ತು ಜೇಮ್ಸ್ ಆ್ಯಂಡರ್ಸನ್ ಬೌಲಿಂಗ್ ಮುಂದೆ ಕಿವೀಸ್ ಬಳಗವು ಸಾಧಾರಣ ಮೊತ್ತಕ್ಕೆ ಕುಸಿದಿತ್ತು. ಅದಕ್ಕೆ ತಕ್ಕ ತಿರುಗೇಟು ಕೊಟ್ಟ ಕಿವೀಸ್ ವೇಗಿ ಟಿಮ್ ಸೌಥಿ (55ಕ್ಕೆ4) ಮತ್ತು ಟ್ರೆಂಟ್ ಬೌಲ್ಟ್ (21ಕ್ಕೆ3) ಜೋಡಿಯು ಇಂಗ್ಲೆಂಡ್ ತಂಡವನ್ನು 141 ರನ್ ಗಳಿಗೆ ಆಲೌಟ್ ಮಾಡಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 40 ಓವರ್‌ಗಳಲ್ಲಿ 132, ಇಂಗ್ಲೆಂಡ್: 42.5 ಓವರ್‌ಗಳಲ್ಲಿ 141 (ಅಲೆಕ್ಸ್ ಲೀಸ್ 26, ಜ್ಯಾಕ್ ಕ್ರಾಲಿ 43, ಜೋ ರೂಟ್ 11, ಟಿಮ್ ಸೌಥಿ 55ಕ್ಕೆ4, ಟ್ರೆಂಟ್ ಬೌಲ್ಟ್ 21ಕ್ಕೆ3, ಕೈಲ್ ಜೆಮಿಸನ್ 20ಕ್ಕೆ2) ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 67 ಓವರ್‌ಗಳಲ್ಲಿ 4ಕ್ಕೆ210 (ಡೆರಿಲ್ ಮಿಚೆಲ್ ಬ್ಯಾಟಿಂಗ್ 83, ಟಾಮ್ ಬ್ಲಂಡೆಲ್ ಬ್ಯಾಟಿಂಗ್ 78, ಮ್ಯಾಟಿ ಪಾಟ್ಸ್ 41ಕ್ಕೆ2)